ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ

ಕಾಡಿನ ಹಣ್ಣುಗಳಿಗೂ ಲಂಬಾಣಿ ಹೆಣ್ಣುಮಕ್ಕಳಿಗೂ ಬಿಡಿಸಲಾಗದ ನಂಟು. ಕಾಡಿನಿಂದ ಅವರು ಹೆಕ್ಕಿತರುವ ಹಣ್ಣುಗಳ ರುಚಿ ಎಂತಹದ್ದು ಅಂತೀರಿ?!

ಉತ್ತರಾಖಂಡ: ಹಿಮಪಾತದಿಂದ 10 ಜನರ ಸಾವು 7

ಸೋಂಕಿತರಿಗೆ 'ಮೇಕ್ ಶಿಫ್ಟ್' ಆಸ್ಪತ್ರೆ: ಸುಧಾಕರ್ 6

ಮಾಜಿ ಗೃಹ ಸಚಿವರ ವಿರುದ್ಧದ ಲಂಚ ಪ್ರಕರಣ

ಅನಿಲ್ ದೇಶ್‌ಮುಖ್ ವಿರುದ್ಧ ಎಫ್‌ಐಆರ್ 7

ಜಲಮೂಲ ಸೇರುತ್ತಿದೆ ಶೇ 55ರಷ್ಟು ಕೊಳಚೆ ನೀರು

ನಗರ ತ್ಯಾಜ್ಯವೇ ನೀರಿಗೆ ಕಂಟಕ

ಒಳನೋಟ

ಮಲಿನ ನೀರು ನದಿಗಳಿಗೆ

ಪ್ರತಿಕ್ರಿಯಿಸಿ: 9606038256

• ಗುರು ಪಿ.ಎಸ್.

ಬೆಂಗಳೂರು: ರಾಜ್ಯದ 17 ನದಿಮಾರ್ಗಗಳು ಹೆಚ್ಚು ಕಲುಷಿತಗೊಂಡಿವೆ. ನದಿ, ಕೆರೆ, ಸಾಗರ ಹೀಗೆ ಮಲಿನವಾಗಲು ಕಾರಣ ನಗರ ತ್ಯಾಜ್ಯ. ರಾಜ್ಯದಲ್ಲಿ ಶೇ 55ರಷ್ಟು ಕೊಳಚೆ ನೀರು ನೇರವಾಗಿ ನದಿ, ಕೆರೆಯಂಥ ಜಲಮೂಲಗಳನ್ನು ಸೇರುತ್ತಿದೆ. ಆದರೆ, ಜೀವನದಿಗಳಿಗೆ ವಿಷವುಣಿಸುತ್ತಿರುವವರ ವಿರುದ್ಧ ಕ್ರಮ ಕೈಗೊಳ್ಳಬೇಕಾದ ಕೈಗಳನ್ನು ದುರ್ಬಲಗೊಳಿಸಲಾಗಿದೆ.

ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳನ್ನು (ಎಸ್‌ಟಿಪಿ) ಹೆಚ್ಚಾಗಿ ಸ್ಥಾಪಿಸದಿರುವುದು, ಇರುವ ಎಸ್‌ಟಿಪಿಗಳ ಅಸಮರ್ಪಕ ನಿರ್ವಹಣೆ, ಕೆಲವು ವರ್ಷಗಟ್ಟಲೆ ಸ್ಥಗಿತಗೊಂಡಿರುವುದು ಜನಪ್ರತಿನಿಧಿಗಳು, ಉದ್ಯಮಗಳ ಅಸಹಕಾರ–ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆಯ ಪರಿಣಾಮ ರಾಜ್ಯದ 'ಜಲ ಸಂಪತ್ತು' ಕಲುಷಿತಗೊಳ್ಳುತ್ತಿದೆ.

ನದಿ–ಕೆರೆಗಳಿಗೆ ಮಲಿನ ನೀರನ್ನು ನೇರವಾಗಿ ಹರಿಯಬಿಟ್ಟರೆ ಸಂಬಂಧಪಟ್ಟ ಇಲಾಖೆ ಅಥವಾ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರ ವಿರುದ್ಧ ಜಲಮಾಲಿನ್ಯ ಕಾಯ್ದೆಯ ಪ್ರಕಾರ ಕ್ರಿಮಿನಲ್ ಪ್ರಕರಣ ದಾಖಲಿಸುವ ಅವಕಾಶವಿದೆ. ಆದರೆ, ಇದನ್ನು ಅನುಷ್ಠಾನಕ್ಕೆ ತರಬೇಕಾದ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು (ಕೆಎಸ್‌ಪಿಸಿಬಿ) 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಎಂಬಂತಿದೆ.

ಈ ಬಗ್ಗೆ ಪ್ರಶ್ನಿಸಿದರೆ, ಕಾನೂನು ಅನುಷ್ಠಾನದಲ್ಲಿನ 'ಸಂದಿಗ್ಧ'ವನ್ನು ವಿವರಿಸಲು ಪ್ರಾರಂಭಿಸುತ್ತಾರೆ ಮಂಡಳಿಯ ಅಧಿಕಾರಿಗಳು.

4ನೇ ಪುಟ ನೋಡಿ

ಇನ್ನಷ್ಟು ಸುದ್ದಿಗಳು 4

ಬೆಂಗಳೂರಿನ ಕಬ್ಬನ್ ಉದ್ಯಾನದಲ್ಲಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕದ ನೋಟ ಪ್ರಜಾವಾಣಿ ಚಿತ್ರ/ ರಂಜು ಪಿ.

'ನದಿಗಳ ಪುನರುಜ್ಜೀವನಕ್ಕೆ ₹435 ಕೋಟಿ'

ಬೈರತಿ ಬಸವರಾಜ

'ಎನ್‌ಜಿಟಿ ನಿರ್ದೇಶನದ ಮೇರೆಗೆ ನದಿ ಪುನರುಜ್ಜೀವನ ಸಮಿತಿ ರಚಿಸಲಾಗಿದೆ. ಅಲ್ಲದೆ, ಕೊಳಚೆ ನೀರು ಸೇರಿ ಮಲಿನಗೊಂಡಿರುವ 17 ನದಿಗಳ ಪುನರುಜ್ಜೀವನಕ್ಕೆ ₹435 ಕೋಟಿ ತೆಗೆದಿರಿಸಲಾಗಿದ್ದು, ಶೀಘ್ರದಲ್ಲಿ ಟೆಂಡರ್ ಕರೆಯಲಾಗುವುದು. ಮುಂದಿನ 20 ದಿನಗಳಲ್ಲಿ ಕಾರ್ಯಾದೇಶವನ್ನೂ ನೀಡಲಾಗುವುದು' ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ತಿಳಿಸಿದರು.

'ಮೈಸೂರು, ಬೆಳಗಾವಿ, ಕಲಬುರ್ಗಿ ಹಾಗೂ ಹುಬ್ಬಳ್ಳಿ–ಧಾರವಾಡ ವಿಭಾಗಗಳಿಗೆ ನಾಲ್ಕು ಪ್ಯಾಕೇಜ್ ಮಾಡಿ, ಆಧುನಿಕ ತಂತ್ರಜ್ಞಾನದೊಂದಿಗೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು. ಎಸ್‌ಟಿಪಿಗಳ ಸಂಖ್ಯೆಯನ್ನೂ ಹೆಚ್ಚಿಸಲಾಗುವುದು. ರಾಜ್ಯದ ಯಾವುದೇ ನದಿ ಮೂಲಗಳಿಗೆ ಕೊಳಚೆ ನೀರು ಹರಿಯಲು ಬಿಡುವುದಿಲ್ಲ' ಎಂದೂ ಅವರು ಹೇಳಿದರು.

ಅಂಕಿ-ಅಂಶಗಳು

1400 ಕೋಟಿ ಲೀಟರ್ ರಾಜಧಾನಿಯಲ್ಲಿ ದಿನಕ್ಕೆ ಉತ್ಪಾದನೆಯಾಗುವ ತ್ಯಾಜ್ಯ ನೀರು

1182 ಕೋಟಿ ಲೀಟರ್ ಬೆಂಗಳೂರಿನಲ್ಲಿ ದಿನಕ್ಕೆ ಸಂಸ್ಕರಿಸಲಾಗುತ್ತಿರುವ ತ್ಯಾಜ್ಯ ನೀರು

34 ಬೆಂಗಳೂರಿನಲ್ಲಿರುವ ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳು

17 ನದಿಗಳು ಕಲುಷಿತ

ಅರ್ಕಾವತಿ, ಲಕ್ಷ್ಮಣತೀರ್ಥ, ಮಲಪ್ರಭಾ, ತುಂಗಾ, ಭದ್ರಾ, ತುಂಗಭದ್ರಾ, ಕಾವೇರಿ, ಕಬಿನಿ, ಕಾಗಿಣಾ, ಆಸಂಗಿ ನಾಲಾ, ಕಾಳಿ, ಕೃಷ್ಣಾ, ಶಿಂಷಾ, ಭೀಮಾ, ಕುಮಾರಧಾರಾ, ನೇತ್ರಾವತಿ ಮತ್ತು ಯಗಚಿ ನದಿಗಳ ಮಾರ್ಗಗಳು ಕಲುಷಿತಗೊಂಡಿವೆ ಎಂದು ಕೇಂದ್ರದ ಜಲಶಕ್ತಿ ಸಚಿವಾಲಯ ವರದಿಯಲ್ಲಿ ವಿವರ ನೀಡಲಾಗಿದೆ.

ಇವುಗಳ ಶುದ್ಧೀಕರಣಕ್ಕೆ 'ನದಿ ಪುನರುಜ್ಜೀವನ ಸಮಿತಿ' ರಚಿಸುವಂತೆ 2018ರ ಸೆಪ್ಟೆಂಬರ್‌ನಲ್ಲಿಯೇ ಸೂಚಿಸಿತ್ತು. ಇದಕ್ಕಾಗಿ ರಾಜ್ಯ ಸರ್ಕಾರ ಹಣ ಬಿಡುಗಡೆ ಮಾಡಿದ್ದರೂ, ಟೆಂಡರ್ ಕರೆದಿಲ್ಲ.

ಶಿಕ್ಷಕರ ವರ್ಗಾವಣೆ: ಸಂಪುಟ ಸಭೆಗೆ 'ಸುಗ್ರೀವಾಜ್ಞೆ' ಪ್ರಸ್ತಾವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುಗ್ರೀವಾಜ್ಞೆ ಮೂಲಕ 'ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ–2020' ತಿದ್ದುಪಡಿ ತಂದು, 2019–20ನೇ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆಗೆ ಒಳಗಾದ ಶಿಕ್ಷಕರಿಗೆ ಮೊದಲು ಕೌನ್ಸೆಲಿಂಗ್ ನಡೆಸಿ ವರ್ಗಾವಣೆಯಲ್ಲಿ ಆದ್ಯತೆ ನೀಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸೋಮವಾರ ನಡೆಯಲಿರುವ (ಏ. 26) ಸಚಿವ ಸಂಪುಟ ಸಭೆಯಲ್ಲಿ ಈ ಪ್ರಸ್ತಾವ ಮಂಡನೆಯಾಗಲಿದೆ. ಸುಗ್ರೀವಾಜ್ಞೆಗೆ ಸಂಪುಟ ಸಭೆಯ ಅನುಮೋದನೆ ಬಳಿಕ, ರಾಜ್ಯಪಾಲರ ಅಂಕಿತ ಪಡೆದು ತಕ್ಷಣದಿಂದಲೇ ವರ್ಗಾವಣೆ ಪ್ರಕ್ರಿಯೆ ಆರಂಭಿಸಲಾಗುವುದು ಎಂದು ಶಿಕ್ಷಣ ಇಲಾಖೆಯ ಮೂಲಗಳು ತಿಳಿಸಿವೆ.

2020–21ನೇ ಸಾಲಿನ ವರ್ಗಾವಣೆ ಪ್ರಕ್ರಿಯೆ ಸಂದರ್ಭದಲ್ಲಿ 2019–20ರ ಸಾಲಿನಲ್ಲಿ ಕಡ್ಡಾಯ ಮತ್ತು ಹೆಚ್ಚುವರಿ ವರ್ಗಾವಣೆ 'ಶಿಕ್ಷೆ'ಗೆ ಒಳಗಾದ ಶಿಕ್ಷಕರಿಗೆ ವಿಶೇಷ ಆದ್ಯತೆ ನೀಡುವ ಪ್ರಸ್ತಾವ 'ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ (ಶಿಕ್ಷಕರ ವರ್ಗಾವಣೆ ನಿಯಂತ್ರಣ) ಕಾಯ್ದೆ–2020'ಯಲ್ಲಿ ಆಗಿರಲಿಲ್ಲ. ಆದರೆ, ಕಳೆದ ನ. 11ರಂದು ಹೊರಡಿಸಿರುವ ವರ್ಗಾವಣೆ ಅಧಿಸೂಚನೆಯಲ್ಲಿ ರಾಜ್ಯ ಸರ್ಕಾರ ಈ ಅವಕಾಶ ಕಲ್ಪಿಸಿತ್ತು. ಆದರೆ ಅದಕ್ಕೆ ಕೆಎಟಿ ಮತ್ತು ಹೈಕೋರ್ಟ್ ತಡೆ ನೀಡಿತ್ತು.

FOREVER IN OUR THOUGHTS

SRI. C.N. RAVI KIRAN

Former Chairman

East West Group of Institutions, Bengaluru.

22-04-1973 | 25-04-2020

S/o Late C.M. Nagaraj, Founder Chairman,
East West Group of Institutions,
Former Mayor, BBMP, Bengaluru.

"One life lived. Many lives Touched"

We express our earnest gratitude to have been a part of your life...
Taking your legacy forward, following your footprints,
Sure, we shall propel the same way, Our Banner shall fly Higher,
Just as you had envisioned.... We shall keep you Alive.

Though In the distant distance you dwell, we hold you in
kind propinquity, in our hearts and in our living memories.

Family members, Management, Staff, Students, Relatives & Friends.

EAST WEST 1968

EAST WEST
GROUP OF INSTITUTIONS
Over 50 Years of Academic Excellence
Phone: 080-23288899 / 94482 24779

EW-21002

ಉಳಿದ ದಿನಗಳಿಗೂ ಕರ್ಫ್ಯೂ ವಿಸ್ತರಣೆಗೆ ಚಿಂತನೆ: ನಾಳೆ ತೀರ್ಮಾನ

ರಾಜ್ಯದಲ್ಲೂ ಉಚಿತ ಲಸಿಕೆ ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಾದ್ಯಂತ ಕೋವಿಡ್ ಎರಡನೇ ಅಲೆ ನಿಯಂತ್ರಿಸಲು ಹೇರಿರುವ ರಾತ್ರಿ ಕರ್ಫ್ಯೂ, ವಾರಾಂತ್ಯದ ಕರ್ಫ್ಯೂ ಪರಿಣಾಮಗಳನ್ನು ಸೋಮವಾರ (ಏ. 26) ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಅವಲೋಕಿಸಿ, ಮುಂದಿನ ತೀರ್ಮಾನಗಳನ್ನು ತೆಗೆದುಕೊಳ್ಳಲು ರಾಜ್ಯ ಸರ್ಕಾರ ನಿರ್ಧರಿಸಿದೆ.

'ವಾರಾಂತ್ಯ ಕರ್ಫ್ಯೂ' ಅವಧಿಯಲ್ಲಿ ತೆಗೆದುಕೊಂಡ ಕಠಿಣ ಕ್ರಮಗಳನ್ನು ವಾರದ ದಿನಗಳಲ್ಲೂ ಮುಂದುವರಿಸಲು ಸರ್ಕಾರ ಗಂಭೀರ ಚಿಂತನೆ ನಡೆಸಿದೆ. ಮೇ 1ರಿಂದ 18 ವರ್ಷ ದಾಟಿದವರಿಗೂ ಕೋವಿಡ್ ಲಸಿಕೆ ವಿತರಣೆ ಆರಂಭವಾಗಲಿದ್ದು, ಉಚಿತವಾಗಿ ವಿತರಿಸುವ ಬಗ್ಗೆ ಸಂಪುಟ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆ ಇದೆ.

₹ 400 ಕೋಟಿ ವೆಚ್ಚದಲ್ಲಿ ಒಂದು ಕೋಟಿ ಲಸಿಕೆ ಖರೀದಿಸಲು ರಾಜ್ಯ ಸರ್ಕಾರ ಈಗಾಗಲೇ ನಿರ್ಧರಿಸಿದೆ. ಖರೀದಿಗೆ ಸಂಪುಟ ಸಭೆಯಲ್ಲಿ ಅನುಮೋದನೆ ಪಡೆಯಲಾಗುವುದು ಎಂದು ಉನ್ನತ ಮೂಲಗಳು ತಿಳಿಸಿವೆ.

4A ಪುಟ ನೋಡಿ

ರಾಜ್ಯ ಕೋವಿಡ್ ಅಂಕಿ–ಅಂಶ

13,04,397 ▲	ಒಟ್ಟು ಸೋಂಕಿತರು (12,74,959 ನಿನ್ನೆಯ ವಿವರ)
2,34,,483 ▲	ಸಕ್ರಿಯ ಪ್ರಕರಣಗಳು
10,55,612 ▲	ಗುಣಮುಖರಾದವರು
14,283 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	29,438	▲
ಗುಣಮುಖ	9,058	▼
ಸಾವು	208	▲
1,280 ಐಸಿಯುನಲ್ಲಿ ಇರುವವರು		▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಜಿಲ್ಲಾಧಿಕಾರಿಗಳಿಂದ ಮಾಹಿತಿ ಪಡೆದ ಸಿ.ಎಂ

ಎಲ್ಲ ಜಿಲ್ಲಾಧಿಕಾರಿಗಳಿಗೆ ಶನಿವಾರ ಕರೆ ಮಾಡಿದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಕೋವಿಡ್ ಸೋಂಕಿತರಿಗೆ ಹಾಸಿಗೆ ಮತ್ತು ಆಕ್ಸಿಜನ್ ಲಭ್ಯತೆ ಕುರಿತು ಮಾಹಿತಿ ಪಡೆದರು.

'ಆಕ್ಸಿಜನ್ ಅಥವಾ ರೆಮ್‌ಡಿಸಿವರ್ ಚುಚ್ಚುಮದ್ದು ಕೊರತೆ ಉಂಟಾದರೆ ತಕ್ಷಣ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತರಬೇಕು. ನನ್ನ ಗಮನಕ್ಕಾದರೂ ತರಬೇಕು. ಯಾವುದೇ ಕಾರಣಕ್ಕೂ ಆಕ್ಸಿಜನ್ ಪೂರೈಕೆ ಸರಪಳಿಯಲ್ಲಿ ವ್ಯತ್ಯಯ ಉಂಟಾಗಬಾರದು. ಬೇರೆ ಏನಾದರೂ ತೀರಾ ಅಗತ್ಯ ಕಂಡುಬಂದರೆ ಜಿಲ್ಲಾ ಉಸ್ತುವಾರಿ ಸಚಿವರ ಅಥವಾ ನನ್ನ ಗಮನಕ್ಕೆ ತರಬೇಕು' ಎಂದೂ ಮುಖ್ಯಮಂತ್ರಿ ಸೂಚಿಸಿದರು.

ಉಚಿತ ಲಸಿಕೆ: ಎಚ್‌ಡಿಕೆ ಮನವಿ

'ಆರ್ಥಿಕ ಸಂಕಷ್ಟಕ್ಕೆ ಸಿಲುಕಿರುವ ರಾಜ್ಯದ ಆರೂವರೆ ಕೋಟಿ ಜನರಿಗೆ ಉಚಿತವಾಗಿ ಕೋವಿಡ್ ಲಸಿಕೆ ನೀಡಬೇಕು' ಎಂದು ರಾಜ್ಯ ಸರ್ಕಾರಕ್ಕೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮನವಿ ಮಾಡಿದ್ದಾರೆ.

ಟ್ವೀಟ್ ಮಾಡಿರುವ ಅವರು, 'ಈಗಿನ ಸಂದರ್ಭದಲ್ಲಿ ಜನರು ಹಣ ಕೊಟ್ಟು ಲಸಿಕೆ ಪಡೆಯಲು ಸಾಧ್ಯವಿಲ್ಲ. 18 ವರ್ಷ ದಾಟಿದ ಪ್ರತಿಯೊಬ್ಬರಿಗೂ ಉಚಿತ ಲಸಿಕೆ ನೀಡುವ ತೀರ್ಮಾನವನ್ನು ಸರ್ಕಾರವೇ ಪ್ರಕಟಿಸಬೇಕು. ಕನಿಷ್ಠ ₹ 2 ಸಾವಿರ ಕೋಟಿ ಹಣವನ್ನು ಲಸಿಕೆ ಖರೀದಿಗೆ ಮೀಸಲಿಡುವುದರಿಂದ ಬೊಕ್ಕಸಕ್ಕೆ ಭಾರೀ ಹೊರೆ ಆಗದು' ಎಂದಿದ್ದಾರೆ.

ಒಳ ಪುಟ

ಆಮ್ಲಜನಕ ಕೊರತೆ: ನಿಲ್ಲದ ಸಾವಿನ ಸರಣಿ 6

ಇಂದಿನ ಪಾಡ್‌ಕಾಸ್ಟ್ ವಿಶೇಷ

ಪ್ರಜಾವಾಣಿ ಕನ್ನಡ ಧ್ವನಿ

ವೈದ್ಯ ಮಿತ್ರ ಕಥಾ ಸಾಗರ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ

Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ

ನೂತನ ಸಿಜೆಐ ಪ್ರಮಾಣವಚನ ಸ್ವೀಕಾರ

ನವದೆಹಲಿ: ಸುಪ್ರೀಂ ಕೋರ್ಟ್‌ನ 48ನೇ ಮುಖ್ಯ ನ್ಯಾಯಮೂರ್ತಿಯಾಗಿ (ಸಿಜೆಐ) ನೂತಲಪಾಟಿ ವೆಂಕಟ ರಮಣ ಅವರು ಶನಿವಾರ ಪ್ರಮಾಣ ವಚನ ಸ್ವೀಕರಿಸಿದರು.

ರಾಷ್ಟ್ರಪತಿ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರು ನ್ಯಾಯಮೂರ್ತಿ ಎನ್.ವಿ.ರಮಣ ಅವರಿಗೆ ಪ್ರಮಾಣ ವಚನ ಬೋಧಿಸಿದರು. ಅವರು ದೇವರ ಹೆಸರಲ್ಲಿ ಪ್ರಮಾಣ ಸ್ವೀಕರಿಸಿದರು.

ಉಪರಾಷ್ಟ್ರಪತಿ ಎಂ. ವೆಂಕಯ್ಯನಾಯ್ಡು, ಪ್ರಧಾನಿ ನರೇಂದ್ರ ಮೋದಿ, ಕಾನೂನು ಸಚಿವ ರವಿಶಂಕರ್ ಪ್ರಸಾದ್ ಉಪಸ್ಥಿತರಿದ್ದರು.

ರಮಣ ಅವರ ಅಧಿಕಾರಾವಧಿ 16 ತಿಂಗಳು ಇದ್ದು, ಮುಂದಿನ ವರ್ಷ ಆಗಸ್ಟ್ 26ರಂದು ನಿವೃತ್ತರಾಗುವರು ಎಂದು ಮೂಲಗಳು ತಿಳಿಸಿವೆ.

63 ವರ್ಷದ ನ್ಯಾಯಮೂರ್ತಿ ರಮಣ ಅವರು ಆಂಧ್ರ ಪ್ರದೇಶದ ಕೃಷ್ಣಾ ಜಿಲ್ಲೆಯವರು. ವಿದ್ಯಾರ್ಥಿ ಚಳವಳಿಯಲ್ಲಿ ಸಕ್ರಿಯರಾಗಿದ್ದ ಅವರು ವಕೀಲ ವೃತ್ತಿ ಆರಂಭಿಸುವ ಮುನ್ನ ಕೆಲ ಕಾಲ ಪತ್ರಕರ್ತರಾಗಿಯೂ ಕಾರ್ಯ ನಿರ್ವಹಿಸಿದ್ದರು.

BRAND POWER



ಫ್ರೀಡಂ ರೈಸ್ ಬ್ರಾನ್ ಆಯಿಲ್ ವಿಭಿನ್ನವಾದುದು ಹೇಗೆ?

ಫ್ರೀಡಂ ರೈಸ್ ಬ್ರಾನ್ ಆಯಿಲ್ ದೈಹಿಕವಾಗಿ ರಿಫೈನ್ ಮಾಡಲಾಗಿದ್ದು, ರಾಸಾಯನಿಕವಾಗಿ ರಿಫೈನ್ ಮಾಡಿದ ರೈಸ್ ಬ್ರಾನ್ ಆಯಿಲ್ ಹೋಲಿಸಿದರೆ ಅದು ನಾಲ್ಕು ಪಟ್ಟು ಹೆಚ್ಚಿನ ಒರೈಸಾನಲ್ (10000+ ಪಿಪಿಎಂ) ಹೊಂದಿರುತ್ತದೆ.

ಒರೈಸಾನಲ್ ಒಂದು ನೈಸರ್ಗಿಕ ಆ್ಯಂಟಿಆಕ್ಸಿಡಂಟ್ ಆಗಿದ್ದು, ಅದು ನಿಮ್ಮ ಹೃದಯವನ್ನು ಆರೋಗ್ಯವಾಗಿಟ್ಟು, ಹೈ ಬ್ಲಡ್ ಕೊಲೆಸ್ಟ್ರಾಲ್ ಇಳಿಸುತ್ತದೆ.

Freedom Physically Refined Rice Bran Oil

R K SWAMY BBDO 2103113

• ಫ್ರೀಡಂ ರೈಸ್ ಬ್ರಾನ್ ಆಯಿಲ್ ಬಗೆಗಿನ ಹೆಚ್ಚಿನ ಮಾಹಿತಿಗೆ ದಯಮಾಡಿ ಭೇಟಿ ಮಾಡಿ www.freedomhealthyoil.com

ಕೊವ್ಯಾಕ್ಸಿನ್: ರಾಜ್ಯಗಳಿಗೆ ₹ 600

ನವದೆಹಲಿ: ಭಾರತ್ ಬಯೊಟೆಕ್ ಕಂಪನಿಯು ತನ್ನ ಕೋವಿಡ್–19 ಲಸಿಕೆ 'ಕೊವ್ಯಾಕ್ಸಿನ್' ಖರೀದಿಗೆ ರಾಜ್ಯ ಸರ್ಕಾರಗಳಿಗೆ ಒಂದು ಡೋಸ್‌ಗೆ ₹ 600 ಹಾಗೂ ಖಾಸಗಿ ಆಸ್ಪತ್ರೆಗಳಿಗೆ ₹ 1,200 ದರ ನಿಗದಿಪಡಿಸಿದೆ.

ಕೊವ್ಯಾಕ್ಸಿನ್ ಲಸಿಕೆಯನ್ನು ಕೇಂದ್ರ ಸರ್ಕಾರಕ್ಕೆ ಪ್ರತಿ ಡೋಸ್‌ಗೆ ₹ 150ಕ್ಕೆ ಪೂರೈಸಲಾಗುತ್ತಿದೆ ಎಂದು ಭಾರತ್ ಬಯೊಟೆಕ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಕೃಷ್ಣ ಎಂ. ಎಲಾ ಅವರು ಶನಿವಾರ ತಿಳಿಸಿದ್ದಾರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

'ಸಾರಿಗೆ ಭವನ', ಕೇಂದ್ರ ಕಛೇರಿ, ಕೆ.ಹಚ್. ರಸ್ತೆ. ಶಾಂತಿನಗರ, ಬೆಂಗಳೂರು

ಸಂಖ್ಯೆ : ಕರಾಸ/ಲೆಪ/ಸ್ಥಿ.ವಿ./315/2021–22 ದಿನಾಂಕ: 24.04.2021

ರೂ. 220 ಕೋಟಿ ಅವಧಿ ಸಾಲ ಮಂಜೂರು ಮಾಡುವ ಬಗ್ಗೆ ಆಸಕ್ತಿಯನ್ನು ವ್ಯಕ್ತಪಡಿಸುವ ಕೊನೆ ದಿನಾಂಕವನ್ನು ವಿಸ್ತರಿಸುವ ಬಗ್ಗೆ

ಉಲ್ಲೇಖ : ಕರಾಸ:ಲೆಪ:ಸ್ಥಿತಿ ವಿವರಣೆ:224/20201, ದಿನಾಂಕ:17.04.2021.

ಉಲ್ಲೇಖಿತ ಅಧಿಸೂಚನೆ ಅನ್ವಯ ರೂ. 220 ಕೋಟಿ ಅವಧಿ ಸಾಲವನ್ನು ಮಂಜೂರು ಮಾಡುವ ಬಗ್ಗೆ ಆಸಕ್ತಿ ವ್ಯಕ್ತಪಡಿಸುವ ಬಗ್ಗೆ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಪ್ರಸ್ತುತ ತೀವ್ರ ತರವಾಗಿ ಹಬ್ಬುತ್ತಿರುವ ಕೋವಿಡ್–19 ಎರಡನೇ ಅಲೆಯಿಂದಾಗಿ ಉಂಟಾಗಿರುವ ಪರಿಸ್ಥಿತಿಯನ್ನು ಪರಿಗಣಿಸಿ, ದರಪಟ್ಟಿಯನ್ನು ಸಲ್ಲಿಸಲು ಕೊನೆಯ ದಿನಾಂಕವನ್ನು **ದಿನಾಂಕ : 07.05.2021ರವರೆಗೆ** ವಿಸ್ತರಿಸಲಾಗಿದೆ.

ಸಹಿ/–

ಮುಖ್ಯ ಲೆಕ್ಕಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರರು

ವಾಸಾಸಂಇ/ಬೆಂ.ನ./ಜಿಎ/270/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

SBI ಭಾರತೀಯ ಸ್ಟೇಟ್ ಬ್ಯಾಂಕ್

ಆರ್‌ಎಸಿಪಿಸಿ–1, ವಿಶಾಖಪಟ್ಟಣಂ

ಸಾರ್ವಜನಿಕ ಎಚ್ಚರಿಕೆ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, **ಮೆ. ನವ್ಯ ಇನ್‌ಫ್ರಾಕಾನ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್.**, ಇದನ್ನು ಪ್ರತಿನಿಧಿಸುವ ವ್ಯವಸ್ಥಾಪಕರ ನಿರ್ದೇಶಕ ಶ್ರೀ ಮಾನ್ಯಂ ವಿಜಯ ಕುಮಾರ್ ರವರು ಬಿಲ್ಡರ್ ಟೈ–ಅಪ್‌ಗಾಗಿ ಭಾರತೀಯ ಸ್ಟೇಟ್ ಬ್ಯಾಂಕ್‌ನ್ನು ಸಂಪರ್ಕಿಸಿದ್ದರು ಮತ್ತು **"ಗಡಿರಾಜು ಎಂಪೈರ್"** ಎಂಬ ಹೆಸರು ಹಾಗೂ ಶೈಲಿಯಲ್ಲಿನ ನಿರ್ಮಿಸಲಾದ ರೆಸಿಡೆನ್ಸಿಯಲ್ ಅಪಾರ್ಟ್‌ಮೆಂಟ್ ಯೋಜನೆಗೆ ಅನುಮೋದನೆ ಕೂಡ ಲಭಿಸಿದ್ದು, ಸದರಿ ಯೋಜನೆಯನ್ನು ಸೆಕ್ಟರ್–11, ಎಂವಿಪಿ ಕಾಲೋನಿ, ಚಿನಾ ವಾಲ್ಟೈರ್ ಗ್ರಾಮ, ವಿಶಾಖಪಟ್ಟಣಂ ವಿಳಾಸದ ಸರ್ವೆ ನಂ. 9/6 ಪಿ, 9/7ಎ, 9/8 ಬಿ ಮತ್ತು 9/8 ಭಾಗ, 9/8, 10/1, 10/1 ಪಿ, 10/2 ಪಿ, 10/3, 10/3 ಪಿ, 10/4 ಪಿ, 10/4ಎ ಭಾಗ, 10/5ಎ ಭಾಗ, 18/5 ಮತ್ತು 18/7 ಗಳಲ್ಲಿ ಸ್ಥಿತಗೊಂಡಿರುವ 12826 ಚದರ ಯಾರ್ಡ್ ವಿಸ್ತೀರ್ಣವುಳ್ಳ ಜಮೀನಿನಲ್ಲಿ ನಿರ್ಮಿಸಲಾಗಿರುತ್ತದೆ. ಇವರು, ನಂ. 204, 205, 206, 218, 306, 706, 818 ಹೊಂದಿರುವ ಫ್ಲ್ಯಾಟ್‌ಗಳನ್ನು 7 ಜನ ಆಸಕ್ತಿಯುಳ್ಳ ಖರೀದಿದಾರರಿಗೆ ಮಾರಾಟ ಮಾಡಬೇಕೆಂದು 7 ತ್ರಿಪಕ್ಷೀಯ ಒಪ್ಪಂದಗಳನ್ನು ಮಾಡಿಕೊಂಡಿರುತ್ತಾರೆ. ತ್ರಿಪಕ್ಷೀಯ ಒಪ್ಪಂದದ ಷರತ್ತು ಮತ್ತು ನಿಬಂಧನೆಗಳ ಪ್ರಕಾರ, ಬಿಲ್ಡರ್ ಪಕ್ಷಗಾರರು ಮಾರಾಟ ಮೊತ್ತವನ್ನು ಸ್ವೀಕರಿಸಿದ ಬಳಿಕವಷ್ಟೆ ಖರೀದಿದಾರರ ಹೆಸರಿಗೆ ಕ್ರಯ ಪತ್ರವನ್ನು ಹೊರಡಿಸತಕ್ಕದ್ದು. ಒಪ್ಪಂದದ ಪ್ರಕಾರ ಸಾಲದ ಮೊತ್ತಗಳನ್ನು ಆಯಾ ಖರೀದಿದಾರರ ಪರವಾಗಿ ಮೇಲ್ಕಾಣಿಸಿದ ಕಂಪನಿಗೆ ವಿತರಿಸಲಾಗಿದೆ. ಸದರಿ ಒಪ್ಪಂದಗಳು ಪ್ರಕ್ರಿಯೆ ಹಂತದಲ್ಲಿರುವಾಗ ಮತ್ತು 7 ಖರೀದಿದಾರರ ಪರವಾಗಿ ಭಾರತೀಯ ಸ್ಟೇಟ್ ಬ್ಯಾಂಕ್‌ನಿಂದ ಮೊಬಲಗು ಸಂದಾಯವಾದ ಬಳಿಕ, ಆಯಾ ಖರೀದಿದಾರರ ಹೆಸರಿಗೆ (ಎಸ್‌ಬಿಐ'ನಿಂದ ಸಾಲ ಸೌಲಭ್ಯ ಪಡೆದವರ) ಕ್ರಯ ಪತ್ರಗಳನ್ನು ಹೊರಡಿಸುವ ಬದಲಾಗಿ ಸದರಿ ಕಂಪನಿಯು ಮೂರನೇ ಪಕ್ಷಗಾರರಿಗೆ ಆ ಫ್ಲ್ಯಾಟ್‌ಗಳನ್ನು ಮಾರಾಟ ಮಾಡಿರುತ್ತದೆ ಮತ್ತು ಆಯಾ ಫ್ಲ್ಯಾಟ್‌ಗಳನ್ನು ಸದರಿ ಮೂರನೇ ಪಕ್ಷಗಾರರ ಸ್ವಾಧೀನತೆಗೂ ನೀಡಿರುತ್ತದೆ. ಇದಕ್ಕೆ ಸಂಬಂಧಿಸಿದಂತೆ, ಬ್ಯಾಂಕ್‌ನಿಂದ ಸಂಬಂಧಿತ ವ್ಯಕ್ತಿಗಳ ವಿರುದ್ಧ ಸಿಬಿಐ ಸಂಸ್ಥೆಗೆ ದೂರು ನೀಡಲಾಗಿದೆ.

ಈ ನಡುವೆ, ಸದರಿ ಮೆ. ನವ್ಯ ಇನ್‌ಫ್ರಾಕಾನ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್‌ನ ಪ್ರಮೋಟರ್‌ಗಳೇ **ಮೆ. ಮಾನ್ಯಂ ಎಸ್ಟೇಟ್ಸ್ ಪ್ರೈ. ಲಿ.**, ಎಂಬ ಮತ್ತೊಂದು ಕಂಪನಿಯನ್ನು ಪ್ರಾರಂಭಿಸಿದೆ ಮತ್ತು **ಬೆಂಗಳೂರು ಉತ್ತರ, ಯಲಹಂಕ ವಿಳಾಸದಲ್ಲಿ ಮಾನ್ಯಂ ಸ್ಕೈ ಪಾರ್ಕ್ ಲಕ್ಸುರಿ ಅಪಾರ್ಟ್‌ಮೆಂಟ್ಸ್** ಎಂಬ ಯೋಜನೆಯನ್ನು ನಿರ್ಮಿಸಲು ಪ್ರಾರಂಭಿಸಿದ್ದಾರೆ ಎಂದು ತಿಳಿದುಬಂದಿದೆ.

ಆದ್ದರಿಂದ, ಸಾಮಾನ್ಯ ಸಾರ್ವಜನಿಕರು ಸದರಿ **ಮೆ. ನವ್ಯ ಇನ್‌ಫ್ರಾಕಾನ್ ಪ್ರಾಜೆಕ್ಟ್ಸ್ ಪ್ರೈವೇಟ್ ಲಿಮಿಟೆಡ್ ಹಾಗೂ ಮೆ. ಮಾನ್ಯಂ ಎಸ್ಟೇಟ್ಸ್ ಪ್ರೈವೇಟ್ ಲಿಮಿಟೆಡ್‌ನ** ಜೊತೆಗೆ ಮತ್ತು ಅವುಗಳ ಯೋಜನೆಗಳೊಂದಿಗೆ ವ್ಯವಹರಿಸುವಾಗ ಜಾಗೃತರಾಗಿರಬೇಕು ಎಂದು ಈ ಮೂಲಕ ಎಚ್ಚರಿಕೆ ಸೂಚಿಸಲಾಗಿದೆ.

ವಿಶಾಖಪಟ್ಟಣಂ

ದಿನಾಂಕ 24-04-2021

ಸಹಾಯಕ ಮಹಾ ಪ್ರಬಂಧಕರು

ಆರ್‌ಎಸಿಪಿಸಿ–1, ಭಾರತೀಯ ಸ್ಟೇಟ್ ಬ್ಯಾಂಕ್, ವಿಶಾಖಪಟ್ಟಣಂ

'ನಾಗರಿಕ ಸೇವಾ ಮಂಡಳಿ ರಚಿಸಿ'

ಬೆಂಗಳೂರು: ಐಎಎಸ್ ಅಧಿಕಾರಿಗಳ ಒಂದು ಹುದ್ದೆಯ ಕನಿಷ್ಠ ಅವಧಿ ಖಾತರಿಪಡಿಸುವ ಸಂಬಂಧ ಕೇಂದ್ರ ನಾಗರಿಕ ಸೇವಾ ಮಂಡಳಿ ರಚಿಸುವ ಬಗ್ಗೆ ಪ್ರತಿಕ್ರಿಯೆ ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ವಕೀಲರಾದ ಸುಧಾ ಕಟ್ವಾ ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಜೂ.24ರೊಳಗೆ ಅಫಿಡವಿಟ್ ಸಲ್ಲಿಸುವಂತೆ ನಿರ್ದೇಶನ ನೀಡಿತು.

'ಟಿಎಸ್‌ಆರ್ ಸುಬ್ರಮಣಿಯನ್ ಮತ್ತು ಇತರರ ಪ್ರಕರಣದಲ್ಲಿ 2013ರಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪಿನ ಪ್ರಕಾರ, ನಾಗರಿಕ ಸೇವೆಗೆ ಕನಿಷ್ಠ ಅಧಿಕಾರವಧಿ ನೀತಿ ರೂಪಿಸಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

GOVERNMENT OF INDIA, MINISTRY OF FINANCE, DEPARTMENT OF REVENUE, OFFICE OF THE PRINCIPAL COMMISSIONER OF CUSTOMS, AIRPORT AND AIR CARGO COMPLEX COMMISSIONERATE, AIR INDIA SATS AIR FREIGHT TERMINAL, 2ND FLOOR, DEVANAHALLI, BENGALURU - 560 300.
Email ID: commrapacc-cusblr@nic.in / cusaccblr.tech@gov.in
Phone No. 080-22001422/23, Fax No. 080-22001448

NOTICE TO PUBLIC

Applications are invited for the appointment of panel of approved Valuers for valuing Gold, Silver, Jewellery, Precious Stones and Valuable Articles etc., which are meant for export / import or seized or confiscated by the Department, to operate in the jurisdiction of Airport and Air Cargo Complex Commissionerate and Bengaluru City Customs Commissionerate.

The details regarding the application form, eligibility conditions and other conditions are prescribed in the Public Notice No.14/2021 AP&ACC, dated: 20.04.2021, which is available in the department's website https://bangalorecustoms.gov.in / airpninfo.php?year=2021.

For further details/clarifications contact : The Additional Commissioner of Customs (Technical) Office of the Principal Commissioner of Customs, Airport and Air Cargo Complex Commissionerate, 1st Floor, Menzies Aviation Bobba Building, KIAL, Devanahalli, Bengaluru-560300. E-mail: commrapacc-cusblr@nic.in / cusaccblr.tech@gov.in, Landline No.080-22001449 / 27688256, Mobile No. 9449909563.

The last date for receipt of filled in applications in this Office is **10.05.2021.** The applications received after the last date will not be considered and no further correspondence in the matter will be entertained.

Sd/- **ASHOK**
Principal Commissioner
Date: 20-04-2021

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಪೌಷ್ಟಿಕ ಆಹಾರ ಸೇವಿಸಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ದೀನದಯಾಳ್ ಉಪಾಧ್ಯಾಯ ಪಂಚಾಯತ್ ಸಶಕ್ತೀಕರಣ ಪ್ರಶಸ್ತಿಗೆ ಭಾಜನ

ಬೆಂಗಳೂರು ಪೂರ್ವ ತಾ.ಪಂ.ಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಾಯತ್ ರಾಜ್ ಸಂಸ್ಥೆಗಳಿಗೆ ಉತ್ತೇಜನ ನೀಡಲು ಕೇಂದ್ರ ಪಂಚಾಯತ್ ರಾಜ್ ಸಚಿವಾಲಯವು ರಾಷ್ಟ್ರೀಯ ಪಂಚಾಯತ್‌ರಾಜ್ ದಿನಾಚರಣೆಯಂದು (ಏ. 24) ನೀಡುವ ರಾಷ್ಟ್ರಮಟ್ಟದ ಎರಡು ಮಹತ್ತರ ಪ್ರಶಸ್ತಿಗಳನ್ನು ಬೆಂಗಳೂರು ನಗರದ ಜಿಲ್ಲೆ ಪಡೆದು ಕೊಂಡಿದೆ.

ಜಿಲ್ಲೆಯ ಬೆಂಗಳೂರು ಪೂರ್ವ ತಾಲ್ಲೂಕು ಪಂಚಾಯಿತಿಯು 'ದೀನ ದಯಾಳ್ ಉಪಾಧ್ಯಾಯ ಪಂಚಾಯತ್ ರಾಜ್ ಸಶಕ್ತೀಕರಣ' ಪ್ರಶಸ್ತಿಗೆ ಭಾಜನ ವಾಗಿದ್ದರೆ, ರಾಜಾನುಕುಂಟೆ ಗ್ರಾಮ ಪಂಚಾಯಿತಿಯು 'ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ' ಪ್ರಶಸ್ತಿಯನ್ನು ಪಡೆದುಕೊಂಡಿದೆ. ವರ್ಚುವಲ್ ರೂಪದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಪ್ರಶಸ್ತಿ ಪ್ರದಾನ ಮಾಡಿದರು.

'ದೀನದಯಾಳ್ ಉಪಾಧ್ಯಾಯ ಪಂಚಾಯತ್ ರಾಜ್ ಸಶಕ್ತೀಕರಣ' ಪ್ರಶಸ್ತಿಗೆ, ಬೀದಿದೀಪ ನಿರ್ವಹಣೆ, ಕುಡಿಯುವ ನೀರು ಪೂರೈಕೆ, ಒಳಚರಂಡಿ ಮತ್ತು ಸಾರ್ವಜನಿಕ ಶೌಚಾಲಯ ನಿರ್ವಹಣೆ, ರಸ್ತೆ, ಸಮುದಾಯ ಭವನ ಗ್ರಂಥಾಲಯ ಮುಂತಾದ ಮೂಲ ಸೌಕರ್ಯ ಒದಗಿಸುವುದು, ಅಭಿವೃದ್ಧಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮೂಲಗಳಲ್ಲದೇ ಅನ್ಯ ಮೂಲಗಳಿಂದ ಸಂಪನ್ಮೂಲ ಕ್ರೋಢೀಕರಣ, ಲೆಕ್ಕಪತ್ರ ನಿರ್ವಹಣೆ, ಶಿಕ್ಷಣಕ್ಕೆ ಉತ್ತೇಜನ ನೀಡುವ ಕಾರ್ಯಕ್ರಮಗಳು, ಪರಿಸರ ಸಂರಕ್ಷಣೆ, ಮಾಹಿತಿ ಹಂಚಿಕೊಳ್ಳುವಲ್ಲಿ ಪಾರದರ್ಶಕತೆ ಮುಂತಾದ 34 ಮಾನದಂಡಗಳನ್ನು ಆಧರಿಸಿ ತಾಲ್ಲೂಕು ಪಂಚಾಯಿತಿಗಳನ್ನು ಆಯ್ಕೆ ಮಾಡಲಾಗುತ್ತದೆ. ರಾಜ್ಯ ಸರ್ಕಾರವು ಅರ್ಹ ಪಂಚಾಯತ್‌ರಾಜ್ ಸಂಸ್ಥೆಯನ್ನು ಪ್ರಶಸ್ತಿಗೆ ಶಿಫಾರಸು ಮಾಡುತ್ತದೆ.

ಜಿಲ್ಲೆಯ 93 ಗ್ರಾಮ ಪಂಚಾಯಿತಿಗಳೂ ಇದರಿಂದ ಪ್ರೇರಣೆ ಪಡೆದು ಜನಪರ ಕಾರ್ಯಕ್ರಮ ರೂಪಿಸಬೇಕು

ಜೆ.ಮಂಜುನಾಥ್, ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ

'ಬೆಂಗಳೂರು ಪೂರ್ವ ತಾಲ್ಲೂಕು ಪಂಚಾಯಿತಿಯು ಒಟ್ಟು 11 ಗ್ರಾಮ ಪಂಚಾಯಿತಿಗಳನ್ನು ಹೊಂದಿದೆ. ಇವುಗಳಲ್ಲಿ ಕೈಗೊಂಡ ಮಳೆ ನೀರು ಸಂಗ್ರಹ ಕಾರ್ಯಕ್ರಮ, ಬೀದಿದೀಪಗಳಿಗೆ ಸೌರಶಕ್ತಿ ಬಳಕೆ, ಸ್ವಚ್ಛಭಾರತ ಅಭಿಯಾನದ ಯಶಸ್ವಿ ಅನುಷ್ಠಾನ, ಜೀವವೈವಿಧ್ಯ ಸಂರಕ್ಷಣೆಗೆ ಕೈಗೊಂಡ ಕ್ರಮಗಳು, ಒತ್ತುವರಿ ತೆರವು, ಹಸಿರೀಕರಣ ಅಭಿಯಾನ, ಕೆರೆ-ಕಲ್ಯಾಣಿಗಳ ಅಭಿವೃದ್ಧಿ, ಜಲಶಕ್ತಿ–ಜಲಾಮೃತ ಯೋಜನೆಯ ಯಶಸ್ವಿ ಅನುಷ್ಠಾನ, ಪರಿಶಿಷ್ಟರ ಅಭಿವೃದ್ಧಿಗೆ ಅನುದಾನ ಸದ್ಬಳಕೆ, ಸಾವಯವ ಕೃಷಿಗೆ ಉತ್ತೇಜನ, ಗ್ರಂಥಾಲಯಗಳ ಅಭಿವೃದ್ಧಿ, ಅಂಗನವಾಡಿಗಳ ಉನ್ನತೀಕರಣ, ಅಂಗನವಾಡಿಗಳನ್ನು ಮಕ್ಕಳ ಸ್ನೇಹಿಯಾಗಿ ಅಭಿವೃದ್ಧಿ ಪಡಿಸಿರುವುದು ಮುಂತಾದ ಅಂಶಗಳನ್ನು ಪರಿಗಣಿಸಿ ಈ ತಾಲ್ಲೂಕು ಪಂಚಾಯಿತಿಗೆ ಪ್ರಶಸ್ತಿ ನೀಡಲಾಗಿದೆ' ಎಂದು ನಗರ ಜಿಲ್ಲಾಧಿಕಾರಿ ಜೆ.ಮಂಜುನಾಥ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಸಮಗ್ರ ಯೋಜನೆಗೆ ರಾಷ್ಟ್ರ ಮನ್ನಣೆ

ಹೆಸರಘಟ್ಟ: ಬೆಂಗಳೂರು ನಗರ ಜಿಲ್ಲೆಯ ಯಲಹಂಕ ತಾಲ್ಲೂಕಿನ ಹೆಸರಘಟ್ಟ ಹೋಬಳಿಯ ರಾಜಾನುಕುಂಟೆ ಗ್ರಾಮ ಪಂಚಾಯಿತಿ ರೂಪಿಸಿದ್ದ ಅಭಿವೃದ್ಧಿ ಯೋಜನೆಗೆ ಈಗ ರಾಷ್ಟ್ರ ಮನ್ನಣೆ ದೊರೆತಿದೆ.

ಕೇಂದ್ರ ಸರ್ಕಾರ ಪಂಚಾಯತ್ ರಾಜ್ ದಿವಸ್ ಅಂಗವಾಗಿ ನೀಡುವ 'ಗ್ರಾಮ ಪಂಚಾಯಿತಿ ಅಭಿವೃದ್ಧಿ ಯೋಜನೆ' ಪ್ರಶಸ್ತಿಯನ್ನು ಈ ಗ್ರಾಮ ಪಂಚಾಯಿತಿ ರೂಪಿಸಿ ಅನುಷ್ಠಾನಗೊಳಿಸುತ್ತಿರುವ ಯೋಜನೆಯು ಪಡೆದುಕೊಂಡಿದೆ.

'ಗ್ರಾಮ ಪಂಚಾಯಿತಿಯು ಕೈ ಗೊಂಡಿರುವ ಜನಪರ ಯೋಜನೆಗಳನ್ನು ಪರಿಗಣಿಸಿ ಈ ಪ್ರಶಸ್ತಿಯನ್ನು ನೀಡಲಾಗಿದೆ. ಕುಡಿಯುವ ನೀರು, ಬೀದಿದೀಪಗಳ ನಿರ್ವಹಣೆ, ಸೌರ ವಿದ್ಯುತ್ ಬಳಕೆ, ಕಸ ವಿಲೇವಾರಿ, ಡಿಜಿಟಲ್ ಗ್ರಂಥಾಲಯ, ಶೈಕ್ಷಣಿಕ ಕಾರ್ಯಕ್ರಮಗಳಿಗೆ ಹೆಚ್ಚಿನ ಒತ್ತು ನೀಡಿ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಪರಿಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ, ಮಾದರಿ ಅಂಗನವಾಡಿಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದೇವೆ. ಪ್ರತಿ ಕ್ಷೇತ್ರದಲ್ಲಿ ಹೊಸ ಆಲೋಚನೆಗಳನ್ನು ಅಳವಡಿಸಿದ್ದರಿಂದ ಈ ಪ್ರಶಸ್ತಿ ನಮ್ಮ ಗ್ರಾಮ ಪಂಚಾಯಿತಿದೆ ದಕ್ಕಿದೆ' ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರಾಜೇಶ್ ಹರ್ಷ ವ್ಯಕ್ತಪಡಿಸಿದರು.

'ಗ್ರಾಮಸಭೆ, ಮಕ್ಕಳ ಗ್ರಾಮಸಭೆ, ಮಹಿಳಾ ಗ್ರಾಮಸಭೆಗಳನ್ನು ಸಕಾಲದಲ್ಲಿ ಆಯೋಜನೆ ಮಾಡಿ ಸರ್ಕಾರದ ಸವಲತ್ತುಗಳ ಮಾಹಿತಿಯನ್ನು ನೀಡಲಾಗಿದೆ. ಅಲ್ಲದೇ ಅಂಗವಿಕಲರಿಗೆ ಅಗತ್ಯವಾದ ಸೌಲಭ್ಯವನ್ನು ನೀಡಲು ಪಂಚಾಯಿತಿಯು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಆಂಬುಲೆನ್ಸ್ ಸೇವೆಯನ್ನು ಪಂಚಾಯಿತಿ ವತಿಯಿಂದ ಗ್ರಾಮಸ್ಥರಿಗೆ ಉಚಿತವಾಗಿ ನೀಡಲು ಕ್ರಮ ಕೈಗೊಂಡಿದ್ದೇವೆ. ಕೋವಿಡ್ ಹರಡುವ ಸಮಯದಲ್ಲಿ ಇದರಿಂದ ಬಹಳ ಪ್ರಯೋಜನವಾಗಿದೆ' ಎಂದು ಅವರು ತಿಳಿಸಿದರು.

ರಾಜಾನುಕುಂಟೆ ಗ್ರಾಮ ಪಂಚಾಯಿತಿ ಕಚೇರಿ

ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ವೀರಣ್ಣ, 'ಗ್ರಾಮ ಪಂಚಾಯಿತಿ ಹಮ್ಮಿಕೊಂಡ ಯೋಜನೆಗಳ ಅನುಷ್ಠಾನಕ್ಕೆ ಶಾಸಕ ಎಸ್.ಆರ್.ವಿಶ್ವನಾಥ್ ಅವರೂ ಸಹಕಾರ ನೀಡಿದ್ದರು. ಗ್ರಾಮಸ್ಥರ ಸಹಕಾರ, ಜನಪ್ರತಿನಿಧಿಗಳ ಮತ್ತು ಅಧಿಕಾರಿಗಳ ಶ್ರಮದಿಂದ ಈ ಪ್ರಶಸ್ತಿ ನಮ್ಮದಾಗಿದೆ' ಎಂದರು.

'ಗ್ರಾಮಸಭೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ್ದು, ಮಕ್ಕಳ ಹಾಗೂ ಮಹಿಳಾಸ್ನೇಹಿ ಗ್ರಾಮಸಭೆಗಳ ಆಯೋಜನೆ, ತೆರಿಗೆ ವಸೂಲಾತಿ ಮತ್ತು ಸದ್ಬಳಕೆ, ಅಂಗವಿಕಲ ಸ್ನೇಹಿ ಕಾರ್ಯಕ್ರಮಗಳ ಅನುಷ್ಠಾನ, ಸಾರ್ವಜನಿಕ ಉದ್ಯಾನ, ಯೋಗಮಂದಿರಗಳ ಅಭಿವೃದ್ಧಿ ಮತ್ತು ನಿರ್ವಹಣೆ ವಿಚಾರದಲ್ಲಿ ಈ ತಾಲ್ಲೂಕಿನ ಗ್ರಾಮಗಳು ಮುಂಚೂಣಿಯಲ್ಲಿವೆ. ಇಲ್ಲಿ ಎಲ್ಲ ಗ್ರಾಮಗಳಲ್ಲೂ ಕಸ ವಿಲೇವಾರಿಗೆ ಪ್ರತ್ಯೇಕ ತಾಣಗಳನ್ನು ಗುರುತಿಸಿ ಶಾಶ್ವತವಾಗಿ ಜಮೀನು ಹಂಚಿಕೆ ಮಾಡಲಾಗಿದೆ. ಪ್ರಶಸ್ತಿಗೆ ಭಾಜನವಾಗುವುದಕ್ಕೆ ಈ ಅಂಶಗಳೂ ನೆರವಾಗಿವೆ' ಎಂದು ಅವರು ವಿಶ್ಲೇಷಿಸಿದರು.

'ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಯಶಸ್ಸು ಸಿಗುತ್ತದೆ ಎಂಬುದಕ್ಕೆ ಜಿಲ್ಲೆಗೆ ದಕ್ಕಿರುವ ಎರಡು ಪ್ರಶಸ್ತಿಗಳೇ ಉದಾಹರಣೆ. ಸರ್ಕಾರಿ ಸಿಬ್ಬಂದಿ, ಜನಪ್ರತಿನಿಧಿಗಳ ಶ್ರಮ ಹಾಗೂ ಜನರ ಸಹಕಾರವೂ ಇದಕ್ಕೆ ಕಾರಣ' ಎಂದರು.

2019–20ನೇ ಸಾಲಿನ ಸಾಧನೆ ಪರಿಗಣಿಸಿ ಪಂಚಾಯತ್ ರಾಜ್ ಸಂಸ್ಥೆಗಳನ್ನು ಈ ಪ್ರಶಸ್ತಿ ಆಯ್ಕೆ ಮಾಡಲಾಗಿದೆ. 2021ನೇ ಸಾಲಿನ ಪ್ರಶಸ್ತಿಗೆ 2020ರ ನವೆಂಬರ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿತ್ತು. ಅರ್ಜಿ ಸಲ್ಲಿಕೆ ದಿನಾಂಕವನ್ನು 2021ರ ಜ.30ರವರೆಗೆ ವಿಸ್ತರಿಸಲಾಗಿತ್ತು.

ಪ್ರಶಸ್ತಿ ದಕ್ಕಿಸಿಕೊಟ್ಟ ಪರಿಸರ ಕಾಳಜಿ

● ಶಿವರಾಜ್ ಮೌರ್ಯ

ಕೆ.ಆರ್.ಪುರ: ಗ್ರಾಮಗಳ ಪರಿಸರ ಕಾಳಜಿ, ಸ್ವಚ್ಛತೆ, ಕಸದ ವೈಜ್ಞಾನಿಕ ನಿರ್ವಹಣೆ, ನೀರು ಸರಬರಾಜು, ಪಂಚಾಯಿತಿ ವ್ಯವಸ್ಥೆಗಳಲ್ಲಿ ಸೌರಶಕ್ತಿ ಬಳಕೆಗೆ ಕ್ರಮ, ಪಂಚಾಯಿತಿ ಆಸ್ತಿಗಳ ಡಿಜಿಟಲೀಕರಣ, ಬೆಸ್ಕಾಂ ಬಿಲ್ಲುಗಳ ಮರು ಸಮನ್ವಯ...

ಬೆಂಗಳೂರು ಪೂರ್ವ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಯ 11 ಗ್ರಾಮಗಳ ಸಮಗ್ರ ಅಭಿವೃದ್ಧಿಗಾಗಿ ಕಾರ್ಯಗತಗೊಳಿಸಿರುವ ಈ ವಿಶೇಷ ಕಾರ್ಯಕ್ರಮಗಳು ಮತ್ತು ನೂತನ ಯೋಜನೆಗಳು ಕೇಂದ್ರ ಸರ್ಕಾರದ ಗಮನವನ್ನೂ ಸೆಳೆದಿವೆ. 2021ನೇ ಸಾಲಿನ ದೀನ ದಯಾಳ್ ಉಪಾಧ್ಯಾಯ ಪಂಚಾಯತ್ ಸಶಕ್ತಿಕರಣ ಪ್ರಶಸ್ತಿಯನ್ನೂ ದಕ್ಕಿಸಿ ಕೊಟ್ಟಿವೆ.

ತಾಲ್ಲೂಕಿನ ಗ್ರಾಮ ಪಂಚಾಯಿತಿಗಳ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಿಸಲಾಗುತ್ತಿದೆ. ಸಾಧ್ಯವಿರುವಲ್ಲೆಲ್ಲ ಸೌರವಿದ್ಯುತ್ ಬಳಕೆಯನ್ನು ಮಾಡಲಾಗುತ್ತಿದೆ. ಕೆರೆ, ಕಲ್ಯಾಣಿಗಳ ಅಭಿವೃದ್ಧಿಗೆ ಹಾಗೂ ಅವುಗಳ ಜಲಮರುಪೂರಣಕ್ಕೆ ಒತ್ತು ನೀಡಲಾಗುತ್ತಿದೆ. ಇಂಗುಗುಂಡಿ ರಚಿಸಿ, ಹರಿದು ಹೋಗುತ್ತಿದ್ದ ನೀರಿಗೆ ತಡೆಯೊಡ್ಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. 18 ಕಲ್ಯಾಣಿಗಳನ್ನು ಅಭಿವೃದ್ಧಿ ಮಾಡಲಾಗಿದೆ. ಗ್ರಾಮಗಳಲ್ಲಿ ಸರ್ಕಾರಿ ಜಾಗ ಮತ್ತು ರಸ್ತೆ ಬದಿಗಳಲ್ಲಿ ಗಿಡಗಳನ್ನು ನೆಡಲಾಗಿದೆ. 10 ಸಾವಿರಕ್ಕೂ ಹೆಚ್ಚು ಗಿಡಗಳನ್ನು ಬೆಳೆಸುವ ಮೂಲಕ ಗ್ರಾಮಗಳ ಸುಂದರೀಕರಣಕ್ಕೆ ಆದ್ಯತೆ ನೀಡಲಾಗಿದೆ. ಒತ್ತುವರಿ ಜಾಗಗಳನ್ನು ವಶಪಡಿಸಿಕೊಂಡು ಅಲ್ಲೂ ಗಿಡ ನೆಟ್ಟು ಬೆಳೆಸಲಾಗುತ್ತಿದೆ.

ಲಭ್ಯ ಅನುದಾನದಲ್ಲಿ ಗ್ರಾಮಗಳ ಅಭಿವೃದ್ಧಿ ಹಾಗೂ ಕಸದ ವೈಜ್ಞಾನಿಕ ನಿರ್ವಹಣೆಯಂತಹ ಹಲವು ಮಹತ್ವದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಸ ನಿರ್ವಹಣೆ ಘಟಕ ಸ್ಥಾಪಿಸಲಾಗಿದೆ. ಕಸದ ಮರುಬಳಕೆ ಉತ್ತೇಜಿಸಲಾಗುತ್ತಿದೆ. ಟ್ರ್ಯಾಕ್ಟರ್ ಮೂಲಕ ಮನೆಮನೆಗೆ ತೆರಳಿ ಹಸಿಕಸ ಮತ್ತು ಒಣಕಸ ಪ್ರತ್ಯೇಕಗೊಳಿಸಿ ಸಂಗ್ರಹಿಸಲಾಗುತ್ತಿದೆ. ಒಣಕಸವನ್ನು ವೈಜ್ಞಾನಿಕವಾಗಿ ಸಂಸ್ಕರಿಸಿ ಮರುಬಳಕೆ ಮಾಡಲಾಗುತ್ತದೆ. ಹಸಿರು ದಳ ಮತ್ತು ಮಹೇಂದ್ರ ಟೆಕ್ ಸಂಸ್ಥೆಗಳ ಸಹಯೋಗದಲ್ಲಿ ಬಯೋ ಗ್ಯಾಸ್ ಘಟಕ ಸ್ಥಾಪಿಸಿ ಹಸಿ ಕಸದಿಂದ ಜೈವಿಕ ಅನಿಲ ಘಟಕ ಸ್ಥಾಪಿಸುವ ಯೋಜನೆ ರೂಪಿಸಲಾಗಿದೆ.

ಪ್ರತಿ ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಇಷ್ಟವಾಗುವ ಬಣ್ಣಗಳಲ್ಲಿ ಕಟ್ಟಡ ವಿನ್ಯಾಸ. ಗೋಡೆಗಳನ್ನು ಪ್ರಾಣಿ ಪಕ್ಷಿಗಳ ಚಿತ್ರಗಳಿಂದ ಅಲಂಕರಿಸಲಾಗಿದೆ. ಅಂಗನವಾಡಿ ಕೇಂದ್ರಗಳಿಗೆ ಡೆಸ್ಕ್, ಟಿವಿ ಸೌಕರ್ಯ ಒದಗಿಸಲಾಗಿದೆ.

ಕಾಡುಸೋಣ್ಣಪ್ಪನಹಳ್ಳಿ ಗ್ರಾಮದ ಕಲ್ಯಾಣಿ ಸ್ವಚ್ಛತಾಕಾರ್ಯ

ಈ ಪ್ರಶಸ್ತಿಯಿಂದ ಇನ್ನಷ್ಟು ಕೆಲಸ ಮಾಡಲು ಹುರುಪು ಸಿಕ್ಕಿದೆ. ಇನ್ನೂ ಹೆಚ್ಚಿನ ಸೇವೆ ಮಾಡುವ ಮೂಲಕ ಗ್ರಾಮಗಳ ಸಶಕ್ತೀಕರಣಕ್ಕೆ ಶ್ರಮಿಸುತ್ತೇವೆ

ಕೆ. ಮಂಜುನಾಥ್, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಣಾಧಿಕಾರಿ

ಕಾರ್ಯಕ್ರಮಗಳ ಅನುಷ್ಠಾನಕ್ಕೆ ಪಿಡಿಒಗಳ ಪಾತ್ರ ಹಾಗೂ ಜನರ ಸಹಭಾಗಿತ್ವ ಮುಖ್ಯ. ಪ್ರಶಸ್ತಿ ಬಂದಿದ್ದು ಖುಷಿ ನೀಡಿದೆ

ಮಂಜುಳಾ ಮುನಿತಿಮ್ಮಯ್ಯ

ತಾಲ್ಲೂಕು ಪಂಚಾಯಿತಿ ಅಧ್ಯಕ್ಷೆ

ವರ್ಷಕ್ಕೆ ₹ 3 ಕೋಟಿ ಉಳಿತಾಯ

ಪ್ರತಿ ಪಂಚಾಯಿತಿ ಕಟ್ಟಡಗಳಲ್ಲಿ ಸೌರವಿದ್ಯುತ್ ಬಳಸಿ ತಾಲ್ಲೂಕು ಪಂಚಾಯಿತಿ ಉಸ್ತುವಾರಿಯಲ್ಲಿರುವ ಕಟ್ಟಡಗಳ ವಿದ್ಯುತ್ ಬಿಲ್ಲುಗಳ ಮರು ಸಮನ್ವಯ ಮಾಡಿ ಸರ್ಕಾರದ ಹಣ ಪೋಲಾಗುವುದನ್ನು ತಡೆಯಲಾಗಿದೆ. ಈ ಮೂಲಕ ವರ್ಷಕ್ಕೆ ₹ 3 ಕೋಟಿ ಹಣ ಉಳಿಸಲಾಗಿದೆ. ತೆರಿಗೆ ವಂಚನೆಯನ್ನು ತಡೆಗಟ್ಟುವಲ್ಲಿ ಪೂರ್ವ ತಾಲ್ಲೂಕು ಪಂಚಾಯಿತಿ ವಿಶೇಷ ಕ್ರಮ ಕೈಗೊಂಡಿದೆ.

'ಡಾ.ರಾಜ್ ಮೇರು ವ್ಯಕ್ತಿತ್ವದ ನಟ'

ಬೆಂಗಳೂರು: 'ಡಾ.ರಾಜ್‌ಕುಮಾರ್ ಮೇರುವ್ಯಕ್ತಿತ್ವದ ನಟ. ಅವರಲ್ಲಿದ್ದ ವಿನಮ್ರತೆಯ ಗುಣವನ್ನು ನಾವೆಲ್ಲಾ ಮೈಗೂಡಿಸಿಕೊಳ್ಳಬೇಕು. ಕನ್ನಡ ನಾಡು, ನುಡಿ, ಸಂಸ್ಕೃತಿಯ ಬಗ್ಗೆ ಅವರಿಗಿದ್ದ ಅಭಿಮಾನವು ಅನುಪಮ ಮತ್ತು ಅನುಕರಣೀಯ' ಎಂದು ರಾಮೋಹಳ್ಳಿಯ ಶ್ರೀ ಸಿದ್ಧಾರೂಢ ಮಿಷನ್ ಆಶ್ರಮದ ಅಧ್ಯಕ್ಷ ಆರೂಢಭಾರತೀ ಸ್ವಾಮೀಜಿ ಹೇಳಿದರು.

ಅಖಂಡ ಕರ್ನಾಟಕ ಜನಜಾಗೃತಿ ವೇದಿಕೆಯು ಕೆಂಗೇರಿ ಉಪನಗರದಲ್ಲಿ ಶನಿವಾರ ಏರ್ಪಡಿಸಿದ್ದ ಡಾ. ರಾಜ್‌ಕುಮಾರ್ ಅವರ 92ನೇ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಅಭಿನಯದಲ್ಲಿ ರಾಜ್ ಅವರಿಗೆ ಯಾರೂ ಸಾಟಿಯಾಗಲಾರರು. ಅವರ ಮಾತುಗಾರಿಕೆ ಹಾಗೂ ಹಾಡುಗಾರಿಕೆಗೆ ಮಾರುಹೋಗದವರೇ ಇಲ್ಲ. ಇವು ಅವರಿಗೆ ದೈವದತ್ತವಾಗಿ ಸಿದ್ಧಿಸಿದ್ದವು. ರಾಜ್ ಅವರಲ್ಲಿದ್ದ ವಿದ್ವತ್ತು ಅಸಾಧಾರಣ. ಹೀಗಾಗಿಯೇ ದಾದಾಸಾಹೇಬ್ ಫಾಲ್ಕೆ, ಪದ್ಮಭೂಷಣ, ಕರ್ನಾಟಕ ರತ್ನ, ವರನಟ, ನಟಸಾರ್ವಭೌಮ, ರಸಿಕರ ರಾಜ ಹೀಗೆ ಅನೇಕ ಪ್ರಶಸ್ತಿ ಮತ್ತು ಬಿರುದುಗಳು ಅವರನ್ನು ಅರಸಿ ಬಂದಿದ್ದವು' ಎಂದು ತಿಳಿಸಿದರು.

ಅಖಂಡ ಕರ್ನಾಟಕ ಜನಜಾಗೃತಿ ವೇದಿಕೆ ಅಧ್ಯಕ್ಷ ಸುರೇಶ ಗೌಡ, ಉಪಾಧ್ಯಕ್ಷ ಜಗದೀಶ್, ಪ್ರಧಾನ ಕಾರ್ಯದರ್ಶಿ ಸುರೇಶ್, ಕಾರ್ಯದರ್ಶಿ ಅನಿಲ್, ಇಂದ್ರಸುಧಾ ಇದ್ದರು.

ಪೂಜೆ ಡಾ.ರಾಜ್‌ಕುಮಾರ್ ಜನ್ಮದಿನದ ಹಿನ್ನೆಲೆಯಲ್ಲಿ ಅವರ ಸಮಾಧಿ ಸ್ಥಳಕ್ಕೆ ಶನಿವಾರ ಭೇಟಿ ನೀಡಿದ್ದ ರಾಘವೇಂದ್ರ ರಾಜ್‌ಕುಮಾರ್ ಪೂಜೆ ಸಲ್ಲಿಸಿದರು

ಮಕ್ಕಳ ಕಳ್ಳಸಾಗಣೆ: ಎಸ್‌ಐಟಿ ರಚಿಸಲು ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಕ್ಕಳ ಕಳ್ಳಸಾಗಣೆಯ ಗಂಭೀರ ಸಮಸ್ಯೆ ಪರಿಗಣಿಸಿ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವ ಸಲಹೆ ಪರಿಗಣಿಸುವಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.

ಈ ಸಂಬಂಧ ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ (ಕೆಎಸ್‌ಎಲ್‌ಎಸ್‌ಎ) ಸಲ್ಲಿಸಿರುವ ವರದಿಗೆ ವಿವರವಾದ ಪ್ರತಿಕ್ರಿಯೆ ಸಲ್ಲಿಸುವಂತೆ ತಿಳಿಸಿದೆ. ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠದ ಆದೇಶದ ಮೇರೆಗೆ ಕೆಎಸ್‌ಎಲ್‌ಎಸ್‌ಎ ಈ ಸಮೀಕ್ಷೆ ನಡೆಸಿತ್ತು. 'ನಗರದ 432 ಸ್ಥಳಗಳಲ್ಲಿ ಆಟಿಕೆ ಮಾರಾಟ ಮಾಡುವ 886 ಮಕ್ಕಳಿದ್ದು, ಅವರಲ್ಲಿ 720 ಮಕ್ಕಳ ಮಾಹಿತಿ ಸಂಗ್ರಹಿಸಲಾಗಿದೆ. ಇವರಲ್ಲಿ 27 ಮಕ್ಕಳನ್ನು ಮಾಫಿಯಾ ಭಿಕ್ಷಾಟನೆಗೆ ದೂಡಿದೆ' ಕೆಎಸ್‌ಎಲ್‌ಎಸ್‌ಎ ತಂಡ ವರದಿ ಸಲ್ಲಿಸಿತ್ತು.

'ಈ ವಿಷಯದ ಸಂಬಂಧ ಬಿಬಿಎಂಪಿ ಮತ್ತು ರಾಜ್ಯ ಸರ್ಕಾರ ಅಫಿಡವಿಟ್ ಸಲ್ಲಿಸಿದ ಬಳಿಕ ವಿವರವಾದ ನಿರ್ದೇಶನ ನೀಡಲಾಗುವುದು. ಈ ಪ್ರಕರಣದಲ್ಲಿ ಎಲ್ಲಾ ಭಾಗಿದಾರರ ಸಭೆಯನ್ನು ಮೇ ಕೊನೆಯ ವಾರದಲ್ಲಿ ಕರೆಯಬೇಕು' ಎಂದು ಕೆಎಸ್‌ಎಲ್‌ಎಸ್‌ಎ ಕಾರ್ಯದರ್ಶಿಗೆ ಪೀಠ ಸೂಚನೆ ನೀಡಿತು.

'ಬೆಂಗಳೂರು ನಗರದಲ್ಲಿ ಮತ್ತು ವಿಶೇಷವಾಗಿ ಮಕ್ಕಳ ಕಳ್ಳಸಾಗಣೆಗೆ ಅವಕಾಶ ಇರುವುದು ಪ್ರಶ್ನಾರ್ಹವಾಗಿದೆ. ಹೀಗಾಗಿ, ಬಾಲ ನ್ಯಾಯ(ಜೆ.ಜೆ)ಕಾಯ್ದೆಯಡಿ ರಚಿಸಿರುವ ಎಲ್ಲಾ ಸಂಸ್ಥೆಗಳನ್ನು ಪುರುಜ್ಜೀವನಗೊಳಿಸುವ ಅಗತ್ಯವಿದೆ' ಎಂದು ತಿಳಿಸಿತು.

ನೋಂದಾಯಿಸದ ಕೇಂದ್ರಗಳ ವಿರುದ್ಧ ಕ್ರಮ: ರಾಜ್ಯದಲ್ಲಿ ನೋಂದಾಯಿಸದ ಮಕ್ಕಳ ಆರೈಕೆ ಕೇಂದ್ರಗಳ ವಿರುದ್ಧ ಕ್ರಮ ಕೈಗೊಳ್ಳುವಂತೆ ಸರ್ಕಾರಕ್ಕೆ ಪೀಠ ನಿರ್ದೇಶನ ನೀಡಿತು.

ವಿಜಯನಗರದಲ್ಲಿ ಈ ರೀತಿಯ ಕೇಂದ್ರವೊಂದು ಸರ್ಕಾರಿ ಶಾಲೆ ಆವರಣದಲ್ಲಿ ನಡೆಯುತ್ತಿದೆ. ಶಿಕ್ಷಣ ಇಲಾಖೆ ಅಧಿಕಾರಿಯೇ ಈ ಕೇಂದ್ರ ನಡೆಸುತ್ತಿದ್ದಾರೆ. ಈ ಬಗ್ಗೆ ಕ್ರಮ ಕೈಗೊಂಡು ವರದಿ ಸಲ್ಲಿಸಬೇಕು ಎಂದು ಬಿಬಿಎಂಪಿಗೆ ಸೂಚನೆ ನೀಡಿತು. ಈ ಕೇಂದ್ರದಲ್ಲಿ 14 ಬಾಲಕಿಯರು, 19 ಬಾಲಕರು ಇದ್ದಾರೆ. ರಾಜ್ಯದಲ್ಲಿ ಈ ರೀತಿಯ 53 ಸಂಸ್ಥೆಗಳಿದ್ದು, ಮಕ್ಕಳ ಕಳ್ಳಸಾಗಣೆ ಮತ್ತು ಲೈಂಗಿಕ ದೌರ್ಜನ್ಯದ ಆರೋಪಗಳಿವೆ ಎಂಬ ಕೆಎಸ್‌ಎಲ್‌ಎಸ್‌ಎ ವರದಿಯನ್ನು ಪೀಠ ಉಲ್ಲೇಖಿಸಿತು.

ಇಂಡಿಯನ್ ಓವರ್‌ಸೀಸ್ ಬ್ಯಾಂಕ್

ಪ್ರಾದೇಶಿಕ ಕಛೇರಿ, 3ನೇ ಮಹಡಿ, ಲಕ್ಷ್ಮೀನಾರಾಯಣ ಕಾಂಪ್ಲೆಕ್ಸ್, 10/1, ಪ್ಯಾಲೆಸ್ ರಸ್ತೆ, ವಸಂತ ನಗರ, ಬೆಂಗಳೂರು–560052 ದೂ.: 080–22950205

ಬ್ಯಾಂಕ್‌ಗೆ ಅಡಮಾನವಿರಿಸಿದ ವಾಹನಗಳ ಹರಾಜು ಮತ್ತು ಮಾರಾಟಕ್ಕೆ ಸಾರ್ವಜನಿಕ ಪ್ರಕಟಣೆ

ಕೆಳಕಂಡ ಹಳದಿ ಬೋರ್ಡ್ ವಾಹನಗಳನ್ನು "ಎಲ್ಲಿ ಹೇಗಿದೆಯೋ ಹಾಗೆ ಮತ್ತು ಎಲ್ಲಿ ಏನಿದೆಯೋ ಹಾಗೆ" ಮಾರಾಟ ಮಾಡಲು ಬ್ಯಾಂಕ್ ಉದ್ದೇಶಿಸಿದೆ.

ಕ್ರ. ಸಂ.	ಶಾಖೆಯ ಹೆಸರು / ಹರಾಜು ನಡೆಯುವ ಸ್ಥಳ	ಖಾತಾ ಸಂಖ್ಯೆ	ಸಾಲಗಾರರ ಹೆಸರು	ವಾಹನದ ಮಾದರಿ	ನೋಂದಣಿ ಸಂಖ್ಯೆ	ಕನಿಷ್ಠ ಮೂಲ ದರ (ರೂ.ಗಳಲ್ಲಿ)
1	**ಬನ್ನೇರುಘಟ್ಟ ರಸ್ತೆ (1605),** ಹೊಸ 12 & 13, ಎನ್.ಎಸ್. ಪಾಳ್ಯ ಕೈಗಾರಿಕಾ ಪ್ರದೇಶ, 1ನೇ ಅಡ್ಡರಸ್ತೆ, ಶಾಪರ್ಸ್ ಸ್ಟಾಪ್‌ನ ನಂತರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560076, ಕರ್ನಾಟಕ, ಸಂಪರ್ಕ: 080–22950120	160503311300040	ಮಹಮ್ಮದ್ ರಫಿ	Bajaj Re 4 Stroke	KA04D5693	12,100/-
2		160503311300008	ಅಶೋಕ್ ಡಿ.ಆರ್.	Bajaj Re 4 Stroke	KA02AD1042	8,600/-
3		160503311200093	ಶ್ರೀಹರಿ ಟಿ.	Bajaj Re 4 Stroke	KA02AC7572	9,000/-
4		160503311200076	ಸಂಪಂಗಿ ರಾಮಯ್ಯ	Bajaj Re 4 Stroke	KA02AC5965	10,900/-
5	**ಬಸವನಗುಡಿ (1897),** ನಂ. 39, ಎಸ್‌ಎಲ್‌ವಿ ಪ್ಲಾಜಾ, ಬುಲ್‌ಟೆಂಪಲ್ ರಸ್ತೆ, ಬಸವನಗುಡಿ, ಬೆಂಗಳೂರು–560004. ಸಂಪರ್ಕ: 080–22950105/106	189703311000038	ಮಹದೇವ್	Tvs King Autorikshaw	KA05AC2320	8,500/-
6	**ಬ್ರೂಕ್‌ಫೀಲ್ಡ್ (1900),** ನಂ. 53/17, ಟೆಲ್ ಎಕ್ಸ್‌ಚೇಂಜ್ ಪಕ್ಕ, ಐಟಿಪಿಎಲ್ ಮುಖ್ಯರಸ್ತೆ, ಮಾರಹಳ್ಳಿ ಅಂಚೆ, ಬ್ರೂಕ್‌ಫೀಲ್ಡ್ 560037. ಸಂಪರ್ಕ: 080–22950110/111	190003311000032	ಕೃಷ್ಣ	Bajaj Re 4 Stroke	KA04AC1894	11,300/-
7	**ಕಂಟೋನ್ಮೆಂಟ್ (0012),** ನಂ. 6/1, ಜೆ.ವೈ. ಆರ್ಕೇಡ್, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು–560001. ಸಂಪರ್ಕ: 080–22950151 – 153, 374	1203311000016	ಕೆ ಶಿವಲಿಂಗಯ್ಯ	Tvs King Autorikshaw	KA05AC1932	11,000/-
8		1203311200024	ಜಿ ಬಾಬುರಾಜ್	Bajaj Re 4 Stroke	KA03AA3030	7,500/-
9	**ಚಿಕ್ಕಬಿದರಕಲ್ಲು (2310),** ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಕೆ. ಲಕ್ಕಪ್ಪ ಎಜುಕೇಷನಲ್ ಟ್ರಸ್ಟ್ ಸ್ಕೂಲ್ ಕ್ಯಾಂಪಸ್ (ಶ್ರೀರಾಮ್ ಪಬ್ಲಿಕ್ ಸ್ಕೂಲ್) ವಿ.ಹೆಚ್. ಗಾರ್ಡನ್ಸ್, ಚಿಕ್ಕಬಿದರಕಲ್ಲು ಪಾರ್ಲೆ ಇಂಡಸ್ಟ್ರೀಸ್ ಸಮೀಪ, ನಾಗಸಂದ್ರ ಪೋಸ್ಟ್, ಬೆಂಗಳೂರು – 560073. ಸಂಪರ್ಕ: 080–23716677	231003311100018	ಮುರುಗೇಶ್	Bajaj Re 4 Stroke	KA02AB6160	11,400/-
10	**ಕಾಕ್ಸ್‌ಟೌನ್ (0201),** 157, ಎಂಎಂ ರಸ್ತೆ, ಫ್ರೇಜರ್‌ಟೌನ್, ಬೆಂಗಳೂರು–560005, ಕರ್ನಾಟಕ. ಸಂಪರ್ಕ: 080–22950201 / 203	20103311400002	ಅಂಕಯ್ಯ	Bajaj Re 4 Stroke	KA03AB2160	16,000/-
11		20103310900003	ಎಸ್ ಸುರೇಶ್	Tvs King Autorikshaw	KA03D5237	8,000/-
12	**ಹೆಚ್‌ಎಸ್‌ಆರ್ ಲೇಔಟ್ (2456),** 19/ಎ, 1ನೇ ಮಹಡಿ, 9ನೇ ಮುಖ್ಯರಸ್ತೆ, ಸೆಕ್ಟರ್ 7 ಹೆಚ್‌ಎಸ್‌ಆರ್ ಲೇಔಟ್, ಬೆಂಗಳೂರು 560102, ಕರ್ನಾಟಕ. ಸಂಪರ್ಕ: 080–22950155	245603311100041	ಪ್ಯಾರೆ ಜಾನ್	Tvs King Autorikshaw	KA02AC562	12,900/-
13	**ಹೆಚ್‌ಆರ್‌ಬಿಆರ್ ಲೇಔಟ್ (1554),** ನಂ. 59, ಸುಬ್ಬನಪಾಳ್ಯ, ಬಾಣಸವಾಡಿ ಮುಖ್ಯರಸ್ತೆ, ಬೆಂಗಳೂರು–560033. ಸಂಪರ್ಕ: 22950122 – 123/26630902	155403261000074	ಸಗಾಯನಾಥನ್	Tvs King Autorikshaw	KA53A0545	13,500/-
14	**ಮಹಾಲಕ್ಷ್ಮೀಪುರಂ (1775),** ನಂ. 1335, ನಳಿನ ಕಾಂಪ್ಲೆಕ್ಸ್, 11ನೇ ಅಡ್ಡರಸ್ತೆ, 7ನೇ ಮುಖ್ಯರಸ್ತೆ, ನಾಗಪುರ ಮುಖ್ಯರಸ್ತೆ, ಮಹಾಲಕ್ಷ್ಮೀಪುರಂ, ಬೆಂಗಳೂರು–560086. ಸಂಪರ್ಕ:080–22950322 / 323	177503632000002	ವಿ – ಗೋ ಗ್ಲೋಬಲ್ ಲಾಜಿಸ್ಟಿಕ್ಸ್	Eicher Pro 6025 S Cbc	KA52A7740	13,50,000/-
15		177503301200030	ನಾಗರಾಜ	Tvs King Autorikshaw	KA02AC4171	11,200/-
16	**ಆರ್‌ಟಿ ನಗರ (1537),** 402, 3ನೇ ಮುಖ್ಯರಸ್ತೆ, 2ನೇ ಬ್ಲಾಕ್, ಆರ್.ಟಿ. ನಗರ, ಬೆಂಗಳೂರು 560032. ಸಂಪರ್ಕ: 080– 22950331 / 332	153703310900029	ರೇವಣ್ಣ	Bajaj Re 4 Stroke	KA04AB7795	9,500/-
17	**ಎಸ್ ಸಿ ಗಾರ್ಡನ್ (665),** 35/1, ಸೈಂಟ್ ಜಾನ್ಸ್ ರಸ್ತೆ, ಶಿವನ್ ಚೆಟ್ಟಿ ಗಾರ್ಡನ್, ಬೆಂಗಳೂರು–560042. ಸಂಪರ್ಕ:080– 22950175/176	66503261200019	ನರಸಿಂಹಲು	Tvs King Autorikshaw	KA02AC6470	14,000/-
18	**ಸಂಪಿಗೆ ರಸ್ತೆ (2118),** ಶ್ವೇತಾ ಮ್ಯಾನ್ಷನ್, 1ನೇ ಮಹಡಿ, 483, 5ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003, ಕರ್ನಾಟಕ. ಸಂಪರ್ಕ: 080– 22950107/108	211803491100160	ಮಲೇನು ಪೌಲ್	Bajaj Re 4 Stroke	KA03AA943	5,000/-
19		211803491100127	ವೆಂಕಟೇಶ	Tvs King Autorikshaw	KA02AB8242	11,000/-
20	**ಶಾಂತಿನಗರ (136),** 5, ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರು–560027, ಕರ್ನಾಟಕ. ಸಂಪರ್ಕ: 080–22950136/137	13603311100006	ನಾಗರಾಜು ಡಿ.	Tvs King Autorikshaw	KA02AB2257	11,500/-
21	**ಸುಂಕದಕಟ್ಟೆ (2309),** ಬಿ–9, 77/78/ಬಿ ಜನಪ್ರಿಯ ಶಾಪಿಂಗ್ ಕಾಂಪ್ಲೆಕ್ಸ್, ಸುಂಕದಕಟ್ಟೆ ಮಾಗಡಿ ಮುಖ್ಯರಸ್ತೆ, ಬೆಂಗಳೂರು–560091 ಕರ್ನಾಟಕ. ಸಂಪರ್ಕ: 080–22950337	230903311100048	ಶ್ರೀಧರ	Tvs King Autorikshaw	KA05AC0374	11,600/-
22		230903311100472	ಇಲಿಯಾಸ್ ಪಾಷ	Tvs King Autorikshaw	KA02AB8659	10,900/-
23		230903311100321	ಹರೀಶ್ ಕುಮಾರ್ ಆರ್.	Tvs King Autorikshaw	KA02AB6194	12,000/-
24	**ವಿದ್ಯಾರಣ್ಯಪುರ (2837),** 570, ಶ್ರೀ ಸಾಯಿ ಟವರ್, ಹೆಚ್‌ಎಂಟಿ ಲೇಔಟ್, 1ನೇ ಬ್ಲಾಕ್, ಮುಖ್ಯರಸ್ತೆ, ವಿದ್ಯಾರಣ್ಯಪುರ, ಬೆಂಗಳೂರು–560097. ಕರ್ನಾಟಕ ಸಂಪರ್ಕ: 080–22950102	283703311300078	ಅಬ್ದುಲ್ ಸತ್ತಾರ್	Bajaj Re 4 Stroke	KA04D4405	11,800/-
25		283703311300012	ಕೃಷ್ಣಮೂರ್ತಿ ಜಿ.ಆರ್.	Bajaj Re 4 Stroke	KA02AD1433	14,500/-
26	**ವಿಜ್ಞಾನನಗರ (1600),** 24, ಮಲ್ಲೇಶ್‌ಪಾಳ್ಯ ಮುಖ್ಯರಸ್ತೆ, ನ್ಯೂ ತಿಪ್ಪಸಂದ್ರ ಅಂಚೆ, ವಿಜ್ಞಾನನಗರ, ಬೆಂಗಳೂರು–560075. ಸಂಪರ್ಕ: 080–22950165/166	160003411000002	ನವೀನ್ ಕೃಷ್ಣ ರೆಡ್ಡಿ	Hyundai Sonata Gold	KA03MB7485	19,000/-
27	**ಯಲಹಂಕ (1578),** ನಂ–686, ಪೃಥ್ವಿ ಮ್ಯಾನ್ಷನ್, 3ನೇ ಎ ಅಡ್ಡರಸ್ತೆ, ಶೇಷಾದ್ರಿಪುರಂ ಕಾಲೇಜ್ ಎದುರು, ಯಲಹಂಕ ಉಪನಗರ, ಬೆಂಗಳೂರು–560064. ಸಂಪರ್ಕ: 080– 22950335/336	157803311100060	ಅಕ್ರಮ್ ಪಾಷ	Tvs King Autorikshaw	KA04D0501	11,800/-
28		157803311200046	ರಮೇಶ್ ಎನ್.	Tvs King Autorikshaw	KA02AC7553	13,000/-
29		157803311100164	ಸುಬ್ರಮಣಿ ಜಿ.ಎನ್.	Tvs King Autorikshaw	KA02AB8450	10,100/-
30		157803311200008	ಶಿವರಾಜ್	Tvs King Autorikshaw	KA02AC1425	11,900/-

ವಾಹನ ಪರಿಶೀಲನೆಗಾಗಿ ಸಂಪರ್ಕಿಸಿ: ಕ್ರಿಸ್ಟ್ ದಿ ಕಿಂಗ್ (ರಿಕವರಿ ಏಜೆನ್ಸಿ), 14, ಆದಿ ಕಬೀರ್ ಆಶ್ರಮ್ ರಸ್ತೆ, ಮೋತಿನಗರ ಮುಖ್ಯರಸ್ತೆ, ಆರ್.ಟಿ. ನಗರ ಅಂಚೆ, ಬೆಂಗಳೂರು–560032, ಮೊ.: 9900843048 ಇಮೇಲ್: christthekingblr@gmail.com

ಷರತ್ತು ಮತ್ತು ನಿಯಮಗಳು:

1. "ಎಲ್ಲಿ ಹೇಗಿದೆಯೋ ಹಾಗಿನ ಸ್ಥಿತಿ"ಯಲ್ಲಿ ಹರಾಜು ನಡೆಸಲಾಗುವುದು ಹಾಗೂ ವಾಹನದ ಮೇಲೆ ಪರಿಣಾಮಬೀರುವ ಸ್ಥಿತಿ ಅಥವಾ ಇತರೆ ಯಾವುದೇ ಅಂಶಗಳಿಗೆ ಬ್ಯಾಂಕ್ ಜವಾಬ್ದಾರವಾಗಿರುವುದಿಲ್ಲ.
2. ಮೇಲೆ ತಿಳಿಸಿರುವಂತೆ ಬ್ಯಾಂಕ್‌ನ ಆಯಾ ಶಾಖೆಗಳಲ್ಲಿ ದಿನಾಂಕ **06.05.2021ರ ಮಧ್ಯಾಹ್ನ 12:00 ಗಂಟೆಗೆ** ಆಫ್‌ಲೈನ್ ಮೂಲಕ ಹರಾಜು ನಡೆಸಲಾಗುವುದು.
3. ಉದ್ದೇಶಿತ ಖರೀದಿದಾರರು / ಬಿಡ್‌ದಾರರು **05.05.2021, ಸಂಜೆ 4:00 ಗಂಟೆಯೊಳಗೆ ಇಎಂಡಿ ಮೊತ್ತ ಅಂದರೆ ಕನಿಷ್ಠ ಮೂಲ ಬೆಲೆಯ 10%** ಅನ್ನು ಡಿಡಿ ಮೂಲಕ "ಇಂಡಿಯನ್ ಓವರ್‌ಸೀಸ್ ಬ್ಯಾಂಕ್" ಬೆಂಗಳೂರು ಪರವಾಗಿ KYC (ADHAR / DL / VI / PAN) ನೊಂದಿಗೆ ಮುಚ್ಚಿದ ಲಕೋಟೆಯಲ್ಲಿ ಆಯಾ ಶಾಖೆಯಲ್ಲಿ ಸಲ್ಲಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು.
4. ಆಫ್‌ಲೈನ್ ಹರಾಜಿನ ಪ್ರಕ್ರಿಯೆಯ ವಿವರ ಹಾಗೂ ಷರತ್ತು ಮತ್ತು ನಿಬಂಧನೆಗಳಿಗಾಗಿ, ಆಸಕ್ತ ಬಿಡ್‌ದಾರರು ಪ್ರಾದೇಶಿಕ ಕಛೇರಿ, 3ನೇ ಮಹಡಿ, ಲಕ್ಷ್ಮೀನಾರಾಯಣ್ ಕಾಂಪ್ಲೆಕ್ಸ್, 10/1, ಅರಮನೆ ರಸ್ತೆ, ವಸಂತ ನಗರ, ಬೆಂಗಳೂರು–560052ಗೆ ಭೇಟಿ ನೀಡಬಹುದು.
5. ಎಲ್ಲಾ ವಾಹನಗಳು ಮೇಲೆ ತಿಳಿಸಿರುವ ಏಜೆನ್ಸಿ ಯಾರ್ಡ್‌ನಲ್ಲಿ ನಿಲುಗಡೆ ಮಾಡಲಾಗಿರುತ್ತದೆ.
6. ಆಸಕ್ತ ಬಿಡ್ಡರುಗಳು ಬ್ಯಾಂಕ್‌ನ ಕೆಲಸದ ಅವಧಿಯಲ್ಲಿ ಬೆಳಿಗ್ಗೆ 10:00 ಗಂಟೆಯಿಂದ ಸಂಜೆ 4:00 ಗಂಟೆವರೆಗೆ ಮೇಲೆ ತಿಳಿಸಿರುವ ಆಯಾ ಯಾರ್ಡ್‌ನಲ್ಲಿ ವಾಹನವನ್ನು ಪರಿಶೀಲಿಸಬಹುದು ಮತ್ತು ಉತ್ತಮ ದರ ನಿಗದಿಪಡಿಸಬಹುದು. (ಕನಿಷ್ಟ ಮೂಲದರಕ್ಕೂ ಮೇಲೆ ಅಥವಾ ಅಧಿಕ)
7. ಬಿಡ್‌ದಾರರು ಬಿಡ್ಡಿಂಗ್ ಮೊತ್ತವನ್ನು ಮೀಸಲು ಬೆಲೆಗಿಂತ ಕನಿಷ್ಠ ರೂ. 500/– ಅಂತರದಲ್ಲಿ ಹೆಚ್ಚಿಸಬಹುದು.
8. ಯಶಸ್ವಿ ಬಿಡ್‌ದಾರರು ಬಿಡ್‌ನ ಬಾಕಿ ಮೊತ್ತವನ್ನು 3 ದಿನಗಳ ಒಳಗಾಗಿ ಅಂದರೆ, **10.05.02021ರ ಸಂಜೆ 4:00 ಗಂಟೆಯೊಳಗೆ** ಪಾವತಿಸತಕ್ಕದ್ದು, ತಪ್ಪಿದ್ದಲ್ಲಿ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು. ಯಶಸ್ವಿ ಬಿಡ್‌ದಾರರು ಯಾವುದೇ ಕಾರಣಕ್ಕೂ ಹಿಂದೆ ಸರಿಯುವಂತಿಲ್ಲ.
9. ಯಾವುದೇ ಕಾರಣ ನೀಡದೆ ಹರಾಜನ್ನು ರದ್ದುಗೊಳಿಸುವ ಅಥವಾ ಮುಂದೂಡುವ ಎಲ್ಲಾ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.
10. ಹೆಚ್ಚಿನ ಮಾಹಿತಿಗಾಗಿ ಅಧಿಕೃತ ಅಧಿಕಾರಿಯವರನ್ನು ಸಂಖ್ಯೆ: 080– 22950205 ಮೂಲಕ ಸಂಪರ್ಕಿಸಬಹುದು.

ಸ್ಥಳ : ಬೆಂಗಳೂರು

ದಿನಾಂಕ: 23.04.2021

ಸಹಿ/–

ಅಧಿಕೃತ ಅಧಿಕಾರಿ

ಸೂಚನೆ: ಜಾಹೀರಾತು ಪ್ರಕಟಣೆಯಲ್ಲಿ ಯಾವುದೇ ವ್ಯತ್ಯಾಸವಿದ್ದಲ್ಲಿ ಇಂಗ್ಲೀಷ್ ಪ್ರಕಟಣೆಯನ್ನು ಪರಿಗಣಿಸಲಾಗುವುದು.

ಶುಭ ಸಮಾರಂಭಗಳು ರದ್ದು: ಮುಂಗಡ ಹಿಂಪಾವತಿಗೆ ಒತ್ತಾಯಿಸುತ್ತಿರುವ ಗ್ರಾಹಕರು

ಕಲ್ಯಾಣ ಮಂಟಪ ಮಾಲೀಕರು ಅತಂತ್ರ

• ಮನೋಹರ್ ಎಂ.

ಕಲ್ಯಾಣ ಮಂಟಪ (ಸಾಂದರ್ಭಿಕ ಚಿತ್ರ)

ಬೆಂಗಳೂರು: ನಗರದಲ್ಲಿ ಕಲ್ಯಾಣ ಮಂಟಪಗಳು ಹಾಗೂ ಪಾರ್ಟಿ ಹಾಲ್‌ಗಳಲ್ಲಿ ನಿಗದಿಯಾಗಿದ್ದ ಮದುವೆ ಹಾಗೂ ಶುಭ ಸಮಾರಂಭಗಳನ್ನು ಜನ ನಗರದಲ್ಲಿ ಕೋವಿಡ್ ಎರಡನೇ ಅಲೆ ತೀವ್ರಗೊಂಡಿರುವುದರಿಂದ ರದ್ದುಗೊಳಿಸುತ್ತಿದ್ದಾರೆ. ಮುಂಗಡ ಹಣ ವಾಪಸ್ ನೀಡುವಂತೆ ಪಟ್ಟು ಹಿಡಿಯುತ್ತಿದ್ದಾರೆ. ಇದರಿಂದಾಗಿ ಕಲ್ಯಾಣ ಮಂಟಪಗಳ ಮಾಲೀಕರು ಕಂಗಾಲಾಗಿದ್ದಾರೆ.

ಕೋವಿಡ್ ಕಾರಣದಿಂದ ಕಳೆದ ವರ್ಷವೂ ಶುಭ ಸಮಾರಂಭಗಳಿಗೆ ಸರ್ಕಾರ ನಿರ್ಬಂಧ ಹೇರಿತ್ತು. ಈಗ ಒಂದು ಮದುವೆಗೆ ಕೇವಲ 50 ಮಂದಿ ಭಾಗವಹಿಸಲು ಸರ್ಕಾರ ಅನುಮತಿ ನೀಡಿದೆ. ಈ ಕಾರಣದಿಂದ ನಿಗದಿಯಾಗಿದ್ದ ಕಾರ್ಯಕ್ರಮಗಳೆಲ್ಲ ರದ್ದಾಗುತ್ತಿವೆ. ಆದರೆ, ಸರ್ಕಾರದ ನಿಲುವಿನಿಂದ ನಾವು ಸಂಕಟಕ್ಕೆ ಸಿಲುಕಿದ್ದೇವೆ ಎಂಬುದು ಕಲ್ಯಾಣ ಮಂಟಪ ಮಾಲೀಕರ ಅಳಲು.

'ಏಪ್ರಿಲ್‌ನಿಂದ ಜೂನ್‌ವರೆಗೆ ಮದುವೆ ಹಾಗೂ ಇತರ ಶುಭ ಸಮಾರಂಭಗಳು ಹೆಚ್ಚಾಗಿ ನಡೆಯುತ್ತಿದ್ದವು. ಈಗ ಕೊರೊನಾ ಸೋಂಕು ಮಿತಿ ಮೀರಿ ಹಬ್ಬಿರುವುದರಿಂದ ಸರ್ಕಾರ ಸಮಾರಂಭಗಳ ಮೇಲೆ ಬಿಗಿ ಷರತ್ತುಗಳನ್ನು ಹೇರಿದೆ. 50 ಮಂದಿ ಭಾಗವಹಿಸುವ ಮದುವೆ ಆಯೋಜಿಸುವುದಕ್ಕಿಂತ, ಸದ್ಯಕ್ಕೆ ನಿಲ್ಲಿಸುವುದೇ ಒಳಿತು ಎಂದು ಗ್ರಾಹಕರೆಲ್ಲ ಬುಕಿಂಗ್ ರದ್ದು ಮಾಡುತ್ತಿದ್ದಾರೆ. ಮೇ ತಿಂಗಳ ವರೆಗೆ ಬುಕ್ ಆಗಿದ್ದ ಎಲ್ಲ ಕಾರ್ಯಕ್ರಮಗಳು ರದ್ದಾಗಿವೆ' ಎಂದು ಯಲಹಂಕದ ಕೆ.ಬಿ.ಕನ್ವೆಂಷನ್ ಹಾಲ್‌ನ ಸುರೇಂದ್ರ ಅಳಲು ತೋಡಿಕೊಂಡರು.

'ನಾಲ್ಕೈದು ತಿಂಗಳ ಹಿಂದೆಯೇ ದಿನಾಂಕ ನಿಗದಿ ಮಾಡಿ, ಮುಂಗಡ ಹಣವೂ ನೀಡಿದ್ದರು. ಆ ಹಣವೆಲ್ಲ ಈಗ ಖರ್ಚಾಗಿರುತ್ತದೆ. ಏಕಾಏಕಿ ಹಣ ವಾಪಸ್ ನೀಡಿ ಎಂದರೆ ನಾವೇನು ಮಾಡಲು ಸಾಧ್ಯ. ನಮಗೆ ದಿಕ್ಕು ತೋಚದಂತಾಗಿದೆ. ಕಾರ್ಯಕ್ರಮವೂ ನಡೆಯುವುದಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಬುಕಿಂಗ್ ಪೂರ್ಣಗೊಂಡಿದ್ದ ಕಾರ್ಯಕ್ರಮಗಳ ಪೈಕಿ ಶೇಕಡ 90ರಷ್ಟು ರದ್ದಾಗುತ್ತಿವೆ. ಕಲ್ಯಾಣ ಮಂಟಪ ಮಾಲೀಕರು ಮುಂಗಡ ಹಣವನ್ನು ಸಾಲ, ಇಎಂಐ, ಕಟ್ಟಡ ನಿರ್ವಹಣೆ ಸೇರಿದಂತೆ ಹಲವು ಉದ್ದೇಶಗಳಿಗೆ ಬಳಸಿರುತ್ತಾರೆ. ಈಗ ಮುಂಗಡ ಹಣ ದಿಢೀರ್ ವಾಪಸ್ ಕೇಳಿದರೆ, ಮಾಲೀಕರು ಏನು ಮಾಡುವುದು' ಎಂದು ಕರ್ನಾಟಕ ಕಲ್ಯಾಣ ಮಂಟಪಗಳ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ರಮೇಶ್ ರೆಡ್ಡಿ 'ಪ್ರಜಾವಾಣಿ'ಗೆ ಪ್ರಶ್ನಿಸಿದರು.

'ಕಳೆದ ಬಾರಿ ಕೊರೊನಾ ಪರಿಸ್ಥಿತಿಯಲ್ಲಿ ಮಾನವೀಯತೆ ದೃಷ್ಟಿಯಿಂದ ಕಲ್ಯಾಣ ಮಂಟಪಗಳನ್ನು ದಾಸ್ತಾನು, ತರಬೇತಿ ಹಾಗೂ ವಿವಿಧ ಉದ್ದೇಶಗಳಿಗಾಗಿ ಪಾಲಿಕೆ, ಕಾರ್ಮಿಕ ಇಲಾಖೆಗಳಿಗೆ ಬಿಟ್ಟುಕೊಟ್ಟಿದ್ದೆವು. ಈ ಬಾರಿ ಎಲ್ಲ ರೀತಿಯ ಸುರಕ್ಷತಾ ಕ್ರಮಗಳನ್ನು ಪಾಲಿಸುವ ಭರವಸೆ ನೀಡಿದರೂ ಕಲ್ಯಾಣ ಮಂಟಪಗಳಿಗೆ ಕೇವಲ 50 ಮಂದಿಗೆ ಮಾತ್ರ ಅವಕಾಶ ನೀಡಿರುವುದು ಸರಿಯಲ್ಲ. ಕಲ್ಯಾಣ ಮಂಟಪಗಳ ಗಾತ್ರಕ್ಕೆ ಅನುಗುಣವಾಗಿ ಜನರ ಮಿತಿ ನಿಗದಿಪಡಿಸಬೇಕು. ಅಲ್ಲಿ ಬರುವ ಜನರ ಭದ್ರತೆಗೆ ಕಲ್ಯಾಣ ಮಂಟಪ ಮಾಲೀಕರು ಬದ್ಧರಿರುತ್ತೇವೆ' ಎಂದು ಹೇಳಿದರು.

ತೆರಿಗೆ ಮನ್ನಾ ಮಾಡಲು ಒತ್ತಾಯ

'ಒಂದು ಮದುವೆ ಅವಲಂಬಿಸಿ, ಕನಿಷ್ಠ 200 ಮಂದಿ ಕೆಲಸ ನಿರ್ವಹಿಸುತ್ತಾರೆ. ಕಾರ್ಯಕ್ರಮ ರದ್ದಾಗುವುದರಿಂದ ಇಷ್ಟು ಜನರ ಜೀವನ ನಿರ್ವಹಣೆಗೆ ಸಮಸ್ಯೆ ಆಗಲಿದೆ. ಈಗ ಮಾಲೀಕರಿಗೂ ಯಾವುದೇ ಲಾಭವಿಲ್ಲ. ಹಾಗಾಗಿ, ಕಲ್ಯಾಣ ಮಂಟಪಗಳ ಆಸ್ತಿ ತೆರಿಗೆ ಮೇಲೆ ಶೇಕಡ 50ರಷ್ಟು ವಿನಾಯಿತಿ ನೀಡಬೇಕು' ಎಂದು ರಮೇಶ್ ರೆಡ್ಡಿ ಒತ್ತಾಯಿಸಿದರು.

'ಕಲ್ಯಾಣ ಮಂಟಪಗಳೂ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ವಲಯದಡಿ (ಎಂಎಸ್‌ಎಂಇ) ನೋಂದಣಿಯಾಗಿವೆ. ಆದರೆ, ಅವುಗಳಿಗೆ ಸಿಗುತ್ತಿರುವ ಯಾವುದೇ ಸೌಲಭ್ಯಗಳು ಕಲ್ಯಾಣ ಮಂಟಪಗಳಿಗೆ ಸಿಗುತ್ತಿಲ್ಲ. ಹಾಗಾಗಿ, ಕೊರೊನಾ ಪರಿಸ್ಥಿತಿ ನಿಯಂತ್ರಣಕ್ಕೆ ಬರುವವರೆಗೆ ಕಲ್ಯಾಣ ಮಂಟಪಗಳಿಗೆ ಬೆಸ್ಕಾಂ ನಿಶ್ಚಿತ ಶುಲ್ಕ (ಫಿಕ್ಸ್‌ಡ್ ಚಾರ್ಜಸ್), ಬಿಬಿಎಂಪಿ ಉದ್ದಿಮೆ ಪರವಾನಗಿ ಶುಲ್ಕ ಮನ್ನಾ ಮಾಡಬೇಕು. ಜಿಎಸ್‌ಟಿ ಹಾಗೂ ಆದಾಯ ತೆರಿಗೆಯಿಂದ ವಿನಾಯಿತಿ ನೀಡಬೇಕು. ಕಲ್ಯಾಣ ಮಂಟಪಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಕೋವಿಡ್ ಲಸಿಕೆ ವಿತರಣೆ ಹಾಗೂ ಮಾಸಿಕ ಸಹಾಯಧನ ನೀಡಬೇಕು' ಎಂದು ಒತ್ತಾಯಿಸಿದರು.

ಶೇ 75ರಷ್ಟು ಪಾರ್ಟಿ ಹಾಲ್ ಬುಕ್



ಪಿ.ಸಿ.ರಾವ್

'ನಗರದಲ್ಲಿರುವ ಬಹುತೇಕ ರೆಸ್ಟೋರೆಂಟ್‌ಗಳು ಪಾರ್ಟಿ ಹಾಲ್‌ಗಳನ್ನು ಒಳಗೊಂಡಿವೆ. ಕಲ್ಯಾಣ ಮಂಟಪಗಳಿಗೆ ಹೋಲಿಸಿದರೆ ಕಡಿಮೆ ಜನ ಸೇರುವ ಉದ್ದೇಶದಿಂದ ಪಾರ್ಟಿ ಹಾಲ್‌ಗಳಲ್ಲಿ ಹೆಚ್ಚಾಗಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಾರೆ. ಏ.24 ಮತ್ತು 25ರಂದು ಎಲ್ಲ ಪಾರ್ಟಿ ಹಾಲ್‌ಗಳನ್ನು ಮುಂಗಡವಾಗಿ ಕಾಯ್ದಿರಿಸಲಾಗಿತ್ತು. ಆದರೆ, ವಾರಾಂತ್ಯದ ಕರ್ಫ್ಯೂ ಜಾರಿ ಮಾಡಿರುವುದರಿಂದ ಬುಕ್ ಆಗಿದ್ದ ಪಾರ್ಟಿ ಹಾಲ್‌ಗಳ ಪೈಕಿ ಶೇ 25ರಷ್ಟು ಕಾರ್ಯಕ್ರಮಗಳು ರದ್ದಾಗಿವೆ' ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘದ ಅಧ್ಯಕ್ಷ ಪಿ.ಸಿ.ರಾವ್ ತಿಳಿಸಿದರು.

'ಭಾನುವಾರದಂದು (ಏ.25) ಕಾರ್ಯಕ್ರಮಗಳು ಹೆಚ್ಚಾಗಿ ನಡೆಯಬೇಕಿತ್ತು. ಆದರೆ, ಕೊರೊನಾ ಪರಿಸ್ಥಿತಿಯಿಂದ ಹುಟ್ಟುಹಬ್ಬ, ನಿಶ್ಚಿತಾರ್ಥದಂತಹ ಕಾರ್ಯಕ್ರಮಗಳನ್ನು ಜನ ಮುಂದೂಡಿದ್ದಾರೆ. ಮದುವೆ ಹಾಗೂ ಉಪನಯನ ಸಮಾರಂಭಗಳು ಮಾತ್ರ ನಡೆಯಲಿವೆ. ಶುಭ ಸಮಾರಂಭಗಳಿಗೆ ಕೇವಲ 50 ಮಂದಿಗೆ ಅವಕಾಶ ಕಲ್ಪಿಸಿರುವುದರಿಂದ ಪಾರ್ಟಿ ಹಾಲ್‌ಗಳನ್ನು ಹೆಚ್ಚಾಗಿ ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ. ಇಲ್ಲಿ ಎಲ್ಲ ರೀತಿಯ ಸುರಕ್ಷತಾ ಕ್ರಮಗಳನ್ನು ಅನುಸರಿಸಲಾಗುತ್ತಿದೆ' ಎಂದೂ ಹೇಳಿದರು.

Inners for Winners

RAMRAJ

BANIANS • BRIEFS • TRUNKS

SHOWROOMS

KEMPEGOWDA ROAD | MALLESHWARAM | KORAMANGALA | BASAVESHWAR NAGAR | RR NAGAR | YESHWANTHPUR
VIJAYA NAGAR | RAJAJI NAGAR | BASAVANAGUDI | JAYA NAGAR | HOSPET | BANASHANKARI | MAJESTIC MALL | R.T NAGAR
KANAKAPURA | TUMKUR | RAMNAGARA | HESARAGATTA | NELAMANGALA | RAMAMURTHY NAGAR | JP NAGAR | CHINTAMANI

Available at company showroom & all leading textile shops / www.ramrajcotton.in

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

'ಸಿದ್ದರಾಮಯ್ಯರಿಂದ ಕಲಿತುಕೊಳ್ಳಲಿ'

ಬೆಂಗಳೂರು: 'ದೂರದೃಷ್ಟಿಯ ಯೋಜನೆಗಳನ್ನು ಜಾರಿಗೊಳಿಸುವುದು ಹೇಗೆಂದು ಪ್ರಧಾನಿ ನರೇಂದ್ರ ಮೋದಿ ನಮ್ಮ ಪಕ್ಷದ ಸಿದ್ದರಾಮಯ್ಯ ಅವರ ಬಳಿ ಕೇಳಿ ತಿಳಿದುಕೊಳ್ಳಲಿ' ಎಂದು ಮಾಜಿ ಸಚಿವ, ಕಾಂಗ್ರೆಸ್ಸಿನ ಡಾ. ಎಚ್.ಸಿ. ಮಹಾದೇವಪ್ಪ ಹೇಳಿದ್ದಾರೆ. ಟ್ವೀಟ್ ಮಾಡಿರುವ ಅವರು, '80 ಕೋಟಿ ಅರ್ಹ ಜನರಿಗೆ 5 ಕಿಲೋ ಆಹಾರ ಧಾನ್ಯಪೂರೈಕೆ ಮಾಡುವುದಾಗಿ ಮೋದಿ ಹೇಳಿರುವುದು ಸಿದ್ದರಾಮಯ್ಯ ಅವರ ಅತ್ಯಂತ ಜನಪ್ರಿಯ ಯೋಜನೆ ಅನ್ನಭಾಗ್ಯವನ್ನು ಹೋಲುತ್ತಿದೆ' ಎಂದಿದ್ದಾರೆ.

ಪಿಎಂಎಸ್‌ಎಸ್‌ವೈ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕೋವಿಡ್‌ಗೆ: ಇತರ ರೋಗಿಗಳಿಗೆ ಸಂಕಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿರುವ ಪ್ರಧಾನಮಂತ್ರಿ ಸ್ವಾಸ್ಥ್ಯಸುರಕ್ಷಾ ಯೋಜನಾ ಆಸ್ಪತ್ರೆ– ಪ್ರಜಾವಾಣಿ ಚಿತ್ರ

ಬೆಂಗಳೂರು: ನಗರದ ವಿಕ್ಟೋರಿಯಾ ಆಸ್ಪತ್ರೆಯ ಆವರಣದಲ್ಲಿರುವ ಪ್ರಧಾನ ಮಂತ್ರಿ ಸ್ವಾಸ್ಥ್ಯ ಸುರಕ್ಷಾ ಯೋಜನೆಯಡಿ (ಪಿಎಂಎಸ್‌ಎಸ್‌ವೈ) ನಿರ್ಮಿಸಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಶೀಘ್ರದಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ಮೀಸಲಿಡಲಾಗುತ್ತಿದೆ. ಇದಕ್ಕೆ ಸಿದ್ಧತೆಗಳೂ ನಡೆಯುತ್ತಿವೆ. ಆದರೆ, ಇದೇ ಆಸ್ಪತ್ರೆಯನ್ನು ಅವಲಂಬಿಸಿರುವ ಇತರೆ ರೋಗಿಗಳಿಗೆ ತೀವ್ರ ಸಂಕಷ್ಟ ಎದುರಾಗಲಿದೆ ಎಂದು ವೈದ್ಯರೇ ಹೇಳುತ್ತಾರೆ.

'ಕ್ಯಾನ್ಸರ್, ಹೃದಯ ರೋಗ, ಮನೋರೋಗ ಸೇರಿದಂತೆ ಆರು ಪ್ರಮುಖ ರೋಗಗಳ ಚಿಕಿತ್ಸೆಗೆ ರಾಜ್ಯದಲ್ಲಿ ಇರುವುದು ಇದೊಂದೇ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ. ಎರಡು–ಮೂರು ಕಾಯಿಲೆಯಿಂದ ಬಳಲುತ್ತಿರುವವರು ಹಲವು ಆಸ್ಪತ್ರೆಗೆ ತಿರುಗಬೇಕಾಗುತ್ತದೆ. ಆ ಎಲ್ಲ ಸಮಸ್ಯೆಗೆ ಒಂದೇ ಸೂರಿನಡಿ ಇಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಈಗ ಈ ಆಸ್ಪತ್ರೆಯನ್ನೂ ಕೋವಿಡ್ ರೋಗಿಗಳಿಗೆ ಮೀಸಲಿಟ್ಟರೆ ಉಳಿದವರಿಗೆ ತೀವ್ರ ತೊಂದರೆಯಾಗುತ್ತದೆ' ಎಂದು ವೈದ್ಯರೊಬ್ಬರು ಕಳವಳ ವ್ಯಕ್ತಪಡಿಸಿದರು.

'ರಾಜ್ಯದ ಹಲವು ಜಿಲ್ಲೆಗಳಿಂದ ರೋಗಿಗಳು ಚಿಕಿತ್ಸೆಗಾಗಿ ಇಲ್ಲಿಗೆ ಬರುತ್ತಾರೆ. ಆರ್ಥಿಕವಾಗಿ ಹಿಂದುಳಿದವರೇ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಾರೆ. ಎರಡು–ಮೂರು ಕಾಯಿಲೆ ಹೊಂದಿರುವ ಇಂತಹ ರೋಗಿಗಳು ಈ ಆಸ್ಪತ್ರೆಯಲ್ಲಿ ಸಿಗುವ ಚಿಕಿತ್ಸೆ ಪಡೆಯಲು ಕೊನೆಗೆ ಖಾಸಗಿ ಆಸ್ಪತ್ರೆಗಳ ಮೊರೆ ಹೋಗಬೇಕು. ಅಲ್ಲಿಯ ದುಬಾರಿ ವೆಚ್ಚ ಭರಿಸುವುದು ಅವರಿಗೆ ಸಾಧ್ಯವಾಗುವುದಿಲ್ಲ' ಎಂದೂ ಅವರು ಬೇಸರ ವ್ಯಕ್ತಪಡಿಸಿದರು.

'ಕಳೆದ ಮಾರ್ಚ್‌ನಲ್ಲಿಯೂ ಈ ಆಸ್ಪತ್ರೆಯನ್ನು ಕೋವಿಡ್‌ಗೆ ಮೀಸಲಾಗಿ ಇಟ್ಟಿದ್ದರಿಂದ ಸುಮಾರು ಆರು ತಿಂಗಳು ಇಲ್ಲಿ ಬೇರೆ ರೋಗಿಗಳಿಗೆ ಚಿಕಿತ್ಸೆ ನೀಡಲು ಸಾಧ್ಯವಾಗಲಿಲ್ಲ. ಅಕ್ಟೋಬರ್‌ನಿಂದಷ್ಟೇ ಇದು ಮರು ಆರಂಭವಾಗಿತ್ತು. ಈಗ ಮತ್ತೆ ಇತರೆ ರೋಗಿಗಳಿಗೆ ಈ ಆಸ್ಪತ್ರೆಯ ಬಾಗಿಲು ಮುಚ್ಚುವುದು ಸರಿಯಲ್ಲ' ಎಂದೂ ಅವರು ಅಭಿಪ್ರಾಯಪಟ್ಟರು.

ಪ್ರತ್ಯೇಕ ವ್ಯವಸ್ಥೆ: 'ಸದ್ಯ 28 ರೋಗಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಅವರನ್ನೆಲ್ಲ ಬೇರೆ ಆಸ್ಪತ್ರೆಗಳಿಗೆ ಸ್ಥಳಾಂತರ ಮಾಡಿ, ಅವರಿಗೆ ಚಿಕಿತ್ಸೆ ವ್ಯವಸ್ಥೆ ಮಾಡಿದ ನಂತರವೇ ಈ ಆಸ್ಪತ್ರೆಯನ್ನು ಕೋವಿಡ್ ರೋಗಿಗಳನ್ನು ದಾಖಲು ಮಾಡಿಕೊಳ್ಳಲು ಪ್ರಾರಂಭಿಸಲಾಗುತ್ತದೆ' ಎಂದು ಆಸ್ಪತ್ರೆಯ ವಿಶೇಷ ಅಧಿಕಾರಿ ಡಾ.ಪಿ.ಜಿ. ಗಿರೀಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಈ ಆಸ್ಪತ್ರೆಯ ಒಟ್ಟು ಹಾಸಿಗೆ ಸಾಮರ್ಥ್ಯ 180. ಅದರಲ್ಲಿ 30 ಐಸಿಯು, 30 ವೆಂಟಿಲೇಟರ್ ಸೌಲಭ್ಯ ಹೊಂದಿರುವ ಹಾಸಿಗೆಗಳು ಇವೆ. ಇನ್ನೂ 30 ಹಾಸಿಗೆಗಳನ್ನು ವೆಂಟಿಲೇಟರ್ ಹಾಸಿಗೆಗಳಾಗಿ ಪರಿವರ್ತಿಸಬಹುದಾಗಿದೆ. ಇತರೆ ರೋಗಿಗಳಿಗೆ ತೊಂದರೆಯಾಗುತ್ತದೆ ಎಂಬುದು ನಿಜ. ಆದರೆ, ಈಗ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿದೆ. ಕೊರೊನಾ ಸೋಂಕಿತರ ಚಿಕಿತ್ಸೆಗೂ ಸ್ಪಂದಿಸಬೇಕಾದ ತುರ್ತು ಇದೆ' ಎಂದೂ ಅವರು ಅಭಿಪ್ರಾಯಪಟ್ಟರು.

ರಾಜ್ಯಕ್ಕೆ ರೆಮ್‌ಡಿಸಿವಿರ್ 1.22 ಲಕ್ಷ, ಆಕ್ಸಿಜನ್ 800 ಟನ್

ಪ್ರಜಾವಾಣಿ ವಾರ್ತೆ

ರೆಮ್‌ಡಿಸಿವಿರ್

ಬೆಂಗಳೂರು: ಕೇಂದ್ರ ಸರ್ಕಾರ ವಿವಿಧ ರಾಜ್ಯಗಳ ಬೇಡಿಕೆಗೆ ಅನುಗುಣವಾಗಿ ಏಪ್ರಿಲ್ 21ರಿಂದ 30ರವರೆಗಿನ ರೆಮ್‌ಡಿಸಿವಿರ್ ಚುಚ್ಚುಮದ್ದು ಪೂರೈಕೆಯನ್ನು ಮರುಹಂಚಿಕೆ ಮಾಡಿದ್ದು, ಕರ್ನಾಟಕದ ಪಾಲು 55 ಸಾವಿರ ವೈಯಲ್ಸ್‌ನಿಂದ 1.22 ಲಕ್ಷ ವೈಯಲ್ಸ್‌ಗೆ ಏರಿಕೆಯಾಗಿದೆ.

ಅಲ್ಲದೆ, ಪ್ರತಿನಿತ್ಯದ ಹಂಚಿಕೆ ಮಾಡುವ ಆಕ್ಸಿಜನ್ ಪ್ರಮಾಣವನ್ನು 300 ಟನ್‌ನಿಂದ 800 ಟನ್‌ಗೆ ಹೆಚ್ಚಿಸಿದೆ.

ರೆಮ್‌ಡಿಸಿವಿರ್ ಮರುಹಂಚಿಕೆ ಬಗ್ಗೆ ಟ್ವೀಟ್ ಮಾಡಿರುವ ಕೇಂದ್ರ ರಾಸಾಯನಿಕ ಮತ್ತು ರಸಗೊಬ್ಬರ ಸಚಿವ ಡಿ.ವಿ. ಸದಾನಂದ ಗೌಡ ಅವರು, 'ನಾನು ನಿರ್ವಹಿಸುವ ಔಷಧ ಇಲಾಖೆ ಮತ್ತು ಆರೋಗ್ಯ ಇಲಾಖೆಯ ಉನ್ನತಾಧಿಕಾರದ ಸಮಿತಿ ಈ ನಿರ್ಣಯ ಕೈಗೊಂಡಿದೆ. ಕೊರೊನಾ ವಿರುದ್ಧದ ಹೋರಾಟದಲ್ಲಿ ರಾಜ್ಯಕ್ಕೆ ನಾವು ಸಂಪೂರ್ಣ ಸಹಕಾರ, ನೆರವು ನೀಡುತ್ತೇವೆ' ಎಂದಿದ್ದಾರೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, 'ಕೇಂದ್ರದ ಈ ನಡೆ ಕೋವಿಡ್ ವಿರುದ್ಧದ ಹೋರಾಟಕ್ಕೆ ಬಲ ತುಂಬಲಿದೆ' ಎಂದು ಪ್ರತಿಕ್ರಿಯಿಸಿದ್ದಾರೆ.

BLDE (DEEMED TO BE UNIVERSITY)
Declared as Deemed to be University u/s 3 of UGC Act, 1956
The Constituent College

SHRI B. M. PATIL MEDICAL COLLEGE, HOSPITAL AND RESEARCH CENTRE, VIJAYAPURA
Website: www.bldedu.ac.in

WANTED
- INTENSIVISTS
- STAFF NURSE - TRAINED IN VENTILATOR SUPPORT & ICU
- STAFF NURSE - FOR WARD & OT

Contact
Cell: 99454 64766, 94804 40410
Interview by Zoom App Meeting as well as Walk in Interview with prior phone call.

*READY TO JOIN IMMEDIATELY
*SALARY NEGOTIABLE

Sd/-
PRINCIPAL

ಸಿಸಿಬಿ ಕಾರ್ಯಾಚರಣೆ; ನಾಲ್ವರ ಬಂಧನ, 55 ಚುಚ್ಚುಮದ್ದು ಜಪ್ತಿ

ಔಷಧಿ ವಿತರಕನಿಂದಲೇ 'ರೆಮ್‌ಡಿಸಿವಿರ್' ಅಕ್ರಮ ಮಾರಾಟ

ಪ್ರಜಾವಾಣಿ ವಾರ್ತೆ

ಜಪ್ತಿ ಮಾಡಲಾದ ಚುಚ್ಚುಮದ್ದು ಜೊತೆಯಲ್ಲಿ ಬಂಧಿತರ ಆರೋಪಿಗಳು

ಬೆಂಗಳೂರು: ನಗರದ ಔಷಧಿ ಮಾರಾಟ ಮಳಿಗೆಗಳಿಗೆ ವೈದ್ಯಕೀಯ ಉಪಕರಣ ಹಾಗೂ ಔಷಧಿ ವಿತರಣೆ ಮಾಡುವ ವಿತರಕನೇ 'ರೆಮ್‌ಡಿಸಿವಿರ್' ಚುಚ್ಚುಮದ್ದುಗಳನ್ನು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿರುವ ಸಂಗತಿಯನ್ನು ಸಿಸಿಬಿ ಪೊಲೀಸರು ಪತ್ತೆ ಮಾಡಿದ್ದಾರೆ.

ಕಂಪನಿಯಿಂದ ಖರೀದಿಸಿದ್ದ ಚುಚ್ಚುಮದ್ದುಗಳನ್ನು ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡು ದುಬಾರಿಗೆ ಬೆಲೆಗೆ ಮಾರಾಟ ಮಾಡುತ್ತಿದ್ದ ಔಷಧಿ ವಿತರಕ ಸೇರಿ ನಾಲ್ವರನ್ನು ನಗರದ ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಹುಜೇಫ್, ಮಾಟಿನ್, ಕೆ.ಪಿ. ಸುಮನ್, ಹಾಗೂ ಪ್ರಕಾಶ್ ಬಂಧಿತರು. ಅವರಿಂದ ರೆಮ್‌ಡಿಸಿವಿಆರ್ 55 ಚುಚ್ಚುಮದ್ದುಗಳನ್ನು ಜಪ್ತಿ ಮಾಡಲಾಗಿದೆ. ನಾಲ್ವರ ವಿರುದ್ಧವೂ ಕಮರ್ಷಿಯಲ್ ಸ್ಟ್ರೀಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ಸಿಸಿಬಿ ಜಂಟಿ ಪೊಲೀಸ್ ಕಮಿಷನರ್ ಸಂದೀಪ್ ಪಾಟೀಲ ಹೇಳಿದರು.

'ಆರೋಪಿ ಸುಮನ್, 'ಕಾರ್ತಿಕೇಯ' ಹೆಸರಿನ ಏಜೆನ್ಸಿ ಮೂಲಕ ಔಷಧಿ ವಿತರಣೆ ಮಾಡುತ್ತಿದ್ದರು. ಹುಜೇಫ್ ಹಾಗೂ ಮಾಟಿನ್, 'ಸೋನಾಲಿಕಾ' ಔಷಧಿ ಮಳಿಗೆ ನಡೆಸುತ್ತಿದ್ದರು. ಇನ್ನೊಬ್ಬ ಆರೋಪಿ ಪ್ರಕಾಶ್, 'ವೆಂಕಟೇಶ್ವರ' ಮಳಿಗೆ ಇಟ್ಟುಕೊಂಡಿದ್ದರು' ಎಂದೂ ತಿಳಿಸಿದರು.

'ಆಸ್ಪತ್ರೆ ಹಾಗೂ ಇತರರ ಜೊತೆ ಒಡನಾಟ ಹೊಂದಿದ್ದ ಆರೋಪಿ ಸುಮನ್, ಅವರ ಮೂಲಕ ಕೊರೊನಾ ಸೋಂಕಿತರ ಸಂಬಂಧಿಕರನ್ನು ಸಂಪರ್ಕಿಸುತ್ತಿದ್ದರು. ತಮ್ಮ ಬಳಿ ಔಷಧಿ ಇರುವುದಾಗಿ ಹೇಳಿ ಪ್ರತಿ ಚುಚ್ಚುಮದ್ದಿಗೆ ₹ 10 ಸಾವಿರದಿಂದ ₹ 11 ಸಾವಿರ ಪಡೆದು ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಪ್ರತ್ಯೇಕ ತಂಡಗಳನ್ನು ರಚಿಸಿ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದೂ ಹೇಳಿದರು.

'ರೆಮ್‌ಡಿಸಿವಿಆರ್' ಅಕ್ರಮ ಸಂಗ್ರಹ: 'ಆರೋಪಿ ಸುಮನ್, ಏಜೆನ್ಸಿ ಹೆಸರಿನಲ್ಲಿ ಔಷಧಿ ಉತ್ಪಾದನಾ ಕಂಪನಿಯಿಂದ ರೆಮ್‌ಡಿಸಿವಿಆರ್ ತರಿಸಿಕೊಳ್ಳುತ್ತಿದ್ದರು. ಆದರೆ, ಅವುಗಳನ್ನು ಕೆಲವೇ ಪರಿಚಯಸ್ಥರ ಮಳಿಗೆಗಳಿಗೆ ನೀಡುತ್ತಿದ್ದರು. ಉಳಿದದ್ದನ್ನು ತಮ್ಮ ಬಳಿಯೇ ಅಕ್ರಮವಾಗಿ ಸಂಗ್ರಹಿಸಿಟ್ಟುಕೊಂಡಿದ್ದರು. ಆ ಮೂಲಕ ಕೃತಕ ಅಭಾವ ಸೃಷ್ಟಿಸುತ್ತಿದ್ದರು' ಎಂದು ಪೊಲೀಸರು ತಿಳಿಸಿದರು.

'ಚುಚ್ಚುಮದ್ದು ತಮ್ಮ ಬಳಿ ಇದ್ದರೂ ಇಲ್ಲವೆಂದು ಹೇಳುತ್ತಿದ್ದರು. ಯಾರಾದರೂ ₹10 ಸಾವಿರ ಕೊಟ್ಟರೆ ಅವರಿಗೆ ಮಾತ್ರ ಕೊಡುತ್ತಿದ್ದರು. ಅವರ ಏಜೆನ್ಸಿ ಪರವಾನಗಿ ಬಗ್ಗೆಯೂ ಮಾಹಿತಿ ಸಂಗ್ರಹಿಸಲಾಗುತ್ತಿದೆ' ಎಂದೂ ಹೇಳಿದರು. ಇತ್ತೀಚೆಗಷ್ಟೇ ರೆಮ್‌ಡಿಸಿವಿರ್ ಅಕ್ರಮವಾಗಿ ಮಾರುತ್ತಿದ್ದ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು.

'ಪ್ರಜಾವಾಣಿ' ವರದಿಗೆ ಸ್ಪಂದಿಸಿ ಸ್ಥಳ ಪರಿಶೀಲಿಸಿದ ಸಚಿವ ಸೋಮಶೇಖರ್

ಪರೀಕ್ಷೆ, ಲಸಿಕೆಗೆ ಸರ್ಕಾರಿ ಶಾಲೆಯಲ್ಲಿ ಪರ್ಯಾಯ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಹೇರೋಹಳ್ಳಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಶನಿವಾರ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ರಾಜರಾಜೇಶ್ವರಿನಗರ: ಕೋವಿಡ್ ಲಸಿಕೆ ಪಡೆಯಲು ಮತ್ತು ಪರೀಕ್ಷೆ ಮಾಡಿಸಿಕೊಳ್ಳಲು ಮಾಗಡಿ ರಸ್ತೆ ಬಳಿಯ ಹೇರೋಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ (ಪಿಎಚ್‌ಸಿ) ಶುಕ್ರವಾರ ಬಂದಿದ್ದ ನಾಗರಿಕರು ಅಂತರ ಕಾಯ್ದುಕೊಳ್ಳದೆ ಗುಂಪುಗೂಡಿರುವ ಬಗ್ಗೆ 'ಪ್ರಜಾವಾಣಿ'ಯಲ್ಲಿ ಸಚಿತ್ರ ವರದಿ ಪ್ರಕಟವಾಗಿದ್ದನ್ನು ಕಂಡು ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ಅವರು ಈ ಪಿಎಚ್‌ಸಿಗೆ ಶನಿವಾರ ಧಿಡೀರ್ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಲಸಿಕೆ ಪಡೆದುಕೊಳ್ಳಲು ಹಾಗೂ ಪರೀಕ್ಷೆ ಮಾಡಿಸಿಕೊಳ್ಳಲು ಬಂದಿದ್ದ ಸಾರ್ವಜನಿಕರು ಶನಿವಾರವೂ ರಸ್ತೆಯಲ್ಲಿ ಗುಂಪುಗೂಡಿ ನಿಂತಿದ್ದರು. ಇದನ್ನು ಗಮನಿಸಿದ ಸಚಿವರು, ತಕ್ಷಣವೇ ಶಿಕ್ಷಣ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ದೂರವಾಣಿಯಲ್ಲಿ ಮಾತನಾಡಿ ಸಾರ್ವಜನಿಕರ ಹಿತದೃಷ್ಟಿಯಿಂದ ಆರೋಗ್ಯ ಕೇಂದ್ರ ಪಕ್ಕದಲ್ಲಿರುವ ಸರ್ಕಾರಿ ಶಾಲೆಯಲ್ಲಿ ಕೋವಿಡ್ ಲಸಿಕೆ ನೀಡಲು ಹಾಗೂ ಪರೀಕ್ಷೆ ಮಾಡಲು ಸ್ಥಳಾವಕಾಶ ಮಾಡಿಕೊಡುವಂತೆ ಸೂಚಿಸಿದರು.

'ಯಾವುದೇ ಕಾರಣಕ್ಕೂ ಕೋವಿಡ್ ಚಿಕಿತ್ಸೆ ವಿಳಂಬ ಆಗಬಾರದು. ಕೋವಿಡ್ ಸೋಂಕು ದೃಢಪಟ್ಟರೆ ಕೂಡಲೇ ಚಿಕಿತ್ಸೆಗೆ ವ್ಯವಸ್ಥೆ ಮಾಡಬೇಕು. ಖಾಸಗಿ ಆಸ್ಪತ್ರೆಗಳಲ್ಲಿ ಬಿಬಿಎಂಪಿ ವತಿಯಿಂದ ಚಿಕಿತ್ಸೆ ದೊರಕಿಸಿ ಕೊಡಲು ಎಲ್ಲಾ ರೀತಿಯ ಕ್ರಮಕೈಗೊಳ್ಳಬೇಕು. ಅಗತ್ಯ ಬಿದ್ದರೆ ಆಯಾ ಆಸ್ಪತ್ರೆ ಮಾಲೀಕರೊಂದಿಗೆ ಚರ್ಚಿಸಿ ಐಸಿಯು ಹಾಸಿಗೆ ಹೊಂದಿಸಿ ಕೊಡಬೇಕು' ಎಂದು ಸಚಿವರು ಆರ್. ಆರ್. ನಗರ ವಲಯದ ಜಂಟಿ ಆಯುಕ್ತ ಡಾ.ಎಸ್.ನಾಗರಾಜ್, ವೈದ್ಯಾಧಿಕಾರಿಗಳಾದ ಡಾ.ವಿವೇಕ್, ಡಾ.ಕವಿತಾ ಅವರಿಗೆ ಸೂಚನೆ ನೀಡಿದರು.

'ನಾಗರಿಕರೂ ಕೂಡ ಜವಾಬ್ದಾರಿಯುತವಾಗಿ ನಡೆದುಕೊಳ್ಳಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಮಾಸ್ಕ್ ಧರಿಸಿ, ಅಂತರ ಕಾಯ್ದು ಕೊಳ್ಳಬೇಕು' ಎಂದು ಮನವಿ ಮಾಡಿದರು.

ಕಾರ್ಮಿಕ ಇಲಾಖೆ

ಕರ್ನಾಟಕ ರಾಜ್ಯ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು



ಶ್ರೀ ಬಿ.ಎಸ್. ಯಡಿಯೂರಪ್ಪ
ಸನ್ಮಾನ್ಯ ಮುಖ್ಯಮಂತ್ರಿಗಳು

ಕಾರ್ಮಿಕ ಬಂಧುಗಳೇ ಗಮನಿಸಿ,
"ಸರ್ಕಾರ ಮತ್ತು ಕಾರ್ಮಿಕ ಇಲಾಖೆ ನಿಮ್ಮ ಜೊತೆಯಲ್ಲಿದೆ"
ಸಹಾಯವಾಣಿ : 155214

ಮಾನ್ಯ ಕಾರ್ಮಿಕ ಸಚಿವರಾದ ಶ್ರೀ ಅರಬೈಲ್ ಶಿವರಾಂ ಹೆಬ್ಬಾರ್‌ರವರು ಕಾರ್ಮಿಕರ ಜೊತೆ ಸಮಾಲೋಚನೆ ನಡೆಸುತ್ತಿರುವುದು.

- ಸನ್ಮಾನ್ಯ ಪ್ರಧಾನಮಂತ್ರಿಗಳು ಈಗಾಗಲೇ ಸ್ಪಷ್ಟಪಡಿಸಿದಂತೆ, ಕೋವಿಡ್ ನಿಯಂತ್ರಣಕ್ಕಾಗಿ ದೇಶಾದ್ಯಂತ ಲಾಕ್ ಡೌನ್ ಜಾರಿಗೊಳಿಸುವ ಯಾವುದೇ ಯೋಜನೆ ಸದ್ಯಕ್ಕೆ ಸರ್ಕಾರದ ಮುಂದೆ ಇಲ್ಲ. ಲಾಕ್ ಡೌನ್ ಯೋಜನೆ ಅಂತಿಮ ಆಯ್ಕೆಯಾಗಿರುತ್ತದೆ. ಆದ್ದರಿಂದ ಕಾರ್ಮಿಕರು ವದಂತಿಗಳಿಗೆ ಕಿವಿಗೊಡಬಾರದು.
- ಸನ್ಮಾನ್ಯ ಮುಖ್ಯಮಂತ್ರಿಗಳು ರಾಜ್ಯದಲ್ಲಿ ಲಾಕ್ ಡೌನ್ ಬದಲಾಗಿ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ಜಾರಿಗೊಳಿಸುವ ಕುರಿತಂತೆ ವಿಸ್ತೃತವಾದ ಕೋವಿಡ್ ಮಾರ್ಗಸೂಚಿಯನ್ನು ಸರ್ಕಾರದ ಮೂಲಕ ಹೊರಡಿಸಿದ್ದಾರೆ. ಅಲ್ಲದೆ, ಈಗಾಗಲೇ ರಾಜ್ಯದಲ್ಲಿ ಲಾಕ್ ಡೌನ್ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.
- ಸರ್ಕಾರ ಕೋವಿಡ್ ಲಸಿಕೆಯ ಮೇಲಿನ ಕೆಲವು ನಿಬಂಧನೆಗಳನ್ನು ಸಡಿಲಿಸಿ, ಇದೇ ಬರುವ ಮೇ 1 ರಿಂದ ದೇಶಾದ್ಯಂತ 18 ವರ್ಷಕ್ಕೆ ಮೇಲ್ಪಟ್ಟ ಪ್ರತಿಯೊಬ್ಬ ನಾಗರಿಕರೂ ಲಸಿಕೆ ಪಡೆಯಲು ಅರ್ಹರು ಎಂದು ಘೋಷಿಸಿದೆ. ಪ್ರತಿಯೊಬ್ಬ ಕಾರ್ಮಿಕರೂ ಕೋವಿಡ್ ಲಸಿಕೆ ಹಾಕಿಸಿಕೊಳ್ಳಬೇಕು ಮತ್ತು ಗುತ್ತಿಗೆದಾರರು ತಮ್ಮ ಬಳಿ ಕೆಲಸ ಮಾಡುವ ಪ್ರತಿಯೊಬ್ಬ ಕಾರ್ಮಿಕರಿಗೂ ಲಸಿಕೆ ಹಾಕಿಸಿಕೊಳ್ಳುವಂತೆ ನೋಡಿಕೊಳ್ಳಬೇಕು.
- ವಲಸೆ ಕಾರ್ಮಿಕರು ಗಾಳಿ ಮಾತುಗಳು ಮತ್ತು ಸುಳ್ಳು ವದಂತಿಗಳಿಗೆ ಧೈರ್ಯಗೆಡುವ ಅಗತ್ಯತೆ ಇಲ್ಲ ಮತ್ತು ತಮ್ಮ ಊರುಗಳಿಗೆ ಮರಳಿ ಹೋಗಬೇಕಾಗಿಲ್ಲ. ನೀವು ಈಗ ಕಾರ್ಯನಿರ್ವಹಿಸುತ್ತಿರುವ ಜಾಗದಲ್ಲೇ ಸರ್ಕಾರದ ಕೋವಿಡ್ ನಿಯಮಗಳನ್ನು ಪಾಲಿಸಿಕೊಂಡು ಕೆಲಸ ಮುಂದುವರೆಸುವುದು.
- ಹೊರ ಗುತ್ತಿಗೆ ಕೆಲಸ ನಿರ್ವಹಿಸುವ ಗುತ್ತಿಗೆದಾರರು ಸರ್ಕಾರ ಸೂಚಿಸಿರುವ ಕೋವಿಡ್ ನಿಯಮಗಳನ್ನು ಸರಿಯಾಗಿ ಪಾಲಿಸಿ, ಕಾರ್ಮಿಕರಿಗೆ ಮಾಸ್ಕ್, ಸ್ಯಾನಿಟೈಸರ್ ವ್ಯವಸ್ಥೆ ಕಲ್ಪಿಸುವ ಮೂಲಕ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು.
- ಹೊರ ಗುತ್ತಿಗೆದಾರರು ತಮ್ಮ ಬಳಿ ಕೆಲಸ ಮಾಡುವ ಪ್ರತಿಯೊಬ್ಬ ಕಾರ್ಮಿಕರಿಗೆ ಗುರುತಿನ ಚೀಟಿ (ಐಡೆಂಟಿಟಿ ಕಾರ್ಡ್) ಕೊಡಿಸುವ ಜವಾಬ್ದಾರಿ ನಿರ್ವಹಿಸಬೇಕು. ತಪ್ಪಿದಲ್ಲಿ ಗುತ್ತಿಗೆದಾರರ ಮೇಲೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.
- ಹೀಗೆ ಕಾರ್ಮಿಕರು ಯಾವುದೇ ಆತಂಕ ಪಡದೆ, ಕೊರೋನಾ ಮಾರ್ಗಸೂಚಿಗಳನ್ನು ಪಾಲಿಸಿಕೊಂಡು ತಮ್ಮ ಆರೋಗ್ಯ ಮತ್ತು ತಮ್ಮ ಕುಟುಂಬದವರ ಆರೋಗ್ಯದ ಕುರಿತು ಸಾಕಷ್ಟು ಗಮನ ನೀಡುವ ಮೂಲಕ ತಮ್ಮ ಕೆಲಸವನ್ನು ನಿರ್ವಹಿಸುವುದು. ಸರ್ಕಾರ ನಿಮ್ಮೆಲ್ಲರ ಜೊತೆಗಿದೆ, ಇಲಾಖೆಯ ವತಿಯಿಂದ 155214 ಸಹಾಯವಾಣಿ ತೆರೆಯಲಾಗಿದ್ದು, 24/7 ಕಾರ್ಮಿಕರಿಗಾಗಿಯೇ ಕಾರ್ಯನಿರ್ವಹಿಸುತ್ತಿದೆ. ಇದರ ಸದುಪಯೋಗವನ್ನು ಕಾರ್ಮಿಕರು ಪಡೆದುಕೊಳ್ಳಬೇಕು.
- ಎಲ್ಲಾ ಹೊರ ಗುತ್ತಿಗೆದಾರರು ಮತ್ತು ಕಟ್ಟಡ ನಿರ್ಮಾಣ ಕಂಪನಿಗಳು ತಮ್ಮ ಬಳಿ ಕಾರ್ಯನಿರ್ವಹಿಸುವ ಕಾರ್ಮಿಕರ / ವಲಸೆ ಕಾರ್ಮಿಕರ ವಿಳಾಸ, ಅಗತ್ಯ ಮಾಹಿತಿ ಹಾಗೂ ದೂರವಾಣಿ ಸಂಖ್ಯೆಗಳನ್ನು ಇಲಾಖೆಯಿಂದ ಕೇಳಿದಾಗ ಒದಗಿಸುವುದು ಕಡ್ಡಾಯವಾಗಿರುತ್ತದೆ.

"ಕೊರೋನಾ ವಿರುದ್ಧ ನಾವೆಲ್ಲರೂ ಒಗ್ಗಟ್ಟಾಗಿ ಸಮರ ಸಾರೋಣ, ಅದರಲ್ಲಿ ಜಯಶಾಲಿಯಾಗೋಣ, ಸರ್ಕಾರದ ಮಾರ್ಗಸೂಚಿಯನ್ನು ಪಾಲಿಸೋಣ, ಮಾಸ್ಕ್ ಧರಿಸಿ, ಸಾಮಾಜಿಕ ಅಂತರ ಕಾಪಾಡಿಕೊಂಡು ಕೊರೋನಾ ವಿರುದ್ಧ ಜಯಗಳಿಸೋಣ"

24/7 ಸಹಾಯವಾಣಿ
155214

ತಪ್ಪದೆ ಕರೋನಾ ನಿಯಮಗಳನ್ನು ಪಾಲಿಸೋಣ
ಕಡ್ಡಾಯವಾಗಿ ಮಾಸ್ಕ್ ಧರಿಸಿ | ದೈಹಿಕ ಅಂತರವನ್ನು ಪಾಲಿಸಿ | ಕೈಗಳ ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ

ಡಾ. ಜಿ. ಕಲ್ಪನಾ, ಭಾ.ಆ.ಸೇ.
ಅಪರ ಮುಖ್ಯಕಾರ್ಯದರ್ಶಿಗಳು
ಕಾರ್ಮಿಕ ಇಲಾಖೆ

ಅಕ್ರಂ ಪಾಷ, ಭಾ.ಆ.ಸೇ.
ಕಾರ್ಮಿಕ ಆಯುಕ್ತರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು
ಕ.ಕ. ಮತ್ತು ಇ.ನಿ.ಕಾ.ಕ.ಮಂಡಳಿ

ಎಲ್ಲಾ ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳಲ್ಲಿ ಉನ್ನತಿಯನ್ನು ಸಾಧಿಸಲು ನಿರಂತರ ಪ್ರಯತ್ನಿಸಿ ದೇಶದ ಪ್ರಗತಿಗಾಗಿ ಶ್ರಮಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಕಾರ್ಮಿಕರ ಕಲ್ಯಾಣಕ್ಕೆ ಸರ್ಕಾರದ ನಿರಂತರ ಸ್ಪಂದನೆ

ಕೊಳಚೆ ನೀರು ಶುದ್ಧೀಕರಣ ಘಟಕ ಸ್ಥಗಿತ, ಕಲುಷಿತಗೊಂಡ ಗುತ್ತಲು ಕೆರೆ •ಕೊಡಗಿನಲ್ಲೇ ಕಾವೇರಿ ಮಲಿನ

ಭತ್ತ, ಕಬ್ಬಿನ ಗದ್ದೆಯಲ್ಲಿ ದುರ್ವಾಸನೆ

ಪ್ರಜಾವಾಣಿ ವಾರ್ತೆ

ಮಂಡ್ಯದ ಹೊರವಲಯದಲ್ಲಿರುವ ಗುತ್ತಲು ಕೆರೆ ಕಲುಷಿತಗೊಂಡಿರುವುದು

ಕೊಳಚೆ ನೀರು ಕಬ್ಬಿನ ಗದ್ದೆಗೆ ಸೇರುತ್ತಿರುವುದು

ಮಂಡ್ಯ: ಮಂಡ್ಯ ನಗರದಲ್ಲಿ ಉತ್ಪಾದನೆಯಾಗುವ ಕೊಳಚೆ ನೀರು ನೇರವಾಗಿ ಗುತ್ತಲು ಕೆರೆ ಸೇರುತ್ತಿದ್ದು, ಕೆರೆಯಂಗಳ ಹಾಗೂ ಹಿಂಭಾಗದ ಅಚ್ಚುಕಟ್ಟು ಪ್ರದೇಶ ಕಲುಷಿತಗೊಂಡಿದೆ. ಕಬ್ಬು, ಭತ್ತದ ಗದ್ದೆಗಳು ದುರ್ವಾಸನೆ ಬೀರುತ್ತಿದ್ದು, ರೋಗಭೀತಿ ಎದುರಾಗಿದೆ.

ಗದ್ದೆಗಳಲ್ಲಿ ಕೆರೆಯ ಕಲುಷಿತ ನೀರು ಹರಿಯುತ್ತಿದ್ದು ರೈತರಿಗೆ ಕೆಮ್ಮು, ಚರ್ಮದ ಸಮಸ್ಯೆಗಳು ಸಾಮಾನ್ಯವಾಗಿವೆ. ಇದರಿಂದ ಕೃಷಿ ಕಾರ್ಮಿಕರು ನಾಟಿಗೆ ಬರಲು ಹಿಂಜರಿಯುತ್ತಿದ್ದಾರೆ. ಗುತ್ತಲು, ಭೂತನಹೊಸೂರು, ಚನ್ನಪ್ಪನ ದೊಡ್ಡಿ, ಚಿಕ್ಕೇಗೌಡನದೊಡ್ಡಿ ಮುಂತಾದ ಗ್ರಾಮಗಳ ರೈತರು ಗುತ್ತಲು ಕೆರೆಯ ಅಚ್ಚುಕಟ್ಟುದಾರರಾಗಿದ್ದಾರೆ.

ನಗರದಲ್ಲಿ ಎರಡು ಕೋಟಿ ಲೀಟರ್ ಕೊಳಚೆ ನೀರು ಉತ್ಪಾದನೆಯಾಗುತ್ತಿದ್ದು, ಅದನ್ನು ಶುದ್ಧೀಕರಣಗೊಳಿಸಲು ಯತ್ತಗದಹಳ್ಳಿ (89 ಲಕ್ಷ ಲೀಟರ್ ಸಾಮರ್ಥ್ಯ), ಚಿಕ್ಕೇಗೌಡನ ದೊಡ್ಡಿಯಲ್ಲಿ (96 ಲಕ್ಷ ಲೀಟರ್ ಸಾಮರ್ಥ್ಯ) ಕೊಳಚೆ ನೀರು ಶುದ್ಧೀಕರಣ ಘಟಕ ನಿರ್ಮಾಣ ಮಾಡಲಾಗಿದೆ. ಆದರೆ, ಈ ಘಟಕಗಳು ನಿರ್ವಹಣೆಯ ಕೊರತೆಯಿಂದ ಪದೇಪದೇ ಸ್ಥಗಿತಗೊಳ್ಳುತ್ತಿದ್ದು, ಕೊಳಚೆ ನೀರು ನೇರವಾಗಿ ಕೆರೆಯೊಡಲು ಸೇರುತ್ತಿದೆ. ಚಿಕ್ಕೇಗೌಡನದೊಡ್ಡಿ ಘಟಕದ ಕೊಳಚೆ ನೇರವಾಗಿ ಹೆಬ್ಬಾಳ ಸೇರುತ್ತಿದೆ. ಕೊಳಚೆ ನೀರು ಸೇರ್ಪಡೆಯಿಂದ ಕೆರೆಯ ನೀರು ಶುದ್ಧತಾ ಗುಣ (ಪಿಎಚ್ ವ್ಯಾಲ್ಯೂ) ಕಳೆದುಕೊಂಡಿದೆ.

ನೀರಿನ ಶುದ್ಧತೆ ಪರೀಕ್ಷೆ ನಡೆಸುವಂತೆ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳಿಗೆ ಮನವಿ ಸಲ್ಲಿಸಿದ್ದರೂ ಈವರೆಗೆ ಪರೀಕ್ಷೆ ನಡೆಸಿಲ್ಲ ಎಂದು ಸ್ಥಳೀಯರು ಆರೋಪಿಸುತ್ತಾರೆ.

'ಯತ್ತಗದಹಳ್ಳಿ ಘಟಕದಲ್ಲಿ ಮೋಟರ್ ಸಮಸ್ಯೆಯಿಂದ ಘಟಕ ಸ್ಥಗಿತಗೊಂಡಿತ್ತು, ಈಗ ದುರಸ್ತಿ ಮಾಡಿಸಲಾಗಿದೆ. ಮುಂದೆ ಘಟಕ ಸ್ಥಗಿತಗೊಳ್ಳದಂತೆ ನೋಡಿಕೊಳ್ಳಲಾಗುವುದು' ಎಂದು ನಗರಸಭೆ ಪೌರಾಯುಕ್ತ ಎಸ್.ಲೋಕೇಶ್ ಹೇಳಿದರು.

ಮೂರು ಭಾಗದಲ್ಲಿ ಘಟಕ: ಮೈಸೂರು ನಗರದ ಕೊಳಚೆ ನೀರನ್ನು ಸಂಸ್ಕರಿಸಲಿಕ್ಕಾಗಿಯೇ ಮೂರು ಭಾಗದಲ್ಲಿ ಎಸ್‌ಟಿಪಿ ಪ್ಲಾಂಟ್ ನಿರ್ಮಿಸಲಾಗಿದೆ. ಸಿವೇಜ್ ಫಾರ್ಮ್‌ನಲ್ಲಿನ ಎಸ್‌ಟಿಪಿ ಪ್ಲಾಂಟ್‌ನಲ್ಲಿ ಸಂಸ್ಕರಣೆಗೊಂಡ ನೀರನ್ನು 100 ಎಕರೆಯಲ್ಲಿ ಹುಲ್ಲು ಬೆಳೆಸಲು ಬಳಸಲಾಗುತ್ತಿದೆ. ರೇಸ್ ಕೋರ್ಸ್, ಗಾಲ್ಫ್ ಕ್ಲಬ್‌ನ ಮೈದಾನ ಹಸಿರೀಕರಣಕ್ಕೆ ಪೂರೈಸಲಾಗುತ್ತಿದೆ.

ನದಿಯೊಡಲಿಗೆ ಕೊಳಚೆ ನೀರು: ಕೆಸರೆ ಬಳಿ, ರಾಯನಕೆರೆಯ ಕೋಟೆ ಹುಂಡಿ ಬಳಿ ತಲಾ ಒಂದೊಂದು ಎಸ್‌ಟಿಪಿ ಪ್ಲಾಂಟ್ ಇವೆ. ಇಲ್ಲಿ ಸಂಸ್ಕರಿಸಿದ ನೀರು ನೇರವಾಗಿ ಕೆರೆಯ ಒಡಲು ಸೇರುತ್ತಿದೆ. ಲಕ್ಷ್ಮಣತೀರ್ಥ ನದಿಗೆ ಹುಣಸೂರಿನ ಕೊಳಚೆ ನೀರು ಸೇರುತ್ತಿದೆ. ನಂಜನಗೂಡು, ತಿ.ನರಸೀಪುರದ ಕೊಳಚೆ ನೀರು ಕಪಿಲೆಯ ಒಡಲು ಸೇರುತ್ತಿದೆ.

ಚಾಮರಾಜನಗರ ಜಿಲ್ಲೆಯ ಐದು ನಗರ ಸ್ಥಳೀಯ ಸಂಸ್ಥೆಗಳ ಪೈಕಿ ಚಾಮರಾಜನಗರ ಮತ್ತು ಕೊಳ್ಳೇಗಾಲದಲ್ಲಿ ಮಾತ್ರ ತಲಾ 9 ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಿವೆ. ಹಾಸನದ ಹೊರವಲಯದಲ್ಲಿ ಬಿಟ್ಟಗೋಡನಹಳ್ಳಿ ಬಳಿ 10 ಎಂಎಲ್‌ಡಿ ಸಾಮರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ ಇದೆ. ಶ್ರವಣಬೆಳಗೊಳದಲ್ಲಿ ₹ 3 ಕೋಟಿ ವೆಚ್ಚದಲ್ಲಿ 15 ಲಕ್ಷ ಲೀಟರ್ ಸಾಮರ್ಥ್ಯದ ಎಸ್‌ಟಿಪಿ ಘಟಕ ತೆರೆಯಲಾಗಿದೆ.

ಕಾವೇರಿ ಕಲುಷಿತ: 'ಜೀವನದಿ' ಕಾವೇರಿಯು, ತನ್ನ ಉಗಮ ಸ್ಥಳವಾದ ಕೊಡಗಿನಲ್ಲೇ ಕಲುಷಿತಗೊಂಡು ಮುಂದಕ್ಕೆ ಹರಿಯುತ್ತಿದ್ದಾಳೆ. ಕಾಫಿ ಕೊಯ್ಲು ಸಂದರ್ಭದಲ್ಲಿ ನದಿ ಬದಿಯ ಎಸ್ಟೇಟ್‌ಗಳಲ್ಲಿ ಕಾಫಿ ಪಲ್ಪಿಂಗ್ ಮಾಡಿದ ಕಲುಷಿತ ನೀರನ್ನು ನೇರವಾಗಿ ನದಿಗೆ ಹರಿಯಬಿಡಲಾಗುತ್ತಿದೆ. ನೂರಾರು ಹೋಂಸ್ಟೇಗಳು ನಿರ್ಮಾಣಗೊಂಡಿದ್ದು ಅವುಗಳ ಕಲುಷಿತ ನೀರೂ ಕಾವೇರಿಯ ಒಡಲು ಸೇರುತ್ತಿದೆ. ಶುದ್ಧೀಕರಣ ಘಟಕ ಅಳವಡಿಕೆ ಮಾಡಿಕೊಳ್ಳುವಂತೆ ಹೋಂಸ್ಟೇ ಮಾಲೀಕರು ಹಾಗೂ ನದಿ ಬದಿಯ ಕಾಫಿ ಬೆಳೆಗಾರರಿಗೆ ಸೂಚನೆ ನೀಡಿದ್ದರೂ ಅವರು ಕ್ಯಾರೆ ಎನ್ನುತ್ತಿಲ್ಲ.

ಗ್ರಾಮೀಣ ಪ್ರದೇಶದ ತ್ಯಾಜ್ಯ ನೇರ ನದಿಗೆ

ಪ್ರಜಾವಾಣಿ ವಾರ್ತೆ

ಕಲಬುರ್ಗಿ: ಜಿಲ್ಲೆಯ ಅಫಜಲಪುರ ತಾಲ್ಲೂಕಿನಲ್ಲಿ ಭೀಮಾ ನದಿಯ ದಡದಲ್ಲಿರುವ 40ಕ್ಕೂ ಹೆಚ್ಚು ಗ್ರಾಮಗಳ ಮಲಿನ ನೀರು ನೇರವಾಗಿ ನದಿ ಒಡಲು ಸೇರುತ್ತಿದೆ.

ಪ್ರಮುಖ ಪ್ರೇಕ್ಷಣೀಯ ಸ್ಥಳಗಳಾದ ದೇವಲ ಗಾಣಗಾಪುರ ಹಾಗೂ ಘತ್ತರಗಾ ಭಾಗ್ಯವಂತಿ ದರ್ಶನಕ್ಕೆ ಬರುವ ಭಕ್ತರು ಕೂಡ ಪೂಜಾ ಸಾಮಗ್ರಿ, ಹಳೆಯ ಬಟ್ಟೆಗಳನ್ನು ನದಿಗೆ ಎಸೆದು ಮಾಲಿನ್ಯ ಮಾಡುತ್ತಿದ್ದಾರೆ. ಇದರಿಂದಾಗಿ ಸದ್ಯ ನದಿ ನೀರು ಕಲುಷಿತಗೊಂಡಿದ್ದು, ಜಾನುವಾರುಗಳು ಕುಡಿಯುವುದಕ್ಕೂ ಯೋಗ್ಯವಿಲ್ಲದಂತಾಗಿದೆ.

ಸೇಡಂ ಪಟ್ಟಣದ ಚರಂಡಿ ನೀರು ಹಾಗೂ ಸಿಮೆಂಟ್ ಕಾರ್ಖಾನೆಯ ತ್ಯಾಜ್ಯವನ್ನು ನೇರವಾಗಿ ಕಮಲಾವತಿ ನದಿಗೆ ಬಿಡಲಾಗುತ್ತಿದೆ. ಈ ನದಿ ಮಳೆಗಾಲದಲ್ಲಿ ಮಾತ್ರ ತುಂಬಿ ಹರಿಯುತ್ತದೆ. ಬೇಸಿಗೆಯಲ್ಲಿ ನೀರಿಗಿಂತ ತ್ಯಾಜ್ಯವೇ ಹೆಚ್ಚಾಗಿ ಗಬ್ಬೆದ್ದು ನಾರುತ್ತಿದೆ.

ಇನ್ನೊಂದೆಡೆ, ಕೊಪ್ಪಳ ನಗರಸಭೆ ಮತ್ತು ಭಾಗ್ಯನಗರ ಪಟ್ಟಣ ಪಂಚಾಯಿತಿಯ ಚರಂಡಿ ನೀರು ನೇರವಾಗಿ ಹಿರೇಹಳ್ಳಕ್ಕೆ ಸೇರುತ್ತಿದ್ದು, ಜಲಮೂಲಗಳು ಕಲುಷಿತಗೊಳ್ಳುತ್ತಿವೆ.

ಎರಡು ವರ್ಷಗಳ ಹಿಂದೆ ಗವಿಮಠದಿಂದ ಕೋಟ್ಯಂತರ ರೂಪಾಯಿ ಖರ್ಚು ಮಾಡಿ 27 ಕಿ.ಮೀ ಉದ್ದದ ಹಳ್ಳವನ್ನು ಸ್ವಚ್ಛಗೊಳಿಸಲಾಗಿತ್ತು. ಈಗ ಮತ್ತೆ ಚರಂಡಿ ನೀರು ಹಳ್ಳ ಸೇರುತ್ತಿದೆ. ನಗರದ ತ್ಯಾಜ್ಯ ನೀರನ್ನು ಶುದ್ಧೀಕರಣ ಮಾಡಿ ಹಳ್ಳಕ್ಕೆ ಬಿಡುವ ಯೋಜನೆ ಇನ್ನೂ ಪ್ರಸ್ತಾವದಲ್ಲೇ ಇದೆ.

ನಗರ ತ್ಯಾಜ್ಯವೇ ನೀರಿಗೆ ಕಂಟಕ

ಒಂದನೇ ಪುಟದಿಂದ

'ಪೌರಾಯುಕ್ತರು, ಜಿಲ್ಲಾ ಪಂಚಾಯಿತಿ ಸಿಇಒ, ಜಿಲ್ಲಾಧಿಕಾರಿ ಅಥವಾ ಇಲಾಖೆಯ ಮುಖ್ಯಸ್ಥರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಆದರೆ, ಹಲವು ಒತ್ತಡಗಳು ಮತ್ತು ಇನ್ನಿತರೆ ಕಾರಣಗಳಿಂದ ಕಾನೂನು ಕ್ರಮ ಜರುಗಿಸಲು ಸಾಧ್ಯವಾಗುತ್ತಿಲ್ಲ' ಎಂದು ಅವರು ಅಸಹಾಯಕತೆ ವ್ಯಕ್ತಪಡಿಸುತ್ತಾರೆ.

'ಒಬ್ಬ ಪೊಲೀಸ್ ಕಾನ್‌ಸ್ಟೆಬಲ್‌ಗೆ ಹೆದರುವಷ್ಟೂ ಜನ ನಮಗೆ ಹೆದರುವುದಿಲ್ಲ. ನಮ್ಮ ಮಾತು ಕೇಳುವುದಿಲ್ಲ. ಇನ್ನು, ಐಎಎಸ್, ಐಎಫ್‌ಎಸ್ ದರ್ಜೆಯ ಅಧಿಕಾರಿಗಳು ಮಾತು ಕೇಳುತ್ತಾರಾ' ಎಂದು ಕೆಎಸ್‌ಪಿಸಿಬಿಯ ಹಿರಿಯ ಅಧಿಕಾರಿಯೊಬ್ಬರು ಪ್ರಶ್ನಿಸುತ್ತಾರೆ.

ಪುನರ್‌ಬಳಕೆಗೆ ಸಿಗದ ಆದ್ಯತೆ: ರಾಜ್ಯವು ನೀರಿನ ಕೊರತೆ ಎದುರಿಸುತ್ತಿರುವ ಈ ಸಂದರ್ಭದಲ್ಲಿ, ತ್ಯಾಜ್ಯ ನೀರಿನ ಪುನರ್‌ಬಳಕೆಗೆ ಯಾವ ಕ್ರಮ ಕೈಗೊಳ್ಳಲಾಗಿದೆ, ರಾಜ್ಯದಲ್ಲಿ ಒಟ್ಟು ಎಷ್ಟು ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳನ್ನು ಸ್ಥಾಪಿಸಲಾಗಿದೆ ಮತ್ತು ಈವರೆಗೆ ಇದಕ್ಕೆ 'ಸುರಿದಿರುವ' ಹಣವೆಷ್ಟು ಎಂದು ಕೇಳಿದರೆ ನಗರಾಭಿವೃದ್ಧಿ ಇಲಾಖೆಯ ಅಧಿಕಾರಿಗಳು ಮುಖದ ಮೇಲೆ 'ಪ್ರಶ್ನಾರ್ಥಕ ಚಿಹ್ನೆ' ಮೂಡಿಸಿಕೊಳ್ಳುತ್ತಾರೆ.

ನೀರಿನ ಪುನರ್‌ಬಳಕೆಯ ಕಾರ್ಯ ಏಕೆ ಸಮರ್ಪಕವಾಗಿ ನಡೆಯುತ್ತಿಲ್ಲ, ಎಸ್‌ಟಿಪಿಗಳ ನಿರ್ಮಾಣ ಅಥವಾ ನಿರ್ವಹಣೆ ಕುಂಠಿತಗೊಂಡಿರುವುದು ಏಕೆ ಎಂದು ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಸ್ಥರು ಅಥವಾ ಅಧಿಕಾರಿಗಳನ್ನು ಪ್ರಶ್ನಿಸಿದರೆ, ಅನುದಾನ ಕೊರತೆಯ ನೆಪವನ್ನು ಹೇಳುತ್ತಾರೆ.

735 ಸ್ಥಗಿತ ಆದೇಶ: 'ಬೆಂಗಳೂರಿನಲ್ಲಿ ಉತ್ಪಾದನೆಯಾಗುವ ಒಟ್ಟು ತ್ಯಾಜ್ಯ ನೀರಿನ ಪೈಕಿ ಶೇ 60ರಷ್ಟು ಕೊಳಚೆ ನೀರು ಬೆಳ್ಳಂದೂರು ಮತ್ತು ವರ್ತೂರು ಸೇರುತ್ತದೆ. ಕೆರೆಗಳಲ್ಲಿ ನೊರೆಗಳೆದ್ದಾಗ ಸುದ್ದಿಯಾಗುತ್ತವೆ. ಈ ಕೆರೆಗಳು ಸೇರಿದಂತೆ ನಗರದ ವಿವಿಧ ಜಲಮೂಲಗಳಿಗೆ ಕೊಳಚೆ ನೀರು ಬಿಡುತ್ತಿದ್ದ 735 ವಸತಿ ಸಮುಚ್ಚಯಗಳು ಮತ್ತು ಕಾರ್ಖಾನೆಗಳಿಗೆ ನೀರು ಮತ್ತು ವಿದ್ಯುತ್ ಸಂಪರ್ಕ ಕಡಿತಗೊಳಿಸಲು ಆದೇಶಿಸಲಾಗಿದೆ' ಎಂದು ಕೆಎಸ್‌ಪಿಸಿಬಿ ಹಿರಿಯ ಪರಿಸರ ಅಧಿಕಾರಿ ಸೈಯದ್ ಖಾಜಾ ತಿಳಿಸಿದರು.

'ಆನೇಕಲ್ ಪುರಸಭೆ ಮುಖ್ಯಾಧಿಕಾರಿಯ ವಿರುದ್ಧವೂ ಪ್ರಕರಣ ದಾಖಲಿಸಲಾಗಿದೆ' ಎಂದೂ ಅವರು ಮಾಹಿತಿ ನೀಡಿದರು.

'ಸ್ಥಗಿತ ಆದೇಶ ಎಂದರೆ ನೀರು ಮತ್ತು ವಿದ್ಯುತ್ ಸಂಪರ್ಕ ಕಡಿತಗೊಳಿಸಲಾಗುತ್ತದೆ. ಮಾನವೀಯ ನೆಲೆಗಟ್ಟಿನಲ್ಲಿ ನೋಡಿದರೆ ಈ ಕ್ರಮದ ಅನುಷ್ಠಾನವೂ ಕಷ್ಟವಾಗುತ್ತದೆ. ಸಾರ್ವಜನಿಕರಿಗೆ ಈ ಸೌಲಭ್ಯಗಳನ್ನು ತಡೆಯುವುದು ಮಂಡಳಿಯ ಉದ್ದೇಶವಲ್ಲ. ತ್ಯಾಜ್ಯ ನೀರನ್ನು ಸಂಸ್ಕರಿಸದೇ ಜಲಮೂಲಗಳಿಗೆ ಹರಿಸಿದರೆ ನೋಟಿಸ್ ನೀಡಿ, ಎಚ್ಚರಿಕೆ ನೀಡಲಾಗುತ್ತದೆ' ಎಂದೂ ಅವರು ಹೇಳಿದರು.

ಮಿಸ್ಸಿಂಗ್ ಲಿಂಕ್: ನದಿ, ಕೆರೆಗಳು ಮತ್ತು ಎಸ್‌ಟಿಪಿಗಳ ನಡುವಣ 'ಮಿಸ್ಸಿಂಗ್ ಲಿಂಕ್' ಕೂಡ ಮಾಲಿನ್ಯ ಪ್ರಮಾಣ ಹೆಚ್ಚಳಕ್ಕೆ ಕಾರಣವಾಗುತ್ತಿದೆ. ಅಪಾರ್ಟ್‌ಮೆಂಟ್‌ಗಳಿಂದ ಅಥವಾ ಕಾರ್ಖಾನೆಗಳಿಂದ ಹೊರಬಿಡುವ ಕೊಳಚೆ ನೀರು ಎಸ್‌ಟಿಪಿಗಳನ್ನೂ ಸೇರುತ್ತಿಲ್ಲ. ಕೊಳಚೆ ನೀರು-ಎಸ್‌ಟಿಪಿ–ನದಿಗಳ ನಡುವೆ ಸಮರ್ಪಕ 'ಸಂಪರ್ಕ', ಎಸ್‌ಟಿಪಿಗಳಲ್ಲಿ ಶುದ್ಧೀಕರಣ ಕಾರ್ಯ ಮತ್ತು ಅವುಗಳ ಪರಿಶೀಲನೆ ಸಮರ್ಪಕವಾಗಿ ನಡೆದರೆ 'ಜಲ ಸಂಪತ್ತು' ಮಲಿನಗೊಳ್ಳುವುದು ಅದಷ್ಟು ತಪ್ಪುತ್ತದೆ.

ಅಂತರ್ಜಲ ಮಟ್ಟ ವೃದ್ಧಿಸಿದ 'ಕೊಳಚೆ ನೀರು'

ಬೆಂಗಳೂರು: ಕೊಳಚೆ ನೀರನ್ನು ಪುನರ್‌ಬಳಸುವುದರ ಮಹತ್ವ ತಿಳಿಯಬೇಕೆಂದರೆ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯ ಕೆರೆಗಳನ್ನು ನೋಡಬೇಕು. ಬೆಂಗಳೂರಿನ ತ್ಯಾಜ್ಯ ನೀರನ್ನು ಸಂಸ್ಕರಿಸಿ ಈ ಜಿಲ್ಲೆಗಳ ಕೆರೆಗಳಿಗೆ ಹರಿಸಲಾಗುತ್ತಿದೆ. ಆದರೆ, ಹೀಗೆ ಸಂಸ್ಕರಿಸಿದ ನೀರಿನ ಜೊತೆಗೆ ಕೊಳಚೆ ನೀರೂ ಹರಿದು ಬರುತ್ತಿದೆ ಎಂಬ ದೂರು ಸ್ಥಳೀಯರದ್ದು.

'ಕೊಳಚೆ ನೀರನ್ನು ಅಲ್ಲಿ ಸಂಸ್ಕರಿಸುವುದರ ಜೊತೆಗೆ, ಮೂರನೇ ಹಂತದಲ್ಲಿಯೂ ಶುದ್ಧೀಕರಿಸಿ ಪೂರೈಸಬೇಕು' ಎಂದು ಸ್ಥಳೀಯರು ಒತ್ತಾಯಿಸುತ್ತಾರೆ.

ಬೆಂಗಳೂರಿನಿಂದ ಕೋಲಾರದ ಕೆರೆಗಳಿಗೆ ದಿನಕ್ಕೆ 36 ಕೋಟಿ ಲೀಟರ್ ಹಾಗೂ ಚಿಕ್ಕಬಳ್ಳಾಪುರ ಕೆರೆಗಳಿಗೆ 9 ಕೋಟಿ ಲೀಟರ್ ಸಂಸ್ಕರಿಸಿದ ನೀರನ್ನು ಪೂರೈಸಲಾಗುತ್ತಿದೆ.

'ಅಂತರರಾಷ್ಟ್ರೀಯ ಮಾನದಂಡಗಳ ಅನ್ವಯ ನಗರದಲ್ಲಿ ಕೊಳಚೆ ನೀರನ್ನು ಸಂಸ್ಕರಿಸಲಾಗುತ್ತಿದೆ. ಉತ್ಪಾದನೆಯಾಗುತ್ತಿರುವ ತ್ಯಾಜ್ಯ ನೀರಿನ ಪೈಕಿ ಶೇ 85ರಷ್ಟನ್ನು ಸಂಸ್ಕರಿಸಲಾಗುತ್ತಿದೆ. ಆನ್‌ಲೈನ್ ಮೂಲಕ ಎಲ್ಲ ಎಸ್‌ಟಿಪಿಗಳಲ್ಲಿನ ಪ್ರಕ್ರಿಯೆಯನ್ನು ಪರಿಶೀಲಿಸಲಾಗುತ್ತಿದೆ. ಸಂಸ್ಕರಿಸಿದ ನಂತರ ಮತ್ತೆ ಕೊಳಚೆ ನೀರು ಸೇರ್ಪಡೆಯಾಗುತ್ತಿಲ್ಲ' ಎಂದು ಬೆಂಗಳೂರು ಜಲಮಂಡಳಿ ತ್ಯಾಜ್ಯ ನೀರು ನಿರ್ವಹಣಾ ವಿಭಾಗದ ಮುಖ್ಯ ಎಂಜಿನಿಯರ್ ಬಿ.ಸಿ.ಗಂಗಾಧರ ತಿಳಿಸಿದರು.

'ಬೆಂಗಳೂರಿನಿಂದ ಈ ಜಿಲ್ಲೆಗಳಿಗೆ ಒಟ್ಟು 8 ಟಿಎಂಸಿ ಅಡಿ ನೀರು ಬಂದಿದೆ. 86ಕ್ಕೂ ಹೆಚ್ಚು ಕೆರೆಗಳನ್ನು, 52 ಚೆಕ್‌ಡ್ಯಾಮ್‌ಗಳನ್ನು ಈ ನೀರಿನಿಂದಲೇ ತುಂಬಿಸಲಾಗಿದೆ. ರಾಜಧಾನಿ ಇರುವವರೆಗೆ ಈ ಜಿಲ್ಲೆಗಳಿಗೆ ನೀರಿನ ಕೊರತೆ ಬಾಧಿಸದು. ಅಲ್ಲದೆ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗೆ ಇಷ್ಟು ನೀರನ್ನು ಬೇರೆ ಯಾವ ವಿಧದಿಂದಲೂ ತರಲು ಸಾಧ್ಯವಿಲ್ಲ' ಎಂದು ಸಣ್ಣ ನೀರಾವರಿ ಇಲಾಖೆಯ ಉನ್ನತ ಅಧಿಕಾರಿಯೊಬ್ಬರು ತಿಳಿಸಿದರು.

'ಎರಡನೇ ಹಂತದಲ್ಲಿ ಸಂಸ್ಕರಿಸಿದ ನೀರನ್ನು ನೀಡಲಾಗುತ್ತಿದೆ. ಕುಡಿಯಲು, ಅಡುಗೆಗೆ ಹೊರತು ಪಡಿಸಿ ಕೃಷಿ ಸೇರಿದಂತೆ ಇತರೆ ಉದ್ದೇಶಗಳಿಗೆ ಈ ನೀರನ್ನು ಧಾರಾಳವಾಗಿ ಬಳಸಬಹುದು. ಯೋಜನೆ ವಿರೋಧಿಸಿ ಹಲವರು ನ್ಯಾಯಾಲಯದ ಮೊರೆ ಹೋಗಿದ್ದರು. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಪರಿಶೀಲನೆ ನಂತರ ಯೋಜನೆಗೆ ಹಸಿರು ನಿಶಾನೆ ದೊರೆತಿದೆ' ಎಂದರು.

'ಕೆರೆಗಳು ಭರ್ತಿಯಾದ ನಂತರ ಈ ಭಾಗದಲ್ಲಿ ಅಂತರ್ಜಲ ಮಟ್ಟ ತುಂಬಾ ಹೆಚ್ಚಾಗಿದೆ. ಕೊಳವೆ ಬಾವಿಗಳನ್ನು ಮರುಪೂರಣಗೊಳಿಸಲಾಗಿದೆ. ಕೊಳವೆ ಬಾವಿಗಳಲ್ಲಿ ಬರುವ ನೀರು ಕುಡಿಯಲು ಸಹ ಯೋಗ್ಯವಾಗಿದೆ ಎಂದು ವಿಜ್ಞಾನಿಗಳು ವರದಿ ನೀಡಿದ್ದಾರೆ' ಎಂದು ಅವರು ತಿಳಿಸಿದರು.

'ತೃತೀಯ ಹಂತದಲ್ಲಿ ನೀರನ್ನು ಸಂಸ್ಕರಿಸಲು ಹೆಚ್ಚು ಹಣ ಖರ್ಚಾಗುತ್ತದೆ. ಬೆಂಗಳೂರಿನ ಕೊಳಚೆ ನೀರನ್ನು ನೀವು ಎಷ್ಟೇ ಶುದ್ಧೀಕರಿಸಿದರೂ ಆ ನೀರನ್ನು ಕುಡಿಯಲು ಯಾರೂ ಬಯಸುವುದಿಲ್ಲ. ಹಾಗೆ ಹೇಳುವುದಕ್ಕೂ ಸಾಧ್ಯವಿಲ್ಲ. ಆ ಚಿಂತನೆಯೂ ಇಲಾಖೆಯ ಮುಂದೆ ಇಲ್ಲ' ಎಂದು ಅವರು ಸ್ಪಷ್ಟಪಡಿಸಿದರು.

'ಕೋಲಾರ ಜಿಲ್ಲೆಯ ನರಸಾಪುರ ತಾಲ್ಲೂಕಿನ ಕೈಗಾರಿಕಾ ಪ್ರದೇಶಕ್ಕೆ ಪೂರೈಸಲು ದಿನಕ್ಕೆ 4 ಕೋಟಿ ಲೀಟರ್ ಸಾಮರ್ಥ್ಯದ ಎಸ್‌ಟಿಪಿ ನಿರ್ಮಾಣ ಮಾಡಲಾಗುತ್ತದೆ. ತೃತೀಯ ಹಂತದಲ್ಲಿ ಈ ನೀರನ್ನು ಸಂಸ್ಕರಿಸಿ, ಕೈಗಾರಿಕಾ ಪ್ರದೇಶಕ್ಕೆ ಪೂರೈಸುವ ಯೋಜನೆ ಸರ್ಕಾರದ ಮುಂದಿದೆ' ಎಂದೂ ಅವರು ವಿವರಿಸಿದರು.

'ಸಂಸ್ಕರಿಸದ ನೀರಿನಿಂದ ಕೃಷಿ ಭೂಮಿಗೂ ಅನಾರೋಗ್ಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೈಗಾರಿಕೆ ಹಾಗೂ ವೈದ್ಯಕೀಯ ತ್ಯಾಜ್ಯಗಳು ಕೂಡ ನದಿ–ಕೆರೆಗಳನ್ನು ಸೇರುತ್ತಿರುವ ಪರಿಣಾಮ ನೀರು ವಿಷಕಾರಿಯಾಗುತ್ತಿದೆ. ಈ ನೀರನ್ನು ಸಂಸ್ಕರಿಸದೆಯೇ ಬಳಸಿದಲ್ಲಿ ಸಾಂಕ್ರಾಮಿಕ ರೋಗಗಳ ಜತೆಗೆ ಕ್ಯಾನ್ಸರ್‌ನಂತಹ ಕಾಯಿಲೆಗಳು ಕೂಡ ಕಾಣಿಸಿಕೊಳ್ಳುತ್ತವೆ'.

'ಕಲುಷಿತ ನೀರನ್ನು ಸೇವಿಸಿದಲ್ಲಿ ಅತಿಸಾರ, ಕಾಮಾಲೆ, ಕಾಲರಾ, ಪೋಲಿಯೊ, ಚರ್ಮರೋಗ, ಆಮಶಂಕೆ ಸೇರಿದಂತೆ ವಿವಿಧ ರೋಗಗಳು ಬರುವ ಸಾಧ್ಯತೆಗಳು ಇರುತ್ತದೆ. ವಿಷಕಾರಿ ತ್ಯಾಜ್ಯಗಳು ನೀರನ್ನು ಸೇರಿದಲ್ಲಿ ಸಾಮಾನ್ಯ ಸಾಂಕ್ರಾಮಿಕ ಕಾಯಿಲೆಗಳೇ ಬಲಿಷ್ಠವಾಗಲಿವೆ. ಬಳಿಕ ಈಗಾಗಲೇ ಬಳಕೆಯಲ್ಲಿರುವ ಔಷಧಗಳಿಂದ ಅವುಗಳನ್ನು ವಾಸಿ ಮಾಡುವುದು ಕೂಡ ಕಷ್ಟವಾಗುತ್ತದೆ. ಹಾಗಾಗಿ, ನೀರಿನ ಸಂಸ್ಕರಣೆಗೆ ಆದ್ಯತೆ ನೀಡಬೇಕಾಗಿದೆ. ಇಲ್ಲವಾದರೆ ಭವಿಷ್ಯದಲ್ಲಿ ಗಂಭೀರ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.'

'ಕುಡಿಯುವ ನೀರಿನ ಜತೆಗೆ ಕೃಷಿ ಭೂಮಿಗೆ ಬಳಸುವ ನೀರಿನ ಸುರಕ್ಷತೆಯ ಕಡೆಗೆ ಕೂಡ ಗಮನಹರಿಸಬೇಕು. ಎಚ್‌ಐವಿ ಸೇರಿದಂತೆ ವಿವಿಧ ಕಾಯಿಲೆಗಳಿಗೆ ಬಳಸುವ ಅವಧಿ ಮೀರಿದ ಔಷಧ ಹಾಗೂ ವೈದ್ಯಕೀಯ ತ್ಯಾಜ್ಯವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿಲ್ಲ. ಇದರಿಂದಾಗಿ ಅವು ನದಿಗಳನ್ನು ಸೇರಿ ನೀರನ್ನು ಕಲುಷಿತಗೊಳಿಸುತ್ತಿವೆ. ವಿದೇಶಗಳಲ್ಲಿ ಈ ವಿಷಕಾರಿ ತ್ಯಾಜ್ಯಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಲಾಗುತ್ತಿದೆ. ಆರ್ಸೆನಿಕ್, ಸೀಸದಂತಹ ಭಾರಲೋಹಗಳು ಕೂಡ ನದಿ ನೀರನ್ನು ಸೇರುತ್ತಿವೆ. ಪರಿಣಾಮ ನೀರು ವಿಷಕಾರಿಯಾಗಿ ಕ್ಯಾನ್ಸರ್‌ನಂತಹ ಕಾಯಿಲೆಗೆ ಕಾರಣವಾಗುತ್ತಿದೆ.'

'ವಿಷಕಾರಿ ತ್ಯಾಜ್ಯಗಳು ನದಿ–ಕೆರೆಗಳಿಗೆ ಸೇರಿದಲ್ಲಿ ಜಲ ಸಸ್ಯಗಳು ಹಾಗೂ ಜಲಚರಗಳಿಗೆ ಕೂಡ ಹಾನಿಯಾಗುತ್ತದೆ. ಸಂಸ್ಕರಿಸದ ನೀರನ್ನು ಕೃಷಿ ಪ್ರದೇಶದಲ್ಲಿ ಗಿಡಗಳಿಗೆ ಉಣಿಸಿದಲ್ಲಿ ಅವು ನೀಡುವ ಫಲಗಳು ವಿಷಕಾರಿ ಅಂಶವನ್ನು ಹೊಂದಿರುತ್ತವೆ. ಇದರಿಂದಾಗಿ ಸಹಜವಾಗಿ ಆ ಫಲಗಳನ್ನು ಸೇವಿಸುವ ನಮಗೆ ಕೂಡ ಕಾಯಿಲೆಗಳು ಬರುವ ಸಾಧ್ಯತೆ ಇರುತ್ತದೆ. ಕೃಷಿಯ ಮೂಲವೇ ಕೆಟ್ಟುಹೋದಲ್ಲಿ ಆರೋಗ್ಯಯುತ ಕೃಷಿ ಉತ್ಪನ್ನವನ್ನು ಹೇಗೆ ನಿರೀಕ್ಷಿಸಲು ಸಾಧ್ಯ?'

-ಕೆ.ಸಿ. ರಘು, ಆಹಾರತಜ್ಞ

ಸಮುದ್ರಕ್ಕೆ ಸೇರುತ್ತಿದೆ ವಿಷ!

• ಪ್ರದೀಶ್ ಎಚ್. ಮರೋಡಿ

ಮಂಗಳೂರು: ನಗರದಲ್ಲಿರುವ ಬಹುತೇಕ ಕೈಗಾರಿಕೆಗಳು ತ್ಯಾಜ್ಯ ನೀರನ್ನು ಸಮುದ್ರಕ್ಕೆ ಬಿಡುವ ವಿಚಾರ ಗುಟ್ಟಾಗಿ ಉಳಿದಿಲ್ಲ. ಎರಡು ದಶಕಗಳಿಂದ ಎಷ್ಟೇ ಹೋರಾಟ ನಡೆದರೂ ಅರಬ್ಬಿ ಸಮುದ್ರಕ್ಕೆ ವಿಷ ಸೇರುವುದು ತಪ್ಪಿಲ್ಲ.

'ಎಂಆರ್‌ಪಿಎಲ್, ಎಂಸಿಎಫ್ ಸೇರಿದಂತೆ ಬೈಕಂಪಾಡಿಯಲ್ಲಿರುವ 850 ಕೈಗಾರಿಕೆಗಳು, ಜಿಲ್ಲೆಯಲ್ಲಿರುವ 1,400 ಕೈಗಾರಿಕೆಗಳು ತ್ಯಾಜ್ಯ ನಿರ್ವಹಣೆಗೆ ಸಂಬಂಧಿಸಿದ ಮಾರ್ಗಸೂಚಿಯನ್ನು ಗಾಳಿಗೆ ತೂರಿವೆ. ತ್ಯಾಜ್ಯ ನೀರನ್ನು ನೇರವಾಗಿ ಸಮುದ್ರಕ್ಕೆ ಅಥವಾ ನದಿಗೆ ಹರಿಸುತ್ತಿವೆ. ಇದನ್ನು ನಿಯಂತ್ರಿಸಬೇಕಾಗಿದ್ದ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ಕಣ್ಮುಚ್ಚಿ ಕುಳಿತಿದ್ದಾರೆ' ಎಂದು ರಾಷ್ಟ್ರೀಯ ಪರಿಸರ ಸಂರಕ್ಷಣಾ ಒಕ್ಕೂಟದ ಸಂಚಾಲಕ ಶಶಿಧರ ಶೆಟ್ಟಿ ದೂರುತ್ತಾರೆ.

'ಬಂದರಿನಿಂದ ಸುರತ್ಕಲ್‌ವರೆಗೆ ಸಮುದ್ರದಲ್ಲಿ ಹಿಂದೆ 25ರಿಂದ 30 ಬಗೆಯ ಮೀನುಗಳು ಸಿಗುತ್ತಿದ್ದವು. ಕಾರ್ಖಾನೆ ತ್ಯಾಜ್ಯ ಸೇರುವ ಪ್ರದೇಶಗಳಲ್ಲಿ ಮೀನಿನ ಸಂತತಿ ಕ್ಷೀಣಿಸಿದೆ' ಎನ್ನುವುದು ನಗರದ ಮೀನುಗಾರಿಕಾ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ರಾಮಚಂದ್ರ ಭಟ್ ಅವರ ಆರೋಪ.

'ಮಂಗಳೂರಿನ ಕಾವೂರು, ಬಜಾಲ್, ಸುರತ್ಕಲ್ ಮತ್ತು ಪಚ್ಚನಾಡಿಯಲ್ಲಿ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳಿವೆ. ಕಾವೂರು ಘಟಕದ ಸಂಸ್ಕರಿತ ನೀರನ್ನು ಎಸ್‌ಇಜೆಡ್‌ನವರು ಖರೀದಿಸಿ, ಕೈಗಾರಿಕೆಗಳಿಗೆ ಪೂರೈಕೆ ಮಾಡುತ್ತಿದ್ದಾರೆ. ಉಳಿದ ಮೂರು ಘಟಕಗಳ ನೀರನ್ನು ಸಂಸ್ಕರಿಸಿ ಚರಂಡಿಗೆ ಬಿಡಲಾಗುತ್ತಿದೆ. ಇದಕ್ಕೆ ಹೆಚ್ಚಿನ ಅನುದಾನ ಅಗತ್ಯವಿದ್ದು, ಸ್ಮಾರ್ಟ್ ಸಿಟಿ ಯೋಜನೆಯಲ್ಲಿ ಕೈಗೆತ್ತಿಕೊಳ್ಳುವ ಯೋಚನೆಯಿದೆ' ಎನ್ನುತ್ತಾರೆ ಮಂಗಳೂರು ಮಹಾನಗರ ಪಾಲಿಕೆ ಮೇಯರ್ ಪ್ರೇಮಾನಂದ ಶೆಟ್ಟಿ.

'ಒಂದೂವರೆ ತಿಂಗಳಿಂದ ನಗರದ ಒಳಚರಂಡಿ ನೀರನ್ನು ಶುದ್ಧೀಕರಿಸದೆ, ನೇರವಾಗಿ ಮರವೂರು ವೆಂಟೆಡ್ ಡ್ಯಾಮ್‌ಗೆ ಬಿಡಲಾಗುತ್ತಿದೆ. ಅದೇ ನೀರಿಗೆ ಆಲಂ, ಬ್ಲೀಚಿಂಗ್ ಪೌಡರ್ ಹಾಕಿ ಕುಡಿಯಲು ಪೂರೈಕೆ ಮಾಡಲಾಗುತ್ತಿದೆ. ಇದು ಗೊತ್ತಿದ್ದರೂ ಜನರು ಧ್ವನಿ ಎತ್ತುತ್ತಿಲ್ಲ. ಒಳಚರಂಡಿ ನೀರನ್ನು ಫಲ್ಗುಣಿ ನದಿಗೆ ಬಿಟ್ಟ ಪರಿಣಾಮ ಮೀನುಗಳ ಮೈಮೇಲೆ ಕಜ್ಜಿಗಳು ಕಾಣಿಸಿಕೊಂಡಿದ್ದವು' ಎಂದು ಶಶಿಧರ ಶೆಟ್ಟಿ ದೂರುತ್ತಾರೆ.

25 ವರ್ಷಗಳ ಹಿಂದೆ — ಗುರುವಾರ, 25-4-1996

• ಶಾಸನಸಭೆಯಲ್ಲಿ ಮಹಿಳೆಯರಿಗೆ ಮೀಸಲಾತಿ–ಪ್ರಧಾನಿ

ರಾಯಚೂರು, ಏ. 24– ಕೇಂದ್ರದಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಿಕ್ಕೆ ಬಂದರೆ ಲೋಕಸಭೆ ಮತ್ತು ವಿಧಾನಸಭೆಯಲ್ಲಿ ಮಹಿಳೆಯರಿಗೆ ಮೂರನೇ ಒಂದರಷ್ಟು (ಶೇ 33ರಷ್ಟು) ಮೀಸಲಾತಿ ನೀಡಲಾಗುವುದು ಎಂದು ಕಾಂಗ್ರೆ ಅಧ್ಯಕ್ಷ ಹಾಗೂ ಪ್ರಧಾನಿ ಪಿ.ವಿ. ನರಸಿಂಹರಾವ್ ಅವರು ಇಂದು ಇಲ್ಲಿ ಪ್ರಕಟಿಸಿದರು.

ಜಿಲ್ಲಾ ಕ್ರೀಡಾಂಗಣದಲ್ಲಿ ಬಹಿರಂಗ ಸಭೆಯನ್ನು ಉದ್ದೇಶಿಸಿ ಚುನಾವಣಾ ಭಾಷಣ ಮಾಡಿದ ರಾವ್, 'ಈ ಮೀಸಲಾತಿಯಿಂದ ಮಹಿಳೆಯರು ಸಾಕಷ್ಟು ಕಡೆ ಅಧಿಕಾರಕ್ಕೆ ಬರಲು ಸಾಧ್ಯವಾಗುತ್ತದೆ' ಎಂದು ತಿಳಿಸಿದರು.

'ಈಗಿನ ಚುನಾವಣೆ ದೇಶದ ಭವಿಷ್ಯತ್ತಿನ ದೃಷ್ಟಿಯಿಂದ ತುಂಬಾ ಮಹತ್ವದ್ದಾಗಿದೆ ನಾವಿಂದು ವಿಚಿತ್ರವಾದ ಪರಿಸ್ಥಿತಿಯಲ್ಲಿದ್ದೇವೆ. ಜನ ಮತ ಚಲಾಯಿಸುವಾಗ ಸಾಕಷ್ಟು ಯೋಚನೆ ಮಾಡಿ ಸರಿಯಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು' ಎಂದು ನರಸಿಂಹ ರಾವ್ ಅವರು ವಿನಂತಿಸಿದರು.

50 ವರ್ಷಗಳ ಹಿಂದೆ — ಭಾನುವಾರ, 25-4-1971

• ಢಾಕಾ, ಕಲ್ಕತ್ತದಿಂದ ಭಾರತ–ಪಾಕಿಸ್ತಾನ ಪ್ರತಿನಿಧಿಗಳ ವಾಪಸು

ನವದೆಹಲಿ, ಏ. 24– ಕಲ್ಕತ್ತೆಯಲ್ಲಿರುವ ತನ್ನ ಸಹಾಯಕ ಹೈಕಮೀಷನರ್ ಕಚೇರಿಯನ್ನು ಮುಚ್ಚಲು ನಿರ್ಧರಿಸಿರುವುದಾಗಿ ಪಾಕಿಸ್ತಾನವು ಭಾರತಕ್ಕೆ ಇಂದು ತಿಳಿಸಿತಲ್ಲದೆ ಢಾಕಾದಲ್ಲಿರುವ ಭಾರತದ ಸಹಾಯಕ ಹೈಕಮೀಷನರ್ ಕಚೇರಿಯನ್ನು ಬಂದ್ ಮಾಡುವಂತೆ ದೆಹಲಿಗೆ ಸೂಚಿಸಿತು.

ಪಾಕಿಸ್ತಾನದ ಹೈಕಮೀಷನರ್‌ರಾದ ಸಜ್ಜದ್ ಹೈದರ್‌ರವರು ಪಾಕಿಸ್ತಾನದ ನಿರ್ಧಾರವನ್ನು ಇಂದು ಅಧಿಕೃತವಾಗಿ ಭಾರತಕ್ಕೆ ತಿಳಿಯಪಡಿಸಿದರು.

ಈ ಮಧ್ಯೆ ಪಾಕಿಸ್ತಾನದಲ್ಲಿ ಭಾರತದ ಹೈಕಮೀಷನರ್‌ರಾದ ಬಿ.ಕೆ. ಆಚಾರ್ಯರವರು ಹಠಾತ್ತನೆ ನವದೆಹಲಿಗೆ ಬಂದಿದ್ದಾರೆ. ಪೂರ್ವಬಂಗಾಳದ ಘಟನೆಗಳ ಹಿನ್ನೆಲೆಯಲ್ಲಿ ಭಾರತ–ಪಾಕಿಸ್ತಾನ ನಡುವಣ ಬಾಂಧವ್ಯದ ಪೂರ್ಣ ವಿಮರ್ಶೆ ಅವರ ಈ ಭೇಟಿಯ ಮುಖ್ಯ ಉದ್ದೇಶವೆಂದು ಹೇಳಲಾಗಿದೆ. ಕಲ್ಕತ್ತೆಯಲ್ಲಿರುವ ಸಹಾಯಕ ಹೈಕಮೀಷನರ್ ಕಚೇರಿಯನ್ನು ಮುಚ್ಚಲು ಪಾಕಿಸ್ತಾನ ಸರ್ಕಾರ ನಿರ್ಧಾರ ಕೈಗೊಳ್ಳುವುದಕ್ಕೆ ಮುಂಚೆ ಆಚಾರ್ಯರವರು ಇಸ್ಲಾಮಾಬಾದ್‌ನಿಂದ ಹೊರಟರೆಂದು ಅಧಿಕೃತವಾಗಿ ತಿಳಿದುಬಂದಿದೆ.

ಗುಂಡಣ್ಣ



ದಿನ ಭವಿಷ್ಯ — ಭಾನುವಾರ 25 ಏಪ್ರಿಲ್ 2021

ಶ್ರೀಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ಚೈತ್ರ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಅಶ್ವಿನಿ ತ್ರಯೋದಶಿ ಗಂ. 19-38 (ಹ. 2-00) ಭಾನುವಾರ ನಿತ್ಯ ನಕ್ಷತ್ರ ಹಸ್ತ ಗಂ. 46-5 (ರಾ. 12-35) ವ್ಯಾಘಾ ನಾಮ ಯೋಗ ಗಂ 0-8 ಉಪರಿ ಹರ್ಷ ನಾಮ ಯೋಗ ಗಂ 53-5 ತೈತಲ ಕರಣ ಗಂ. 19-38 ವಿಷ ಗಂ. 8-51 ಅಮೃತ ಗಂ. 31-33: ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 ಸೂರ್ಯೋದಯ: 6-05 ಸೂರ್ಯಾಸ್ತ: 6-30 ಅದೃಷ್ಟ ಸಂಖ್ಯೆ 3, 7

ಮೇಷ: ಯಾವುದೇ ವಿಚಾರದಲ್ಲಿ ಆತುರದ ತೀರ್ಮಾನ ಬೇಡ. ಬಿಡುವಿಲ್ಲದ ಕೆಲಸ–ಕಾರ್ಯಗಳಿಂದಾಗಿ ಒತ್ತಡ ಹೆಚ್ಚಾಗಿ ಆಯಾಸ. ಆರೋಗ್ಯದ ಬಗ್ಗೆ ನಿರ್ಲಕ್ಷ್ಯದಿಂದಾಗಿ ಪ್ರತಿಕೂಲ ಪರಿಣಾಮ ಉಂಟಾಗಬಹುದು.

ವೃಷಭ: ಪ್ರಯಾಣ ಕಾಲದಲ್ಲಿ ಎಚ್ಚರಿಕೆ ಅಗತ್ಯ. ಧೈರ್ಯದಿಂದ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಬಹುದು. ಕೆಲಸ–ಕಾರ್ಯಗಳಿಗೆ ಕಾಲಮಿತಿ ಹಾಕಿಕೊಳ್ಳುವುದು ಉತ್ತಮ. ಸಾಂಸಾರಿಕವಾಗಿ ತೃಪ್ತಿಕರ ಜೀವನ.

ಮಿಥುನ: ನಿಮ್ಮ ಅನಿರೀಕ್ಷಿತ ನಡವಳಿಕೆಯಿಂದಾಗಿ ಕುಟುಂಬದ ಸದಸ್ಯರಲ್ಲಿ ಅಸಹನೆ. ನಿರ್ಧಾರಗಳನ್ನು ಪದೇ ಪದೇ ಬದಲಿಸದಿರಿ. ವಿದ್ಯಾರ್ಥಿಗಳಿಗೆ ಅಭ್ಯಾಸದಲ್ಲಿ ಬಿಡುವಿಲ್ಲದ ಶ್ರಮ. ಸ್ನೇಹಿತರಿಂದ ಸಕಾಲಿಕ ಸಹಾಯ.

ಕರ್ಕಾಟಕ: ಆರೋಗ್ಯದಲ್ಲಿ ಏರುಪೇರಾಗುವ ಸಾಧ್ಯತೆ. ಆರ್ಥಿಕ ಸಬಲತೆಯನ್ನು ಕಾಣಬಹುದು. ಪ್ರಮುಖ ವಿಚಾರಗಳ ಬಗ್ಗೆ ನಿರ್ಧಾರ ಕೈಗೊಳ್ಳುವುದು ದಿನದ ಮಟ್ಟಿಗೆ ಬೇಡ. ಉತ್ತಮ ಸಂಗಾತಿ ದೊರಕುವ ಸಾಧ್ಯತೆ ಇದ್ದು ನೆಮ್ಮದಿ.

ಸಿಂಹ: ನೌಕರ ವರ್ಗದವರಿಗೆ ಕಠಿಣ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ದೊರೆತು ಉದ್ಯೋಗದಲ್ಲಿ ಬದಲಾವಣೆ ಕಾಣುವ ಸಾಧ್ಯತೆ. ಮಹಿಳೆಯರು ಭಾವೋದ್ವೇಗಕ್ಕೆ ಒಳಗಾಗುವ ಸಾಧ್ಯತೆ. ಸಮಾಧಾನ ಚಿತ್ತರಾಗಿ ವ್ಯವಹರಿಸಿ.

ಕನ್ಯಾ: ಆರೋಗ್ಯದ ಬಗ್ಗೆ ಹೆಚ್ಚಿನ ಗಮನ ವಹಿಸುವುದು ಸೂಕ್ತ. ವಿದ್ಯಾರ್ಥಿಗಳು ಅಭ್ಯಾಸದ ಕಡೆ ಹೆಚ್ಚಿನ ಶ್ರಮ ವಹಿಸಿ. ಉದ್ಯೋಗಾಕಾಂಕ್ಷಿಗಳಿಗೆ ಯಥಾಸ್ಥಿತಿ. ಸಿಕ್ಕ ಅವಕಾಶವನ್ನು ಸದುಪಯೋಗ ಪಡಿಸಿಕೊಳ್ಳಿ.

ತುಲಾ: ನಿಮ್ಮ ಇಚ್ಛೆಗಳು ಸುಗಮವಾಗಿ ಈಡೇರುವವು. ಯೋಗ್ಯ ವಯಸ್ಕರಿಗೆ ಉತ್ತಮ ಅವಕಾಶಗಳಿಂದಾಗಿ ವೈವಾಹಿಕ ಭಾಗ್ಯ ದೊರಕಲಿದೆ. ಪ್ರೇಮಿಗಳ ಪಾಲಿಗೆ ಮಹತ್ತರ ಬೆಳವಣಿಗೆ ಕಂಡು ಬರಲಿದೆ. ನೆಮ್ಮದಿಯ ದಿನ.

ವೃಶ್ಚಿಕ: ವಿವಿಧ ಮೂಲಗಳಿಂದ ಧನಾಗಮನದಿಂದಾಗಿ ಕಾರ್ಯಾನುಕೂಲ. ಮಹಿಳಾ ಉದ್ಯೋಗಿಗಳಿಗೆ ಪದೋನ್ನತಿ ಸಾಧ್ಯತೆ. ಅಸಹನೆಯ ಮನೋವೃತ್ತಿ ಅನಾವಶ್ಯಕ ತಪ್ಪು ಅಭಿಪ್ರಾಯಕ್ಕೆ ಕಾರಣವಾದೀತು. ಸಾಂಸಾರಿಕ ತೃಪ್ತಿ.

ಧನು: ಉತ್ತಮ ಫಲ ನೀಡುವ ದಿನ. ಆರೋಗ್ಯದ ಬಗ್ಗೆ ಕಾಳಜಿ ವಹಿಸಿ. ಸಾಮರ್ಥ್ಯವನ್ನರಿತು ಕೆಲಸ ನಿರ್ವಹಿಸುವುದು ಉತ್ತಮ. ಮಿತ್ರವೃಂದದಿಂದ ಉಪಯುಕ್ತ ಸಲಹೆ ದೊರೆತು ವೃತ್ತಿಯಲ್ಲಿ ಯಶಸ್ಸು.

ಮಕರ: ಕುಟುಂಬ ಸದಸ್ಯರಲ್ಲಿ ಅಸಹನೆ ಕಂಡು ಬರಬಹುದು. ವಿದ್ಯಾರ್ಥಿಗಳಿಗೆ ಅಭ್ಯಾಸದ ಮೇಲೆ ಏಕಾಗ್ರತೆ ಕಡಿಮೆಯಾದರೂ ಗುರಿ ಸಾಧನೆಗೆ ತೊಡಕಾಗದು. ನಿರುದ್ಯೋಗಿಗಳು ಉತ್ತಮ ಅವಕಾಶಕ್ಕಾಗಿ ಕಾಯಬೇಕಾದೀತು.

ಕುಂಭ: ಕೆಲಸ–ಕಾರ್ಯಗಳಿಗೆ ವಿಘ್ನಗಳುಂಟಾದರೂ ಎದೆಗುಂದದೇ ಮುಂದುವರಿದು ಯಶಸ್ಸು ಸಾಧಿಸಲಿದ್ದೀರಿ. ಸಹೋದ್ಯೋಗಿಗಳ ಸಹಕಾರದಿಂದಾಗಿ ನೆಮ್ಮದಿ. ಹೊಂದಾಣಿಕೆಯ ಮನೋಭಾವದಿಂದ ವರ್ತಿಸಿ.

ಮೀನ: ಆದಾಯ ಮತ್ತು ಖರ್ಚುಗಳೆರಡೂ ಹೆಚ್ಚಾಗುವ ಸಾಧ್ಯತೆ. ನ್ಯಾಯಾಲಯದ ಕೆಲಸ–ಕಾರ್ಯಗಳಲ್ಲಿ ಪ್ರಗತಿ. ಹೊಸ ಆದಾಯದ ಮೂಲ ಗೋಚರವಾಗಲಿದೆ. ಸರಿ–ತಪ್ಪುಗಳನ್ನು ಅರಿತು ಮುಂದುವರೆಯಿರಿ.

ನಿಮ್ಮ ಜನ್ಮದಿನ 25-ಏಪ್ರಿಲ್ ಈ ದಿನ ಅತ್ಯಂತ ಶುಭಕರ. ವ್ಯವಹಾರ ಕ್ಷೇತ್ರದಲ್ಲಿ ಸಂಘರ್ಷದ ವಾತಾವರಣ ಸೃಷ್ಟಿಯಾಗುವ ಸಾಧ್ಯತೆ. ಅನಾವಶ್ಯಕವಾಗಿ ಭಾವೋದ್ವೇಗಕ್ಕೆ ಒಳಗಾಗುವ ಪ್ರಸಂಗ ಬಂದೊದಗೀತು. ಸರ್ಕಾರಿ ಉದ್ಯೋಗದಲ್ಲಿ ಇರುವವರಿಗೆ ಕಾನೂನಿನ ಭಯ ಕಾಡುವ ಸಾಧ್ಯತೆ. ಕಠಿಣ ನಿಲುವಿನಿಂದಾಗಿ ಪಶ್ಚಾತ್ತಾಪ ಪಡಬೇಕಾದೀತು.

ಪದಬಂಧ 4577 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಪ್ರತಿಷ್ಠೆ ತೋರದೆ ನೆಲೆಗೊಳಿಸುವುದು (5)
3.ಮೂಲಧನ ಇಲ್ಲಿದೆ (3)
5.ಶಿರೋನಾಮೆ ಅಥವಾ ಶೀರ್ಷಿಕೆ (5)
7.ವಕ್ರವಾಗಿ ಮಲಗಿದ ಮೊಸಳೆ! (2)
9.ವಠಾರದವರು ಹಿಡಿದಿರುವ ಕೊಡಲಿ (3)
11.ಸಂಸಾರ ಬಂಧನಕ್ಕೆ ಒಳಗಾದವನು (2)
13.ಲೋಹದ ಹಕ್ಕಿಯಲ್ಲಿನ ಪಯಣ (5)
15.ಕನ್ನಡಿಗ ನೀಡಿರುವ ಡೊನೇಷನ್ (3)
16.ಈತ ಅತ್ಯಾಸೆಯುಳ್ಳವನು (5)

ಮೇಲಿಂದ ಕೆಳಕ್ಕೆ
1.ಜನವಿದ್ದಾಗಲೇ ಇದು ಉಪಯೋಗ! (4)
2.ಪಾಪ ಮಾಡಿದವನು (3)
4.ಹತ್ತಿರಕ್ಕೊಂದು ಪರ್ಯಾಯ ಪದ (3)
6.ಬರದಲ್ಲಿರುವ ಅಸಂಸ್ಕೃತ! (3)
8.ವಿಕ್ರಯದಲ್ಲಿರುವ ಕಿಮ್ಮತ್ತು (2)
9.ಒಳ್ಳೆಯ ಕುಲದಲ್ಲಿ ಹುಟ್ಟಿದವ (3)
10.ಖರ್ಚು ಕಳೆದು ಉಳಿದುದು (2)
12.ಈತ ನಾಶಮಾಡುವವನು (4)
13.ಅಂತಿಮವಾಗಿ ಮಾಡಿದ ಬಿನ್ನಹ (3)
14.ಕಲ್ಲು, ಲೋಹದ ಮೇಲೆ ಮಾಡುವ ಕೆತ್ತನೆ ಕೆಲಸ (3)

1			2		■	3	4	
	■	■		■	■	■		■
	■	■	5		6			■
7	8	■	■	■		■	■	■
■		■	9			■	10	■
■	■	■		■	■	■	11	12
■	13				14	■	■	
■		■	■	■		■	■	
15			■	16				

4576ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಸೂತ್ರದಾರ 3.ನತದೃಷ್ಟ 4.ಪರಿಸು 5.ಪ್ರೀತಿಪಾತ್ರ 7.ಮಡಿವಾಳ 9.ಪರಧನ 11.ಸವಕಲು 12.ವಠಾರ 14.ಅರುಹಂ 3 15.ತಿರುಬೋಕಿ

ಮೇಲಿಂದ ಕೆಳಕ್ಕೆ: 1.ಸೂಕ್ತಿ 2.ರಕ್ಷಾಪತ್ರ 3.ನವಸುಮ 6.ತಿಮಿರ 8.ವಾದಕ 10.ನವನೀತ 11.ಸರಸ್ವತಿ 13.ಬೆಂಕಿ

ಸುಡೊಕು 4963

				5		2		8
		4	1		8			
	8	3		7			5	
	6		9	3		1		2
2		5						
	3			8	2	5		6
			5		6		2	
3		2						
	5			2		4		1

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4962 ಸುಡೊಕು

7	5	9	3	1	6	4	8	2
2	3	6	8	4	9	5	1	7
4	1	8	7	5	2	3	9	6
9	7	3	4	2	1	6	5	8
5	6	4	9	3	8	2	7	1
8	2	1	6	7	5	9	3	4
6	8	7	2	9	3	1	4	5
1	9	2	5	8	4	7	6	3
3	4	5	1	6	7	8	2	9

ಖಚಿತ ಫಲಿತಾಂಶ ನೀಡದ ಆರ್‌ಟಿ ಪಿಸಿಆರ್ ಪರೀಕ್ಷೆ

‘ಬಿಯು’ ಸಂಖ್ಯೆಗೆ ಪಡಿಪಾಟಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವ್ಯಕ್ತಿಯ ಆರೋಗ್ಯ ಪರಿಸ್ಥಿತಿಗಿಂತ ಅವರು ನೀಡಬೇಕಾದ ‘ದಾಖಲೆ’ಗಳಂತಹ ತಾಂತ್ರಿಕ ಅಂಶಗಳ ಕಡೆಗೆ ಆದ್ಯತೆ ನೀಡುತ್ತಿರುವುದರಿಂದ ಹಲವರು ಸಂಕಷ್ಟಕ್ಕೆ ಈಡಾಗುತ್ತಿದ್ದಾರೆ. ತೀವ್ರ ಉಸಿರಾಟದ ಸಮಸ್ಯೆಯಿದ್ದವರೂ ಬಿ.ಯು (ಬೆಂಗಳೂರು ಅರ್ಬನ್) ಸಂಖ್ಯೆ ಸಿಗದೆ ಪಡಿಪಾಟಲು ಅನುಭವಿಸುವಂತಾಗಿದೆ.

‘ನಮ್ಮ ಸಂಬಂಧಿಕರೊಬ್ಬರಿಗೆ ಉಸಿರಾಟದ ಸಮಸ್ಯೆ ಇತ್ತು. ಜ್ವರ, ಕೆಮ್ಮುನಂತಹ ಲಕ್ಷಣಗಳೂ ಇದ್ದವು. ಆರ್‌ಟಿ–ಪಿಸಿಆರ್ ಪರೀಕ್ಷೆ ಮಾಡಿಸಿದಾಗ, ಕೊರೋನಾ ಸೋಂಕು ಇಲ್ಲ ಎಂದು ವರದಿ ಬಂದಿತ್ತು. ಆದರೆ, ಸಿಟಿ ಸ್ಕ್ಯಾನ್ ಮಾಡಿಸಿದಾಗ ಸೋಂಕು ದೃಢಪಟ್ಟಿತ್ತು. ಖಾಸಗಿ ಆಸ್ಪತ್ರೆಗಳಿಗೆ ಹೋದರೆ ಬಿಯು ಸಂಖ್ಯೆ ಸಿಗದೆ ದಾಖಲು ಮಾಡಿಕೊಳ್ಳಲು ಸಾಧ್ಯವಿಲ್ಲ ಎಂದು ವಾಪಸ್ ಕಳುಹಿಸಿದರು’ ಎಂದು ರೋಗಿಯ ಸಂಬಂಧಿಯೊಬ್ಬರು ಅಳಲು ತೋಡಿಕೊಂಡರು.

‘ನಮ್ಮ ಭಾವ ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದರು. ಆರ್‌ಟಿ ಪಿಸಿಆರ್ ಪರೀಕ್ಷೆ ಮಾಡಿಸಿದಾಗ ಅದರಲ್ಲಿ ನಿಖರ ಫಲಿತಾಂಶ ಸಿಗಲಿಲ್ಲ. ₹6000 ಕೊಟ್ಟು ಸಿಟಿ ಸ್ಕ್ಯಾನ್ ಮಾಡಿಸಿದಾಗ ಸೋಂಕು ದೃಢಪಟ್ಟಿತ್ತು. ಬಿಯು ಸಂಖ್ಯೆ ಇಲ್ಲದಿದ್ದರೆ ಶೇ 70ರಷ್ಟು ಆಸ್ಪತ್ರೆಗಳಲ್ಲಿ ದಾಖಲು ಮಾಡಿಕೊಳ್ಳುವುದೇ ಇಲ್ಲ. ಕಣ್ಮುಂದೆಯೇ ಭಾವ ಅವರನ್ನು ಕಳೆದುಕೊಳ್ಳಬೇಕಾಯಿತು’ ಕಿರುತೆರೆ ನಟ ಪವನ್ ‘ಫೇಸ್‌ಬುಕ್’ನಲ್ಲಿ ಅಳಲು ಹೇಳಿಕೊಂಡಿದ್ದಾರೆ.

‘ಬಿಯು ಸಂಖ್ಯೆ ಸಿಗದೆ ಆಸ್ಪತ್ರೆಗಳಲ್ಲಿ ದಾಖಲಾದರೆ, ಆಕ್ಸಿಜನ್, ಐಸಿಯು ಹಾಸಿಗೆ, ರೆಮ್‌ಡಿಸಿವಿರ್ ಇಂಜೆಕ್ಷನ್ ಎಲ್ಲದಕ್ಕೂ ಮೂರು ನಾಲ್ಕು ಪಟ್ಟು ಹೆಚ್ಚು ದುಡ್ಡು ಕೊಡಬೇಕು. ಬಿಯು ಸಂಖ್ಯೆ ಸಿಗದವರು ಬೀದಿಯಲ್ಲಿಯೇ ಸಾಯಬೇಕಾ’ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಗ ಬದುಕುತ್ತಿದ್ದ: ‘ಮಲ್ಲತ್ತಹಳ್ಳಿ ನಿವಾಸಿಯಾದ ನನ್ನ ಮಗ ತೀವ್ರ ಉಸಿರಾಟದ ಸಮಸ್ಯೆಯಿಂದ ಬಳಲುತ್ತಿದ್ದ. ಆಸ್ಪತ್ರೆಯವರಿಗೆ ಕೇಳಿದರೆ ಬಿಯು ಸಂಖ್ಯೆ ಕೇಳಿದರು. ಈ ಸಂಖ್ಯೆಗಾಗಿ 108ಕ್ಕೆ ಕರೆ ಮಾಡಿದರೆ 1912ಗೆ ಫೋನ್ ಮಾಡುವಂತೆ ಹೇಳಿದರು. ಅವರಿಗೆ ಮಾಡಿದರೆ ಮತ್ತೊಂದು ಸಂಖ್ಯೆಗೆ ಮಾಡುವಂತೆ ಹೇಳಿದರು. ನೋಡಲ್ ಅಧಿಕಾರಿಗಳು ಸೇರಿದಂತೆ 50ಕ್ಕೂ ಹೆಚ್ಚು ಜನರಿಗೆ ಕರೆ ಮಾಡಿದರೂ ಪ್ರಯೋಜನವಾಗಲಿಲ್ಲ. ನನ್ನ ಮಗ ಕೊನೆಯುಸಿರೆಳೆದ’ ಎಂದು ಪೋಷಕರೊಬ್ಬರು ಕಣ್ಣೀರಿಟ್ಟರು.

‘ಸಾರಿ ಪ್ರಕರಣಕ್ಕೂ ಬಿಯು ಸಂಖ್ಯೆ ನೀಡಿ’

‘ತೀವ್ರ ಉಸಿರಾಟದ ಸಮಸ್ಯೆ (ಸಾರಿ) ಹೊಂದಿರುವ ಪ್ರಕರಣಗಳು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿವೆ. ಇಂತಹ ಪ್ರಕರಣಗಳ ರೋಗಿಗಳಿಗೂ ಬಿಯು ಸಂಖ್ಯೆ ನೀಡಿ ಪೋರ್ಟಲ್‌ನಲ್ಲಿ ಅವರ ವಿವರ ದಾಖಲಿಸಿದರೆ ಬಹಳಷ್ಟು ಸಮಸ್ಯೆಗಳು ಕಡಿಮೆಯಾಗುತ್ತವೆ’ ಎಂದು ರಾಜೀವ್‌ಗಾಂಧಿ ಎದೆರೋಗಗಳ ಆಸ್ಪತ್ರೆ ನಿರ್ದೇಶಕ ಡಾ. ಸಿ.ಎನ್. ನಾಗರಾಜ್ ಹೇಳಿದರು.

‘ಕಳೆದ ಸೆಪ್ಟೆಂಬರ್‌ನಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಿದ್ದಾಗ ಸಾರಿ ಸಮಸ್ಯೆಯಿಂದ ನಮ್ಮ ಆಸ್ಪತ್ರೆಯಿಂದ ದಾಖಲಾದವರ ಪೈಕಿ ಶೇ 25ರಷ್ಟು ಮಂದಿಯಲ್ಲಿ ಕೋವಿಡ್ ದೃಢಪಡುತ್ತಿತ್ತು. ಆದರೆ, ಈಗ ಈ ಪ್ರಮಾಣ ಶೇ 90ರಿಂದ ಶೇ 92ಕ್ಕೆ ಏರಿದೆ’ ಎಂದು ಅವರು ಹೇಳಿದರು.

‘ಸದ್ಯ ನಮ್ಮ ಆಸ್ಪತ್ರೆಯಲ್ಲಿ ಸಾರಿ ರೋಗಿಗಳು 92 ಜನ ಇದ್ದರೆ, ಕೋವಿಡ್ ರೋಗಿಗಳು 90 ಜನ ಇದ್ದಾರೆ. 34 ಐಸಿಯು ಹಾಸಿಗೆಗಳೂ ಭರ್ತಿಯಾಗಿವೆ’ ಎಂದು ಹೇಳಿದರು.

‘ಕೋವಿಡ್ ಚಿಕಿತ್ಸೆಗಾಗಿ ಆಸ್ಪತ್ರೆಗಳನ್ನು ಮೀಸಲಿರಿಸಿದಂತೆ ಸಾರಿ ಪ್ರಕರಣಗಳಿಗೂ ಇನ್ನೂ ಹೆಚ್ಚಿನ ಆಸ್ಪತ್ರೆಗಳನ್ನು ಮೀಸಲಿಡಬೇಕು. ಈ ರೋಗಿಗಳ ಚಿಕಿತ್ಸೆಗೂ ಹೆಚ್ಚಿನ ಹಾಸಿಗೆಗಳನ್ನು ಮೀಸಲಿಡುವಂತೆ ಆಸ್ಪತ್ರೆಗಳಿಗೆ ಸೂಚಿಸಬೇಕು’ ಎಂದು ಸಲಹೆ ನೀಡಿದರು.

ನಿರ್ವಹಣೆಯ ಸವಾಲು

‘ಕೋವಿಡ್ ಪರೀಕ್ಷೆ ಮಾಡಿದಾಗ ಸೋಂಕು ದೃಢಪಡುವುದಕ್ಕಿಂತ ಸೋಂಕು ಇಲ್ಲ ಎಂದು ವರದಿ ಬರುವ ರೋಗಿಗಳ ಸಂಖ್ಯೆ ಜಾಸ್ತಿ ಇರುತ್ತದೆ. ಈಗ ಸೊಂಕು ದೃಢಪಟ್ಟವರ ಮಾಹಿತಿಯನ್ನು ಆದ್ಯತೆಯ ಮೇರೆಗೆ ಪೋರ್ಟಲ್‌ನಲ್ಲಿ ಮೊದಲು ಭರ್ತಿ ಮಾಡಲಾಗುತ್ತದೆ. ಆಡಳಿತಾತ್ಮಕ ದೃಷ್ಟಿಯಿಂದ ಮತ್ತು ಪ್ರಕ್ರಿಯೆ ಸರಾಗವಾಗಿ ನಡೆಯುವ ಉದ್ದೇಶದಿಂದ ಆಯಾ ನಗರ ಅಥವಾ ಜಿಲ್ಲೆಯ ಕೋಡ್ ಬಳಸಿ ರೋಗಿಗಳ ಸಂಖ್ಯೆ ನೀಡಲಾಗುತ್ತಿದೆ’ ಎಂದು ಹಿರಿಯ ಐಎಎಸ್ ಅಧಿಕಾರಿಯೊಬ್ಬರು ಹೇಳಿದರು.

‘ಸಾರಿ ಪ್ರಕರಣಗಳನ್ನೂ ಕೋವಿಡ್ ಎಂದು ಪರಿಗಣಿಸಿ, ಅವುಗಳಿಗೆ ಸಂಖ್ಯೆ ನೀಡಬೇಕು ಎಂದರೆ ಸಾಕಷ್ಟು ಕೆಲಸ ಹಿಡಿಯುತ್ತದೆ, ಸಿಬ್ಬಂದಿಯೂ ಬೇಕಾಗುತ್ತಾರೆ. ಇವುಗಳ ನಿರ್ವಹಣೆಯ ಸವಾಲು ಎದುರಾಗುತ್ತದೆ’ ಎಂದೂ ಅವರು ಹೇಳಿದರು.

‘ಸಾರಿ ರೋಗಿಗಳಿಗೂ ಹಾಸಿಗೆ ಮೀಸಲು’

‘ಸಾರಿ ರೋಗಿಗಳಿಗೂ ಆಸ್ಪತ್ರೆಗಳಲ್ಲಿ ವಾರ್ಡ್‌ಗಳನ್ನು ಮೀಸಲಿರಿಸಲಾಗಿದೆ. ನಗರದ ರಾಜೀವ್ ಗಾಂಧಿ ಆಸ್ಪತ್ರೆ ಮತ್ತು ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. 108 ಕರೆ ಮಾಡಿ, ತೀವ್ರ ಉಸಿರಾಟದ ಸಮಸ್ಯೆ ಇದೆ ಎಂದು ಹೇಳಿದರೆ ಈ ಆಸ್ಪತ್ರೆಗಳಲ್ಲಿ ದಾಖಲು ಮಾಡಿಕೊಳ್ಳಲಾಗುತ್ತದೆ. ಸಾರಿ ರೋಗಿಗಳಿಗೆ ಚಿಕಿತ್ಸೆ ನೀಡುವ ಆಸ್ಪತ್ರೆಗಳ ಸಂಖ್ಯೆಯನ್ನೂ ಹೆಚ್ಚಿಸಲಾಗುವುದು’ ಎಂದು ಆರೋಗ್ಯ ಇಲಾಖೆ ಆಯುಕ್ತ ಡಾ. ಕೆ.ವಿ. ತ್ರಿಲೋಕಚಂದ್ರ ‘ಪ್ರಜಾವಾಣಿ’ಗೆ ತಿಳಿಸಿದರು.

ರಾಜ್ ಜನ್ಮದಿನ: ಸರಳ ಆಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಟ ಸಾರ್ವಭೌಮ, ವರನಟ ಡಾ.ರಾಜ್‌ಕುಮಾರ್ ಅವರ ಜನ್ಮದಿನದ ಸಂದರ್ಭದಲ್ಲಿ ತಮ್ಮನ್ನು ದೇವರು ಎಂದು ಕರೆದ ‘ಅಣ್ಣಾವ್ರ’ನ್ನು ಸಾವಿರಾರು ಜನ ಸಾಮಾಜಿಕ ಜಾಲತಾಣಗಳ ಮುಖಾಂತರ ನೆನಪಿಸಿಕೊಂಡಿದ್ದಾರೆ.

ಎರಡನೇ ಮಗ, ನಟ ರಾಘವೇಂದ್ರ ರಾಜ್‌ಕುಮಾರ್ ಅವರು ಶನಿವಾರ ಬೆಳಗ್ಗೆ ಕಂಠೀರವ ಸ್ಟುಡಿಯೊದಲ್ಲಿ ಇರುವ ರಾಜ್‌ಕುಮಾರ್ ಪುಣ್ಯಭೂಮಿಗೆ ಪೂಜೆ ಸಲ್ಲಿಸಿದರು. ರಾಜ್ಯದಾದ್ಯಂತ ವಾರಾಂತ್ಯದ ಕರ್ಫ್ಯೂ ಜಾರಿಯಲ್ಲಿದ್ದ ಕಾರಣದಿಂದಾಗಿ ಅಭಿಮಾನಿಗಳೆಲ್ಲರೂ ಸರಳವಾಗಿಯೇ ವರನಟನ ಜನ್ಮದಿನವನ್ನು ಆಚರಿಸಿದರು.

ಕೊನೆಯ ಮಗ, ನಟ ಪುನೀತ್ ರಾಜ್‌ಕುಮಾರ್, ‘ಅಪ್ಪಾಜಿ ಅವರ 92ನೇ ಜನ್ಮದಿನದ ಪ್ರಯುಕ್ತ ನಮ್ಮ ಒಂದು ಪುಟ್ಟ ಕಾಣಿಕೆ’ ಎನ್ನುತ್ತಾ ‘ನಿನ್ನ ಕಂಗಳ ಬಿಸಿಯ ಹನಿಗಳು ನೂರು ಕಥೆಯ ಹೇಳಿವೆ, ನಿನ್ನ ಪ್ರೇಮದ ನುಡಿಯ ಕೇಳಿ ನೂರು ನೆನಪು ಮೂಡಿದೆ. ತಂದೆಯಾಗಿ ತಾಯಿಯಾಗಿ ಮಮತೆಯಿಂದ ಬೆಳೆಸಿದೆ. ಬಿಸಿಲು ಮಳೆಗೆ ನರಳದಂತೆ ನಿನ್ನ ನೆರಳಲಿ ಸಲಹಿದೆ. ಆ ಪ್ರೀತಿಯ ಮನ ಮರೆವುದೇ’ ಎಂದು ಭಾವುಕವಾಗಿ ಹಾಡಿ ಅಪ್ಪಾಜಿಯನ್ನು ನೆನಪಿಸಿಕೊಂಡಿದ್ದಾರೆ. ಇದನ್ನು ಪಿಆರ್‌ಕೆ ಆಡಿಯೊ ಹೊರತಂದಿದೆ. 1976ರಲ್ಲಿ ತೆರೆಕಂಡ ‘ಬಡವರ ಬಂಧು’ ಚಿತ್ರದಲ್ಲಿ ಸ್ವತಃ ರಾಜ್‌ಕುಮಾರ್ ಈ ಹಾಡನ್ನು ಹಾಡಿದ್ದರು. ಇನ್‌ಸ್ಟಾಗ್ರಾಂನಲ್ಲಿ ಮೂರು ಲಕ್ಷಕ್ಕೂ ಅಧಿಕ ಜನರು ಈ ಹಾಡಿನ ವಿಡಿಯೊ ವೀಕ್ಷಿಸಿದ್ದಾರೆ.

ಇನ್ನು ‘ಜೀವ ಹೂವಾಗಿದೆ, ಭಾವ ಜೇನಾಗಿದೆ, ಬಾಳು ಹಾಡಾಗಿದೆ’ ಎಂದು ಹಾಡಿರುವ ಖ್ಯಾತ ಕ್ರಿಕೆಟಿಗ ವೆಂಕಟೇಶ್ ಪ್ರಸಾದ್, ‘ಕನ್ನಡಿಗರ ಆರಾಧ್ಯ ದೈವ, ನಟಸಾರ್ವಭೌಮ, ನಮ್ಮೆಲ್ಲರ ಭಾರತ ರತ್ನ, ಡಾ. ರಾಜ್ ಕುಮಾರ್ ಅವರಿಗೆ ಜನ್ಮ ಜಯಂತಿಯ ಶುಭಾಶಯಗಳು’ ಎಂದು ಟ್ವೀಟ್ ಮಾಡಿದ್ದಾರೆ.

ನಿಜವಾದ ಬಂಗಾರದ ಮನುಷ್ಯ: ಖ್ಯಾತ ತೆಲುಗು ನಟ ಚಿರಂಜೀವಿ, ‘ಸರಳತೆ ಎನ್ನುವುದು ಶ್ರೇಷ್ಠ. ತಮ್ಮ ನುಡಿ ಮತ್ತು ನಡೆಯಿಂದ ಅಣ್ಣಾವ್ರ ನನಗೆ ಕಲಿಸಿದ ಮಹತ್ವದ ಪಾಠ ಇದು. ನನ್ನ ಜೀವನದ ಮೇಲೆ ಅವರ ಪ್ರಭಾವ ಹೆಚ್ಚಿದೆ. ಅವರನ್ನು ಜನ್ಮದಿನದ ಸಂದರ್ಭದಲ್ಲಿ ನಾನು ನೆನಪಿಸಿಕೊಳ್ಳುತ್ತೇನೆ. ಅವರು ನಿಜವಾದ ‘ಬಂಗಾರದ ಮನುಷ್ಯ’ ಎಂದು ಟ್ವೀಟ್ ಮಾಡಿದ್ದಾರೆ.

‘ನೀವು ಬದುಕುವುದನ್ನು ಕಲಿಸಿದ ಸಾಕಾರಮೂರ್ತಿ. ಸರಳತೆ, ಸಂಸ್ಕಾರಗಳ ಸಂಗಮ. ಒಬ್ಬ ನಟನಾಗಿ, ಮನುಷ್ಯನಾಗಿ ಹೇಗಿರಬೇಕೆಂದು ದಿಕ್ಸೂಚಿಯಾದ ದಾರಿದೀಪ. 92 ನೇ ಹುಟ್ಟುಹಬ್ಬದ ಸವಿನೆನಪು’ ಎಂದು ನಟ ಗಣೇಶ್ ಟ್ವೀಟ್ ಮಾಡಿದ್ದಾರೆ. ‘ಅಭಿಮಾನಿಗಳಲ್ಲಿ ದೇವರನ್ನು ಕಂಡ ಮೇರು ಕಲಾವಿದ, ಡಾ. ರಾಜ್ ಕುಮಾರ್ ಅವರಿಗೆ ಜನ್ಮದಿನದಂದು ಹೃತ್ಪೂರ್ವಕ ನಮನಗಳು’ ಎಂದು ನಟ ರಕ್ಷಿತ್ ಶೆಟ್ಟಿ ಹೇಳಿದ್ದಾರೆ.

‘ಭಾಷೆಯನ್ನ ತಾಯಿಯಂತೆ, ಗುರು ಹಿರಿಯರನ್ನ ತಂದೆಯಂತೆ, ಅಭಿಮಾನವನ್ನ ದೇವರಂತೆ, ಚಿತ್ರರಂಗವನ್ನ ಕುಟುಂಬದಂತೆ ಕಂಡಂತ ಕಲಾ ತಪಸ್ವಿ. ನಿಮ್ಮ ಜನ್ಮದಿನ ಈ ನಾಡು-ನುಡಿಗೆ ಮರು ಜೀವ ಕೊಡುತ್ತದೆ. ಮತ್ತೆ ಹುಟ್ಟಿ ಬನ್ನಿ ಈ ಮಣ್ಣ ಮೆಟ್ಟಿ ಬನ್ನಿ’ ಎಂದು ನಿರ್ದೇಶಕ ಸಂತೋಷ್ ಆನಂದರಾಮ್ ಟ್ವೀಟ್ ಮಾಡಿದ್ದಾರೆ.

ಪಂಚಾಯತ್ ರಾಜ್: ರಾಜ್ಯಕ್ಕೆ ಹಲವು ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಂಚಾಯತ್ ರಾಜ್ ಸಂಸ್ಥೆಗಳ ಕಾರ್ಯನಿರ್ವಹಣೆಯನ್ನು ಉತ್ತಮಪಡಿಸಲು ಹಾಗೂ ಒಳ್ಳೆಯ ಕೆಲಸ ಮಾಡಿದವರನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರ ನೀಡುವ ನಾಲ್ಕು ಪ್ರಶಸ್ತಿಗಳನ್ನು ರಾಜ್ಯದ ಹಲವು ಗ್ರಾಮೀಣ ಸಂಸ್ಥೆಗಳು ಪಡೆದುಕೊಂಡಿವೆ.

ಪಂಚಾಯತ್ ರಾಜ್ ದಿವಸ್ ಆಚರಣೆ ಅಂಗವಾಗಿ ಶನಿವಾರ ವರ್ಚುವಲ್ ರೂಪದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಈ ಪ್ರಶಸ್ತಿಯನ್ನು ಘೋಷಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ವರ್ಚುವಲ್ ರೂಪದಲ್ಲಿ ಭಾಗವಹಿಸಿದ್ದರು.

ದೀನ ದಯಾಳ್ ಉಪಾಧ್ಯಾಯ ಪಂಚಾಯತ್ ಸಶಕ್ತೀಕರಣ ಪುರಸ್ಕಾರಕ್ಕೆ ನಡೆದ ಆಯ್ಕೆ ಪ್ರಕ್ರಿಯೆಯಲ್ಲಿ 466 ಪಂಚಾಯಿತಿ , 42 ತಾಲ್ಲೂಕು ಪಂಚಾಯತ್ ಹಾಗೂ 17 ಜಿಲ್ಲಾ ಪಂಚಾಯಿತಿಗಳು ಭಾಗವಹಿಸಿದ್ದವು. ನಾನಾಜಿ ದೇಶಮುಖ್ ರಾಷ್ಟ್ರೀಯ ಗೌರವ್ ಗ್ರಾಮಸಭಾ ಪುರಸ್ಕಾರಕ್ಕೆ 188 ಹಾಗೂ ನಮ್ಮ ಗ್ರಾಮ ನಮ್ಮ ಯೋಜನೆ ಪುರಸ್ಕಾರಕ್ಕೆ 378 ಗ್ರಾಮ ಪಂಚಾಯಿತಿಗಳು ಭಾಗವಹಿಸಿದ್ದವು. ಇವುಗಳಲ್ಲಿ ಪರಿಶೀಲಿಸಿ ಕೇಂದ್ರಕ್ಕೆ ಶಿಫಾರಸು ಮಾಡಲಾಗಿತ್ತು. ಕೇಂದ್ರದ ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ ಪ್ರಶಸ್ತಿಗೆ ಆಯ್ಕೆ ಮಾಡಿದೆ ಎಂದು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದ್ದಾರೆ.

ದೀನ ದಯಾಳ್ ಪುರಸ್ಕಾರ: ಹಾಸನ ಜಿಲ್ಲಾ ಪಂಚಾಯಿತಿ, ಬೆಂಗಳೂರು ಪೂರ್ವ ತಾಲ್ಲೂಕು ಪಂಚಾಯಿತಿ, ಪಾಂಡವಪುರ ತಾಲ್ಲೂಕು ಪಂಚಾಯಿತಿ, ತುಮ್ಮಿನ ಕಟ್ಟೆ, ಯಡಗನಹಳ್ಳಿ ಹಾಗೂ ಕರ್ಣಕುಪ್ಪೆ ಗ್ರಾಮ ಪಂಚಾಯಿತಿ.
ನಾನಾಜಿ ದೇಶಮುಖ್ ಪ್ರಶಸ್ತಿ: ಹೆಮ್ಮನಹಳ್ಳಿ ಗ್ರಾಮ ಪಂಚಾಯಿತಿ
ನಮ್ಮ ಗ್ರಾಮ ನಮ್ಮ ಯೋಜನೆ: ರಾಜಾನುಕುಂಟೆ ಗ್ರಾಮ ಪಂಚಾಯಿತಿ
ಮಕ್ಕಳ ಸ್ನೇಹಿ ಪುರಸ್ಕಾರ: ಮುನುಗನಹಳ್ಳಿ ಗ್ರಾಮಪಂಚಾಯಿತಿ

ರಾಜ್ಯದಲ್ಲೂ ಉಚಿತ ಲಸಿಕೆ ?

ಒಂದನೇ ಪುಟದಿಂದ...

ರಾಜ್ಯದಲ್ಲಿ ಉಚಿತವಾಗಿ ಲಸಿಕೆ ವಿತರಿಸಲು ಕನಿಷ್ಠ ₹ 2 ಸಾವಿರ ಕೋಟಿ ಅಗತ್ಯವಿದೆ. ಈ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಲಿದೆ ಎಂದೂ ಮೂಲಗಳು ತಿಳಿಸಿವೆ.

ಜಾರ್ಖಂಡ್, ಗೋವಾ, ಉತ್ತರಪ್ರದೇಶ ಸೇರಿ ವಿವಿಧ ರಾಜ್ಯ ಸರ್ಕಾರಗಳು ಉಚಿತವಾಗಿ ಲಸಿಕೆ ನೀಡುವಘೋಷಣೆ ಮಾಡಿವೆ. ಆ ಬೆನ್ನಲ್ಲೇ, ರಾಜ್ಯದಲ್ಲೂ ಉಚಿತವಾಗಿ ಲಸಿಕೆ ನೀಡುವಂತೆ ಸರ್ಕಾರದ ಮೇಲೆ ಒತ್ತಡ ಹೆಚ್ಚಿದೆ.

ಈ ಮಧ್ಯೆ, ಸರ್ಕಾರದ ಮುಖ್ಯ ಕಾರ್ಯದರ್ಶಿ ಪಿ.ರವಿಕುಮಾರ್, ‘ಸೋಮವಾರದಿಂದಲೂ ಕರ್ಫ್ಯೂ ಕ್ರಮ ಮುಂದುವರಿಸಿದರೆ ಉತ್ತಮ ಎಂಬ ಅಭಿಪ್ರಾಯ ಸರ್ಕಾರಕ್ಕಿದೆ. ಜನ ಬೇಡ ಎನ್ನುತ್ತಿದ್ದಾರೆ. ಸರ್ಕಾರವೇ ಎಲ್ಲ ಮಾಡಲಾಗದು. ಎಲ್ಲರೂ ಜವಾಬ್ದಾರಿಯುತವಾಗಿರಬೇಕು. ಈಗಿನ ರಾತ್ರಿ ಕರ್ಫ್ಯೂ, ವಾರಾಂತ್ಯ ಕರ್ಫ್ಯೂ ಕಟ್ಟುನಿಟ್ಟಾಗಿ ಜಾರಿಯಾಗಬೇಕು’ ಎಂದರು.

ಇತರೆ ಏಳು ಮಂದಿಗೆ ಗಾಯ: ವಿವಿಧೆಡೆ ಧಾರಾಕಾರ ಮಳೆ

ಸಿಡಿಲು ಹೊಡೆತಕ್ಕೆ ಮೂರು ಜನ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತ್ಯೇಕ ಘಟನೆಗಳಲ್ಲಿ ರಾಜ್ಯದಲ್ಲಿ ಸಿಡಿಲು ಬಡಿದು ಮೂವರು ಮೃತಪಟ್ಟಿದ್ದರೆ, ಇತರ ಏಳು ಮಂದಿ ಗಾಯಗೊಂಡಿದ್ದಾರೆ. ವಿಜಯನಗರ, ಶಿವಮೊಗ್ಗ,ಚಿತ್ರದುರ್ಗ ಸೇರಿದಂತೆ ವಿವಿಧ ಜಿಲ್ಲೆಗಳಲ್ಲಿ ಮಳೆಯಾಗಿದೆ.

ಗದಗ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಕಡಕೋಳ ಗ್ರಾಮದಲ್ಲಿ ಸಿಡಿಲು ಹೊಡೆತಕ್ಕೆ ಇಬ್ಬರು ಸ್ಥಳದಲ್ಲಿ, ಮತ್ತೊಬ್ಬರು ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯದಲ್ಲಿ ಮೃತಪಟ್ಟಿದ್ದಾರೆ. ಮಾರುತಿ ಗೋಶಲಣವರ (48), ಶರಣಪ್ಪ ಅಡವಿ (35) ಮತ್ತು ಕುಮಾರ ಮಾದರ (25)ಮೃತಪಟ್ಟವರು.

ಪರಶುರಾಮ (22), ಪ್ರವೀಣ (30), ಲಕ್ಷ್ಮಣ (30), ದುರಗಪ್ಪ (35) ಗಾಯಗೊಂಡಿದ್ದು, ಗದಗ ಜಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಡಂಬಳ ಹೋಬಳಿಯ ಡೋಣಿ ಗ್ರಾಮದ ಮಹಾಂತೇಶ ಹಣಜಿ ಅವರ ಮನೆಯ ಮುಂದಿನ ತೆಂಗಿನ ಮರಕ್ಕೆ ಸಿಡಿಲು ಬಡಿದು ಹೊತ್ತಿ ಉರಿಯಿತು. ಜಿಲ್ಲೆಯ ವಿವಿಧೆಡೆ ಸಿಡಿಲು, ಗುಡುಗ ಸಮೇತ ಉತ್ತಮ ಮಳೆಯಾಗಿದೆ.

ದಾವಣಗೆರೆಯಲ್ಲಿ ಬಿಕೋ ಎನ್ನುತ್ತಿದ್ದ ಪಿ.ಬಿ. ರಸ್ತೆಯಲ್ಲಿ ಶನಿವಾರ ತುಂತುರು ಮಳೆಯ ನಡುವೆಯೇ ಪೊಲೀಸ್ ಕಾನ್‌ಸ್ಟೆಬಲ್ ಬೈಕ್‌ನಲ್ಲಿ ಕರ್ತವ್ಯಕ್ಕೆ ತೆರಳಿದರು
–ಪ್ರಜಾವಾಣಿ ಚಿತ್ರ

ಮತ್ತೊಂದು ಪ್ರಕರಣದಲ್ಲಿ ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕಿನ ಹೇರೂರು ಗ್ರಾಮ ಪಂಚಾಯಿತಿ ಹಾಡುಗಾರ ಹೊಳೆಮಕ್ಕಿಯಲ್ಲಿ ಸಿಡಿಲು ಬಡಿದು ಮೂವರು ಮಹಿಳೆಯರು ಗಾಯಗೊಂಡಿದ್ದಾರೆ. ಇಬ್ಬರನ್ನು ಜಯಪುರ ಸರ್ಕಾರಿ ಆಸ್ಪತ್ರೆಗೆ ಹಾಗೂ ಒಬ್ಬ ಮಹಿಳೆಯನ್ನು ಶಿವಮೊಗ್ಗದ ಆಸ್ಪತ್ರೆಗೆ ದಾಖಲಿಸಲಾಗಿದೆ.

ಜಿಲ್ಲೆಯ ಬಾಳೆಹೊನ್ನೂರು, ಕಳಸ, ಕೊಪ್ಪದಲ್ಲಿ ಮಳೆಯಾಗಿದೆ. ಬಾಳೆಹೊನ್ನೂರಿನಲ್ಲಿ ಆಲಿಕಲ್ಲು ಸಹಿತ ಧಾರಾಕಾರ ಮಳೆ ಸುರಿದಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಹ್ಮಣ್ಯ ಸುತ್ತ ಗುಡುಗು, ಸಿಡಿಲಿನೊಂದಿಗೆ ಮಳೆಯಾಗಿದೆ.

ಸಿಡಿಲಿಗೆ ಎಮ್ಮೆ ಬಲಿ: ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನಲ್ಲಿ ಶನಿವಾರ ಸಂಜೆ ಬಿರುಗಾಳಿ ಸಹಿತ ಸುರಿದ ಮಳೆಯಿಂದ 10ಕ್ಕೂ ಹೆಚ್ಚು ಮನೆಗಳ ತಗಡಿನ ಚಾವಣಿಗಳು ಹಾರಿ ಹೋಗಿವೆ. ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿವೆ. ಇಬ್ಬರು ಮಹಿಳೆಯರು ಗಾಯಗೊಂಡಿದ್ದಾರೆ.

ತೊಗರಿಕಟ್ಟೆ ಗ್ರಾಮ ಪಂಚಾಯಿತಿ ಸದಸ್ಯೆ ರುಕ್ಮಿಣಮ್ಮ ಅವರ ಮನೆಯ ಚಾವಣಿ ಹಾರಿದ್ದು ಅದರ ಮೇಲಿದ್ದ ಕಲ್ಲು ಬೆನ್ನಿಗೆ ಬಿದ್ದು ರುಕ್ಮಿಣಮ್ಮ ಗಾಯಗೊಂಡರು. ಬಂಡ್ರಿ ಗ್ರಾಮದಲ್ಲಿ ಮನೆ ಗೋಡೆಗಳು ಕುಸಿದೆ. ಕಲ್ಲು ಬಿದ್ದು ಕುಂಬಾರ ಗಂಗಮ್ಮ ಅವರ ತಲೆಗೆ ಪೆಟ್ಟು ಬಿದ್ದಿದೆ.

ಅರಸೀಕೆರೆ ಹೋಬಳಿಯ ಹಿರೇಮೆಗಳಗೆರೆ ವ್ಯಾಪ್ತಿಯಲ್ಲಿ ಶನಿವಾರ ಬಿರುಗಾಳಿ ಸಹಿತ ಸಾಧಾರಣ ಮಳೆಯಾಗಿದ್ದು, ಸಿಡಿಲಿಗೆ ಎಮ್ಮೆ ಬಲಿಯಾಗಿದೆ.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ, ಸಾಗರ ತಾಲ್ಲೂಕಿನಲ್ಲಿ ಗುಡುಗು ಸಹಿತ ಮಳೆಯಾಗಿದ್ದು, ಕೋಣಂದೂರಿನಲ್ಲಿ ಸಾಧಾರಣ ಮಳೆಯಾಗಿದೆ.

ಚಿತ್ರದುರ್ಗ ಜಿಲ್ಲೆಯ ಹಿರಿಯೂರು ತಾಲ್ಲೂಕಿನ ಭರಮಗಿರಿಯಲ್ಲಿ ಶುಕ್ರವಾರ ರಾತ್ರಿ ಅಪ್ಪಳಿಸಿದ ಸಿಡಿಲಿಗೆ ಹೋರಿ ಮತ್ತು ಹಸು ಮೃತಪಟ್ಟಿದೆ. ಚಳ್ಳಕೆರೆ ತಾಲ್ಲೂಕಿನ ಹೊಟ್ಟೆಪ್ಪನಕಪಿಲೆ ಗ್ರಾಮದಲ್ಲಿ ಶುಕ್ರವಾರ ರಾತ್ರಿ ಸಿಡಿಲು ಬಡಿದು ಒಂದು ಎತ್ತು ಸಾವನ್ನಪ್ಪಿದೆ. ಉತ್ತರ ಕನ್ನಡದ ಸಿದ್ದಾಪುರದಲ್ಲಿಯೂ ಉತ್ತಮ ಮಳೆಯಾಗಿದೆ.

‘ವಾರಾಂತ್ಯ ಕರ್ಫ್ಯೂ’ ಯಶಸ್ವಿ

ಪ್ರಜಾವಾಣಿ ವಾರ್ತೆ

ಮೈಸೂರಿನಲ್ಲಿ ಶನಿವಾರ ವಾರಾಂತ್ಯ ಕರ್ಫ್ಯೂ ಅವಧಿಯಲ್ಲಿ ಕೆ.ಆರ್.ವೃತ್ತ ಭಣಗುಡುತ್ತಿತ್ತು

ಬೆಂಗಳೂರು: ಕೋವಿಡ್ ಎರಡನೇ ಅಲೆ ನಿಯಂತ್ರಿಸಲು ಸರ್ಕಾರ ಜಾರಿಗೊಳಿಸಿರುವ ‘ವಾರಾಂತ್ಯ ಕರ್ಫ್ಯೂ’ಗೆ ಜನರಿಂದ ಶನಿವಾರ ಉತ್ತಮ ಸ್ಪಂದನೆ ವ್ಯಕ್ತವಾಗಿದೆ.

ಕರ್ಫ್ಯೂ ಅವಧಿಯಲ್ಲಿ ರಾಜ್ಯದಾದ್ಯಂತ ಪ್ರಮುಖ ವೃತ್ತಗಳು, ರಸ್ತೆಗಳು, ಮಾರುಕಟ್ಟೆಗಳು ಬಿಕೋ ಎನ್ನುತ್ತಿದ್ದವು. ವ್ಯಾಪಾರ– ವಹಿವಾಟು ಸಂಪೂರ್ಣ ಸ್ಥಗಿತಗೊಂಡಿತ್ತು.

ಬೆಳಿಗ್ಗೆ 6 ಗಂಟೆಯಿಂದ 10ರವರೆಗೂ ಅಗತ್ಯ ವಸ್ತುಗಳ ಖರೀದಿಗೆ ಅವಕಾಶ ನೀಡಲಾಗಿತ್ತು. ಈ ಅವಧಿಯಲ್ಲಿ ಮನೆಯಿಂದ ಹೊರಬಂದವರು, ನಿಗದಿತ ಸಮಯ ಸಮೀಪಿಸುತ್ತಿದ್ದಂತೆ ಮನೆ ಸೇರಿಕೊಂಡಿದ್ದಾರೆ. ತೆರೆದಿದ್ದ ಮಾರುಕಟ್ಟೆಗಳನ್ನು ಪೊಲೀಸರು ಮುಚ್ಚಿಸಿದರು.

ಬೆಂಗಳೂರು, ಮೈಸೂರು, ತುಮಕೂರು, ಶಿವಮೊಗ್ಗ, ದಾವಣಗೆರೆ, ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರ, ಮಂಗಳೂರು, ಉಡುಪಿ, ಉತ್ತರ ಕನ್ನಡ, ಬೆಳಗಾವಿ, ಧಾರವಾಡ, ಹಾವೇರಿ, ಬಳ್ಳಾರಿ, ಕಲಬುರ್ಗಿ, ಬೀದರ್, ಹಾಸನ, ಚಿಕ್ಕಮಗಳೂರು, ಸೇರಿದಂತೆ ಬಹುತೇಕ ಕಡೆ ಜನರ ಓಡಾಟ ತೀರಾ ವಿರಳವಾಗಿತ್ತು. ಕೆಎಸ್‌ಆರ್‌ಟಿಸಿ ಬಸ್‌ಗಳು ಓಡಾಡಿದರೂ ಪ್ರಯಾಣಿಕರೇ ಇರಲಿಲ್ಲ. ಕೆಲವು ಕಡೆಗಳಲ್ಲಿ ಮಾರುಕಟ್ಟೆಗಳಿಂದ ಗ್ರಾಹಕರನ್ನು ಹೊರಗೆ ಕಳುಹಿಸಿ, ಪ್ರವೇಶಿಸುವ ಮಾರ್ಗಕ್ಕೆ ಪೊಲೀಸರು ಬ್ಯಾರಿಕೇಡ್ ಅಳವಡಿಸಿದರು.

ಬೆಂಗಳೂರು ನಗರದಲ್ಲಿ ಅಘೋಷಿತ ಲಾಕ್ ಡೌನ್ ಸ್ಥಿತಿ ನಿರ್ಮಾಣವಾಗಿತ್ತು. ಅನಗತ್ಯವಾಗಿ ರಸ್ತೆಗಿಳಿದರೆ ಲಾಠಿ ಚಾರ್ಜ್ ಮಾಡುವ ಎಚ್ಚರಿಕೆಯನ್ನು ಪೊಲೀಸರು ನೀಡಿದ್ದರು. ಅನಗತ್ಯವಾಗಿ ಓಡಾಡುವವರ ವಾಹನಗಳನ್ನು ತಡೆದು ಪೊಲೀಸರು ವಶಕ್ಕೆ ಪಡೆದರು. ಕೆಲವೆಡೆ ಅನಗತ್ಯವಾಗಿ ಓಡಾಡುತ್ತಿದ್ದವರಿಗೆ ಲಾಠಿ ರುಚಿ ತೋರಿಸಿ, ಖಡಕ್ ಎಚ್ಚರಿಕೆ ನೀಡಿದರು.

‘ವಾರಾಂತ್ಯದ ಕರ್ಫ್ಯೂ’ ಪರಿಸ್ಥಿತಿ ಅರಿಯಲು ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು ಬೆಂಗಳೂರು ನಗರ ಪ್ರದಕ್ಷಿಣೆ ಮಾಡಿದರು. ಮಹಿಳೆಯೊಬ್ಬರು ಮಾಸ್ಕ್ ಧರಿಸದೆ ಇರುವುದನ್ನು ಗಮನಿಸಿದ ಸಚಿವರು, ಆ ಮಹಿಳೆಗೆ ಮಾಸ್ಕ್ ನೀಡಿ, ಹಾಕಿಕೊಳ್ಳುವಂತೆ ಸಲಹೆ ನೀಡಿದರು.

ಸುದ್ದಿಗಾರರ ಜೊತೆ ಮಾತನಾಡಿದ ಬೊಮ್ಮಾಯಿ, ‘ರಾಜ್ಯದ ಜನರು ಮತ್ತು ವ್ಯಾಪಾರಸ್ಥರು ವಾರಾಂತ್ಯದ ಕರ್ಫ್ಯೂಗೆ ಸಹಕರಿಸಿದ್ದಾರೆ. ಭಾನುವಾರ ಕೂಡಾ ಇದೇ ರೀತಿಯ ಸಹಕಾರವನ್ನು ನಿರೀಕ್ಷಿಸುತ್ತೇನೆ’ ಎಂದರು.



ಸೋಮವಾರ ನಡೆಯಲಿರುವ ಸಚಿವ ಸಂಪುಟ ಸಭೆಯಲ್ಲಿ ಕೋವಿಡ್ ನಿಯಂತ್ರಿಸಲು ತೆಗೆದುಕೊಂಡ ಕ್ರಮಗಳು ಮತ್ತು ಲಸಿಕೆ ನೀತಿ ಬಗ್ಗೆ ಚರ್ಚೆ ನಡೆಯಲಿದೆ

ಬಸವರಾಜ ಬೊಮ್ಮಾಯಿ, ಗೃಹ ಸಚಿವ

ಅತ್ಯಂತ ಅಪರೂಪದ, ಮೇಣದಂಥ ವಸ್ತು: ಅರಣ್ಯ ಇಲಾಖೆಗೆ ಹಸ್ತಾಂತರ

ಕಡಲತೀರದಲ್ಲಿ ‘ತಿಮಿಂಗಿಲದ ವಾಂತಿ’ ಪತ್ತೆ!

• ಸದಾಶಿವ ಎಂ.ಎಸ್

ಭಟ್ಕಳ ತಾಲ್ಲೂಕಿನ ಮುರ್ಡೇಶ್ವರ ಕಡಲತೀರದಲ್ಲಿ ಪತ್ತೆಯಾದ ಅಂಬೆರ್ಗ್ರಿಸ್

ಕಾರವಾರ: ಅತ್ಯಂತ ವಿರಳವಾಗಿ ಸಿಗುವ ‘ತಿಮಿಂಗಿಲದ ವಾಂತಿ’ಯ (ಅಂಬೆರ್ಗ್ರಿಸ್) ಸುಮಾರು ಒಂದು ಕೆ.ಜಿ ತೂಕದ ತುಣುಕು ಭಟ್ಕಳ ತಾಲ್ಲೂಕಿನ ಮುರ್ಡೇಶ್ವರ ಕಡಲತೀರದಲ್ಲಿ ಪತ್ತೆಯಾಗಿದೆ. ಅದನ್ನು ಮೀನುಗಾರರು ಅರಣ್ಯ ಇಲಾಖೆಗೆ ಹಸ್ತಾಂತರಿಸಿದ್ದಾರೆ.

ಪುನುಗು ಬೆಕ್ಕಿನ ಮಲದ ರೀತಿಯಲ್ಲೇ ತಿಮಿಂಗಿಲದ ವಾಂತಿಯೂ ಸುಗಂಧ ಬೀರುತ್ತದೆ. ಇದಕ್ಕೆ ಪಾಶ್ಚಿಮಾತ್ಯ ದೇಶಗಳಲ್ಲಿ ಹೆಚ್ಚಿನ ಬೇಡಿಕೆಯಿದೆ. ತಿಮಿಂಗಿಲಗಳನ್ನು ಅರಣ್ಯ ಕಾಯ್ದೆಯಡಿ ಸಂರಕ್ಷಿಸಲಾಗುತ್ತಿದೆ. ಅವುಗಳ ಯಾವುದೇ ಉತ್ಪನ್ನಗಳು, ಭಾಗಗಳ ಬಳಕೆ ನಿಷೇಧಿಸಲಾಗಿದೆ. ಅಂಬೆರ್ಗ್ರಿಸ್ ಮಾರಾಟ, ಬಳಕೆ ಶಿಕ್ಷಾರ್ಹ ಅಪರಾಧವಾಗಿದೆ.

ಉತ್ಪತ್ತಿ ಹೇಗೆ?: ತಿಮಿಂಗಿಲಗಳ ಜೀರ್ಣಾಂಗದಲ್ಲಿ ಈ ಉತ್ಪನ್ನ ರಚನೆಯಾಗುವ ಬಗ್ಗೆ ಕಾರವಾರದ ಕಡಲಜೀವ ವಿಜ್ಞಾನ ಅಧ್ಯಯನ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ.ಶಿವಕುಮಾರ ಹರಗಿ ‘ಪ್ರಜಾವಾಣಿ’ಗೆ ಮಾಹಿತಿ ನೀಡಿದರು.

‘ಸ್ಪೆರ್ಮ್ ವೇಲ್ ಪ್ರಭೇದದ ತಿಮಿಂಗಿಲಗಳಿಂದ ಮಾತ್ರ ಅಂಬೆರ್ಗ್ರಿಸ್ ಹೊರ ಬರುತ್ತದೆ. ಅವು ಮಣಕಿ (ಸ್ಕ್ವಿಡ್), ಕಪ್ಪೆ ಬೊಂಡಾಸ್ (ಕಟಲ್ ಫಿಶ್) ಮೀನುಗಳನ್ನು ಬೇಟೆಯಾಡಿ ತಿನ್ನುತ್ತವೆ. ಕೆಲವೊಮ್ಮೆ ಈ ಮೀನುಗಳ ಗಟ್ಟಿಯಾದ ಎಲುಬು ತಿಮಿಂಗಿಲದಲ್ಲಿ ಸಂಪೂರ್ಣವಾಗಿ ಜೀರ್ಣವಾಗುವುದಿಲ್ಲ. ಅದು ಜೀರ್ಣಾಂಗದಲ್ಲೇ ತಿಂಗಳು, ವರ್ಷಗಟ್ಟಲೆ ಉಳಿಯುತ್ತದೆ. ಇದರಿಂದ ತಿಮಿಂಗಿಲ ಕಿರಿಕಿರಿ ಅನುಭವಿಸುತ್ತದೆ. ಕೊನೆಗೆ ವಾಂತಿ ಮಾಡಿ ಹೊರಹಾಕುತ್ತದೆ. ಕೆಲವೊಮ್ಮೆ ಮಲದಲ್ಲೂ ಸೇರಿರುತ್ತದೆ’ ಎಂದು ವಿವರಿಸಿದರು.

‘ತಿಮಿಂಗಿಲದ ಹೊಟ್ಟೆಯಲ್ಲಿ ತಿಂಗಳುಗಟ್ಟಲೆ ಸಂಗ್ರಹವಾಗಿದ್ದಾಗ ಹಲವು ರಾಸಾಯನಿಕ ಪ್ರಕ್ರಿಯೆಗಳಿಗೆ ಒಳಗಾಗುತ್ತದೆ. ಅದು ಮೇಣದಂಥ ರಚನೆಯಾಗಿ ಪರಿವರ್ತನೆಯಾಗುತ್ತದೆ. ಈ ಹಂತದಲ್ಲಿ ಆ ವಸ್ತು ಸುಗಂಧ ಪಡೆದುಕೊಂಡಿರುತ್ತದೆ. ಪ್ರಖರ ಬಿಸಿಲಿಗೆ ಹಿಡಿದರೂ ಅದು ಕರಗುವ ಸಾಧ್ಯತೆಯಿರುತ್ತದೆ’ ಎಂದು ತಿಳಿಸಿದರು.

ಪ್ರಜಾವಾಣಿ ವಿಶೇಷ

‘ಬಳಕೆ ನಿಷೇಧಿಸಲಾಗಿದೆ’

‘ಅಂಬೆರ್ಗ್ರಿಸ್ ಹಗುರವಾಗಿರುವ ಕಾರಣ ಸಮುದ್ರದಲ್ಲಿ ತೇಲುತ್ತಿರುತ್ತದೆ. ಕಾನೂನಿನ ಪ್ರಕಾರ ಅದನ್ನು ಮಾರಾಟ, ಸಾಗಣೆ ಅಥವಾ ಬಳಕೆ ಮಾಡುವಂತಿಲ್ಲ. ಸಂಶೋಧನೆ ಸಲುವಾಗಿ ಮಾತ್ರ ಉಪಯೋಗಿಸಲು ಅವಕಾಶವಿದೆ. ಈ ನಿಟ್ಟಿನಲ್ಲಿ ಹಿರಿಯ ಅಧಿಕಾರಿಗಳ ಜೊತೆ ಮಾತನಾಡಿ ನಿರ್ಧರಿಸಲಾಗುವುದು’ ಎಂದು ಮುರ್ಡೇಶ್ವರದ ವಲಯ ಅರಣ್ಯ ಸಂರಕ್ಷಣಾಧಿಕಾರಿ ರಾಘವೇಂದ್ರ ತಿಳಿಸಿದ್ದಾರೆ.

ಕಡಲು ಸೇರಿದ 85 ಆಮೆ ಮರಿಗಳು

ಪ್ರಜಾವಾಣಿ ವಾರ್ತೆ

ಹೊನ್ನಾವರ: ಆಲಿವ್ ರಿಡ್ಲಿ ಪ್ರಬೇಧಕ್ಕೆ ಸೇರಿದ ಆಮೆಯ 85 ಮರಿಗಳನ್ನು ಶನಿವಾರ ಹಳದೀಪುರ ಸಮೀಪದ ಸಮುದ್ರ ತೀರದಲ್ಲಿ ಬಿಡಲಾಯಿತು.

ಕಳೆದ ತಿಂಗಳು ಮಾರ್ಚ್ 9ರಂದು ತೀರದಲ್ಲಿದ್ದ 97 ಮೊಟ್ಟೆಗಳನ್ನು ಸ್ಥಳೀಯರ ಸಹಕಾರದಿಂದ ಸಹಾಯಕ ವಲಯ ಅರಣ್ಯಾಧಿಕಾರಿ ತುಕಾರಾಮ ಹಾಗೂ ಇತರ ಸಿಬ್ಬಂದಿ ರಕ್ಷಿಸಿದ್ದರು. 46 ದಿನಗಳ ಕಾಲ ಪ್ರಾಣಿ– ಪಕ್ಷಿ ಹಾಗೂ ಮನುಷ್ಯರಿಂದ ರಕ್ಷಿಸಿದ್ದರು. ಇವುಗಳ ಪೈಕಿ 85 ಮರಿಗಳು ಮೊಟ್ಟೆ ಒಡೆದು, ಹೊರಬಂದವು.

‘ಆಲಿವ್ ರಿಡ್ಲಿ ಪ್ರಬೇಧಕ್ಕೆ ಸೇರಿದ ಪ್ರಸ್ತುತ ಆಮೆ ಅಳಿವಿನಂಚಿನಲ್ಲಿದ್ದು ಹೊನ್ನಾವರ ಉಪ ಅರಣ್ಯ ವಿಭಾಗ ಇವುಗಳನ್ನು ರಕ್ಷಿಸುವ ಕಾರ್ಯವನ್ನು ನಿರಂತರವಾಗಿ ನಡೆಸಿಕೊಂಡು ಬಂದಿದೆ' ಎಂದು ಸ್ಥಳದಲ್ಲಿದ್ದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೆ.ಟಿ.ಬೋರಯ್ಯ ತಿಳಿಸಿದರು.

ಮಹಿಳೆ ಶವದ ಬಳಿ ತೆರಳದ ಗ್ರಾಮಸ್ಥರು

ಪ್ರಜಾವಾಣಿ ವಾರ್ತೆ

ಮಹಿಳೆಯ ಶವ ಅನಾಥವಾಗಿ ಮನೆಯ ಜಗುಲಿ ಮೇಲೆ ಬಿದ್ದಿರುವುದು

ಮಳವಳ್ಳಿ (ಮಂಡ್ಯ): ಅನಾರೋಗ್ಯದಿಂದಾಗಿ ಐದು ದಿನದ ಹಿಂದೆ ಕೋವಿಡ್ ಪರೀಕ್ಷೆಗೆ ಒಳಗಾಗಿದ್ದ 55 ವರ್ಷದ ಮಹಿಳೆ, ವರದಿ ಬರುವ ಮುನ್ನವೇ ಮೃತಪಟ್ಟಿದ್ದು, ಮೃತದೇಹದ ಬಳಿಗೆ ತೆರಳಲೂ ಗ್ರಾಮಸ್ಥರು ಹಿಂಜರಿದ ಘಟನೆ ತಾಲ್ಲೂಕಿನ ಎಂ.ಶೆಟ್ಟಹಳ್ಳಿ ಗ್ರಾಮದಲ್ಲಿ ಶನಿವಾರ ನಡೆದಿದೆ.

ಮಹಿಳೆಯು ಬೆಂಗಳೂರಿನಲ್ಲಿ ಪುತ್ರಿಯ ಮನೆಯಲ್ಲಿದ್ದರು. ಏ.16 ರಂದು ಗ್ರಾಮದ ತಮ್ಮ ಮನೆಗೆ ಬಂದಿದ್ದರು. 17ರಂದು ಕೋವಿಡ್ ಲಸಿಕೆ ಪಡೆದಿದ್ದರು. 18ರಂದು ಜ್ವರ ಕಾಣಿಸಿದ್ದು, ಚಿಕಿತ್ಸೆ ಪಡೆದಿದ್ದರು. 19ರಂದು ಕೋವಿಡ್ ಪರೀಕ್ಷೆಗೆ ಒಳಪಟ್ಟಿದ್ದು, ವರದಿ ಬಂದಿರಲಿಲ್ಲ. ಉಸಿರಾಟದ ಸಮಸ್ಯೆ ಎದುರಾಗಿದ್ದು, ಶನಿವಾರ ಬೆಳಿಗ್ಗೆ ಚಿಕಿತ್ಸೆ ಕೊಡಿಸಲು ಆಂಬುಲೆನ್ಸ್‌ನಲ್ಲಿ ಆಸ್ಪತ್ರೆಗೆ ಕರೆದೊಯ್ಯುವಾಗ ಮೃತಪಟ್ಟಿದ್ದಾರೆ. ಆಂಬುಲೆನ್ಸ್ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ಮಹಿಳೆಯ ಮನೆ ಜಗುಲಿಯ ಮೇಲೆ ಶವ ಇಟ್ಟು ತೆರಳಿದ್ದರು. ಕೊರೊನಾದಿಂದ ಮಹಿಳೆ ಮೃತಪಟ್ಟಿರಬಹುದು ಎಂದು ಭಾವಿಸಿದ ಗ್ರಾಮಸ್ಥರು ಭಯದಿಂದ ಶವದ ಬಳಿ ತೆರಳಲಿಲ್ಲ. ಐದಾರು ಗಂಟೆ ಶವ ಜಗುಲಿಯ ಮೇಲೆಯೇ ಬಿದ್ದಿತ್ತು.

ಗ್ರಾಮ ಪಂಚಾಯಿತಿ ಸದಸ್ಯ ಮನೋಹರ್, ತಾಲ್ಲೂಕು ಆಡಳಿತದ ಅಧಿಕಾರಿಗಳನ್ನು ಸಂಪರ್ಕಿಸಿ ವೈದ್ಯಾಧಿಕಾರಿ ಡಾ.ಶಿವಸ್ವಾಮಿ ಅವರನ್ನು ಸ್ಥಳಕ್ಕೆ ಕರೆಸಿಕೊಂಡರು. ಮಂಡ್ಯದಿಂದ ಬಂದ ತಂಡ ಮಹಿಳೆಯ ಅಂತ್ಯಕ್ರಿಯೆ ನೆರವೇರಿಸಿತು.

ಎಸ್‌ಐಟಿ ತಂಡ ಮತ್ತೆ ಭೇಟಿ

ಪ್ರಜಾವಾಣಿ ವಾರ್ತೆ

ಗೋಕಾಕ (ಬೆಳಗಾವಿ ಜಿಲ್ಲೆ): ಬಿಜೆಪಿ ಶಾಸಕ ರಮೇಶ ಜಾರಕಿಹೊಳಿ ಅವರಿಗೆ ಸಂಬಂಧಿಸಿದ್ದು ಎನ್ನಲಾದ ಸಿ.ಡಿ ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ತಂಡದ ಅಧಿಕಾರಿಗಳು ಇಲ್ಲಿಗೆ ಭೇಟಿ ನೀಡಿ ಮಾಹಿತಿ ಕಲೆ ಹಾಕಿದ್ದಾರೆ.

ಕೋವಿಡ್‌ನಿಂದ ಗುಣಮುಖವಾಗಿದ್ದ ರಮೇಶ ಹೋಂ ಕ್ವಾರಂಟೈನ್‌ನಲ್ಲಿದ್ದಾರೆ. ಅವರಿಗೆ ಚಿಕಿತ್ಸೆ ನೀಡುತ್ತಿರುವ ಸರ್ಕಾರಿ ಆಸ್ಪತ್ರೆಯ ವೈದ್ಯರಿಂದ ಎಸ್‌ಐಟಿ ಅಧಿಕಾರಿಗಳು ಮಾಹಿತಿ ಪಡೆದಿದ್ದಾರೆ. ‘ಎಸ್‌ಐಟಿ ತಂಡದವರು ರಮೇಶ ಅವರ ಆರೋಗ್ಯದ ಬಗ್ಗೆ ವಿಚಾರಿಸಿದರು’ ಎಂದು ಮುಖ್ಯ ವೈದ್ಯಾಧಿಕಾರಿ ಡಾ.ರವೀಂದ್ರ ಅಂಟಿನ ತಿಳಿಸಿದರು.

ರಮೇಶ ಅವರಿಗೆ ಎಸ್‌ಐಟಿಯವರು ಈಚೆಗೆ ಮತ್ತೊಮ್ಮೆ ನೋಟಿಸ್ ನೀಡಿದ್ದರು. ಆದರೆ, ಅವರು ಅನಾರೋಗ್ಯದ ಕಾರಣದಿಂದ ಗೈರು ಹಾಜರಾಗಿದ್ದರು. ಅವರ ಆರೋಗ್ಯ ಪರಿಸ್ಥಿತಿಯ ಬಗ್ಗೆ ತಿಳಿಯಲು ಅಧಿಕಾರಿಗಳು ಬಂದಿದ್ದರು ಎಂದು ಗೊತ್ತಾಗಿದೆ.

ಆಂಜನೇಯನ ಜನ್ಮಸ್ಥಳ: ಮುಖ್ಯ ಅರ್ಚಕ ವಿದ್ಯಾದಾಸ ಬಾಬಾ ಹೇಳಿಕೆ

ವಿವಾದ ಅಂತ್ಯಕ್ಕೆ ಸಂತ ಸಮಾವೇಶ

ಪ್ರಜಾವಾಣಿ ವಾರ್ತೆ

ವಿದ್ಯಾದಾಸ ಬಾಬಾ

ಕೊಪ್ಪಳ: ಗಂಗಾವತಿ ತಾಲ್ಲೂಕಿನ ಆನೆಗೊಂದಿ ಸಮೀಪದ ಅಂಜನಾದ್ರಿ ಆಂಜನೇಯನ ಜನ್ಮಸ್ಥಳದ ಕುರಿತು ಎದ್ದಿರುವ ವಿವಾದದ ಬಗ್ಗೆ ಅಕ್ಟೋಬರ್ ಅಥವಾ ನವೆಂಬರ್‌ನಲ್ಲಿ ಸಂತ ಸಮಾವೇಶ ನಡೆಸಿ ಟಿಟಿಡಿ ವಾದಕ್ಕೆ ತಕ್ಕ ಉತ್ತರ ನೀಡಲಾಗುವುದು ಎಂದು ಅಂಜನಾದ್ರಿ ಆಂಜನೇಯ ದೇವಸ್ಥಾನದ ಮುಖ್ಯ ಅರ್ಚಕ ವಿದ್ಯಾದಾಸ ಬಾಬಾ ಹೇಳಿದರು.

‘ತಿರುಪತಿ ಬಳಿಯ ಅಂಜನಾದ್ರಿಯೇ ಹನುಮಂತನ ಜನ್ಮಸ್ಥಳ ಎಂದು ನಿರೂಪಿಸಲು ಯಾವ ಆಧಾರದ ಮೇಲೆ ಹೊರಟಿದ್ದಾರೆ ಎಂಬುದನ್ನು ಅವರು ದಾಖಲೆ ಸಮೇತ ಸಮರ್ಥಿಸಬೇಕು. ಅದಕ್ಕೆ ಸಮಾವೇಶದಲ್ಲಿ ಅವಕಾಶ ಕಲ್ಪಿಸುತ್ತೇವೆ’ ಎಂದು ತಿಳಿಸಿದರು.

‘ಸಂತ ಸಮಾವೇಶದಲ್ಲಿ 2 ಸಾವಿರಕ್ಕೂ ಹೆಚ್ಚು, ಮಾಧ್ವ, ವೈಷ್ಣವ, ಶ್ರೀವೈಷ್ಣವ, ಶೈವ ಪಂಥದ ವಿವಿಧ ಸ್ವಾಮೀಜಿಗಳು ಭಾಗವಹಿಸಿ ಜನ್ಮಸ್ಥಳ ಕುರಿತು ಮಾತನಾಡುವರು. ಮಹಾಕಾವ್ಯ, ಪುರಾಣ, ಸ್ಥಳ ಪುರಾಣ, ಐತಿಹ್ಯ, ಶಾಸನ, ಹೊತ್ತಿಗೆಗಳ ದಾಖಲೆ ನೀಡುತ್ತೇವೆ. ನಿರ್ಣಯ ಅಂಗೀಕರಿಸಿ ವಿವಾದಕ್ಕೆ ಅಂತ್ಯ ಹಾಡುತ್ತೇವೆ’ ಎಂದು ಹೇಳಿದರು.

‘ಗುಜರಾತ್ ಮುಖ್ಯಮಂತ್ರಿಯಾಗಿದ್ದ ನರೇಂದ್ರ ಮೋದಿ ಅವರನ್ನು 2013ರಲ್ಲಿ ಪ್ರಧಾನಿ ಅಭ್ಯರ್ಥಿಯನ್ನಾಗಿ ಬಿಜೆಪಿ ಘೋಷಣೆ ಮಾಡಿತ್ತು. 2014ರ ಲೋಕಸಭೆ ಚುನಾವಣೆಯಲ್ಲಿ ಬಹುಮತ ಪಡೆದು ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದರು. ಇಲ್ಲಿನ ಸ್ಥಳದ ಮಹಿಮೆ ಅರಿತು ಹರಕೆ ಹೊತ್ತಿದ್ದ ಮೋದಿ ಅವರ ಪತ್ನಿ ಜಶೋಧಾ ಬೆನ್, ಮೋದಿ ಸಹೋದರ ಪಂಕಜ್ ಮೋದಿ, ನಿತಿನ್ ಗಡ್ಕರಿ ಅವರು ಇಲ್ಲಿಗೆ ಬಂದು 524 ಮೆಟ್ಟಿಲುಗಳನ್ನು ಏರಿ ಹರಕೆ ತೀರಿಸಿದ್ದರು’ ಎಂದು ಬಾಬಾ ಸ್ಮರಿಸಿಕೊಂಡರು.

‘ರಾಮಾಯಣ ಕಾಲದಲ್ಲಿ ತಿರುಪತಿಯೇ ಇರಲಿಲ್ಲ’

ಪ್ರೊ. ಶಾಶ್ವತಯ್ಯ ಸ್ವಾಮಿ ಮುಕ್ಕುಂದಿಮಠ

ಸಿಂಧನೂರು (ರಾಯಚೂರು ಜಿಲ್ಲೆ): ‘ರಾಮಾಯಣ ಕಾಲದಲ್ಲಿ ತಿರುಪತಿಯೇ ಇರಲಿಲ್ಲ’ ಎಂದು ಸಂಶೋಧಕ ಪ್ರೊ.ಶಾಶ್ವತಯ್ಯ ಸ್ವಾಮಿ ಮುಕ್ಕುಂದಿಮಠ ಹೇಳಿದ್ದಾರೆ.

‘ತಿರುಮಲೈ ಸ್ಥಳನಾಮ ದ್ರಾವಿಡ ಭಾಷೆಯದ್ದು. ಮಲೈ ಎಂದರೆ ಬೆಟ್ಟ. ತಿರುಮಲೆ ತಿರುಮಲ ಎಂದು ರೂಪಗೊಳ್ಳುತ್ತದೆ. ಸ್ಥಳನಾಮಕ್ಕೆ ಗಾಂಭೀರ್ಯ ತರಲು ವೆಂಕಟಾದ್ರಿ, ತಿರುಪತಿ ಎಂದು ಕರೆಯಲಾಯಿತು. ವೆಂಕಟೇಶ್ವರ ಮಹಾತ್ಮೆ ಒಂದು ಸ್ಥಳ ಪುರಾಣ. ಈ ಪುರಾಣದ ಮಾಹಿತಿಗಳನ್ನು ಸತ್ಯವೆಂದು ಭಾವಿಸಿದರೆ ರಾಮಾಯಣದಲ್ಲಿಯ ಉಲ್ಲೇಖಗಳು ಮಿಥ್ಯವೆನಿಸುತ್ತವೆ. ಇದರಿಂದ ಮಹರ್ಷಿ ವಾಲ್ಮೀಕಿ ಮತ್ತು ರಾಮಾಯಣಕ್ಕೆ ಅವಮಾನ ಮಾಡಿದಂತಾಗುತ್ತದೆ’ ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

‘ತಿರುಪತಿಯನ್ನು ಭೂವೈಕುಂಠವನ್ನಾಗಿ ರೂಪಿಸಲು ತಿರುಪತಿ ತಿರುಮಲ ದೇವಸ್ಥಾನದ (ಟಿಟಿಡಿ) ಪಂಡಿತರು ಸ್ಥಳ ಪುರಾಣ ರಚಿಸಲಿ. ಆದರೆ, ಆಂಜನೇಯ ತಿರುಪತಿಯ ಅಂಜನಾದ್ರಿಯಲ್ಲಿ ಜನಿಸಿದ ಎಂದು ಹೇಳಿ ಪುರಾಣ ತಿರುಚುವ ಮತ್ತು ಅನಗತ್ಯವಾಗಿ ವಿವಾದ ಹುಟ್ಟಿಸುವುದು ಅವರ ಪಾಂಡಿತ್ಯಕ್ಕೆ ಶೋಭೆ ತರುವುದಿಲ್ಲ. ರಾಮಾಯಣ ರಚನೆಯ ಕಾಲದಲ್ಲಿ ತಿರುಪತಿ ಇತ್ತೇ ಎಂಬ ಪ್ರಶ್ನೆಯನ್ನು ಹುಡುಕುತ್ತ ಹೋದರೆ ಅಲ್ಲಿಯೇ ಉತ್ತರ ದೊರೆಯುತ್ತದೆ’ ಎಂದಿದ್ದಾರೆ.

‘ದಕ್ಷಿಣ ಭಾರತ ವಿಶೇಷವಾಗಿ ಕಲ್ಯಾಣ ಕರ್ನಾಟಕದ ಕಿಷ್ಕಿಂಧೆ, ಪಂಪಾ ಸರೋವರ, ಶಬರಿ ಆಶ್ರಮ, ಅಂಜನಾದ್ರಿ, ವಾಲಿ-ಸುಗ್ರೀವರ ಪ್ರದೇಶಗಳು ರಾಮಾಯಣ ಕಾವ್ಯದಲ್ಲಿ ಉಲ್ಲೇಖವಾದ ಸ್ಥಳಗಳಿಗೆ ಸಾಕ್ಷಿಯಾಗಿವೆ. ಆದರೆ, ತಿರುಪತಿಯ ಹೆಸರು ಎಲ್ಲಿಯೂ ಪ್ರಸ್ತಾಪವಾಗಿಲ್ಲ’ ಎಂದು ಹೇಳಿದ್ದಾರೆ.



ವಾರಾಂತ್ಯದ ಕರ್ಫ್ಯೂ ವೇಳೆ ತುಮಕೂರು ರಸ್ತೆಯ ಮೇಲ್ಸೇತುವೆಯಲ್ಲಿ ವಾಹನಗಳ ಸಂಚಾರ ಸಂಪೂರ್ಣ ಸ್ಥಗಿತಗೊಂಡಿತ್ತು – ಪ್ರಜಾವಾಣಿ ಚಿತ್ರ/ರಂಜು ಪಿ. (ಎಡಚಿತ್ರ) ಸದಾ ಜನಜಂಗುಳಿಯಿಂದ ಕೂಡಿರುವ ಅವೆನ್ಯೂ ರಸ್ತೆ ಬಿಕೋ ಎನ್ನುತ್ತಿತ್ತು – ಪ್ರಜಾವಾಣಿ ಚಿತ್ರ/ಎಂ.ಎಸ್. ಮಂಜುನಾಥ್

ಭಣಗುಡುತ್ತಿದ್ದ ನಗರದ ರಸ್ತೆಗಳು: ಕುಂಟುನೆಪ ಹೇಳಿಕೊಂಡು ರಸ್ತೆಗೆ ಬಂದವರಿಗೆ ಲಾಠಿ ರುಚಿ

ವಾರಾಂತ್ಯದ ಕರ್ಫ್ಯೂ: ಬೆಂಗಳೂರು ಸ್ತಬ್ಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಲ್ಬಣಗೊಂಡಿರುವ ಕೋವಿಡ್ ನಿಯಂತ್ರಣಕ್ಕೆ ವಾರಾಂತ್ಯದ ಕರ್ಫ್ಯೂ ಜಾರಿ ಮಾಡಿದ್ದರಿಂದ ರಾಜಧಾನಿ ಶನಿವಾರ ಸಂಪೂರ್ಣ ಸ್ತಬ್ಧಗೊಂಡಿತ್ತು.

ನಗರದಲ್ಲಿ ಎಲ್ಲ ರೀತಿಯ ಅಂಗಡಿ ಮುಂಗಟ್ಟುಗಳು, ಹೋಟೆಲ್‌ಗಳು, ಬಾರ್ ಮತ್ತು ರೆಸ್ಟೋರೆಂಟ್‌ಗಳನ್ನು ಮುಚ್ಚಲಾಗಿತ್ತು. ವಾಹನ ಸಂಚಾರ ಸಂಪೂರ್ಣ ಸ್ಥಗಿತಗೊಂಡಿದ್ದು, ಅಘೋಷಿತ ಬಂದ್ ಘೋಷಣೆಯಾದಂತಿತ್ತು. ಬೆಳಿಗ್ಗೆ 6ರಿಂದ 10 ಗಂಟೆ ತನಕ ದಿನಸಿ, ತರಕಾರಿ, ಹಣ್ಣು, ಹಾಲು ಸೇರಿದಂತೆ ಅಗತ್ಯ ವಸ್ತುಗಳನ್ನು ಖರೀದಿಸಲು ಅವಕಾಶವಿತ್ತು. ಆ ನಂತರ ಪಾರ್ಸೆಲ್‌ಗೆ ಸೇವೆಗೂ ಅವಕಾಶ ನೀಡಲಾಗಿತ್ತು.

ದಿನಸಿ ಮಳಿಗೆಗಳು, ಬಿಗ್ ಬಜಾರ್, ಮೆಗಾಮಾರ್ಟ್, ಡಿಮಾರ್ಟ್ ಸೇರಿ ಸಣ್ಣಪುಟ್ಟ ಮಾರ್ಟ್‌ಗಳಿಗೆ ಬೆಳಿಗ್ಗೆಯಿಂದಲೇ ಜನ ಮುಗಿಬಿದ್ದಿದ್ದರು. ರಸ್ತೆ ಬದಿಯ ತರಕಾರಿ ಮಳಿಗೆ, ಮಾಂಸದ ಅಂಗಡಿಗಳ ಬಳಿಯೂ ಜನ ಜಮಾಯಿಸಿದ್ದರು.

10 ಗಂಟೆ ನಂತರ ಪೊಲೀಸರು ಬಿಗಿ ಕ್ರಮಕ್ಕೆ ಮುಂದಾದರು. ರಸ್ತೆಗಿಳಿದ ಬೈಕ್ ಮತ್ತು ಕಾರುಗಳನ್ನು ತಡೆದು ಕಾರಣ ಕೇಳಿದರು. ಕುಂಟುನೆಪ ಹೇಳಿಕೊಂಡು ರಸ್ತೆಗೆ ಬಂದವರಿಗೆ ಲಾಠಿ ರುಚಿಯನ್ನೂ ತೋರಿಸಿದರು.

ರಸ್ತೆಯಲ್ಲಿ ಅಡ್ಡಲಾಗಿ ಪೊಲೀಸರು ಕಾಣಿಸುತ್ತಿದ್ದಂತೆ ಬೈಕ್ ತಿರುಗಿಸಿಕೊಂಡು ಹೋಗುತ್ತಿದ್ದರು. ಆಸ್ಪತ್ರೆ, ಔಷಧ ಮಳಿಗೆಗಳಿಗೆ ತೆರಳುವವರು ಪೊಲೀಸರಿಗೆ ಮನವರಿಕೆ ಮಾಡಿಸಿ ಮುಂದೆ ಸಾಗಿದರೆ, ಅನವಶ್ಯಕವಾಗಿ ರಸ್ತೆಗೆ ಬಂದವರ ಬೈಕ್‌ಗಳನ್ನೂ ಪೊಲೀಸರು ವಶಕ್ಕೆ ಪಡೆದರು. ಬೈಕ್‌ಗಳನ್ನು ಬಿಡಿಸಿಕೊಳ್ಳಲು ಪೊಲೀಸ್ ಠಾಣೆಗಳ ಮುಂದೆ ಜನ ಜಮಾಯಿಸಿದ್ದರು.

ಪೊಲೀಸರು ಅಡ್ಡಗಟ್ಟಿ ಲಾಠಿ ಏಟು ನೀಡುತ್ತಿರುವ ಮಾಹಿತಿ ತಿಳಿದ ಬಳಿಕ ಜನಸಂಚಾರ ಕಡಿಮೆಯಾಯಿತು. ಪೊಲೀಸರ ಬಿಗಿ ಕ್ರಮದಿಂದಾಗಿ ನಗರದ ರಸ್ತೆಗಳೆಲ್ಲವೂ ಭಣಗುಡುತ್ತಿದ್ದವು. ಮೇಲ್ಸೇತುವೆಗಳ ಮೇಲೆ ಯಾವುದೇ ವಾಹನಗಳ ಸಂಚಾರ ಇರಲಿಲ್ಲ. ವರ್ತಕರು ಅಂಗಡಿ–ಮುಂಗಟ್ಟುಗಳನ್ನು ಬಂದ್ ಮಾಡಿದ್ದರಿಂದ ಬಂದ್ ರೀತಿಯ ವಾತಾವರಣ ನಿರ್ಮಾಣವಾಗಿತ್ತು.

ನಗರದ ಹೃದಯ ಭಾಗವಾಗಿರುವ ಮೆಜೆಸ್ಟಿಕ್‌ನ ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಬೆರಳೆಣಿಕೆಯಷ್ಟು ಬಸ್‌ಗಳು ಸಂಚರಿಸಿದವು. ಅಗತ್ಯ ಸೇವೆಗಳಿಗಷ್ಟೇ ಬಿಎಂಟಿಸಿ ಬಸ್‌ಗಳನ್ನು ಕಾಯ್ದಿರಿಸಲಾಗಿತ್ತು. ನಿಗದಿತ ಮಾರ್ಗದಲ್ಲೇ ಬಸ್‌ಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಆ ಬಸ್‌ಗಳೂ ಪ್ರಯಾಣಿಕರಿಲ್ಲದೆ ಖಾಲಿ ಸಂಚರಿಸಿದವು.

ಮೆಜೆಸ್ಟಿಕ್‌ನಲ್ಲಿ ಪ್ರಯಾಣಿಕರಿಗಾಗಿ ಗಂಟೆಗಟ್ಟಲೆ ಬಸ್‌ಗಳು ಕಾದು ನಿಂತಿದ್ದವು. ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಪ್ರಯಾಣಿಕರ ಓಡಾಟಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಆದರೆ, ಪ್ರಯಾಣಿಕರು ವಿರಳವಾಗಿದ್ದ ಕಾರಣ ಬಸ್‌ಗಳ ಸಂಖ್ಯೆಯೂ ಕಡಿಮೆ ಇತ್ತು. ಪ್ರಯಾಣಿಕರ ಲಭ್ಯತೆ ಆಧರಿಸಿ ಬಸ್‌ಗಳ ಕಾರ್ಯಾಚರಣೆಯನ್ನು ಕೆಎಸ್‌ಆರ್‌ಟಿಸಿ ನಿರ್ವಹಿಸಿತು.

ವಾರಾಂತ್ಯದ ಕರ್ಫ್ಯೂ ಹಿನ್ನೆಲೆಯಲ್ಲಿ ಬೆಂಗಳೂರಿನ ನಾಗರಬಾವಿ ವೃತ್ತದಲ್ಲಿ ಪೊಲೀಸರು ಎಮ್ಮೆಗಳನ್ನು ಓಡಿಸುತ್ತಿದ್ದ ದೃಶ್ಯ ಶನಿವಾರ ಕಂಡುಬಂತು – ಪ್ರಜಾವಾಣಿ ಚಿತ್ರ

‘ಶೇ 50ರಷ್ಟು ಹಾಸಿಗೆ ಗುರುತಿಸಲು ತಂಡ’

‘ನಗರದ ಖಾಸಗಿ ಆಸ್ಪತ್ರೆಗಳಲ್ಲಿನ ಒಟ್ಟು ಹಾಸಿಗೆಗಳಲ್ಲಿ ಶೇ 50ರಷ್ಟನ್ನು ಕೋವಿಡ್ ಚಿಕಿತ್ಸೆಗೆ ಕಾಯ್ದಿರಿಸಬೇಕು ಎಂದು ಸರ್ಕಾರ ಆದೇಶ ಮಾಡಿದೆ. ಇಂತಹ ಹಾಸಿಗೆಗಳನ್ನು ಗುರುತಿಸಲು ಡಿಸಿಪಿ ಮತ್ತು ಬಿಬಿಎಂಪಿ ಮುಖ್ಯ ಆಯುಕ್ತರ ನೇತೃತ್ವದಲ್ಲಿ ತಂಡಗಳನ್ನು ರಚಿಸಲಾಗಿದೆ’ ಎಂದು ಬಸವರಾಜ್ ಬೊಮ್ಮಾಯಿ ತಿಳಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಆಸ್ಪತ್ರೆಗಳಿಗೆ ಭೇಟಿ ನೀಡುತ್ತಿರುವ ತಂಡಗಳು, ಮಾಹಿತಿ ಕಲೆಹಾಕಿ ಸರ್ಕಾರಕ್ಕೆ ವರದಿ ನೀಡಲಿದೆ. ಅಂಥ ಹಾಸಿಗೆಗಳನ್ನು ಸರ್ಕಾರ ಸುಪರ್ದಿಗೆ ಪಡೆಯಲಿದೆ’ ಎಂದರು.

ಭದ್ರತೆ ಪರಿಶೀಲಿಸಿದ ಗೃಹ ಸಚಿವ ಬೊಮ್ಮಾಯಿ

ನಗರದ ಹಲವೆಡೆ ಶನಿವಾರ ಸಂಚರಿಸಿದ ಗೃಹ ಸಚಿವ ಬಸವರಾಜ್ ಬೊಮ್ಮಾಯಿ, ಕರ್ಫ್ಯೂ ಭದ್ರತೆ ಪರಿಶೀಲಿಸಿದರು. ಜನರನ್ನು ಮಾತನಾಡಿಸಿ ನಿಯಮ ಪಾಲಿಸುವಂತೆ ಕೋರಿದರು.

ತಮ್ಮ ನಿವಾಸದಿಂದ ಹೊರಟ ಸಚಿವ, ಬಸವೇಶ್ವರ ವೃತ್ತ ಹಾಗೂ ಕೆ.ಆರ್. ವೃತ್ತದ ಮೂಲಕ ಕೆ.ಆರ್. ಮಾರುಕಟ್ಟೆಗೆ ತೆರಳಿದರು. ಅಲ್ಲಿಯ ಭದ್ರತಾ ವ್ಯವಸ್ಥೆ ಬಗ್ಗೆ ಮಾಹಿತಿ ಪಡೆದುಕೊಂಡರು. ಮಾರುಕಟ್ಟೆಯಲ್ಲಿ ಸಂಚರಿಸುತ್ತಿದ್ದ ಕೆಲವರನ್ನು ಮಾತನಾಡಿಸಿದರು. ಮಾಸ್ಕ್ ಹಾಕಿಕೊಳ್ಳದವರನ್ನು ತರಾಟೆಗೆ ತೆಗೆದುಕೊಂಡು, ಮಾಸ್ಕ್ ಧರಿಸುವಂತೆ ಕಿವಿಮಾತು ಹೇಳಿದರು.

ಚಾಮರಾಜಪೇಟೆ, ಶಿವಾಜಿನಗರ, ಕಮರ್ಷಿಯಲ್ ಸ್ಟ್ರೀಟ್ ಹಾಗೂ ಸುತ್ತಮುತ್ತ ಪ್ರದೇಶಗಳಿಗೂ ಸಚಿವ ಬೊಮ್ಮಾಯಿ ಭೇಟಿ ನೀಡಿದರು. ಆಡುಗೋಡಿಯ ಮಂಗಳ ಕಲ್ಯಾಣ ಮಂಟಪದಲ್ಲಿ ಕೊರೊನಾ ಸೋಂಕಿತ ಪೊಲೀಸರಿಗೆ ಚಿಕಿತ್ಸೆ ನೀಡಲು ಮಾಡಿರುವ ವ್ಯವಸ್ಥೆಯನ್ನೂ ಪರಿಶೀಲಿಸಿದರು.

ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್, ಸಿಸಿಬಿ ಜಂಟಿ ಕಮಿಷನರ್ ಸಂದೀಪ್ ಪಾಟೀಲ ಇದ್ದರು.

1,149 ವಾಹನಗಳ ಜಪ್ತಿ

ನಗರದಲ್ಲಿ ಶುಕ್ರವಾರ ರಾತ್ರಿ ಕರ್ಫ್ಯೂ ವೇಳೆ ಅನಗತ್ಯವಾಗಿ ಓಡಾಡಿದ್ದ 1,149 ವಾಹನಗಳನ್ನು ಪೊಲೀಸರು ಜಪ್ತಿ ಮಾಡಿದ್ದಾರೆ.

ಕೊರೊನಾ ಸೋಂಕು ಹರಡುವಿಕೆ ತಡೆಗಾಗಿ ಶುಕ್ರವಾರ ರಾತ್ರಿಯಿಂದಲೇ ನಗರದಲ್ಲಿ ಕರ್ಫ್ಯೂ ಜಾರಿ ಮಾಡಲಾಗಿದೆ. ಎಲ್ಲ ರಸ್ತೆಗಳಲ್ಲಿ ಸಾರ್ವಜನಿಕರ ವಾಹನಗಳ ಸಂಚಾರವನ್ನು ನಿರ್ಬಂಧಿಸಲಾಗಿದ್ದು, ತುರ್ತು ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿದೆ.

ಮೇಲ್ಸೇತುವೆಗಳನ್ನೂ ಬಂದ್ ಮಾಡಲಾಗಿದೆ. ಅಷ್ಟಾದರೂ ಕೆಲವರು, ಅನಗತ್ಯವಾಗಿ ರಸ್ತೆಗೆ ಬರುತ್ತಿದ್ದಾರೆ. ಶುಕ್ರವಾರ ರಾತ್ರಿ ಅಂಥವರ ವಾಹನಗಳನ್ನು ತಡೆದು ಪೊಲೀಸರು ದಂಡ ವಿಧಿಸಿದ್ದಾರೆ. 1,041 ದ್ವಿಚಕ್ರ ವಾಹನ, 45 ಆಟೊ ಹಾಗೂ 65 ಕಾರುಗಳನ್ನು ಜಪ್ತಿ ಮಾಡಿ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕೇಂದ್ರ ವಿಭಾಗದಲ್ಲಿ 62, ಪಶ್ಚಿಮ ವಿಭಾಗದಲ್ಲಿ 336, ಉತ್ತರ ವಿಭಾಗದಲ್ಲಿ 192, ದಕ್ಷಿಣ ವಿಭಾಗದಲ್ಲಿ 40, ಪೂರ್ವ ವಿಭಾಗದಲ್ಲಿ 118, ಆಗ್ನೇಯ ವಿಭಾಗದಲ್ಲಿ 209, ಈಶಾನ್ಯ ವಿಭಾಗದಲ್ಲಿ 129 ಹಾಗೂ ವೈಟ್‌ಫೀಲ್ಡ್ ವಿಭಾಗದಲ್ಲಿ 63 ವಾಹನಗಳು ಜಪ್ತಿ ಆಗಿವೆ.

ಪ್ರತಿ ರಸ್ತೆಯಲ್ಲೂ ಸೈರನ್: ದಿನಕ್ಕೆ 1,300 ಆಂಬುಲೆನ್ಸ್ ಸಂಚಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರ ಸಂಖ್ಯೆ ಹೆಚ್ಚುತ್ತಿರುವುದರಿಂದ ನಗರದಲ್ಲಿ ಆಂಬುಲೆನ್ಸ್‌ಗಳ ಓಡಾಟ ಜಾಸ್ತಿಯಾಗಿದ್ದು, ಪ್ರತಿ ರಸ್ತೆಯಲ್ಲೂ ಸೈರನ್ ಸದ್ದು ಕೇಳುತ್ತಿದೆ.

ರೋಗಿಗಳನ್ನು ಮನೆಯಿಂದ ಆಸ್ಪತ್ರೆಗೆ ಹಾಗೂ ಆಸ್ಪತ್ರೆಯಿಂದ ಆಸ್ಪತ್ರೆಗೆ ಆಂಬುಲೆನ್ಸ್‌ಗಳಲ್ಲಿ ಕರೆದೊಯ್ಯಲಾಗುತ್ತಿದೆ. ಕೋವಿಡ್‌ನಿಂದ ಸತ್ತವರ ಮೃತದೇಹಗಳನ್ನೂ ಆಂಬುಲೆನ್ಸ್‌ಗಳಲ್ಲೇ ಚಿತಾಗಾರಗಳಿಗೆ ಸಾಗಿಸಲಾಗುತ್ತಿದೆ. ಚಾಲಕರು ಹಾಗೂ ಸಹಾಯಕರು, ದಿನದ 24 ಗಂಟೆಯೂ ಕೆಲಸ ಮಾಡುವ ಸ್ಥಿತಿ ನಿರ್ಮಾಣವಾಗಿದೆ.

ಪ್ರತಿಯೊಂದು ಆಂಬುಲೆನ್ಸ್ ಸಂಚಾರಕ್ಕೂ ಪೊಲೀಸರು ಅನುಕೂಲ ಮಾಡಿಕೊಡುತ್ತಿದ್ದಾರೆ. ವೃತ್ತ ಹಾಗೂ ಪ್ರಮುಖ ರಸ್ತೆಗಳಲ್ಲಿ ಆಂಬುಲೆನ್ಸ್‌ಗಳ ಸಂಚಾರಕ್ಕೆ ಬೇರೆ ವಾಹನಗಳಿಂದ ಅಡ್ಡಿಯಾಗದಂತೆ ನೋಡಿಕೊಳ್ಳುತ್ತಿದ್ದಾರೆ.

ಸಂಚಾರ ಪೊಲೀಸರ ಮಾಹಿತಿ ಪ್ರಕಾರ, ಸದ್ಯ ದಿನಕ್ಕೆ ಸುಮಾರು 1,250ರಿಂದ 1,300 ಆಂಬುಲೆನ್ಸ್‌ಗಳು ನಗರದಲ್ಲಿ ಸಂಚರಿಸುತ್ತಿದೆ.

‘ಐದು ತಿಂಗಳ ಹಿಂದೆ ನಿತ್ಯ 800ರಿಂದ 850 ಆಂಬುಲೆನ್ಸ್‌ಗಳು ನಗರದಲ್ಲಿ ಸಂಚರಿಸುತ್ತಿದ್ದವು. ಇದೀಗ ಕೊರೊನಾ ಸೋಂಕಿತರು ಹೆಚ್ಚಾಗಿದ್ದು, ಆಂಬುಲೆನ್ಸ್‌ಗಳ ಸಂಖ್ಯೆ ಸುಮಾರು 1,300ಕ್ಕೆ ಹೆಚ್ಚಳವಾಗಿದೆ’ ಎಂದು ಸಂಚಾರ ವಿಭಾಗದ ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

‘ನಗರದ ಪ್ರಮುಖ ರಸ್ತೆಗಳು, ಮೈದಾನಗಳು, ಆಸ್ಪತ್ರೆಗಳ ಎದುರು ಆಂಬುಲೆನ್ಸ್‌ಗಳನ್ನು ನಿಲುಗಡೆ ಮಾಡಲಾಗುತ್ತಿದೆ’ ಎಂದರು.

ಕಳೆದ ವರ್ಷ ಕೋವಿಡ್ ಪ್ರಕರಣಗಳು ತಾರಕಕ್ಕೇರಿದ್ದಾಗ ಟೆಂಪೊ ಟ್ರಾವೆಲರ್ ವಾಹನಗಳನ್ನೂ ತಾತ್ಕಾಲಿಕ ಆಂಬುಲೆನ್ಸ್‌ಗಳನ್ನಾಗಿ ಮಾರ್ಪಡಿಸಿ ಬಳಸಲಾಗಿತ್ತು. ಈ ಸಲವೂ ಅದೇ ರೀತಿ ಮಾಡಲಾಗುತ್ತಿದೆ.

ನಗರದ ಕೋವಿಡ್ ಪ್ರಕರಣಗಳ ಅಂಕಿ–ಅಂಶ

6,32,923 ಒಟ್ಟು ಸೋಂಕಿತರು

4,65,028 ಗುಣಮುಖರಾದವರು

1,62,171 ಸಕ್ರಿಯ ಪ್ರಕರಣ

ಶನಿವಾರದ ಏರಿಕೆ

17,342 ದೃಢಪಟ್ಟ ಪ್ರಕರಣ

4,646 ಗುಣಮುಖ | **149** ಸಾವು

ಕೊರೊನಾ ಸೋಂಕಿತ ಆಸ್ಪತ್ರೆಯಲ್ಲೇ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕು ತಗುಲಿ ಚಿಕಿತ್ಸೆ ಪಡೆಯುತ್ತಿದ್ದ ರಾಮಣ್ಣ (61) ಎಂಬುವರು ಆಸ್ಪತ್ರೆಯಲ್ಲೇ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಅಂಜನಾನಗರದ ರಾಮಣ್ಣ, ವಿಜಯನಗರದ ಆಸ್ಪತ್ರೆಯೊಂದಕ್ಕೆ ದಾಖಲಾಗಿದ್ದರು. ಶುಕ್ರವಾರ ತಡರಾತ್ರಿ ಆಸ್ಪತ್ರೆಯ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ' ಎಂದು ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ ಪಾಟೀಲ ತಿಳಿಸಿದರು.

‘ಕೊರೊನಾ ಸೋಂಕು ತಗುಲಿದ್ದರಿಂದ ಮಾನಸಿಕವಾಗಿ ನೊಂದಿದ್ದರು ಎನ್ನಲಾಗಿದೆ. ಆದರೆ, ಆತ್ಮಹತ್ಯೆಗೆ ನಿಖರ ಕಾರಣ ಗೊತ್ತಾಗಿಲ್ಲ. ಮಗ ನೀಡಿರುವ ದೂರು ಆಧರಿಸಿ ವಿಜಯನಗರ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಮೃತದೇಹವನ್ನು ವಿಕ್ಟೋರಿಯಾ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದೂ ಹೇಳಿದರು.

ಹಾಸಿಗೆ ಹುಡುಕಾಟ, ಅಂತ್ಯಕ್ರಿಯೆಗೂ ಪರದಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಉಲ್ಬಣಗೊಂಡಿರುವ ಕಾರಣ ಹಾಸಿಗೆ ಹುಡುಕಾಟ, ಶವಸಂಸ್ಕಾರಕ್ಕೆ ಪರದಾಟ ನಗರದಲ್ಲಿ ದಿನದಿಂದ ದಿನಕ್ಕೆ ಹೆಚ್ಚುತ್ತಲೇ ಇದೆ.

ಕೋವಿಡ್ ತಗುಲಿದವರಿಗೆ ಸರಿಯಾದ ಚಿಕಿತ್ಸೆಯಿಲ್ಲ, ಮೃತಪಟ್ಟವರ ಶವಸಂಸ್ಕಾರಕ್ಕೂ ಸೂಕ್ತ ವ್ಯವಸ್ಥೆ ಇಲ್ಲದಿರುವುದು ಸಂಬಂಧಿಕರ ಆಕ್ರೋಶ ಮತ್ತು ಆಕ್ರಂದನಕ್ಕೆ ಕಾರಣವಾಗುತ್ತಿದೆ.

ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಯೊಬ್ಬರ ಮೃತದೇಹ ಸುಡಲು ಮೇಡಿ ಅಗ್ರಹಾರದ ಚಿತಾಗಾರದ ಬಳಿ ಸಮರ್ಪಕ ವ್ಯವಸ್ಥೆ ಇಲ್ಲದಿರುವುದಕ್ಕೆ ಸಂಬಂಧಿಕರು ಆಕ್ರೋಶ ವ್ಯಕ್ತಪಡಿಸಿದರು.

‘ನಲವತ್ತು ವರ್ಷದ ತನ್ನ ಸಹೋದರನಿಗೆ ಜ್ವರ ಬಂದು ಪರೀಕ್ಷೆ ಮಾಡಿಸಿದಾಗ ಕೋವಿಡ್ ದೃಢಪಟ್ಟಿತ್ತು. ಸರಿಯಾದ ಚಿಕಿತ್ಸೆ ಸಿಗದೆ ಮೃತಪಟ್ಟರು. ತಾವರೆಕೆರೆ ಸ್ಮಶಾನದಲ್ಲಿ ಮೃತದೇಹ ಅಂತ್ಯಕ್ರಿಯೆ ಜಾಗ ಕೊಡುತ್ತೇವೆ ಎಂದು ಬಿಬಿಎಂಪಿ ಅಧಿಕಾರಿಗಳು ಹೇಳಿದ್ದರು. ಅಲ್ಲಿಗೆ ಹೋದರೆ ಮೃತದೇಹಗಳ ಅಂತ್ಯಕ್ರಿಯೆಗೆ ಯಾವುದೇ ಸಿದ್ಧತೆಯಿಲ್ಲ. ಹೀಗಾಗಿ, ಮೃತದೇಹವನ್ನು ಮೇಡಿ ಅಗ್ರಹಾರ ಚಿತಾಗಾರಕ್ಕೆ ತರಲಾಯಿತು. ಮೃತದೇಹ ಸುಡಲು ಸಮರ್ಪಕ ವ್ಯವಸ್ಥೆ ಮಾಡದೇ ಈ ಸರ್ಕಾರ ಇನ್ನು ಕೋವಿಡ್ ಹೇಗೆ ನಿಯಂತ್ರಿಸುತ್ತದೆ’ ಎಂದು ಕಿಡಿಕಾರಿದರು.

ಕೆ.ಸಿ. ಜನರಲ್ ಆಸ್ಪತ್ರೆಗೆ ದಾಖಲಿಸಲಾಗಿದ್ದ ವೃದ್ಧೆಯೊಬ್ಬರು ಮೃತಪಟ್ಟಿದ್ದರು. ಅವರ ಮೃತದೇಹವನ್ನೂ ಮೇಡಿ ಅಗ್ರಹಾರದ ಚಿತಾಗಾರದ ಬಳಿಗೆ ತರಲಾಗಿತ್ತು. ‘ಆಸ್ಪತ್ರೆಯಲ್ಲಿದ್ದಾಗ ಸರಿಯಾದ ಚಿಕಿತ್ಸೆ ಸಿಗಲಿಲ್ಲ. ಮರಣ ಪ್ರಮಾಣಪತ್ರಕ್ಕೆ ಮುದ್ರೆ ಹಾಕಿಸಿಕೊಳ್ಳಲೂ ಪರದಾಡಬೇಕಾಯಿತು. ಈಗ ಅಂತ್ಯಕ್ರಿಯೆಗೆ ಬೇಡಿಕೊಳ್ಳುವ ಸ್ಥಿತಿ ಬಂದಿದೆ’ ಎಂದು ಸಂಬಂಧಿ ಯೋಗೇಶ್ ಕಣ್ಣೀರಿಟ್ಟರು.

ಆಮ್ಲಜನಕದ ಸಿಲಿಂಡರ್‌ಗಳನ್ನು ವಾಹನಕ್ಕೆ ತುಂಬಿಸುತ್ತಿರುವ ಸಿಬ್ಬಂದಿ —ಪ್ರಜಾವಾಣಿ ಚಿತ್ರ

ಆಂಬುಲೆನ್ಸ್ ಚಾಲಕನಿಗೆ ಧರ್ಮದೇಟು

ಆಸ್ಪತ್ರೆಯಿಂದ ಚಿತಾಗಾರಕ್ಕೆ ಮೃತದೇಹ ಸಾಗಿಸಲು ₹15 ಸಾವಿರ ಬೇಡಿಕೆ ಇಟ್ಟಿದ್ದ ಆಂಬುಲೆನ್ಸ್ ಚಾಲಕನಿಗೆ ಸಾರ್ವಜನಿಕರು ಮೇಡಿ ಅಗ್ರಹಾರದ ಚಿತಾಗಾರದ ಬಳಿ ಧರ್ಮದೇಟು ನೀಡಿದರು.

ಮೃತದೇಹವನ್ನು ಖಾಸಗಿ ಆಸ್ಪತ್ರೆಯಿಂದ ಚಿತಾಗಾರಕ್ಕೆ ತೆಗೆದುಕೊಂಡು ಹೋಗಲು ಮೃತನ ಸಂಬಂಧಿಕರು ಖಾಸಗಿ ಆ್ಯಂಬುಲೆನ್ಸ್ ಚಾಲಕನನ್ನು ಕೇಳಿದ್ದರು. ಐದು ಕಿಲೋ ಮೀಟರ್‌ಗಿಂತಲೂ ಕಡಿಮೆ ಅಂತರಕ್ಕೆ ಆ್ಯಂಬುಲೆನ್ಸ್ ಚಾಲಕ ₹15 ಸಾವಿರಕ್ಕೆ ಬೇಡಿಕೆ ಇಟ್ಟಿದ್ದ. ಆಗ ಚಾಲಕ ಮತ್ತು ಮೃತನ ಸಂಬಂಧಿಕರ ನಡುವೆ ಮಾತಿನ ಚಕಮಕಿ ನಡೆಯಿತು. ಈ ಸಂದರ್ಭದಲ್ಲಿ ರೊಚ್ಚಿಗೆದ್ದ ಜನ ಚಾಲಕನನ್ನು ಥಳಿಸಿದರು.

ಕೋವಿಡ್ ಯೋಧರಿಗೂ ಸಿಗದ ಚಿಕಿತ್ಸೆ

ನಾಲ್ಕೈದು ಆಸ್ಪತ್ರೆಗಳಿಗೆ ಅಲೆದಾಡಿ ಸಕಾಲಕ್ಕೆ ಹಾಸಿಗೆ ಮತ್ತು ಆಮ್ಲಜನಕ ಸಿಗದೆ ಕೋವಿಡ್ ಯೋಧರೊಬ್ಬರು ಮೃತಪಟ್ಟಿದ್ದಾರೆ.

ಬಿಬಿಎಂಪಿ ಪೂರ್ವ ವಲಯದ ಮರ್ಸಿಟೌನ್ ಪ್ರಾಥಮಿಕ ಆರೋಗ್ಯ ಘಟಕದಲ್ಲಿ ಸ್ವಾಬ್ ಕಲೆಕ್ಟರ್ ಆಗಿದ್ದ 35 ವರ್ಷದ ಮಹಿಳೆ ಮೃತಪಟ್ಟಿದ್ದಾರೆ.

‘ವಾರದ ಹಿಂದೆ ಸೋಂಕು ದೃಢಪಟ್ಟಿತ್ತು. ನಾಲ್ಕೈದು ಆಸ್ಪತ್ರೆಗಳಿಗೆ ಅಲೆದಾಡಿದರೂ ಹಾಸಿಗೆ ಸಿಗಲಿಲ್ಲ. ಕೊನೆಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ನಾಲ್ಕು ತಾಸು ಕಾದ ಬಳಿಕ ಹಾಸಿಗೆ ಸಿಕ್ಕಿತ್ತು. ಅಷ್ಟರಲ್ಲಿ ದೇಹದಲ್ಲಿ ಶಕ್ತಿ ಕಡಿಮೆಯಾಗಿ ಮೃತಪಟ್ಟರು. 8 ವರ್ಷದ ಮಗಳಿದ್ದು, ಅವಳಿಗೆ ಯಾರು ಹೊಣೆ’ ಎಂದು ಸಂಬಂಧಿಕರು ಕಣ್ಣೀರು ಸುರಿಸಿದರು.

‘ಸ್ಮಶಾನ ಬೇಡ, ಆಮ್ಲಜನಕ ಕೊಡಿ’

ಟ್ವಿಟರ್‌ನಲ್ಲಿ ಸಾರ್ವಜನಿಕರು ಸರ್ಕಾರದ ಎದುರಿಗಿಟ್ಟ ಬೇಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸ್ಮಶಾನ ಬೇಡ, ಆಮ್ಲಜನಕ ಕೊಡಿ’, ‘ಹಾಸಿಗೆಗಳ ಮಾರಾಟ ನಿಲ್ಲಿಸಿ’, ‘ಆಮ್ಲಜನಕ ಪೂರೈಕೆ ವ್ಯವಸ್ಥೆಯುಳ್ಳ ಐಸಿಯು ಹಾಸಿಗೆಗಳನ್ನು ಒದಗಿಸಿ’...

ಸಾರ್ವಜನಿಕರು ಶನಿವಾರ ಟ್ವಿಟರ್‌ನಲ್ಲಿ ರಾಜ್ಯ ಸರ್ಕಾರದ ಎದುರಿಗಿಟ್ಟ ಬೇಡಿಕೆಗಳಿವು.

ರಾಜ್ಯದಲ್ಲಿ ಕೋವಿಡ್ ಬಿಕ್ಕಟ್ಟು ಉಲ್ಬಣಿಸಿದ್ದು ದ್ರವೀಕೃತ ವೈದ್ಯಕೀಯ ಆಮ್ಲಜನಕ, ರೆಮ್‌ಡಿಸಿವಿರ್ ಚುಚ್ಚುಮದ್ದು ಹಾಗೂ ಆಮ್ಲಜನಕ ಪೂರೈಕೆ ವ್ಯವಸ್ಥೆಯುಳ್ಳ ಐಸಿಯು ಹಾಸಿಗೆಗಳ ಅಭಾವ ಸೃಷ್ಟಿಯಾಗಿದೆ. ಸರ್ಕಾರ ಇದನ್ನು ಒಪ್ಪುತ್ತಿಲ್ಲ. ಸಮಸ್ಯೆಯ ಗಂಭೀರತೆಯನ್ನು ಅರಿತುಕೊಂಡು ಸಮರೋಪಾದಿಯಲ್ಲಿ ಕೆಲಸ ಮಾಡುವಂತೆ ಸರ್ಕಾರದ ಮೇಲೆ ಒತ್ತಡ ಹೇರುವ ಸಲುವಾಗಿ ಶನಿವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 12ರವರೆಗೆ ಟ್ವಿಟರ್ ಅಭಿಯಾನ ಹಮ್ಮಿಕೊಳ್ಳಲಾಗಿತ್ತು.

ಈ ಅವಧಿಯಲ್ಲಿ ನೂರಾರು ಮಂದಿ #DemandEverydayReport, #Implement_Citizen's_charter, #oxygenbedslekkakodi ಎಂಬ ಟ್ಯಾಗ್‌ನಲ್ಲಿ ಟ್ವೀಟ್ ಹಾಗೂ ಮರುಟ್ವೀಟ್ ಮಾಡಿ ಸರ್ಕಾರದ ಕಾರ್ಯವೈಖರಿಯನ್ನು ಟೀಕಿಸಿದರು.

‘ಕೋವಿಡ್‌ನಿಂದ ಜನ ಬೀದಿಯಲ್ಲೇ ಪ್ರಾಣ ಬಿಡುತ್ತಿದ್ದಾರೆ. ಗಂಭೀರ ಸಮಸ್ಯೆಯಿಂದ ಬಳಲುತ್ತಿರುವವರಿಗೆ ಆಮ್ಲಜನಕ ಮತ್ತು ಹಾಸಿಗೆಗಳ ವ್ಯವಸ್ಥೆ ಮಾಡುವ ಬದಲು ಸರ್ಕಾರ ಸ್ಮಶಾನಕ್ಕೆ ಜಾಗ ಒದಗಿಸಲು ಹೊರಟಿದೆ. ಇಂತಹ ಮೂರ್ಖ ರಾಜಕಾರಣಿಗಳಿಗೆ ಧಿಕ್ಕಾರ’ ಎಂದು ಗಜುಸಂಕೇತ್ ಪಿ.ರಾವ್ ಎಂಬುವರು ಟ್ವೀಟ್ ಮಾಡಿದ್ದಾರೆ. ಇದನ್ನು ಸಚಿವ ಆರ್.ಅಶೋಕ್ ಮತ್ತು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರಿಗೆ ಟ್ಯಾಗ್ ಮಾಡಿದ್ದಾರೆ.

‘ಮಂದಿರ, ಮಸೀದಿ ಸಾಕು, ಆಸ್ಪತ್ರೆ ಕಟ್ಟಿಸಿ ಜನಸಾಮಾನ್ಯರ ಪ್ರಾಣ ಉಳಿಸಿ. ಸರ್ಕಾರಿ ಆಸ್ಪತ್ರೆಗಳಲ್ಲಿ ಮೂಲ ಸೌಕರ್ಯ ಕಲ್ಪಿಸಿ’ ಎಂದು ನಳಿನಿಗೌಡ ರೈತ ಸಂಘ ಎಂಬುವರು ಟ್ವೀಟ್ ಮಾಡಿದ್ದಾರೆ.

‘ಕೋವಿಶೀಲ್ಡ್ ಲಸಿಕೆ ದರ ನೆರೆದ ಬಾಂಗ್ಲಾದೇಶಕ್ಕಿಂತಲೂ ಭಾರತದಲ್ಲಿ ದುಪ್ಪಟ್ಟಾಗಿದೆ. ಲಸಿಕೆ ಉಚಿತವಾಗಿ ನೀಡಿ. ಆಮ್ಲಜನಕವನ್ನೂ ಒದಗಿಸಿ’ ಎಂದು ಸೋಮಶೇಖರ್ ಚಲ್ಯ ಒತ್ತಾಯಿಸಿದ್ದಾರೆ.

‘ಪರಿಸ್ಥಿತಿ ಕೈಮೀರುತ್ತಿದೆ. ಇಂತಹ ಸಮಯದಲ್ಲಿ ಜನರಿಗೆ ಧೈರ್ಯ ತುಂಬಿ ಅವರ ನೆರವಿಗೆ ನಿಲ್ಲಬೇಕಿದ್ದ ಜನಪ್ರತಿನಿಧಿಗಳು ಎಲ್ಲಿ ಮಾಯವಾಗಿದ್ದಾರೆ’ ಎಂದು ಅನೇಕರು ಪ್ರಶ್ನಿಸಿದ್ದಾರೆ.

‘ಪ್ರತಿದಿನ ಆಮ್ಲಜನಕ ವ್ಯವಸ್ಥೆಯುಳ್ಳ ಹಾಸಿಗೆಗಳ ಲೆಕ್ಕ ನೀಡಿ. ಕಂಠೀರವ ಕ್ರೀಡಾಂಗಣ ಹಾಗೂ ಇತರ ಸ್ಥಳಗಳನ್ನು ಕೋವಿಡ್ ಆರೈಕೆ ಕೇಂದ್ರಗಳನ್ನಾಗಿ ಪರಿವರ್ತಿಸಿ. ಜನರ ಹಕ್ಕೊತ್ತಾಯ ಪಟ್ಟಿ ಜಾರಿಗೊಳಿಸಿ’ ಎಂದು ಹಲವರು ಸಲಹೆ ನೀಡಿದ್ದಾರೆ. ‘ಆರೋಗ್ಯ ಇಲಾಖೆಯ 30 ಸಾವಿರ ಗುತ್ತಿಗೆ ಕಾರ್ಮಿಕರ ಶೋಷಣೆ ನಿಲ್ಲಿಸಿ, ಹೆಚ್ಚುವರಿ ಸಿಬ್ಬಂದಿಯನ್ನು ಕೂಡಲೇ ನೇಮಿಸಿ’ ಎಂದೂ ಆಗ್ರಹಿಸಿದ್ದಾರೆ.

ವೈದ್ಯಕೀಯ ಸೌಲಭ್ಯ ಹೆಚ್ಚಿಸಿ: ಸಿ.ಎಂಗೆ ಶೋಭಾ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಎರಡನೇ ಅಲೆ ಹೆಚ್ಚುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಿ ಮುಖ್ಯಮಂತ್ರಿಗೆ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿರುವ ಬಿಜೆಪಿ ಸಂಸದೆ ಶೋಭಾ ಕರಂದ್ಲಾಜೆ, ಸೋಂಕಿತರಿಗೆ ನೆರವಾಗಲು ವೈದ್ಯಕೀಯ ಸೌಲಭ್ಯಗಳನ್ನು ಹೆಚ್ಚಿಸುವಂತೆ ಸಲಹೆ ನೀಡಿದ್ದಾರೆ.

‘ಬಿಬಿಎಂಪಿಯ ಸಹಾಯವಾಣಿ ಯುನಿಟ್‌ಗಳ ಸಂಖ್ಯೆಯನ್ನು 100ಕ್ಕೆ ಏರಿಸಬೇಕು. ಬೆಂಗಳೂರಿನಲ್ಲಿ ಹೆಚ್ಚುವರಿಯಾಗಿ 1,000 ವೆಂಟಿಲೇಟರ್, ಇತರ ಭಾಗಗಳಲ್ಲಿ 1000 ವೆಂಟಿಲೇಟರ್‌ಗಳನ್ನು ಹೆಚ್ಚಿಸಬೇಕು. ಖಾಸಗಿ ಆಸ್ಪತ್ರೆಗಳಿಂದ ಬೆಡ್‌ಗಳನ್ನು ಪಡೆಯಲು ಕಾರ್ಯಪಡೆ ನೇಮಿಸಬೇಕು’ ಎಂದಿದ್ದಾರೆ.

‘ಆಸ್ಪತ್ರೆಗಳಲ್ಲಿ ರೆಮ್‌ಡಿಸಿವಿರ್ ಮತ್ತು ಆಕ್ಸಿಜನ್ ಲಭ್ಯತೆ ಬಗ್ಗೆ ಆರೋಗ್ಯ ಇಲಾಖೆ ನಿತ್ಯ ಮಾಹಿತಿ ನೀಡಬೇಕು. ಪ್ರತಿ ಆಸ್ಪತ್ರೆಯಲ್ಲಿ ಹೆಲ್ಪ್ ಡೆಸ್ಕ್ ಆರಂಭಿಸಿ, ಅತೀ ಅಗತ್ಯವಿರುವವರಿಗೆ ಬೆಡ್, ಆಕ್ಸಿಜನ್ ಮತ್ತು ವೆಂಟಿಲೇಟರ್ ಅಭಾವ ಆಗುವುದನ್ನು ತಪ್ಪಿಸಬೇಕು. ತುರ್ತು ಚಿಕಿತ್ಸೆ ಅಗತ್ಯವಿರುವ ರೋಗಿಗಳನ್ನು ಮಾತ್ರ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ದಾಖಲು ಮಾಡಬೇಕು. ಕೋವಿಡ್‌ನಿಂದ ಮೃತಪಟ್ಟವರ ದೇಹಗಳನ್ನು ಶವಾಗಾರದಲ್ಲಿಟ್ಟು ಟೋಕನ್ ವ್ಯವಸ್ಥೆಯಲ್ಲಿ ನಿಗದಿತ ಸಮಯದಲ್ಲಿ ಚಿತಾಗಾರಕ್ಕೆ ಹೋಗುವಂತೆ ಮಾಡಬೇಕು’ ಎಂದು ವಿನಂತಿಸಿದ್ದಾರೆ.

‘ರಕ್ತನಿಧಿ ಕೇಂದ್ರಗಳಲ್ಲಿ ಕೋವಿಡ್ ಪ್ಲಾಸ್ಮಾ ಲಭ್ಯವಿರುವಂತೆ ಮಾಡಬೇಕು’ ಎಂದೂ ಅವರು ಆಗ್ರಹಿಸಿದ್ದಾರೆ.

ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಅವರು ಆದಿಚುಂಚನಗಿರಿ ಆಸ್ಪತ್ರೆಯಲ್ಲಿರುವ ಕೋವಿಡ್ ರೋಗಿಗಳಿಗೆ ಹಣ್ಣುಗಳನ್ನು ವಿತರಿಸುವ ಮೂಲಕ ಧೈರ್ಯ ತುಂಬಿದರು.

ನಿಧನ ವಾರ್ತೆ

ಸುಪ್ರೀಂ ಕೋರ್ಟ್ ನ್ಯಾ.ಮೋಹನ್ ಶಾಂತನಗೌಡರ್



ನವದೆಹಲಿ: ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ, ಕನ್ನಡಿಗ ಮೋಹನ್ ಮಲ್ಲಿಕಾರ್ಜುನಗೌಡ ಶಾಂತನಗೌಡರ್ (61) ಶನಿವಾರ ರಾತ್ರಿ ನಿಧನರಾದರು.

ಕೆಲವು ದಿನಗಳಿಂದ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರ ಆರೋಗ್ಯ ಕ್ಷೀಣಿಸಿದ್ದರಿಂದ ಗುರುಗ್ರಾಮದ ಮೇದಾಂತಾ ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದರು. ಶನಿವಾರ ತಡರಾತ್ರಿ ಚಿಕಿತ್ಸೆಗೆ ಸ್ಪಂದಿಸದೆ ನಿಧನರಾದರು ಎಂದು ಸುಪ್ರೀಂ ಕೋರ್ಟ್‌ನ ಸಹಾಯಕ ರಿಜಿಸ್ಟ್ರಾರ್ ಗಗನ್ ಸೋನಿ ತಿಳಿಸಿದ್ದಾರೆ.

2016ರಿಂದ ಒಂದು ವರ್ಷ ಕೇರಳ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ಸೇವೆ ಸಲ್ಲಿಸಿದ್ದ ಶಾಂತನಗೌಡರ್ ಅವರು, 2017ರಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರು. 2023ರ ಮೇ 4ರವರೆಗೆ ಅವರ ಸೇವಾ ಅವಧಿ ಇತ್ತು.

1958ರ ಮೇ 5ರಂದು ಹಾವೇರಿ ಜಿಲ್ಲೆಯ ಹಿರೇಕೆರೂರು ತಾಲ್ಲೂಕಿನ ಚಿಕ್ಕೇರೂರು ಗ್ರಾಮದಲ್ಲಿ ಜನಿಸಿದ್ದ ಮೋಹನ್ ಶಾಂತನಗೌಡರ್, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದಿದ್ದರು.

ಧಾರವಾಡದಲ್ಲಿ ವಕೀಲರಾಗಿ ಹೆಸರು ಮಾಡಿದ್ದ ಮಲ್ಲಿಕಾರ್ಜುನಗೌಡ ಅವರ ಪುತ್ರ ಮೋಹನ್ ಶಾಂತನಗೌಡರ್, 1980ರಲ್ಲಿ ವಕೀಲ ವೃತ್ತಿ ಆರಂಭಿಸಿದ್ದರು. 2003ರಲ್ಲಿ ರಾಜ್ಯ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ನೇಮಕಗೊಂಡಿದ್ದರಲ್ಲದೆ, 2004ರಲ್ಲಿ ನ್ಯಾಯಮೂರ್ತಿಯಾಗಿ ಸೇವೆ ಆರಂಭಿಸಿದ್ದರು.

29 ಸಾವಿರ ಮಂದಿಗೆ ಸೋಂಕು; 208 ಜನ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಪೀಡಿತರ ಸಂಖ್ಯೆ ದಾಖಲೆಯ 30 ಸಾವಿರದ ಸನಿಹಕ್ಕೆ ತಲುಪಿದೆ. ಶನಿವಾರ ಒಂದೇ ದಿನ ಒಟ್ಟು 29,438 ಮಂದಿ ಸೋಂಕಿತರಾಗಿದ್ದಾರೆ. 208 ಮಂದಿ ಮೃತಪಟ್ಟಿದ್ದಾರೆ.

ಕೋವಿಡ್ ರಾಜ್ಯಕ್ಕೆ ಕಾಲಿಟ್ಟ ನಂತರ 24 ಗಂಟೆಗಳಲ್ಲಿ ವರದಿಯಾದ ಅತ್ಯಂತ ಗರಿಷ್ಠ ಪ್ರಕರಣ ಇದಾಗಿದೆ. ಬೆಂಗಳೂರು ಸೇರಿದಂತೆ ರಾಜ್ಯದ ಇತರ ಜಿಲ್ಲೆಗಳಲ್ಲಿ ಕೋವಿಡ್ ಏರುಗತಿ ಪಡೆದುಕೊಂಡಿದೆ. ಹೀಗಾಗಿ ಪರೀಕ್ಷೆಗಳ ಸಂಖ್ಯೆಯನ್ನೂ ಹೆಚ್ಚಿಸಲಾಗಿದೆ. ಶನಿವಾರ ಒಟ್ಟು 1.89 ಲಕ್ಷ ಮಂದಿಯ ಮಾದರಿಗಳನ್ನು ಪರೀಕ್ಷಿಸಲಾಗಿದ್ದು ಸೋಂಕು ದೃಢ ಪ್ರಮಾಣ ಶೇ 15.52ಕ್ಕೆ ಹೆಚ್ಚಿದೆ.



ಗದಗ, ಹಾವೇರಿ ಮತ್ತು ಯಾದಗಿರಿ ಬಿಟ್ಟು ಉಳಿದ ಜಿಲ್ಲೆಗಳಲ್ಲಿ ಕೋವಿಡ್ ಪ್ರಕರಣ ಮೂರಂಕಿ ಮುಟ್ಟಿದೆ. ಬೆಂಗಳೂರಿನಲ್ಲಿ ಮತ್ತೆ 17,342 ಮಂದಿಯಲ್ಲಿ ಸೋಂಕು ದೃಢಪಟ್ಟಿದೆ. ತುಮಕೂರಿನಲ್ಲೂ (1,559) ಸೋಂಕಿತರ ಸಂಖ್ಯೆ ಏರಿದೆ. ಬಳ್ಳಾರಿ (731), ಬೆಂಗಳೂರು ಗ್ರಾಮಾಂತರ (684), ಹಾಸನ (823), ಕಲಬುರ್ಗಿ (791), ಮಂಡ್ಯ (688), ಚಿಕ್ಕಬಳ್ಳಾಪುರ (506) ಹಾಗೂ ದಕ್ಷಿಣ ಕನ್ನಡದಲ್ಲೂ (517) ಏರುಗತಿ ಪಡೆದುಕೊಂಡಿದೆ. ರಾಜ್ಯದಲ್ಲಿ ಈವರೆಗೆ 13.04 ಲಕ್ಷ ಮಂದಿ ಸೋಂಕಿಗೊಳಗಾಗಿದ್ದಾರೆ.

ಕೋವಿಡ್ ಪೀಡಿತರ ಪೈಕಿ ಬೆಂಗಳೂರಿನಲ್ಲಿ 149 ಮಂದಿ ಮೃತಪಟ್ಟಿದ್ದಾರೆ. ಕಲಬುರ್ಗಿ ಹಾಗೂ ಕೋಲಾರದಲ್ಲಿ ಕ್ರಮವಾಗಿ 8 ಮತ್ತು 6, ಧಾರವಾಡದಲ್ಲಿ 5, ಮೈಸೂರಿನಲ್ಲಿ 4, ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಹಾವೇರಿ, ಮಂಡ್ಯ, ಶಿವಮೊಗ್ಗ ಮತ್ತು ತುಮಕೂರಿನಲ್ಲಿ ತಲಾ ಮೂವರು, ದಕ್ಷಿಣ ಕನ್ನಡ, ದಾವಣಗೆರೆ, ಹಾಸನ, ಕೊಡಗು, ರಾಯಚೂರು, ಉತ್ತರ ಕನ್ನಡ, ವಿಜಯಪುರದಲ್ಲಿ ತಲಾ ಇಬ್ಬರು, ಬೆಳಗಾವಿ, ಚಾಮರಾಜನಗರ, ಚಿಕ್ಕಾಬಳ್ಳಾಪುರ, ಚಿಕ್ಕಮಗಳೂರಿನಲ್ಲಿ ತಲಾ ಒಬ್ಬರು ಮೃತಪಟ್ಟಿದ್ದಾರೆ. ಮೃತರ ಒಟ್ಟು ಸಂಖ್ಯೆ 14,283ಕ್ಕೆ ಏರಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 2.34ಲಕ್ಷಕ್ಕೆ ತಲುಪಿದ್ದು, ತೀವ್ರ ನಿಗಾ ಘಟಕದಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆಯೂ ಹೆಚ್ಚಿದೆ. ಒಟ್ಟು 1,280 ಮಂದಿ ಐಸಿಯುಗೆ ದಾಖಲಾಗಿದ್ದಾರೆ.

ನಗರದಲ್ಲಿ ಇಂದು

‘ಗುರುದಕ್ಷಿಣೆ’ ಪ್ರಶಸ್ತಿ ಪ್ರದಾನ: ಅತಿಥಿಗಳು–ರೋಟರಿ ಸಂಸ್ಥೆಯ ಆರ್‌ಐಡಿ–3,190ನೇ ಜಿಲ್ಲಾ ಗವರ್ನರ್ ಬಿ.ಎಲ್.ನಾಗೇಂದ್ರ ಪ್ರಸಾದ್, ‘ಪ್ರಜಾವಾಣಿ’ಯ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ, ಪುರಸ್ಕೃತರು–ಅನುರಾಧ ಸಾಯಿನಾಥನ್, ರೆಂಜಿಮ ಮನೋಜ್, ಬಿ.ಜಿ.ರಾಮಚಂದ್ರ ಭಟ್, ಗೀತಾ ಶಿಂಧೆ ಬೆಣಗಿ, ಸೈಯದ್ ಮನ್ಸೂರ್ ಶಹಾಬ್, ರಾಧಾಕೃಷ್ಣ ಉರಾಳ, ಜಯಶ್ರೀ ರವಿ, ಎಚ್.ರುದ್ರೇಶ್, ಆಯೋಜನೆ–ರೋಟರಿ ಸಂಸ್ಥೆ, ಸಹಯೋಗ–ಪ್ರಜಾವಾಣಿ, ಬೆಳಿಗ್ಗೆ 10.30 (ಆನ್‌ಲೈನ್ ಕಾರ್ಯಕ್ರಮ)

‘ಸಮಾಜ ಮತ್ತು ವೈಚಾರಿಕತೆ’ ಕುರಿತು ಸಂವಾದ: ಮಾತನಾಡುವವರು ಕೆಎಲ್‌ಇ ಪದವಿ ಕಾಲೇಜಿನ ಕನ್ನಡ ಉಪನ್ಯಾಸಕ ಎಚ್.ಕೃಷ್ಣಮೂರ್ತಿ, ಅಧ್ಯಕ್ಷತೆ–ಪ್ರೊ.ಎ.ಎಸ್.ನಟರಾಜ್, ಭಾಗವಹಿಸುವವರು–ಪ್ರಕಾಶ ಹೆಬ್ಬಳ್ಳಿ, ನಾಗೇಂದ್ರ ಕುಮಾರ, ಆರ್.ನಾಗೇಶ ಅರಳಕುಪ್ಪೆದ, ಆಯೋಜನೆ–ಅಖಿಲ ಕರ್ನಾಟಕ ವಿಚಾರವಾದಿ ಟ್ರಸ್ಟ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ಸಾಲದ ಕಂತು ಪಾವತಿಸಲು ಬ್ಯಾಂಕ್‌ಗಳಿಂದ ಒತ್ತಡ: ಆರೋಪ

ಕಷ್ಟದ ಜೊತೆಗೆ ನಷ್ಟ: ವ್ಯಾಪಾರಿಗಳ ಅಳಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಘೋಷಿತ ಲಾಕ್‌ಡೌನ್ ಬೀದಿ ಬದಿ ವ್ಯಾಪಾರಿಗಳನ್ನು ಮತ್ತೆ ಸಂಕಷ್ಟಕ್ಕೆ ದೂಡಿದೆ. ವ್ಯಾಪಾರವಿಲ್ಲದೆ ನಷ್ಟದಲ್ಲಿದ್ದರೆ, ಸರ್ಕಾರದಿಂದಲೇ ಪಡೆದ ಸಾಲದ ಕಂತು ತೀರಿಸುವ ಕಷ್ಟವೂ ಎದುರಾಗಿದೆ.

‘ಕೋವಿಡ್ ಪೂರ್ವದಲ್ಲಿ ನಡೆಯುತ್ತಿದ್ದಕ್ಕಿಂತ ಶೇಕಡ 20ರಷ್ಟು ವ್ಯಾಪಾರ ಮಾತ್ರ ಈಗ ನಡೆಯುತ್ತಿತ್ತು. ಈಗ ವಾರಾಂತ್ಯ ಕರ್ಫ್ಯೂ ಘೋಷಿಸಿರುವುದು ಮತ್ತೆ ನಮ್ಮನ್ನು ಸಂಕಷ್ಟಕ್ಕೆ ದೂಡಿದೆ’ ಎಂದು ಕಲಾಸಿಪಾಳ್ಯದ ಬೀದಿ ಬದಿ ವ್ಯಾಪಾರಿಯೊಬ್ಬರು ಹೇಳಿದರು.

‘ಕಳೆದ ಬಾರಿ ಲಾಕ್‌ಡೌನ್ ಘೋಷಿಸಿದ್ದಾಗ ಪ್ರಧಾನಮಂತ್ರಿ ಸ್ವನಿಧಿ ಯೋಜನೆಯಡಿ ₹10 ಸಾವಿರ ಕಿರು ಸಾಲ ನೀಡಲಾಗಿತ್ತು. ಅದರ ಕಂತುಗಳನ್ನು ಪಾವತಿಸಲು ಪ್ರಾರಂಭ ಮಾಡಿದ್ದವು. ತಿಂಗಳಿಗೆ ₹900 ಕಟ್ಟಬೇಕು. ಈಗ ಕರ್ಫ್ಯೂ ಘೋಷಿಸಿರುವುದರಿಂದ ವ್ಯಾಪಾರ ನಡೆಯುತ್ತಿಲ್ಲ. ಬ್ಯಾಂಕಿನವರು ಕಂತು ಪಾವತಿಸುವಂತೆ ಒತ್ತಡ ಹಾಕುತ್ತಿದ್ದಾರೆ’ ಎಂದು ಕರ್ನಾಟಕ ಬೀದಿ ಬದಿ ವ್ಯಾಪಾರಿ ಸಂಘಟನೆಗಳ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಸಿ.ಇ. ರಂಗಸ್ವಾಮಿ ದೂರಿದರು.

ರಂಗಸ್ವಾಮಿ

‘ಅಗತ್ಯ ವಸ್ತುಗಳ ಮಾರಾಟ ಇದೆ ಎಂದು ಹೇಳಿದರೂ ಶನಿವಾರ–ಭಾನುವಾರ ಬೆಳಿಗ್ಗೆ 10 ಗಂಟೆ ನಂತರ ವ್ಯಾಪಾರ ಮಾಡುವಂತಿಲ್ಲ. ತರಕಾರಿ, ಹಣ್ಣುಗಳಂತಹ ವಸ್ತುಗಳು ಬೇಗ ಹಾಳಾಗುತ್ತವೆ. 10 ಗಂಟೆಯೊಳಗೆ ವ್ಯಾಪಾರ ನಡೆಯದಿದ್ದರೆ ಎಲ್ಲವೂ ಹಾಳಾಗುತ್ತವೆ’ ಎಂದು ಕೆ.ಆರ್. ಮಾರುಕಟ್ಟೆಯ ಮುಬಾರಕ್ ಅಲಿ ಸಮಸ್ಯೆ ಹೇಳಿಕೊಂಡರು.

‘ಐದು–ಹತ್ತು ನಿಮಿಷ ಜಾಸ್ತಿಯಾದರೂ ಪೊಲೀಸರು ಗದರಿಸಿ ಅಂಗಡಿ ಮುಚ್ಚಿಸುತ್ತಾರೆ. ಗಾಡಿಯನ್ನೇ ತೆಗೆದುಕೊಂಡು ಹೋಗುವುದಕ್ಕೆ ಮುಂದಾಗುತ್ತಾರೆ’ ಎಂದೂ ಅವರು ದೂರಿದರು.

‘ಬಹಳಷ್ಟು ಜನ ಮಳಿಗೆ ಖಾಲಿ ಮಾಡಿಕೊಂಡು ಸ್ವಂತ ಊರಿಗೆ ಹೋಗಿದ್ದಾರೆ. ಮನೆ ಬಾಡಿಗೆ ಕಟ್ಟಲೂ ಎಷ್ಟೋ ಜನರಿಗೆ ಕಷ್ಟವಾಗುತ್ತಿದೆ’ ಎಂದು ವರ್ತಕರೊಬ್ಬರು ಹೇಳಿದರು.

‘ಹಣ್ಣು, ತರಕಾರಿ ಮತ್ತಿತರ ಆಹಾರ ಪದಾರ್ಥ ಮಾರುವವರಿಗೆ ವಾರಾಂತ್ಯದಲ್ಲಿ ಸ್ವಲ್ಪ ರಿಯಾಯಿತಿ ನೀಡಬೇಕು’ ಎಂದು ಹಲವರು ಮನವಿ ಮಾಡುತ್ತಾರೆ.

ಅಂಕಿ–ಅಂಶ

5 ಲಕ್ಷ ರಾಜ್ಯದಲ್ಲಿ ಬೀದಿ ಬದಿ ವ್ಯಾಪಾರಿಗಳ ಅಂದಾಜು ಸಂಖ್ಯೆ	**3** ಲಕ್ಷ ರಾಜ್ಯದಲ್ಲಿರುವ ನೋಂದಾಯಿತ ಬೀದಿ ಬದಿ ವ್ಯಾಪಾರಿಗಳು
90 ಸಾವಿರ ಬೆಂಗಳೂರಿನಲ್ಲಿ ಬೀದಿ ಬದಿ ವ್ಯಾಪಾರಿಗಳ ಅಂದಾಜು ಸಂಖ್ಯೆ	**35** ಸಾವಿರ ನಗರದಲ್ಲಿರುವ ನೋಂದಾಯಿತ ಬೀದಿ ಬದಿ ವ್ಯಾಪಾರಿಗಳು

ಎಲ್ಲೆಡೆ ಆಮ್ಲಜನಕಕ್ಕೆ ಹಾಹಾಕಾರ; ಜೀವವಾಯು ಒದಗಿಸಲು ಸರ್ಕಾರಗಳು, ಆಸ್ಪತ್ರೆಗಳ ಪರದಾಟ

ಆಮ್ಲಜನಕ ಕೊರತೆ: ನಿಲ್ಲದ ಸಾವಿನ ಸರಣಿ

ಖಾಲಿಯಾಗಿರುವ ಆಮ್ಲಜನಕದ ಸಿಲಿಂಡರ್‌ಗಳನ್ನು ತುಂಬಿಸಲು ಕಾನ್ಪುರದ ಆಮ್ಲಜನಕ ಫಿಲ್ಲಿಂಗ್ ಕೇಂದ್ರದ ಬಳಿ ಸಾಲುಗಟ್ಟಿ ನಿಂತಿರುವ ಕೋವಿಡ್ ರೋಗಿಗಳ ಸಂಬಂಧಿಕರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಸೂಕ್ತ ಸಮಯಕ್ಕೆ ಆಮ್ಲಜನಕ ಸಿಗದೇ ರೋಗಿಗಳು ಮೃತಪಟ್ಟ ಘಟನೆಗಳು ಶನಿವಾರವೂ ನಡೆದಿವೆ. ದೆಹಲಿಯ ಜೈಪುರ ಗೋಲ್ಡನ್ ಆಸ್ಪತ್ರೆಯಲ್ಲಿ ನಿಗದಿತ ಸಮಯಕ್ಕೆ ಆಮ್ಲಜನಕ ಸಿಗದೇ ಇಪ್ಪತ್ತು ಜನರು ಸಾವನ್ನಪ್ಪಿದ್ದಾರೆ.

‘ಆಮ್ಲಜನಕದ ದಾಸ್ತಾನು ಮುಗಿದ ಕಾರಣ, ಕಳೆದ ರಾತ್ರಿಯಿಂದ ಬೆಳಗಿನವರೆಗೆ ಸುಮಾರು 20 ರೋಗಿಗಳು ಮೃತಪಟ್ಟಿದ್ದಾರೆ’ ಎಂದು ದೆಹಲಿಯ ರೋಹಿಣಿ ಪ್ರದೇಶದಲ್ಲಿರುವ ಜೈಪುರ ಗೋಲ್ಡನ್ ಆಸ್ಪತ್ರೆಯ ವೈದ್ಯಕೀಯ ನಿರ್ದೇಶಕ ಡಿ.ಕೆ. ಬಲುಜಾ ತಿಳಿಸಿದ್ದಾರೆ.

‘ಬೆಳಿಗ್ಗೆ 10.45ರ ಹೊತ್ತಿಗೆ ಆಸ್ಪತ್ರೆಯಲ್ಲಿ 200 ರೋಗಿಗಳಿದ್ದರು. ಆ ಸಮಯದಲ್ಲಿ ಅರ್ಧಗಂಟೆಗೆ ಸಾಕಾಗುವಷ್ಟು ಆಮ್ಲಜನಕ ಮಾತ್ರ ಇತ್ತು. ಆಸ್ಪತ್ರೆಯಲ್ಲಿರುವ ಶೇ 80ರಷ್ಟು ರೋಗಿಗಳು ಆಮ್ಲಜನಕದ ಆಸರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. 35 ರೋಗಿಗಳು ಐಸಿಯುನಲ್ಲಿದ್ದಾರೆ’ ಎಂದು ತಿಳಿಸಿದ್ದಾರೆ.

ಅಮೃತಸರದಲ್ಲಿ 6 ರೋಗಿಗಳ ಸಾವು: ಅಮೃತಸರದಲ್ಲಿ ಆಮ್ಲಜನಕದ ಕೊರತೆಯಿಂದ ಆರು ರೋಗಿಗಳು ಮೃತಪಟ್ಟಿದ್ದಾರೆ ಎಂದು ವರದಿಯಾಗಿದ್ದು, ತನಿಖೆಗೆ ಮುಖ್ಯಮಂತ್ರಿ ಆದೇಶಿಸಿದ್ದಾರೆ. ಮೃತರ ಪೈಕಿ ಐವರು ಕೋವಿಡ್ ರೋಗಿಗಳು ಎನ್ನಲಾಗಿದೆ.

‘ಜಿಲ್ಲಾಡಳಿತವು ಪದೇ ಪದೇ ಸಹಾಯ ಕೇಳುತ್ತಿದ್ದರೂ, ನೆರವಿಗೆ ಯಾರೂ ಮುಂದಾಗಲಿಲ್ಲ’ ಎಂದು ನೀಲಕಾಂತ್ ಆಸ್ಪತ್ರೆಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಸುನಿಲ್ ದೇವಗನ್ ಆರೋಪಿಸಿದ್ದಾರೆ.

ವೈದ್ಯಕೀಯ ಶಿಕ್ಷಣ ಸಚಿವ ಒ.ಪಿ. ಸೋನಿ ಅವರು ಈ ಆರೋಪವನ್ನು ನಿರಾಕರಿಸಿದ್ದಾರೆ. ‘ಆಮ್ಲಜನಕದ ಕೊರತೆಯ ವಿಚಾರವಾಗಿ ಆಸ್ಪತ್ರೆಯಿಂದ ಮಾಹಿತಿ ನೀಡಿರಲಿಲ್ಲ. ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಒಂದು ಸಂದೇಶ ಕಳುಹಿಸಿ ಸುಮ್ಮನಾಗಿದ್ದಾರೆ’ ಎಂದು ಅವರು ಹೇಳಿದ್ದಾರೆ.

ಆಮ್ಲಜನಕ ಕೊರತೆ ಇರುವ ಖಾಸಗಿ ಆಸ್ಪತ್ರೆಗಳು ರೋಗಿಗಳನ್ನು ಸರ್ಕಾರಿ ವೈದ್ಯಕೀಯ ಕಾಲೇಜು ಆಸ್ಪತ್ರೆಗೆ ದಾಖಲಿಸುವಂತೆ ಸರ್ಕಾರ ನೀಡಿದ್ದ ಸೂಚನೆಯನ್ನು ನೀಲಕಾಂತ್ ಆಸ್ಪತ್ರೆ ಪಾಲಿಸಿಲ್ಲ ಎಂಬುದು ಮೇಲ್ನೋಟಕ್ಕೆ ಕಂಡುಬಂದಿದೆ.

ಮಹಾರಾಷ್ಟ್ರದಲ್ಲಿ ಇಬ್ಬರ ಸಾವು: ಮಹಾರಾಷ್ಟ್ರದ ಬೀಡ್ ಜಿಲ್ಲೆಯ ಆಸ್ಪತ್ರೆಯಲ್ಲಿ ಆಮ್ಲಜನಕ ಪೂರೈಕೆ ಕೊಳವೆಯನ್ನು ಅಪರಿಚಿತರು ಬಂದ್ ಮಾಡಿದ್ದರಿಂದ ಇಬ್ಬರು ಕೋವಿಡ್ ರೋಗಿಗಳು ಮೃತಪಟ್ಟಿದ್ದಾರೆ. ಶುಕ್ರವಾರ ರಾತ್ರಿ ಈ ಘಟನೆ ನಡೆದಿದೆ.

ಇಬ್ಬರ ಪೈಕಿ ಒಬ್ಬ ರೋಗಿಗೆ ಮಾತ್ರ ಆಮ್ಲಜನಕ ಪೂರೈಸಲಾಗುತ್ತಿತ್ತು ಎಂದು ಆಸ್ಪತ್ರೆ ಮೂಲಗಳು ತಿಳಿಸಿವೆ. ಆದರೆ, ರೋಗಿಗಳಿಬ್ಬರೂ ಆಮ್ಲಜನಕದ ಸಹಾಯದಿಂದ ಚಿಕಿತ್ಸೆ ಪಡೆಯುತ್ತಿದ್ದರು ಎಂದು ಮೃತರ ಸಂಬಂಧಿಕರು ಹೇಳಿದ್ದಾರೆ.

ಗಲ್ಲಿಗೇರಿಸುತ್ತೇವೆ: ದೆಹಲಿ ಹೈಕೋರ್ಟ್

‘ಕೇಂದ್ರ, ರಾಜ್ಯ ಅಥವಾ ಸ್ಥಳೀಯ ಆಡಳಿತದ ಯಾವೊಬ್ಬ ವ್ಯಕ್ತಿಯೂ ಆಮ್ಲಜನಕ ಪೂರೈಕೆಗೆ ತಡೆ ಒಡ್ಡುವಂತಿಲ್ಲ. ಒಂದು ವೇಳೆ ತಡೆದರೆ ಆ ವ್ಯಕ್ತಿಯನ್ನು ಗಲ್ಲಿಗೇರಿಸಲಾಗುತ್ತದೆ’ ಎಂದು ದೆಹಲಿ ಹೈಕೋರ್ಟ್ ಖಾರವಾಗಿ ನುಡಿದಿದೆ.

ಆಮ್ಲಜನಕದ ಕೊರತೆ ಕುರಿತು ಮಹಾರಾಜ ಅಗ್ರಸೇನ್ ಆಸ್ಪತ್ರೆ, ಜೈಪುರ ಗೋಲ್ಡನ್ ಆಸ್ಪತ್ರೆ, ಬಾತ್ರಾ ಆಸ್ಪತ್ರೆ ಮತ್ತು ಸರೋಜ್ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಾಲಯವು ಶನಿವಾರ ವಿಚಾರಣೆ ನಡೆಸಿತು.

ಕೋವಿಡ್ ಸುನಾಮಿ ಎದುರಿಸಲು ಸಿದ್ಧರಾಗಿ: ಹೈಕೋರ್ಟ್

ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿರುವ ಕೊರೊನಾ ವೈರಸ್ ಪ್ರಕರಣಗಳನ್ನು ‘ಸುನಾಮಿ’ಗೆ ಹೋಲಿಸಿರುವ ದೆಹಲಿ ಹೈಕೋರ್ಟ್, ಮೇ ತಿಂಗಳ ಮಧ್ಯಭಾಗದಲ್ಲಿ ಎದುರಾಗಲಿರುವ ನಿರೀಕ್ಷಿತ ಎರಡನೇ ಅಲೆಯ ಹೊಡೆತ ಎದುರಿಸಲು ಸಿದ್ಧರಾಗುವಂತೆ ಕೇಂದ್ರ ಸರ್ಕಾರಕ್ಕೆ ಶನಿವಾರ ಸೂಚಿಸಿದೆ.

ನ್ಯಾಯಮೂರ್ತಿಗಳಾದ ವಿಪಿನ್ ಸಂಘಿ ಮತ್ತು ರೇಖಾ ಪಲ್ಲಿ ಅವರ ನ್ಯಾಯಪೀಠವು ದೆಹಲಿಯ ವಿವಿಧ ಆಸ್ಪತ್ರೆಗಳಲ್ಲಿ ಹೆಚ್ಚುತ್ತಿರುವ ಆಮ್ಲಜನಕದ ಬಿಕ್ಕಟ್ಟಿನ ಕುರಿತು ಚರ್ಚಿಸಿತು.

‘ನಾವಿದನ್ನು ಅಲೆ ಎಂದು ಕರೆಯುತ್ತೇವೆ. ಆದರೆ ನಿಜಕ್ಕೂ ಇದು ಸುನಾಮಿ. ಮೇ ಮಧ್ಯಭಾಗದಲ್ಲಿ ಅತಿಹೆಚ್ಚು ಬಾಧಿಸಲಿದೆ ಎಂದು ತಜ್ಞರು ಎಚ್ಚರಿಕೆ ನೀಡಿದ್ದಾರೆ. ಹೀಗಾಗಿ ಆಸ್ಪತ್ರೆ, ಮೂಲಸೌಕರ್ಯ, ಆರೋಗ್ಯ ಸಿಬ್ಬಂದಿ, ಔಷಧ, ಲಸಿಕೆ, ಆಮ್ಲಜನಕವನ್ನು ಸಿದ್ಧವಾಗಿ ಇರಿಸಿಕೊಳ್ಳಬೇಕು’ ಎಂದು ಸಲಹೆ ನೀಡಿತು.

ಆಮ್ಲಜನಕ ಪೂರೈಕೆ ಹಾಗೂ ಉತ್ಪಾದನೆಗೆ ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನು ಪ್ರಧಾನಿ ಮಾಡುತ್ತಿದ್ದಾರೆ ಎಂದು ಕೇಂದ್ರ ಸರ್ಕಾರದ ಪರ ಹಾಜರಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ತಿಳಿಸಿದರು.

ದೆಹಲಿ: ಆಮ್ಲಜನಕ ದಾಸ್ತಾನು ಕೊರತೆ

ಆಮ್ಲಜನಕದ ಕೊರತೆಯು ಸತತ ಐದು ದಿನಗಳಿಂದ ದೆಹಲಿಯ ಆಸ್ಪತ್ರೆಗಳನ್ನು ಕಾಡುತ್ತಿದೆ. ಆಸ್ಪತ್ರೆಯಲ್ಲಿರುವ ಆಮ್ಲಜನಕದ ದಾಸ್ತಾನು ಕ್ಷೀಣಿಸುತ್ತಿರುವ ಬಗ್ಗೆ ಸಾಮಾಜಿಕ ಜಾಲತಾಣ ಸೇರಿದಂತೆ ಹಲವು ವೇದಿಕೆಗಳ ಮೂಲಕ ಆಸ್ಪತ್ರೆಗಳು ಮಾಹಿತಿ ನೀಡುತ್ತಿವೆ. ಮಹಾರಾಜ ಅಗ್ರಸೇನ ಆಸ್ಪತ್ರೆಯು ಕೋರ್ಟ್ ಮೊರೆ ಹೋಗಿತ್ತು.

ನಗರದ ಪ್ರತಿಷ್ಠಿತ ಗಂಗಾರಾಮ್ ಆಸ್ಪತ್ರೆಯಲ್ಲಿ ಆಮ್ಲಜನಕ ಸಿಗದೇ 25 ರೋಗಿಗಳು ಮೊನ್ನೆ ತಾನೇ ಮೃತಪಟ್ಟಿದ್ದರು. ಈ ಘಟನೆ ಮರುಕಳಿಸುವುದನ್ನು ತಡೆಯಲು ಆಸ್ಪತ್ರೆ ಆಡಳಿತ ಮಂಡಳಿ ಮುಂದಾಗಿದೆ. ಆಸ್ಪತ್ರೆಗೆ ಪ್ರತಿನಿತ್ಯ 11 ಸಾವಿರ ಘನ ಮೀಟರ್‌ನಷ್ಟು ಆಮ್ಲಜನಕ ಅಗತ್ಯವಿದೆ. ಬೆಳಿಗ್ಗೆ 11.35ಕ್ಕೆ ಆಮ್ಲಜನಕದ ವಾಹನ ಆಸ್ಪತ್ರೆಗೆ ತಲುಪುವ ವೇಳೆಗೆ ಆಸ್ಪತ್ರೆಯಲ್ಲಿ ಕೇವಲ 200 ಘನ ಮೀಟರ್‌ನಷ್ಟು ಆಮ್ಲಜನಕ ಉಳಿದಿತ್ತು.

ತುಘಲಕಾಬಾದ್‌ನ ಬಾತ್ರಾ ಆಸ್ಪತ್ರೆಗೆ ಸರ್ಕಾರವು ಆಮ್ಲಜನಕ ಪೂರೈಸಿದಾಗ ಆಸ್ಪತ್ರೆಯ ದಾಸ್ತಾನು ಬಹುತೇಕ ಮುಗಿಯುವ ಹಂತದಲ್ಲಿತ್ತು. ಶಾಲಿಮಾರ್‌ಬಾಗ್‌ನ ಫೋರ್ಟಿಸ್ ಆಸ್ಪತ್ರೆಯಲ್ಲೂ ಆಮ್ಲಜನಕ ದಾಸ್ತಾನು ಕೊರತೆ ಇದೆ. ತುರ್ತು ಸಮಯದಲ್ಲಿ ಬಳಸಬೇಕಿರುವ ಆಮ್ಲಜನಕವನ್ನು ಸಹ ಬಳಕೆ ಮಾಡಲಾಗುತ್ತಿದೆ ಎಂದು ಆಸ್ಪತ್ರೆಯು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಿಸಿತು. ಹೊಸ ರೋಗಿಗಳ ಸೇರ್ಪಡೆಗೆ ನಿರ್ಬಂಧ ಹೇರಿ, ಇರುವ ರೋಗಿಗಳಿಗೆ ಆಮ್ಲಜನಕ ಪೂರೈಸಲು ಆಸ್ಪತ್ರೆ ನಿರ್ಧರಿಸಿದೆ.

ಪ್ರಜಾವಾಣಿ ಸಂವಾದ
facebook LIVE
ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ
ಸರ್ಕಾರದ ಆಡಳಿತದಲ್ಲಿ ರಾಜ್ಯಪಾಲರ ನೇರ ಹಸ್ತಕ್ಷೇಪ ಎಷ್ಟು ಸರಿ?
ಸಂವಾದದಲ್ಲಿ ಪಾಲ್ಗೊಳ್ಳುವವರು
ಎಲ್. ಹನುಮಂತಯ್ಯ, ರಾಜ್ಯಸಭಾ ಸದಸ್ಯರು, ಕಾಂಗ್ರೆಸ್
ರವಿವರ್ಮ ಕುಮಾರ್, ರಾಜ್ಯದ ಮಾಜಿ ಅಡ್ವೊಕೇಟ್ ಜನರಲ್
ಎನ್. ರವಿಕುಮಾರ್, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ, ಎಂಎಲ್‌ಸಿ
ಸೋಮವಾರ, 26-04-2021 ಮಧ್ಯಾಹ್ನ 12 ರಿಂದ 1
fb.com/prajavani.net

ಪ್ರಜಾವಾಣಿ facebook LIVE fb.com/prajavani.net
ದ್ವಿತೀಯ ಪಿಯು ವಿದ್ಯಾರ್ಥಿಗಳೇ, ಗಮನಿಸಿ!
ಭಯ ಬೇಡ, ಧೈರ್ಯದಿಂದ ಪರೀಕ್ಷೆ ಎದುರಿಸಿ
ಬೆಂಗಳೂರು ಸಾಯಿರಾಂ ಅಕಾಡೆಮಿಯ ಜಿ.ಶ್ರೀನಿವಾಸ್ ಇವರಿಂದ ಟಿಪ್ಸ್
ವಿಷಯ: ಭೌತಶಾಸ್ತ್ರ
ಸಂಯೋಜನೆ: AIDSO ಕರ್ನಾಟಕ ರಾಜ್ಯ ಸಮಿತಿ
26ರಂದು ಸಂಜೆ 4.30ರಿಂದ

ಆಮ್ಲಜನಕ ಆಮದು ಸುಂಕ ಮನ್ನಾ

ನವದೆಹಲಿ (ಪಿಟಿಐ): ದೇಶದಲ್ಲಿ ವೈದ್ಯಕೀಯ ಆಮ್ಲಜನಕದ ಕೊರತೆ ನೀಗಿಸುವ ಉದ್ದೇಶದಿಂದ ಕೆಲವು ಮಹತ್ವದ ಕ್ರಮಗಳನ್ನು ಕೇಂದ್ರ ಸರ್ಕಾರ ಶನಿವಾರ ಪ್ರಕಟಿಸಿದೆ. ಆಮ್ಲಜನಕ ಮತ್ತು ಅದಕ್ಕೆ ಸಂಬಂಧಿಸಿದ ಉಪಕರಣಗಳ ಆಮದಿನ ಮೇಲಿನ ಆರೋಗ್ಯ ಸೆಸ್ ಮತ್ತು ಮೂಲ ಕಸ್ಟಮ್ಸ್ ಸುಂಕವನ್ನು ಮನ್ನಾ ಮಾಡಿದೆ. ಮೂರು ತಿಂಗಳ ಕಾಲ ಈ ಆದೇಶ ಜಾರಿಯಲ್ಲಿರಲಿದ್ದು, ತಕ್ಷಣದಿಂದ ಜಾರಿಗೆ ಬಂದಿದೆ.

ಕೋವಿಡ್ ತಡೆ ಲಸಿಕೆಗಳ ಆಮದು ಕಸ್ಟಮ್ಸ್ ಸುಂಕಕ್ಕೆ ವಿನಾಯಿತಿ ನೀಡಲು ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಸರ್ಕಾರದ ಪ್ರಕಟಣೆ ತಿಳಿಸಿದೆ.

ವೈದ್ಯಕೀಯ ದರ್ಜೆಯ ಆಮ್ಲಜನಕ, ಕನೆಕ್ಟರ್‌ಗಳು, ವಿಪಿಎಸ್‌ಎ, ಪಿಎಸ್‌ಎ, ಆಮ್ಲಜನಕ ಸಸ್ಯಗಳು, ದ್ರವ/ಅನಿಲ ಆಮ್ಲಜನಕವನ್ನು ಉತ್ಪಾದಿಸುವ ಕ್ರಯೋಜೆನಿಕ್ ಆಮ್ಲಜನಕ ವಾಯು ವಿಭಜನೆ ಘಟಕಗಳು (ಎಎಸ್‌ಯು), ಆಕ್ಸಿಜನ್ ಕ್ಯಾನಿಸ್ಟರ್, ಆಮ್ಲಜನಕ ಭರ್ತಿ ಮಾಡುವ ವ್ಯವಸ್ಥೆಗಳು, ಆಮ್ಲಜನಕ ಶೇಖರಣಾ ಟ್ಯಾಂಕ್‌ಗಳು, ಕ್ರಯೊಜೆನಿಕ್ ಸಿಲಿಂಡರ್‌ಗಳು ಮತ್ತು ಟ್ಯಾಂಕ್‌ಗಳು ಸೇರಿದಂತೆ ಆಮ್ಲಜನಕ ಸಿಲಿಂಡರ್‌ಗಳು ಮತ್ತು ಆಮ್ಲಜನಕವನ್ನು ಉತ್ಪಾದಿಸುವ ಇತರ ಸಾಧನಗಳು ತೆರಿಗೆ ವಿನಾಯಿತಿ ಪಡೆದಿವೆ.

ಸರ್ಕಾರದ ಕ್ರಮಗಳಿಂದ ಆಮ್ಲಜನಕ ಹಾಗೂ ಅದಕ್ಕೆ ಸಂಬಂಧಿಸಿದ ವಸ್ತುಗಳ ಲಭ್ಯತೆ ಹೆಚ್ಚಾಗುವುದರ ಜೊತೆಗೆ ಅವು ಕಡಿಮೆ ದರದಲ್ಲಿ ಸಿಗಲಿವೆ. ಈ ಉಪಕರಣಗಳ ಸಾಗಾಟವನ್ನು ಚುರುಕುಗೊಳಿಸಲು ಕಂದಾಯ ಇಲಾಖೆ ಸಹಕಾರ ನೀಡಬೇಕು ಎಂದು ಪ್ರಧಾನಿ ಸೂಚಿಸಿದ್ದಾರೆ.

‘ಮನೆಯಲ್ಲಿ ಮತ್ತು ಆಸ್ಪತ್ರೆಗಳಲ್ಲಿ ವೈದ್ಯಕೀಯ ಆಮ್ಲಜನಕದ ಪೂರೈಕೆ ಮತ್ತು ರೋಗಿಗಳ ಆರೈಕೆಗೆ ಅಗತ್ಯವಾದ ಸಲಕರಣೆಗಳನ್ನು ತ್ವರಿತವಾಗಿ ಪೂರೈಸುವ ಅವಶ್ಯಕತೆಯಿದೆ’ ಎಂದು ಮೋದಿ ಒತ್ತಿ ಹೇಳಿದರು. ಈ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡುವಂತೆ ಎಲ್ಲ ಸಚಿವಾಲಯ ಮತ್ತು ಇಲಾಖೆಗಳನ್ನು ಪ್ರಧಾನಿ ಕೇಳಿ ಕೊಂಡರು.

ಸೋಂಕಿತರಿಗೆ ‘ಮೇಕ್ ಶಿಫ್ಟ್’ ಆಸ್ಪತ್ರೆ: ಸಚಿವ ಸುಧಾಕರ್

ಪ್ರಜಾವಾಣಿ ವಾರ್ತೆ



ಸುಧಾಕರ್

ಬೆಂಗಳೂರು: ‘ಕೊರೊನಾ ಸೋಂಕಿತರಿಗಾಗಿ ಬೆಂಗಳೂರು ನಗರ ಸೇರಿದಂತೆ ಕೆಲವು ಜಿಲ್ಲೆಗಳಲ್ಲಿ ಐಸಿಯು ಹೊಂದಿರುವ ‘ಮೇಕ್ ಶಿಫ್ಟ್’ ಆಸ್ಪತ್ರೆ ನಿರ್ಮಿಸಲು ತೀರ್ಮಾನಿಸಲಾಗಿದೆ’ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಶನಿವಾರ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಬೆಂಗಳೂರಿನಲ್ಲಿ 2 ಸಾವಿರ ಹಾಸಿಗೆಗಳ ಮೇಕ್ ಶಿಫ್ಟ್ ಆಸ್ಪತ್ರೆ ನಿರ್ಮಿಸಲು ನಿರ್ಧರಿಸಲಾಗಿದೆ. ಮೈಸೂರು, ಬೀದರ್, ಹುಬ್ಬಳ್ಳಿ, ಬೆಳಗಾವಿ ಮತ್ತು ಶಿವಮೊಗ್ಗದಲ್ಲಿ ಮಾಡ್ಯೂಲರ್ ಐಸಿಯು ಹೊಂದಿರುವ 200ರಿಂದ 250 ಹಾಸಿಗೆ ಸಾಮರ್ಥ್ಯ ಮೇಕ್ ಶಿಫ್ಟ್ ಆಸ್ಪತ್ರೆ ನಿರ್ಮಿಸಲು ತೀರ್ಮಾನಿಸಿದ್ದು, 15 ದಿನಗಳ ಒಳಗೆ ಈ ಆಸ್ಪತ್ರೆಗಳು ನಿರ್ಮಾಣವಾಗಲಿದೆ’ ಎಂದರು.

‘ಕಡಿಮೆ ಲಕ್ಷಣ ಇರುವವರು ಆತಂಕದಿಂದ ಆಸ್ಪತೆಗೆ ದಾಖಲಾದರೆ, ತೀವ್ರ ಸೋಂಕಿನಿಂದ ಬಳಲುತ್ತಿರುವವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಖಾಸಗಿ ಆಸ್ಪತ್ರೆಗಳು, ವೈದ್ಯರು ಕಡಿಮೆ ಲಕ್ಷಣ ಇರುವವರನ್ನು ದಾಖಲಿಸಿಕೊಳ್ಳಬಾರದು. ಈ ರೀತಿ ಮಾಡಿದರೆ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ’ ಎಂದು ಎಚ್ಚರಿಕೆ ನೀಡಿದ ಸಚಿವರು, ‘ಖಾಸಗಿ ಆಸ್ಪತ್ರೆಗಳಲ್ಲಿ ಶೇ 80ರಷ್ಟು ಹಾಸಿಗೆಗಳನ್ನು ಸೋಂಕಿತರಿಗೆ ಮೀಸಲಿಡಲು ಆದೇಶಿಸಲಾಗುವುದು’ ಎಂದರು.

‘ಕೋವಿಡ್ ಎರಡನೇ ಅಲೆಯಲ್ಲಿ ರೂಪಾಂತರಗೊಂಡ ವೈರಾಣು ಬಂದಿದ್ದು, ಹೊಸ ರೋಗದಂತಿದೆ. ವೈರಾಣು ರೂಪಾಂತರ ಆದಂತೆ ಸೋಂಕು ಹೆಚ್ಚಾಗಬಹುದು. ವೈದ್ಯಕೀಯ ಜಗತ್ತಿಗೆ ಇದು ಸವಾಲಾಗಿ ಪರಿಣಮಿಸಿದೆ. ರಾಜ್ಯದಲ್ಲಿ ಹೆಚ್ಚು ಜನರು ಸೋಂಕಿತರಾದರೂ ಸಾವಿನ ಪ್ರಮಾಣ ಶೇ 0.4 ರಷ್ಟಿದೆ’ ಎಂದರು.

‘ಕೋವಿಶೀಲ್ಡ್’ ದರ ಸಮರ್ಥಿಸಿಕೊಂಡ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ

ನವದೆಹಲಿ (ಪಿಟಿಐ): ಕೋವಿಡ್–19 ಲಸಿಕೆ ‘ಕೋವಿಶೀಲ್ಡ್’ನ ದರವನ್ನು ಮೊದಲು ನಿಗದಿ ಮಾಡಿದ್ದಕ್ಕಿಂತ ಒಂದೂವರೆ ಪಟ್ಟು ಹೆಚ್ಚು ನಿಗದಿ ಮಾಡಿರುವುದನ್ನು ಲಸಿಕೆ ತಯಾರಕ ಕಂಪನಿ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಶನಿವಾರ ಸಮರ್ಥಿಸಿಕೊಂಡಿದೆ.

‘ಲಸಿಕೆ ತಯಾರಿಸಲು ಆರಂಭದಲ್ಲಿ ತೊಡಗಿಸಿದ್ದ ಬಂಡವಾಳದ ಆಧಾರದ ಮೇಲೆ ಮೊದಲು ದರವನ್ನು ನಿಗದಿ ಮಾಡಲಾಗಿತ್ತು. ಈಗ ಲಸಿಕೆಗೆ ಬೇಡಿಕೆ ಹೆಚ್ಚಿದೆ. ಹೀಗಾಗಿ ಉತ್ಪಾದನಾ ಸಾಮರ್ಥ್ಯವನ್ನು ಹಾಗೂ ಪ್ರಮಾಣವನ್ನು ಹೆಚ್ಚಿಸಲು ಹೂಡಿಕೆಯನ್ನೂ ಹೆಚ್ಚಿಸಬೇಕಾಗಿದೆ’ ಎಂದು ಕಂಪನಿ ಹೇಳಿದೆ.

ಕೋವಿಶೀಲ್ಡ್

ಪುಣೆ ಮೂಲದ ಎಸ್‌ಐಐ, ಅಸ್ಟ್ರಾಜೆನೆಕಾ ಅಭಿವೃದ್ಧಿಪಡಿಸಿರುವ ಕೋವಿಶೀಲ್ಡ್ ಲಸಿಕೆಯನ್ನು ಉತ್ಪಾದಿಸುತ್ತದೆ. ರಾಜ್ಯಗಳಿಗೆ ಲಸಿಕೆಯ ಪ್ರತಿ ಡೋಸ್ ದರವನ್ನು ₹ 600, ಖಾಸಗಿ ಆಸ್ಪತ್ರೆಗಳಿಗೆ ₹400 ನಿಗದಿ ಮಾಡಿದೆ. ಲಸಿಕೆ ಖರೀದಿಗಾಗಿ ಹೊಸ ಒಪ್ಪಂದದನ್ವಯ ಕೇಂದ್ರ ಸರ್ಕಾರ ಸಹ ಪ್ರತಿ ಡೋಸ್‌ಗೆ ₹ 400 ಪಾವತಿಸಬೇಕು ಎಂದು ಕಂಪನಿ ಹೇಳಿದೆ.

‘ಹಳೆಯ ಒಪ್ಪಂದದ ಪ್ರಕಾರ ಕೇಂದ್ರ ಸರ್ಕಾರಕ್ಕೆ ಪೂರೈಕೆ ಮಾಡುವ ಲಸಿಕೆಯ ಪ್ರತಿ ಡೋಸ್‌ಗೆ ₹ 150 ದರ ನಿಗದಿ ಮಾಡಲಾಗಿದೆ. ಭಾರತದಲ್ಲಿ ಲಭ್ಯವಿರುವ ಲಸಿಕೆಯ ದರಕ್ಕೂ, ಜಾಗತಿಕವಾಗಿ ನಿಗದಿಯಾಗಿರುವ ದರಕ್ಕೂ ಹೋಲಿಕೆ ಮಾಡುವುದು ಅಸಮರ್ಪಕ. ಕೋವಿ ಶೀಲ್ಡ್ ಈಗ ದೇಶದ ಮಾರುಕಟ್ಟೆಯಲ್ಲಿ ಕೈಗೆಟುಕುವ ದರದಲ್ಲಿ ಸಿಗುವ ಲಸಿಕೆಯಾಗಿದೆ’ ಎಂದೂ ಹೇಳಿದೆ.

‘ಅಪಾಯ ಎದುರಿಸುತ್ತಿದ್ದ ದೇಶಗಳು ಆಗ ಲಸಿಕೆ ಉತ್ಪಾದನೆಗಾಗಿ ಹಣ ತೊಡಗಿಸಿದ್ದವು. ಹೀಗಾಗಿ ಜಾಗತಿಕ ಮಟ್ಟದಲ್ಲಿಯೂ ಲಸಿಕೆಯ ದರ ಕಡಿಮೆ ನಿಗದಿ ಮಾಡಲಾಗಿತ್ತು’ ಎಂದಿದೆ.

ರೈಲ್ವೆ: 93 ಸಾವಿರ ಸಿಬ್ಬಂದಿಗೆ ಕೋವಿಡ್

ನವದೆಹಲಿ (ಪಿಟಿಐ): ದೇಶದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿದ್ದು, ರೈಲ್ವೆ ಇಲಾಖೆಯ 93 ಸಾವಿರ ಸಿಬ್ಬಂದಿಗೆ ಕೋವಿಡ್–19 ಇರುವುದು ದೃಢಪಟ್ಟಿದೆ.

‘ದೇಶದಲ್ಲಿನ ಸ್ಥಿತಿಗಿಂತ ರೈಲ್ವೆ ಇಲಾಖೆಯ ಸ್ಥಿತಿ ಭಿನ್ನವಾಗಿಲ್ಲ. ಸುಮಾರು 93 ಸಾವಿರ ರೈಲ್ವೆ ಸಿಬ್ಬಂದಿಗೆ ಕೋವಿಡ್ ಇರುವುದು ದೃಢಪಟ್ಟಿದೆ. ಕೆಲ ಸಿಬ್ಬಂದಿಯನ್ನು ಆಸ್ಪತ್ರೆ ದಾಖಲಿಸಲಾಗಿದೆ. ಕೆಲವರು ಮನೆಯಲ್ಲೇ ಚಿಕಿತ್ಸೆ ಪಡೆಯುತ್ತಿದ್ದಾರೆ. ರೈಲ್ವೆಯ 72 ಆಸ್ಪತ್ರೆಗಳಲ್ಲಿ 5 ಸಾವಿರಕ್ಕೂ ಹೆಚ್ಚು ಹಾಸಿಗೆಗಳನ್ನು ಸೋಂಕಿತರಿಗೆ ಮೀಸಲಾಗಿರಿಸಲಾಗಿದೆ’ ಎಂದು ರೈಲ್ವೆ ಮಂಡಳಿಯ ಅಧ್ಯಕ್ಷ ಹಾಗೂ ಸಿಇಒ ಸುನೀತ್ ಶರ್ಮಾ ತಿಳಿಸಿದ್ದಾರೆ.

‘ಟಿಟಿಇ, ನಿರ್ವಾಹಕರು, ಸ್ಟೇಷನ್ ಸಿಬ್ಬಂದಿ ಸೇರಿದಂತೆ ಮುಂಚೂಣಿ ಕಾರ್ಮಿಕರು ಕೂಡಾ ಸೋಂಕಿಗೊಳಗಾಗಿದ್ದಾರೆ. ಆದರೂ, ರೈಲ್ವೆ ಸೇವೆಯ ಕೆಲಸಗಳು ಸುಗಮವಾಗಿ ಸಾಗಲು ಸಿಬ್ಬಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ’ ಎಂದೂ ಅವರು ಹೇಳಿದ್ದಾರೆ.

ಕೊರೊನಾ ಸಾಂತ್ವನ

‘ಮನೆಯಲ್ಲಿದ್ದವರೂ ಬೇಗ ಗುಣಮುಖ’

ಬೆಂಗಳೂರು: ಮನೆಯಲ್ಲಿ ಪ್ರತ್ಯೇಕವಾಗಿದ್ದುಕೊಂಡು ಚಿಕಿತ್ಸೆ ಪಡೆಯುತ್ತಿರುವ ಬಹುತೇಕರು ಬೇಗ ಗುಣಮುಖರಾಗುತ್ತಿದ್ದಾರೆ. ಅದರಲ್ಲಿಯೂ, ಯುವಸಮೂಹ ಮತ್ತು ಮಧ್ಯವಯಸ್ಕರಲ್ಲಿ ಗುಣಮುಖ ಪ್ರಮಾಣ ಹೆಚ್ಚಾಗಿದೆ.

ಸೋಂಕಿನ ಸೌಮ್ಯ ಸ್ವಭಾವದ ಲಕ್ಷಣ ಹೊಂದಿರುವವರು, ಕೆಮ್ಮು–ನೆಗಡಿಯಂತಹ ಲಕ್ಷಣಗಳನ್ನು ಮಾತ್ರ ಹೊಂದಿದ್ದರೂ ಕೋವಿಡ್ ಪಾಸಿಟಿವ್ ಆದವರಿಗೆ ಹೋಂ ಐಸೊಲೇಶನ್‌ನಲ್ಲಿ ಇಡಲಾಗುತ್ತಿದೆ. ಇಂಥವರು ಹಲವು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕು.

ಮನೆಯಲ್ಲಿ ಪ್ರತ್ಯೇಕ ಕೋಣೆಯಲ್ಲಿ ಇರಬೇಕು. ತಟ್ಟೆ, ಲೋಟದಂತಹ ವಸ್ತುಗಳನ್ನೂ ಪ್ರತ್ಯೇಕವಾಗಿಟ್ಟುಕೊಳ್ಳಬೇಕು. ಬಾಗಿಲು, ಬಾಗಿಲಿನ ಚಿಲಕ, ನಲ್ಲಿಗಳಂತಹ ಆಗಾಗ ಸ್ಪರ್ಶಿಸಬೇಕಾದ ವಸ್ತುಗಳನ್ನು ಪದೇ ಪದೇ ಸ್ವಚ್ಛಗೊಳಿಸುತ್ತಿರಬೇಕು. ಮನೆಯಲ್ಲಿದ್ದರೂ ಮಾಸ್ಕ್ ಹಾಕಿಕೊಂಡಿರಬೇಕು.

ಆಕ್ಸಿಮೀಟರ್, ಥರ್ಮಾಮೀಟರ್‌ನಂತಹ ಸಾಧನಗಳನ್ನು ಇಟ್ಟುಕೊಂಡು ಆಗಾಗ ಪರೀಕ್ಷೆ ಮಾಡಿಕೊಳ್ಳುತ್ತಿರಬೇಕು. ಆಮ್ಲಜನಕ ಮಟ್ಟ ಸತತವಾಗಿ 92ಕ್ಕಿಂತ ಕಡಿಮೆ ಇದ್ದರೆ ಆಸ್ಪತ್ರೆಗೆ ದಾಖಲಾಗುವುದು ಉತ್ತಮ. 96 ಅಥವಾ 97 ಇದ್ದರೆ ಯಾವುದೇ ಸಮಸ್ಯೆ ಇಲ್ಲ ಎಂದು ಅರ್ಥ.

ಹೋಂ ಐಸೊಲೇಶನ್ ವ್ಯವಸ್ಥೆ ಮಾಡಿಕೊಳ್ಳಲು ಆಗದವರು ಕೋವಿಡ್ ಆರೈಕೆ ಕೇಂದ್ರಗಳಿಗೆ ದಾಖಲಾಗಬಹುದು. ಅನೇಕ ಸಹಾಯವಾಣಿ ಸಂಖ್ಯೆಗಳಿವೆ. ಹಲವು ಆಸ್ಪತ್ರೆಗಳ ವೈದ್ಯರು ಆನ್‌ಲೈನ್‌ನಲ್ಲಿಯೂ ಇಂತಹ ರೋಗಿಗಳಿಗೆ ಸಲಹೆ ಮತ್ತು ಮಾರ್ಗದರ್ಶನ ನೀಡುತ್ತಿದ್ದಾರೆ. ಇಂಥವರ ನೆರವು ಪಡೆಯಬಹುದು. ಅವರ ಸಲಹೆಯಂತೆ ಇಂಜೆಕ್ಷನ್, ಮಾತ್ರೆಗಳನ್ನು ತೆಗೆದುಕೊಳ್ಳಬಹುದು.

ನಾವೆಲ್ಲರೂ ಎಚ್ಚರ ತಪ್ಪಿದ್ದೇ ಎರಡನೇ ಅಲೆ ಬರಲು ಕಾರಣ. ಮೂರನೇ ಅಲೆ ಬರುವುದಕ್ಕೆ ನಾವು ಅವಕಾಶ ಕೊಡಬಾರದು. ಮೊದಲು ಔಷಧ ಇರಲಿಲ್ಲ. ಈಗ ಸಿಕ್ಕಿದೆ. ಅಗತ್ಯವಿರುವ ಎಲ್ಲರೂ ಲಸಿಕೆ ಹಾಕಿಸಿಕೊಳ್ಳಬೇಕು. ಹೊರಗೆ ಹೋಗುವಾಗ ಮಾಸ್ಕ್ ಧರಿಸುವುದು, ಅಂತರ ಕಾಯ್ದುಕೊಳ್ಳುವುದು, ಪದೇ ಪದೇ ಕೈ ತೊಳೆಯುವುದನ್ನು ಮರೆಯಬಾರದು. ಎಲ್ಲಕ್ಕಿಂತ ಮುಖ್ಯವಾಗಿ ಧೈರ್ಯಗೆಡಬಾರದು. ಮಾನಸಿಕವಾಗಿ ನಾವು ಸಬಲರಾಗಿದ್ದು, ಧೈರ್ಯದಿಂದ ಇದ್ದರೆ ಕೋವಿಡ್ ನಮ್ಮನ್ನು ಹೆಚ್ಚು ಬಾಧಿಸದು.

ಡಾ. ಎಂ.ವಿ. ಭಾವನಾ, ಸೂಕ್ಷ್ಮಜೀವವಿಜ್ಞಾನ ವಿಭಾಗ, ಮಣಿಪಾಲ್ ಆಸ್ಪತ್ರೆ

ಕೋವಿಡ್: ಕೇಂದ್ರದ ಕಾರ್ಯವೈಖರಿಗೆ ಪರಕಾಲ ಪ್ರಭಾಕರ ಟೀಕೆ

‘ಈಗಿನ ಸ್ಥಿತಿಗೆ ನಿರ್ಲಕ್ಷ್ಯವೇ ಕಾರಣ’

ಪ್ರಜಾವಾಣಿ ವಾರ್ತೆ

ಪರಕಾಲ ಪ್ರಭಾಕರ್

ಬೆಂಗಳೂರು: ಕೋವಿಡ್ ಸ್ಥಿತಿ ನಿರ್ವಹಣೆಯ ವಿಚಾರದಲ್ಲಿ ಸರ್ಕಾರದ ಕಾರ್ಯವೈಖರಿಯನ್ನು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರ ಪತಿ, ಡಾ. ಪರಕಾಲ ಪ್ರಭಾಕರ ಅವರು ತೀವ್ರವಾಗಿ ಟೀಕಿಸಿದ್ದಾರೆ.

ಕೋವಿಡ್ ನಿರ್ವಹಣೆಯ ವಿಚಾರವಾಗಿ ಅವರ ‘ಮಿಡ್‌ವೀಕ್ ಮ್ಯಾಟರ್ಸ್’ ಭಾಷಣದ ವಿಡಿಯೊ, ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.

‘ರಾಜಕೀಯ ನಾಯಕರು ಜನರ ಭಾವನೆಗಳಿಗೆ ಸ್ಪಂದಿಸುವ ಗುಣ ಕಳೆದುಕೊಂಡಿದ್ದಾರೆ. ಪ್ರಧಾನಿಯವರು ಮಾತಿನ ವೈಖರಿ, ಚಾಣಾಕ್ಷ ನಡೆಗಳಿಂದ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಕೌಶಲಗಳನ್ನು ಸಿದ್ಧಿಸಿಕೊಂಡಿದ್ದಾರೆ. ಹೊಣೆಗಾರಿಕೆ, ಪಾರದರ್ಶಕತೆಯನ್ನು ಕಾಯ್ದುಕೊಳ್ಳುವವರು ಭಾರತದ ಇತಿಹಾಸದಲ್ಲಿ ದಾಖಲಾಗುತ್ತಾರೆ. ಪ್ರಧಾನಿ ಈಗಲಾದರೂ ಸೂಕ್ತವಾದುದನ್ನು ಅರಿಸಿಕೊಳ್ಳಬೇಕು’ ಎಂದು ಅವರು ಹೇಳಿದ್ದಾರೆ.

‘ನಮ್ಮ ರಾಜಕೀಯ ಮತ್ತು ಧಾರ್ಮಿಕ ಮುಖಂಡರು ಇದ್ಯಾವುದನ್ನೂ ತಲೆಗೆ ಹಾಕಿ ಕೊಂಡಂತಿಲ್ಲ. ರಾಜಕೀಯದವರಿಗೆ ಚುನಾವಣೆ ಮುಖ್ಯ. ಧಾರ್ಮಿಕ ಮುಖಂಡರಿಗೆ ತಮ್ಮ ಆಚರಣೆಗಳು ಮುಖ್ಯವೆನಿಸಿದೆ. ಚುನಾವಣಾ ರ‍್ಯಾಲಿಗಳಲ್ಲಿ ಪ್ರಧಾನಿ, ಕೇಂದ್ರ ಸಚಿವರು, ಪ್ರತಿಪಕ್ಷಗಳ ನಾಯಕರು ಭಾಗಿಯಾಗುತ್ತಾರೆ. ಕುಂಭಮೇಳದಲ್ಲಿ ಸಾವಿರಾರು ಜನ ಶಾಹಿಸ್ನಾನ ಮಾಡುತ್ತಾರೆ. ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ತಮ್ಮ ರ‍್ಯಾಲಿಗಳನ್ನು ರದ್ದುಪಡಿಸಿದರು. ಆದರೆ ವಿವಿಧ ಪಕ್ಷಗಳ ಅಭ್ಯರ್ಥಿಗಳು ಕೋವಿಡ್ ನಡುವೆಯೇ ಪಶ್ಚಿಮ ಬಂಗಾಳದ ಚುನಾವಣಾ ಪ್ರಚಾರದಲ್ಲಿ ಭಾಗಿಯಾದರು. ಚುನಾವಣಾ ರ‍್ಯಾಲಿ ಹಾಗೂ ಕುಂಭಮೇಳಗಳನ್ನು ಕೆಲವರು ಸಮರ್ಥಿಸಿಕೊಂಡರು. ಇದು ನಿಜಕ್ಕೂ ಬೇಸರದ ಸಂಗತಿ.

‘ಭಾರತವು ಈಗ ಆರೋಗ್ಯ ತುರ್ತು ಪರಿಸ್ಥಿತಿಯನ್ನು ಎದುರಿಸುತ್ತಿದೆ. ಕಳೆದ ಒಂದು ವಾರದ ವಿದ್ಯಮಾನಗಳನ್ನು ಗಮನಿಸಿದರೆ, ನಾವು ಎಂಥ ಪರಿಸ್ಥಿತಿಯಲ್ಲಿ ಇದ್ದೇವೆ, ಕೇಂದ್ರ ಸರ್ಕಾರದ ಸಿದ್ಧತೆ ಹೇಗಿದೆ, ರಾಜಕೀಯ ವ್ಯವಸ್ಥೆಯ ಹೊಣೆಗಾರಿಕೆ ಯಾವ ಮಟ್ಟದಲ್ಲಿದೆ ಬಗ್ಗೆ ಚಿತ್ರಣ ಸಿಗುತ್ತದೆ ಎಂದು ಅವರು ಟೀಕಿಸಿದ್ದಾರೆ.

‘ಕಳೆದ ವರ್ಷ ಕೋವಿಡ್‌ಗೆ ಒಳಗಾದ ಕುಟುಂಬದ ಸದಸ್ಯನ ಚಿಕಿತ್ಸೆಗಾಗಿ ಅನೇಕರು ಜೀವಮಾನದ ಗಳಿಕೆಯನ್ನೆಲ್ಲಾ ವ್ಯಯಿಸಿದ್ದಾರೆ. ಎರಡನೇ ಅಲೆಯು ಇನ್ನಷ್ಟು ಭೀಕರವಾಗಿದೆ. ಪರಿಸ್ಥಿತಿ ಇನ್ನಷ್ಟು ಬಿಗಡಾಯಿಸಲಿದೆ ಎಂದು ವೈದ್ಯರು ಹೇಳುತ್ತಿದ್ದಾರೆ. ಈಗಾಗಲೇ ಆಸ್ಪತ್ರೆಗಳ ಹೊರಗೆ ರೋಗಿಗಳು, ಅವರ ಸಂಬಂಧಿಕರ ಸಾಲುಗಟ್ಟಿ ನಿಂತಿದ್ದಾರೆ. ಸ್ಮಶಾನಗಳಲ್ಲಿ ಹೆಣ ಸುಡಲು ಸರತಿ ಸಾಲಿನಲ್ಲಿ ನಿಂತಿರುವ ದೃಶ್ಯಗಳು ಮನಕಲಕುತ್ತಿವೆ ಎಂದಿದ್ದಾರೆ.

‘ಎರಡನೇ ಅಲೆಯನ್ನು ಎದುರಿಸಲು ನಾವು ಸಿದ್ಧರಾಗಿಲ್ಲ ಎಂಬುದು ಸ್ಪಷ್ಟ. ಲಸಿಕೆ ನೀಡಿಕೆಯಲ್ಲಿ ಹಿಂದೆ ಬೀಳುತ್ತಿದ್ದೇವೆ. ಸಿದ್ಧತೆಯ ಬಗ್ಗೆ ಏನೇ ಕೇಳಿದರೂ ಉತ್ತರಿಸುವ ಮನಸ್ಥಿತಿಯಲ್ಲಿ ಕೇಂದ್ರ ಸರ್ಕಾರ ಇಲ್ಲ. ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರು ನೀಡಿದ ಸಲಹೆಗಳಿಗೆ ಕೇಂದ್ರದ ಆರೋಗ್ಯ ಸಚಿವರಿಂದ ಅಸಡ್ಡೆಯ ಉತ್ತರ ಸಿಕ್ಕಿತು. ಸಮಸ್ಯೆ ಬಗ್ಗೆ ಆಳವಾಗಿ ಯೋಚಿಸದಿದ್ದರೆ ಹೀಗಾಗುತ್ತದೆ’ ಎಂದು ಪ್ರಭಾಕರ ಅವರು ಟೀಕಿಸಿದ್ದಾರೆ.



‘ರೆಮ್‌ಡಿಸಿವಿರ್: ಕೃತಕ ಅಭಾವದ ಸಂಶಯ’

ಪ್ರಜಾವಾಣಿ ವಾರ್ತೆ

ಅಶ್ವತ್ಥ ನಾರಾಯಣ

ಬೆಂಗಳೂರು: ಕೋವಿಡ್ ರೋಗಿಗಳಿಗೆ ಬೇಕಾದ ಆಮ್ಲಜನಕ ಹಾಗೂ ರೆಮ್‌ಡಿಸಿವಿರ್ ಇಂಜೆಕ್ಷನ್ ಕೊರತೆ ಇಲ್ಲ. ಹಣದಾಸೆಗೆ ಬಿದ್ದ ಕೆಲವರು, ಜನರಿಗೆ ತೊಂದರೆ ನೀಡಿ ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಉದ್ದೇಶದಿಂದ ಕೃತಕ ಅಭಾವ ಸೃಷ್ಟಿಸುತ್ತಿರುವ ಸಂಶಯ ಇದೆ ಎಂದು ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಹೇಳಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, ಸಾಗಣೆ ಸಮಸ್ಯೆ ಬಿಟ್ಟರೆ ಆಮ್ಲಜನಕ ಕೊರತೆ ಆಗಿಲ್ಲ. ಅಗತ್ಯದಷ್ಟು ಆಮ್ಲಜನಕ ಪೂರೈಕೆಯಾಗುತ್ತಿದೆ. ಹಾಗಿದ್ದರೂ ಕೊರತೆ ಆಗುತ್ತಿರುವುದಕ್ಕೆ ಕಾರಣ ಗೊತ್ತಾಗುತ್ತಿಲ್ಲ. ಇದು ಅನುಮಾನ ಮೂಡಿಸಿದ್ದು, ಸರ್ಕಾರ ಹದ್ದಿನ ಕಣ್ಣು ಇಟ್ಟಿದೆ ಎಂದರು.

ರಾಜ್ಯಕ್ಕೆ ಪ್ರತಿದಿನ 15 ಸಾವಿರದಿಂದ 20 ಸಾವಿರ ವೈಲ್ ರೆಮ್‌ಡಿಸಿವಿರ್ ಪೂರೈಕೆಯಾಗುತ್ತಿದೆ. ಹೊಸದಾಗಿ 15 ಸಾವಿರ ಆಸ್ಪತ್ರೆಗೇನೂ ದಾಖಲಾಗುತ್ತಿಲ್ಲ. ರೆಮ್‌ಡಿಸಿವಿರ್ ಪೂರೈಕೆ, ಬಳಕೆಗೆ ತಾಳಮೇಳವೇ ಕಾಣಿಸುತ್ತಿಲ್ಲ. ಕಿಡಿಗೇಡಿಗಳು ಕೃತಕ ಅಭಾವ ಸೃಷ್ಟಿಸುತ್ತಿರುವ ಸಾಧ್ಯತೆ ಹೆಚ್ಚಿದೆ ಎಂದು ಅವರು ಹೇಳಿದರು.

ಸೋಂಕಿತರಿಗೆ ಚಿಕಿತ್ಸೆ ನೀಡುವ ಕಾರ್ಯತಂತ್ರ ಬದಲಾಗಬೇಕಿದೆ. ಪರೀಕ್ಷೆ, ವರದಿ ಹಾಗೂ ಚಿಕಿತ್ಸಾ ಆರಂಭವನ್ನು ವಿಳಂಬ ಮಾಡುವ ಸ್ಥಿತಿ ಇಲ್ಲ. ಈಗ ಪರಿಸ್ಥಿತಿ ನಮ್ಮ ಕೈಮೀರಿದೆ. ಒಂದೇ ದಿನದಲ್ಲಿ ಪರೀಕ್ಷೆ, ಫಲಿತಾಂಶ, ಚಿಕಿತ್ಸೆ ಆರಂಭಿಸುವುದು ಆಗಬೇಕು. ಸೋಂಕು ಉಲ್ಬಣಗೊಳ್ಳುವ ಮೊದಲು ಚಿಕಿತ್ಸೆ ಕೊಡದಿದ್ದರೆ ಪರಿಸ್ಥಿತಿ ಕಷ್ಟ ಆಗುತ್ತದೆ ಎಂದು ಅವರು ಹೇಳಿದರು.

ರಾಜ್ಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಆಕ್ಸಿಜನ್ ಪೂರೈಕೆ; ಜೋಶಿ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಆಕ್ಸಿಜನ್ ದೊರೆಯುತ್ತಿಲ್ಲ ಎಂದು ಯಾರೂ ಭಯಪಡುವ ಅಗತ್ಯವಿಲ್ಲ. ಕೇಂದ್ರ ಸರ್ಕಾರವು ರಾಜ್ಯಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಆಮ್ಲಜನಕ ಪೂರೈಸಲು ಕ್ರಮ ವಹಿಸಿದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಶನಿವಾರ ಹೇಳಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ದೊಡ್ಡ ನಗರಗಳಲ್ಲಿ ಆಮ್ಲಜನಕದ ಕೊರತೆ ಆಗಿರುವುದು ಸತ್ಯ. ಕೇಂದ್ರ ಸರ್ಕಾರ ರಾಜ್ಯದ ವಿಚಾರದಲ್ಲೂ ಕೇಂದ್ರ ಮುತುವರ್ಜಿ ವಹಿಸಿದೆ. ಆರೋಗ್ಯ ಸಚಿವರು ನಿರಂತರ ಸಂಪರ್ಕದಲ್ಲಿದ್ದಾರೆ. ಬಳ್ಳಾರಿಯ ಕಾರ್ಖಾನೆಗಳಲ್ಲಿ ತಯಾರಾಗುತ್ತಿರುವ ಆಕ್ಸಿಜನ್ ಪಡೆಯಲು ಮಾತುಕತೆ ನಡೆದಿದೆ’ ಎಂದರು.

‘ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳಿಗೆ ಅಗತ್ಯವಿದ್ದಷ್ಟು ಲಸಿಕೆ ಪೂರೈಕೆ ಮಾಡುತ್ತಿದೆ. ರೆಮ್‌ಡಿಸಿವಿರ್ ಕೋವಿಡ್‌ಗೆ ಅಂತಿಮ ಪರಿಹಾರವಲ್ಲ. ಅದು ಕೊರತೆಯಾಗಿದೆ ಎಂದು ಕೆಲವರು ಗಾಬರಿ ಹುಟ್ಟಿಸುತ್ತಿದ್ದಾರೆ. ಕೋವಿಡ್ ಬಗ್ಗೆ ಭಯಪಡುವ ಅಗತ್ಯವಿಲ್ಲ. ಆದರೆ, ಜಾಗೃತರಾಗಿರಬೇಕು’ ಎಂದು ಹೇಳಿದರು.

ದೇಶವಿರೋಧಿ ಶಕ್ತಿಗಳಿಂದ ಕೋವಿಡ್ ಪರಿಸ್ಥಿತಿ ದುರ್ಬಳಕೆ: ಆರ್‌ಎಸ್‌ಎಸ್

ದತ್ತಾತ್ರೇಯ ಹೊಸಬಾಳೆ

ನವದೆಹಲಿ (ಪಿಟಿಐ): ವಿನಾಶಕಾರಿ ಹಾಗೂ ಭಾರತ ವಿರೋಧಿ ಶಕ್ತಿಗಳ ಬಗ್ಗೆ ಜನರು ಎಚ್ಚರದಿಂದಿರಬೇಕು. ದೇಶವನ್ನು ಬಾಧಿಸುತ್ತಿರುವ ಕೋವಿಡ್–19 ಪಿಡುಗಿನ ಸಂಕಷ್ಟದ ಸಮಯವನ್ನು ಈ ಶಕ್ತಿಗಳು ದುರ್ಬಳಕೆಗೆ ಪಿತೂರಿ ನಡೆಸುವ ಸಾಧ್ಯತೆಗಳಿವೆ ಎಂದು ಆರ್‌ಎಸ್‌ಎಸ್ ಶನಿವಾರ ಹೇಳಿದೆ.

‘ಕೋವಿಡ್–19ನ ಎರಡನೇ ಅಲೆಯ ಸಮಯದಲ್ಲಿ ಈ ಶಕ್ತಿಗಳು ದೇಶದಲ್ಲಿ ನಕಾರಾತ್ಮಕ ಹಾಗೂ ಅಪನಂಬಿಕೆಯ ವಾತಾವರಣ ಸೃಷ್ಟಿಸಲೂ ಯತ್ನಿಸುತ್ತವೆ’ ಎಂದು ಆರ್‌ಎಸ್‌ಎಸ್‌ನ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಅವರು ಪ್ರಕಟಣೆಯಲ್ಲಿ ಹೇಳಿದ್ದಾರೆ.

‘ಸದ್ಯದ ಸನ್ನಿವೇಶ ಒಡ್ಡಿರುವ ಸವಾಲುಗಳನ್ನು ಎದುರಿಸಲು ಸಂಘಟನೆಯ ಕಾರ್ಯಕರ್ತರು, ಸಾಮಾಜಿಕ ಹಾಗೂ ಧಾರ್ಮಿಕ ಸಂಸ್ಥೆಗಳು ಸಜ್ಜಾಗಬೇಕು’ ಎಂದಿದ್ದಾರೆ.

‘ಮಾಧ್ಯಮಗಳೂ ಸೇರಿದಂತೆ ಸಮಾಜದ ಎಲ್ಲ ವರ್ಗಗಳು ಸಮಾಜದಲ್ಲಿ ಸಕಾರಾತ್ಮಕತೆ, ಭರವಸೆ ಹಾಗೂ ಅಪನಂಬಿಕೆ ದೂರ ಮಾಡುವಂಥ ವಾತಾವರಣ ನಿರ್ಮಿಸಲು ಶ್ರಮಿಸಬೇಕು’ ಎಂದು ಅವರು ಮನವಿ ಮಾಡಿದ್ದಾರೆ.

‘ಕೋವಿಡ್–19 ಪಿಡುಗಿನ ಈ ಸಮಯದಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಮಾಹಿತಿ, ಅನಿಸಿಕೆ ಹಂಚಿಕೊಳ್ಳುವವರು ಹೆಚ್ಚು ಸಂಯಮ ಹಾಗೂ ಜಾಗರೂಕರಾಗಿರಬೇಕು’ ಎಂದೂ ದತ್ತಾತ್ರೇಯ ಹೊಸಬಾಳೆ ಅವರು ಪ್ರತಿಪಾದಿಸಿದ್ದಾರೆ.

ಎಂಎಲ್‌ಸಿ ಗೋವಿಂದರಾಜುಗೆ ಸೋಂಕು

ಕೋಲಾರ: ವಿಧಾನ ಪರಿಷತ್ ಸದಸ್ಯ ಜೆಡಿಎಸ್‌ನ ಗೋವಿಂದರಾಜು ಅವರಿಗೆ ಕೊರೊನಾ ಸೋಂಕು ತಗುಲಿರುವುದು ಶನಿವಾರ ದೃಢಪಟ್ಟಿದ್ದು, ಅವರು ಮನೆಯಲ್ಲೇ ಕ್ವಾರಂಟೈನ್ ಆಗಿದ್ದಾರೆ. ಗೋವಿಂದರಾಜು ಅವರ ಪತ್ನಿ ಮತ್ತು ಮನೆಗೆಲಸದ ಮಹಿಳೆಗೂ ಸೋಂಕು ಹರಡಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮಾಜಿ ಗೃಹ ಸಚಿವರ ವಿರುದ್ಧದ ಲಂಚ ಪ್ರಕರಣ

ಅನಿಲ್ ದೇಶ್‌ಮುಖ್ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಅನಿಲ್ ದೇಶ್‌ಮುಖ್

ಮುಂಬೈ: ಲಂಚ ಪ್ರಕರಣದಲ್ಲಿ ಮುಂಬೈನ ಐಪಿಎಸ್ ಅಧಿಕಾರಿ ಪರಮ್ ವೀರ್ ಸಿಂಗ್ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶ್‌ಮುಖ್ ಮತ್ತು ಇತರರ ವಿರುದ್ಧ ಸಿಬಿಐ ಶನಿವಾರ ಎಫ್‌ಐಆರ್ ದಾಖಲಿಸಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿರುವುದಾಗಿ ಸುದ್ದಿ ಸಂಸ್ಥೆ ಎಎನ್‌ಐ ವರದಿ ಮಾಡಿದೆ.

ಪ್ರತಿ ತಿಂಗಳೂ ₹100 ಕೋಟಿ ಲಂಚ ಸಂಗ್ರಹಿಸುವಂತೆ ಅಮಾನತುಗೊಂಡಿರುವ ಮುಂಬೈ ಪೊಲೀಸ್ ಅಧಿಕಾರಿ ಸಚಿನ್ ವಾಜೆಗೆ ಅನಿಲ್ ದೇಶಮುಖ್ ಸೂಚಿಸಿದ್ದರು ಎಂದು ಐಪಿಎಸ್ ಅಧಿಕಾರಿ ಪರಮ್ ವೀರ್ ಸಿಂಗ್ ಆರೋಪಿಸಿದ್ದರು. ಇದು ರಾಷ್ಟ್ರಮಟ್ಟದಲ್ಲಿ ವ್ಯಾಪಕ ಚರ್ಚೆಗೆ ಗ್ರಾಸವಾಗಿತ್ತು.

ಪ್ರಕರಣಕ್ಕೆ ಸಂಬಂಧಿಸಿ ದೇಶಮುಖ್ ವಿರುದ್ಧ ಸಿಬಿಐ ತನಿಖೆ ನಡೆಸಬೇಕೆಂದು ಕೋರಿ ಪರಮ್ ವೀರ್ ಸಿಂಗ್ ಬಾಂಬೆ ಹೈಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನೂ ಸಲ್ಲಿಸಿದ್ದರು.

ಮುಂಬೈನ ಬಾರ್‌ಗಳು, ರೆಸ್ಟೋರೆಂಟ್‌ಗಳು ಮತ್ತು ಹೋಟೆಲ್‌ಗಳಿಂದ ಹಣವನ್ನು ಸಂಗ್ರಹಿಸಲು ಅನಿಲ್ ದೇಶ್‌ಮುಖ್ ತನ್ನ ಅಧೀನ ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾಗಿ ಪರಮ್ ವೀರ್ ಸಿಂಗ್ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರಿಗೆ ಬರೆದ ಪತ್ರದಲ್ಲಿ ಆರೋಪಿಸಿದ ನಂತರ ಮಾಜಿ ಸಚಿವರನ್ನು ಏಪ್ರಿಲ್ 14 ರಂದು ಸಿಬಿಐ ವಿಚಾರಣೆಗೆ ಒಳಪಡಿಸಿತ್ತು.

ನಿವಾಸದಲ್ಲಿ ಸಿಬಿಐ ಶೋಧ: ಭ್ರಷ್ಟಾಚಾರ ಆರೋಪಕ್ಕೆ ಸಂಬಂಧಿಸಿದಂತೆ ಶನಿವಾರ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್ ಅವರ ನಿವಾಸಗಳಲ್ಲಿ ಸಿಬಿಐ ಅಧಿಕಾರಿಗಳು ಶೋಧ ಕಾರ್ಯ ಕೈಗೊಂಡಿದ್ದಾರೆ.

ಸಾರಿಗೆ ಸಚಿವ ಪರಬ್ ವಿರುದ್ಧ ಕ್ರಮಕ್ಕೆ ಬಿಜೆಪಿ ಒತ್ತಾಯ

ಮುಂಬೈ: ಮಹಾರಾಷ್ಟ್ರದ ಮಾಜಿ ಗೃಹ ಸಚಿವ ಅನಿಲ್ ದೇಶಮುಖ್‌ಗೆ ಸಂಬಂಧಿಸಿದ ಸ್ಥಳಗಳ ಮೇಲೆ ಸಿಬಿಐ ದಾಳಿ ನಡೆಸಿದ ಬೆನ್ನಲ್ಲೇ, ಸಂಸದೀಯ ವ್ಯವಹಾರಗಳು ಹಾಗೂ ಸಾರಿಗೆ ಸಚಿವ ಅನಿಲ್ ಪರಬ್ ವಿರುದ್ಧ ಕ್ರಮ ಕೈಗೊಳ್ಳುವಂತೆ ಬಿಜೆಪಿ ಒತ್ತಾಯಿಸಿದೆ. ಸಚಿವ ಪರಬ್ ಅವರು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರ ಆಪ್ತರು.

ಉದ್ಯಮಿ ಮುಕೇಶ್ ಅಂಬಾನಿ ನಿವಾಸದ ಬಳಿ ಸ್ಫೋಟಕಗಳಿದ್ದ ವಾಹನ ಪತ್ತೆ ಪ್ರಕರಣದಲ್ಲಿ ಅಮಾನತುಗೊಂಡಿರುವ ಎಎಸ್‌ಐ ಸಚಿನ್ ವಾಜೆ, ಪರಬ್ ಹಾಗೂ ದೇಶಮುಖ್ ಅವರು ಹಣ ವಸೂಲಿ ಮಾಡುವಂತೆ ತಮಗೆ ಸೂಚಿಸಿದ್ದರು ಎಂದು ಆರೋಪಿಸಿದ್ದಾರೆ. ಈ ಸಂಬಂಧ ವಾಜೆ ಅವರು ಎನ್‌ಐಎ ಕೋರ್ಟ್‌ಗೆ ಲಿಖಿತ ಹೇಳಿಕೆ ಸಲ್ಲಿಸಿದ್ದಾರೆ.

'ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರಿಗೆ ಆಪ್ತರಾಗಿರುವ ದರ್ಶನ್ ಘೋಡಾವತ್ ಎಂಬುವವರು ಸಹ ನನಗೆ ಹಣ ವಸೂಲಿ ಮಾಡುವಂತೆ ಸೂಚಿಸಿದ್ದರು' ಎಂದೂ ವಾಜೆ ಹೇಳಿದ್ದಾರೆ.

'ಅನಿಲ್ ದೇಶಮುಖ್ ವಿರುದ್ಧ ತನಿಖೆ ಆರಂಭವಾಗಿದೆ. ಅದೇ ರೀತಿ, ಸಚಿವ ಪರಬ್ ಹಾಗೂ ಘೋಡಾವತ್ ವಿರುದ್ಧವೂ ಸಿಬಿಐ ತನಿಖೆ ನಡೆಸಬೇಕು ಎಂಬುದು ನಮ್ಮ ಒತ್ತಾಯ' ಎಂದು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷ ಚಂದ್ರಕಾಂತ ಪಾಟೀಲ್ ಹೇಳಿದರು.

'ದೇಶಮುಖ್ ಆಯ್ತು, ಈಗ ಪರಬ್ ವಿರುದ್ಧ ಸಿಬಿಐ ತನಿಖೆ ಆರಂಭಿಸಬೇಕು. ಎನ್‌ಐಎ, ಐಟಿ, ಇ.ಡಿ ಹಾಗೂ ಎಸ್‌ಎಫ್‌ಐಒನಂತಹ ಸಂಸ್ಥೆಗಳು ಸಹ ಈ ತನಿಖೆ ಆರಂಭಿಸಬೇಕು' ಎಂದು ಬಿಜೆಪಿಯ ಮತ್ತೊಬ್ಬ ಹಿರಿಯ ಮುಖಂಡ ಕಿರೀಟ್ ಸೋಮೈಯ ಆಗ್ರಹಿಸಿದರು.

ಕಾಂಗ್ರೆಸ್‌ನ 'ಐಎನ್‌ಸಿ ಟಿ.ವಿ'

ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಚಾಲನೆ

ನವದೆಹಲಿ (ಪಿಟಿಐ): 'ರಾಷ್ಟ್ರೀಯ ಪಂಚಾಯತ್ ರಾಜ್ ದಿನ'ವಾದ ಇಂದು (ಏ.24) ಕಾಂಗ್ರೆಸ್ ಪಕ್ಷವು ತನ್ನ ಡಿಜಿಟಲ್ ಮಾಧ್ಯಮ ವೇದಿಕೆಯಾದ 'ಐಎನ್‌ಸಿ ಟಿ.ವಿ' ಚಾನಲ್ ಆರಂಭಿಸಿತು. ಈ ಮೂಲಕ ಪಕ್ಷ ಜನರನ್ನು ನೇರವಾಗಿ ತಲುಪಲು ಉದ್ದೇಶಿಸಿದೆ.

ದೇಶದಲ್ಲಿ ವಿವಿಧ ಸಂಸ್ಥೆಗಳು ಇಂದು ಸರ್ಕಾರದಿಂದ ದಾಳಿಗೆ ಒಳಗಾಗುತ್ತಿವೆ. ಆದರೆ, ಇದು ಮಾಧ್ಯಮಗಳಲ್ಲಿ ಸರಿಯಾಗಿ ಬಿಂಬಿತವಾಗುತ್ತಿಲ್ಲ ಎಂದು ಪಕ್ಷದ ಮುಖಂಡರೊಬ್ಬರು ಅಭಿಪ್ರಾಯಪಟ್ಟರು.

ಎಐಸಿಸಿ ಕಾರ್ಯದರ್ಶಿ ಪ್ರಣವ್ ಝಾ ಅವರು, ಸರ್ಕಾರವು ಪ್ರಸಾರ ಮಾಡಲು ಅವಕಾಶ ನೀಡದ ಸುದ್ದಿಗಳು ಐಎನ್‌ಸಿ ಟಿ.ವಿಯಲ್ಲಿ ಪ್ರಮುಖವಾಗಿ ಸ್ಥಾನ ಪಡೆಯಲಿವೆ. ಈ ಮೂಲಕ ಜನರಿಗೆ ವಾಸ್ತವವಾಗಿ ಏನು ನಡೆಯುತ್ತಿದೆ ಎಂಬುದನ್ನು ತಿಳಿಸಲಾಗುವುದು ಎಂದು ಹೇಳಿದರು.

ವರ್ಚುವಲ್ ಸ್ವರೂಪದಲ್ಲಿ ಚಾನಲ್‌ಗೆ ಚಾಲನೆ ನೀಡಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರು, ಈ ಚಾನಲ್ ಜನರಿಗೆ ಧ್ವನಿಯಾಗಲಿದೆ. ಕಡುಬಡವರ ಸಮಸ್ಯೆಗಳತ್ತ ಗಮನಸೆಳೆಯಲಿದೆ ಎಂದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ಅಜಯ್ ಮಕೆನ್, ಸಂಚಾಲಕ ಪವನ್ ಬನ್ಸಾಲ್, ವಕ್ತಾರ್ ಪವನ್ ಖೇರಾ ಅವರು ಇದ್ದರು.

ಕಾಂಗ್ರೆಸ್ ಪಕ್ಷದ 'ಐಎನ್‌ಸಿ ಟಿ.ವಿ'ಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಕಾಂಗ್ರೆಸ್‌ನ ಹಿರಿಯ ಮುಖಂಡ ಮಲ್ಲಿಕಾರ್ಜುನ ಖರ್ಗೆ, ಅಖಿಲ ಭಾರತ ಮಹಿಳಾ ಕಾಂಗ್ರೆಸ್ ಘಟಕದ ಅಧ್ಯಕ್ಷೆ ಸುಶ್ಮಿತಾ ದೇವ್ ಇದ್ದರು.

ಕರಗಿತು ₹ 2.93 ಲಕ್ಷ ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಷೇರುಪೇಟೆಗಳ ವಾರದ ವಹಿವಾಟು ನಕಾರಾತ್ಮಕವಾಗಿ ಅಂತ್ಯವಾಗಿದೆ. ಕೋವಿಡ್‌–19 ಪ್ರಕರಣಗಳ ಸಂಖ್ಯೆ ಹೆಚ್ಚಾಗುತ್ತಿರುವುದು, ರೂಪಾಯಿ ಮೌಲ್ಯ ಇಳಿಕೆ ಹಾಗೂ ವಿದೇಶಿ ಬಂಡವಾಳ ಹೊರಹರಿವಿನ ಕಾರಣಗಳಿಂದಾಗಿ ವಹಿವಾಟು ಇಳಿಕೆ ಕಾಣುವಂತಾಗಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ವಾರದ ವಹಿವಾಟಿನಲ್ಲಿ 954 ಅಂಶ ಇಳಿಕೆ ಆಗಿ 47,878 ಅಂಶಗಳಲ್ಲಿ ವಹಿವಾಟು ಅಂತ್ಯವಾಗಿದೆ. ಹೂಡಿಕೆದಾರರ ಸಂಪತ್ತು ₹ 2.93 ಲಕ್ಷ ಕೋಟಿಗಳಷ್ಟು ಕರಗಿದ್ದು, ಷೇರುಪೇಟೆಯ ಬಂಡವಾಳ ಮೌಲ್ಯ ₹ 205.30 ಲಕ್ಷ ಕೋಟಿಗಳಿಂದ ₹ 202.37 ಲಕ್ಷ ಕೋಟಿಗಳಿಗೆ ಇಳಿಕೆಯಾಗಿದೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 276 ಅಂಶ ಇಳಿಕೆಯಾಗಿ 14,341 ಅಂಶಗಳಿಗೆ ತಲುಪಿದೆ.

ದೇಶದಲ್ಲಿ ಕೋವಿಡ್‌–19 ಪ್ರಕರಣಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಲೇ ಇದೆ. ಇದರಿಂದಾಗಿ ಹಲವು ರಾಜ್ಯಗಳಲ್ಲಿ ಹೊಸದಾಗಿ ಲಾಕ್‌ಡೌನ್ ಮತ್ತು ನಿರ್ಬಂಧಗಳನ್ನು ಜಾರಿಗೊಳಿಸಲಾಗುತ್ತಿದೆ. ಈ ಬೆಳವಣಿಗೆಯು ಬೇಡಿಕೆ ಮತ್ತು ವಾಣಿಜ್ಯ ವಹಿವಾಟುಗಳ ಮೇಲೆ ಪರಿಣಾಮ ಉಂಟುಮಾಡುತ್ತಿದೆ. ಇದರಿಂದಾಗಿ ಒಟ್ಟಾರೆ ಆರ್ಥಿಕ ಬೆಳವಣಿಗೆಯ ಮೇಲೆ ನಕಾರಾತ್ಮಕ ಪ್ರಭಾವ ಬೀರುವ ಸಾಧ್ಯತೆ ಇದೆ ಎಂದು ತಜ್ಞರು ಹೇಳಿದ್ದಾರೆ.

ಕೋವಿಡ್ ಪ್ರಕರಣಗಳ ಹೆಚ್ಚಳವು ವಿದೇಶಿ ಬಂಡವಾಳ ಹೂಡಿಕೆದಾರರಲ್ಲಿ ಆತಂಕ ಮೂಡಿಸಿದ್ದು, ಷೇರುಪೇಟೆಯಿಂದ ಬಂಡವಾಳ ಹಿಂದಕ್ಕೆ ಪಡೆಯುವಂತೆ ಮಾಡಿದೆ ಎಂದೂ ತಿಳಿಸಿದ್ದಾರೆ.

ವಾರದ ವಹಿವಾಟಿನಲ್ಲಿ ಡಾಲರ್ ಎದುರು ರೂಪಾಯಿ ಮೌಲ್ಯ 66 ಪೈಸೆ ಇಳಿಕೆ ಆಗಿ ಒಂದು ಡಾಲರ್‌ಗೆ ₹ 75.02ಕ್ಕೆ ತಲುಪಿದೆ.

ಮುಂಬೈ ಧಾರಣೆ

ಶೇಂಗಾ

24-4-2021

ಜಾವಾ 70/80(ಹೊಸ)	10200-10300
ಜಾವಾ 80/90(ಹೊಸ)	9450-9550
ದಪ್ಪ ಮಧ್ಯಪ್ರದೇಶ(ಹೊಸ)	9950-10050
ದಪ್ಪ ಗುಜರಾತ್(ಹೊಸ)	9100-9200

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1640)
ಒಂದು ವಾರದ ಡೆಲಿವರಿ	1625 (1635)
ಸೋಯಾ ಕಚ್ಚಾ	1395 (1415)
ಪಾಮ್ ವಾರದ ಡೆಲಿವರಿ	1291 (1318)
ಸೂರ್ಯಕಾಂತಿ ಎಣ್ಣೆ ಕಚ್ಚಾ	1660 (1670)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,500 (47,650)
ಬೆಳ್ಳಿ ಕೆ.ಜಿ 69,000 (69,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವಿವಾದ್ ಸೆ ವಿಶ್ವಾಸ್: ಜೂನ್ 30ರವರೆಗೆ ವಿಸ್ತರಣೆ

ನವದೆಹಲಿ (ಪಿಟಿಐ): ವಿವಾದ್ ಸೆ ವಿಶ್ವಾಸ್ ಯೋಜನೆಯಡಿ ತೆರಿಗೆ ವ್ಯಾಜ್ಯ ಇತ್ಯರ್ಥಪಡಿಸಿಕೊಳ್ಳುವ ಗಡುವನ್ನು ಜೂನ್ 30 ರವರೆಗೆ ವಿಸ್ತರಣೆ ಮಾಡಿರುವುದಾಗಿ ಕೇಂದ್ರ ಸರ್ಕಾರ ಶನಿವಾರ ತಿಳಿಸಿದೆ.

ಕೋವಿಡ್‌–19 ಸಾಂಕ್ರಾಮಿಕವನ್ನು ಗಮನದಲ್ಲಿ ಇಟ್ಟುಕೊಂಡು ಗಡುವು ವಿಸ್ತರಿಸುವಂತೆ ತೆರಿಗೆದಾರರು, ತೆರಿಗೆ ಸಲಹೆಗಾರರು ಮನವಿ ಸಲ್ಲಿಸಿದ್ದರು. ಹೀಗಾಗಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ನೇರ ತೆರಿಗೆಗಳ ಕೇಂದ್ರೀಯ ಮಂಡಳಿ (ಸಿಬಿಡಿಟಿ) ಪ್ರಕಟಣೆಯಲ್ಲಿ ತಿಳಿಸಿದೆ.

ಈ ಹಿಂದೆ ಸಿಬಿಡಿಟಿ ಹೊರಡಿಸಿದ್ದ ಆದೇಶದ ಪ್ರಕಾರ ಈ ತಿಂಗಳ 30ರವರೆಗೂ ಗಡುವು ವಿಸ್ತರಿಸಲಾಗಿತ್ತು.

ಯೋಜನೆಯಡಿ ಏಪ್ರಿಲ್ ಆರಂಭದವರೆಗೆ ಸುಮಾರು ₹ 54,000 ಕೋಟಿ ಬೊಕ್ಕಸಕ್ಕೆ ಪಾವತಿಯಾಗಿದೆ. ಈಗಾಗಲೇ ಸಲ್ಲಿಸಿರುವ ಘೋಷಣೆಗಳ ಆಧಾರದ ಮೇಲೆ ಇನ್ನೂ ಹೆಚ್ಚಿನ ಮೊತ್ತ ಬರುವ ನಿರೀಕ್ಷೆಯಿದೆ ಎಂದೂ ಸಿಬಿಡಿಟಿ ತಿಳಿಸಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	900-9050
ನಡುಗೋಲು	1000-1050
ರಾಶಿ	1200-1300
ರಾಶಿ ಉತ್ತಮ	1300-1400
ಜರಡಿ	1500-1550
ಹೆರಕಿದ್ದು	1900-2000
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1700-1750
ಹಸಿರು ಅತಿ ಉತ್ತಮ	1900-2000
ಕಾಳು ಮೆಣಸು	350

ರಾಮನಗರ ರೇಷ್ಮೆ

ಮಿಶ್ರತಳಿ	100-345
ದ್ವಿತಳಿ	225-452

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	10150	10125	136.85 ಸೆಂಟ್ಸ್
ಎಸಿ	---	4000	4000	
ಆರ್‌ಪಿ	---	5050	5150	ಲಂಡನ್
ಆರ್‌ಸಿ	---	2950	2925	1389 ಡಾಲರ್ಸ್

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹410
12 ಮೊಟ್ಟೆಗೆ	₹57

ಮೈಸೂರು

100 ಮೊಟ್ಟೆಗೆ	₹410

ಅಂತರ ಕಾಯ್ದುಕೊಳ್ಳಿ

ಕೊರೊನಾ, ಮುಂಜಾಗ್ರತೆ ಇರಲಿ

'ಜಲಾಂತರ್ಗಾಮಿ ನಾಶವಾಗಿರುವ ಸೂಚನೆ'

ಬನ್ಯುವಾಂಗಿ, ಇಂಡೊನೇಷ್ಯಾ (ಎಪಿ): ನಾಪತ್ತೆಯಾಗಿದ್ದ ಜಲಾಂತರ್ಗಾಮಿಗೆ ಸಂಬಂಧಿಸಿದ ಹಲವಾರು ವಸ್ತುಗಳು ಸಿಕ್ಕಿವೆ. 53 ಜನ ಸಿಬ್ಬಂದಿ ಇದ್ದ ಈ ಜಲಾಂತರ್ಗಾಮಿ ಅಪಘಾತದಿಂದಾಗಿ ನಾಶವಾಗಿದೆ ಎಂಬುದನ್ನು ಇದು ಸೂಚಿಸುತ್ತದೆ ಎಂದು ಇಂಡೊನೇಷ್ಯಾ ನೌಕಾಪಡೆ ಶನಿವಾರ ಹೇಳಿದೆ.

'ಟಾರ್ಪಿಡೊ ಸ್ಟ್ರೇಟ್‌ನರ್, ಪೆರಿಸ್ಕೋಪ್‌ಗೆ ಲೇಪಿಸಲು ಬಳಸುವ ಗ್ರೀಸ್‌ನ ಬಾಟಲ್, ಪ್ರಾರ್ಥನೆ ಸಲ್ಲಿಸುವಾಗ ಉಪಯೋಗಿಸುವ ರಗ್ಗುಗಳು ಪತ್ತೆಯಾಗಿವೆ' ಎಂದು ನೌಕಾಪಡೆ ತಿಳಿಸಿದೆ.

'ರಕ್ಷಣಾ ಕಾರ್ಯದಲ್ಲಿ ತೊಡಗಿದ್ದವರು ಜಲಾಂತರ್ಗಾಮಿಗೆ (ಕೆಆರ್‌ಐ ನಂಗ್ಗಾಲಾ 402) ಸಂಬಂಧಿಸಿದ ಹಲವಾರು ವಸ್ತುಗಳನ್ನು ಪತ್ತೆ ಮಾಡಿದ್ದಾರೆ. ಹೀಗಾಗಿ, ಅದರಲ್ಲಿದ್ದವರು ಜೀವಂತವಾಗಿ ಪತ್ತೆಯಾಗುತ್ತಾರೆ ಎಂಬ ಭರವಸೆ ಕ್ಷೀಣಿಸಿದೆ' ಎಂದು ನೌಕಾಪಡೆ ಮುಖ್ಯಸ್ಥ ಯುಡೊ ಮಾರ್ಗೊನೊ ಬಾಲಿಯಲ್ಲಿ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದಾರೆ.

ಬಾಲಿ ದ್ವೀಪದಿಂದ ಬುಧವಾರ ಪ್ರಯಾಣ ಬೆಳೆಸಿದ್ದ ಈ ಜಲಾಂತರ್ಗಾಮಿ ನಂತರ ನಾಪತ್ತೆಯಾಗಿತ್ತು. 'ಜಲಾಂತರ್ಗಾಮಿ ನಾಪತ್ತೆಯಾಗಿದೆ ಎಂಬುದರ ಬದಲು ಜಲಾಂತರ್ಗಾಮಿ ಅಪಘಾತದಿಂದಾಗಿ ನಾಶವಾಗಿದೆ ಎಂಬ ಪದಗುಚ್ಛವನ್ನು ಈಗ ಬಳಸಬೇಕಾಗಿದೆ' ಎಂದು ಮಾರ್ಗೊನೊ ಹೇಳಿದರು.

ಅಮೆರಿಕದ ವಿಮಾನ (ಪಿ–8 ಪೊಸಿಡಾನ್),ಸೋನಾರ್ ಸಾಧನಗಳನ್ನು ಅಳವಡಿಸಿರುವ ಆಸ್ಟ್ರೇಲಿಯಾದ ಯುದ್ಧನೌಕೆಗಳು, ಇಂಡೊನೇಷ್ಯಾದ 20 ಹಡಗುಗಳು ಹಾಗೂ ನಾಲ್ಕು ಯುದ್ಧವಿಮಾನಗಳು ಶನಿವಾರ ಶೋಧಕಾರ್ಯವನ್ನು ಆರಂಭಿಸಿವೆ.

ಸಂಕ್ಷಿಪ್ತ ಸುದ್ದಿ

ಮಹಾರಾಷ್ಟ್ರ: ಸ್ಯಾನಿಟೈಜರ್ ಕುಡಿದು ಏಳು ಜನರು ಸಾವು

ಮುಂಬೈ: ಲಾಕ್‌ಡೌನ್‌ನಿಂದಾಗಿ ಮದ್ಯ ಸಿಗದ ಕಾರಣ ಅಲ್ಕೋಹಾಲ್ ಆಧಾರಿತ ಸ್ಯಾನಿಟೈಜರ್ ಕುಡಿದ ಪರಿಣಾಮ ಏಳು ಜನರು ಮೃತಪಟ್ಟಿದ್ದಾರೆ.

ಜಿಲ್ಲೆಯ ವಣಿ ಎಂಬಲ್ಲಿ ಈ ಘಟನೆ ನಡೆದಿದೆ. ಮೃತರು ಕೂಲಿ ಕೆಲಸ, ರಿಕ್ಷಾ ಓಡಿಸುವ ಕಾಯಕ ಮಾಡಿಕೊಂಡಿದ್ದರು.

'ಲಾಕ್‌ಡೌನ್ ಹಿನ್ನೆಲೆಯಲ್ಲಿ ಮದ್ಯದಂಗಡಿಗಳು ಮುಚ್ಚಿವೆ. ಇದರಿಂದ ಕಂಗೆಟ್ಟ ಇವರು ಹ್ಯಾಂಡ್ ಸ್ಯಾನಿಟೈಜರ್‌ಅನ್ನೇ ಕುಡಿದು ಜೀವ ಕಳೆದುಕೊಂಡಿದ್ದಾರೆ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದಿಲೀಪ್ ಭುಜಬಲ್ ಹೇಳಿದ್ದಾರೆ.

ಉತ್ತರಾಖಂಡ: ಹಿಮಪಾತದಿಂದ 10 ಜನರ ಸಾವು

ಗೋಪೇಶ್ವರ, ಉತ್ತರಾಖಂಡ (ಪಿಟಿಐ): ಉತ್ತರಾಖಂಡದ ಚಮೋಲಿ ಜಿಲ್ಲೆಗೆ ಹೊಂದಿಕೊಂಡಿರುವ ಭಾರತ–ಚೀನಾ ಗಡಿ ಸಮೀಪ ಸಂಭವಿಸಿದ ಹಿಮಪಾತದಲ್ಲಿ ಬಾರ್ಡರ್ ರೋಡ್ ಆರ್ಗನೈಜೇಶನ್‌ಗೆ (ಬಿಆರ್‌ಒ) ಸೇರಿದ 10 ಮಂದಿ ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದರು.

ನೀತಿ ಕಣಿವೆಯ ಸುಮ್ನಾ ಪ್ರದೇಶದಲ್ಲಿ ಶುಕ್ರವಾರ ರಾತ್ರಿ ಇಬ್ಬರ ಮೃತದೇಹಗಳನ್ನು ಪತ್ತೆ ಮಾಡಲಾಗಿದೆ. ಶನಿವಾರ ಎಂಟು ಜನರ ಮೃತದೇಹಗಳನ್ನು ಪತ್ತೆ ಮಾಡಲಾಗಿದೆ ಎಂದು ಜಿಲ್ಲಾ ಮ್ಯಾಜಿಸ್ಟ್ರೇಟ್ ಸ್ವಾತಿ ಭದೌರಿಯಾ ಹೇಳಿದರು.

ಜೋಶಿಮಠದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಮುಖ್ಯಮಂತ್ರಿ ತೀರಥ್ ಸಿಂಗ್ ರಾವತ್, 'ಘಟನಾ ಸ್ಥಳದಿಂದ ನಾಲ್ವರು ಗಾಯಗೊಂಡವರನ್ನು ರಕ್ಷಿಸಲಾಗಿದೆ' ಎಂದು ತಿಳಿಸಿದರು.

ತಮಿಳುನಾಡಿನಲ್ಲಿ 26ರಿಂದ ಚಿತ್ರಮಂದಿರ, ಮಾಲ್ ಬಂದ್

ಚೆನ್ನೈ (ಪಿಟಿಐ): ರಾಜ್ಯದಲ್ಲಿ ಕೋವಿಡ್–19 ಪ್ರಕರಣಗಳು ಹೆಚ್ಚುತ್ತಿರುವುದರಿಂದ ಇದೇ 26 ರಿಂದ ಚಿತ್ರಮಂದಿರಗಳು, ಧಾರ್ಮಿಕ ಸ್ಥಳಗಳು, ಮಾಲ್‌ಗಳು, ಬಾರ್ ಹಾಗೂ ಸಲೂನ್‌ಗಳನ್ನು ಬಂದ್ ಮಾಡಲಾಗುವುದು ಎಂದು ತಮಿಳುನಾಡು ಸರ್ಕಾರ ಘೋಷಿಸಿದೆ.

ಅಧಿಕೃತ ವೆಬ್‌ಸೈಟ್‌ನಲ್ಲಿ (https://eregister.tnega.org) ನೋಂದಾಯಿಸಿಕೊಂಡಿರುವ ಇತರ ರಾಜ್ಯಗಳ ಜನರು ಹಾಗೂ ವಿದೇಶಗಳಿಂದ ಬಂದವರಿಗೆ ತಮಿಳುನಾಡು ಪ್ರವೇಶಿಸಲು ಅನುಮತಿ ನೀಡಲಾಗುವುದು. ನೋಂದಣಿ ಮಾಡಿಸಿರುವ ಕುರಿತ ದಾಖಲೆಯನ್ನು ಹಾಜರುಪಡಿಸುವುದು ಕಡ್ಡಾಯ ಎಂದು ಸರ್ಕಾರ ಹೇಳಿದೆ.

ಐಸಿಐಸಿಐ ಬ್ಯಾಂಕ್ ಲಾಭ ಹೆಚ್ಚಳ

ನವದೆಹಲಿ: ಐಸಿಐಸಿಐ ಬ್ಯಾಂಕ್‌ನ ನಿವ್ವಳ ಲಾಭವು 2020–21ನೇ ಹಣಕಾಸು ವರ್ಷದ ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ₹ 4,403 ಕೋಟಿಗಳಷ್ಟಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಮೂರು ಪಟ್ಟು ಹೆಚ್ಚಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ಬ್ಯಾಂಕ್ ₹ 1,221 ಕೋಟಿ ನಿವ್ವಳ ಲಾಭ ಗಳಿಸಿತ್ತು.

ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ

SAD DEMISE


Shri. M.J. Surendra Kumar

Chairman of Karnataka State Pollution Control Board (Retd)
1st Aug 1936 - 24th April 2021

We cherish those precious moments of your presence with us and the same shall remain evergreen in our hearts. By Divine grace, let your guiding hand on our shoulders remain with us forever.

Deeply Mourned by:
President & Trustees of
Shree Pacche Parshwanatha Temple Trust, Penugonda (A.P.)

ನಿಧನ

ಪ್ರಭು ಟಿ.ಬಿ.
ಜನನ: 13.06.1951 ನಿಧನ: 23.04.2021
ಇವರು 23–04–2021ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ದುಃಖತಪ್ತರು:
ಪತ್ನಿ, ಮಕ್ಕಳು ಹಾಗೂ ಕುಟುಂಬವರ್ಗದವರು
ಮೊ: 98452 52503 / 96322 22209

17ನೇ ವಾರ್ಷಿಕ ಪುಣ್ಯಸ್ಮರಣೆ

ಕೆ. ಗುರುಮೂರ್ತಿ
03.06.1930-25.04.2004
ನೀವು ನಮ್ಮನ್ನಗಲಿದರೂ ನಿಮ್ಮ ನೆನಪು ನಮ್ಮಲ್ಲಿ ಎಂದೆಂದಿಗೂ ಚಿರಸ್ಥಾಯಿ.
ಸದಾ ನಿಮ್ಮ ಸ್ಮರಣೆಯಲ್ಲಿರುವ
ಡಾ. ಜಿ.ವನಜಾಕ್ಷಿ ಮತ್ತು ಕುಟುಂಬ,
ಶ್ರೀಮತಿ ಜಿ.ಶೀಲಾ ಮತ್ತು ಕುಟುಂಬ

SAD DEMISE

C. GOPAL REDDY
(Kodihalli)
DOB: 30.08.1947 • DOD: 23.04.2021
Senior Congress Leader & Retd. NSSO Officer.
Deeply mourned by family members & friends.
Mobile: 99450 50505

ಭಾವಪೂರ್ಣ ಶ್ರದ್ಧಾಂಜಲಿ

ಶ್ರೀಯುತ ಎನ್. ಟಿ. ರಘುವಯ್ಯನವರು
07.01.1939 – 18.04.2021
ನಿವೃತ್ತ ಹಿರಿಯ ಸಹಾಯಕರು ಕೆ.ಇ.ಬಿ., ನೆಲಮಂಗಲ.
ಇಂತಿ ದುಃಖತಪ್ತ ಕುಟುಂಬ ವರ್ಗದವರು ಹಾಗೂ ಬಂಧು–ಮಿತ್ರರು. ಮೊ. 9844939848

ವೈಕುಂಠ ಸಮಾರಾಧನೆ


ಶ್ರೀ ಎಂ. ಗೋಪಾಲಕೃಷ್ಣ
(ಮಾಲಿಕರು ಶ್ರೀ ಗುರು ರಾಘವೇಂದ್ರ ಸರ್ವಿಸ್ ಸ್ಟೇಷನ್)
1939–2021
ಇವರು ದಿ||13–04–2021 ಮಂಗಳವಾರ ದಂದು ದೈವಾಧೀನಾರಾದ ರೆಂದು ತಿಳಿಸಲು ವಿಷಾದಿಸುತ್ತೇವೆ. ತತ್ಸಂಬಂಧವಾಗಿ ದಿ||25–04–2021 ಭಾನುವಾರ ವೈಕುಂಠ ಸಮಾರಾಧನೆಯನ್ನು ಮೃತರ ಸ್ವಗೃಹದಲ್ಲಿ ಏರ್ಪಡಿಸಲಾಗಿದೆ.
ಇಂತಿ ದುಃಖತಪ್ತರು
ಶ್ರೀಮತಿ ಡಿ.ವಿ.ಪ್ರೇಮ ಮತ್ತು ಕುಟುಂಬವರ್ಗದವರು ಹಾಗೂ ಬಂಧು–ಮಿತ್ರರು.
ಮೊಬೈಲ್: 9632844773

ಭಾವಪೂರ್ಣ ಶ್ರದ್ಧಾಂಜಲಿ


ಜನನ: 22.05.1952 ಮರಣ: 23.04.2021
ಶ್ರೀ ರೇವಣ್ಣ ಬಿ.ಎ., ಎಲ್.ಎಲ್.ಬಿ.,
ವಿಶ್ರಾಂತ ಉಪ ತಹಶೀಲ್ದಾರ್, ನಾಡಪ್ರಭು ಕೆಂಪೇಗೌಡ ಪ್ರಶಸ್ತಿ ಪುರಸ್ಕೃತರು
ನಮ್ಮ ಪೂಜ್ಯನೀಯರಾಗಿ, ನಮ್ಮೆಲ್ಲರ ಪ್ರೀತಿಯ ಸೆಲೆಯಾಗಿ, ನಮ್ಮೆಲ್ಲರಿಗೂ ಮಾರ್ಗದರ್ಶಕರಾಗಿ, ಶ್ರಮಜೀವಿಯಾಗಿ, ಸರಳ ಸಜ್ಜನಿಕೆಯ ವ್ಯಕ್ತಿಯಾಗಿ, ಸುಮಧುರ ದಾಂಪತ್ಯದ ಪ್ರತೀಕವಾಗಿ, ನಮ್ಮ ಮನದಲ್ಲಿ ಎಂದಿಗೂ ಮರೆಯಲಾಗದ ಮಾಣಿಕ್ಯವಾಗಿ, ಅಪಾರ ಗೌರವ ಸಂಪಾದಿಸಿ ಮನೆ ಮನ ಬೆಳಗಿದ ತಾವು ನಮ್ಮೆಲ್ಲರಿಗೂ ಆದರ್ಶಪ್ರಾಯರಾಗಿದ್ದೀರಿ. ಭಗವಂತನ ಇಚ್ಛೆಯಂತೆ ಅವನ ಕರೆಗೆ ಓಗೊಟ್ಟು ದೈವಾದೀನರಾದ ನಿಮಗಿದೋ ಭಾವಪೂರ್ಣ ಶ್ರದ್ಧಾಂಜಲಿ.
ದುಃಖತಪ್ತರು
ಪತ್ನಿ, ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಬಂಧು ಮಿತ್ರರು

ಪ್ರಜಾವಾಣಿ
FOR ADVERTISEMENT QUERIES
• OBITUARY
• REMEMBRANCES
Contact:
Santhosh : 9880856233
Vishal : 9845114560
Ravi : 9606912256
Office: 080-45557160 /163 /164

SHRADHANJALI

"From untruth lead me to the truth;
From darkness lead me to the light;
From death, lead me to immortality"

It is with deepest sorrow and regret that we wish to inform all our friends and well wishers that
Sri. A. G. Balasubramaniam
(Born: 22nd February 1938)
left for his heavenly abode on 21st April 2021 in Bangalore.

Inserted by grieving family members
Kiran Balasubramaniam (Son)
Kalpana Kiran (Daughter In Law)
Aditya Kiran (Grandson)
Mobile: 94828 08109 & 99204 50699

ಮಯೂರ ಮೇ 2021 ಸಂಚಿಕೆಯಲ್ಲಿ

ಸುಮಧುರ ಬರಹಗಳ ಗುಚ್ಛ

ಕತೆಗಳು
- ಪ್ರೇಮಕುಮಾರ್ ಹರಿಯಬ್ಬೆ
- ನಟರಾಜ್ ಹುಳಿಯಾರ್
- ರವಿರಾಜ ಬೈಕಂಪಾಡಿ
- ಗೌರಿ ಚಂದ್ರಕೇಸರಿ
- ಎನ್ ಸಂಧ್ಯಾರಾಣಿ
- ಕೇಶವ ಕುಲಕರ್ಣಿ
- ವಸುಮತಿ ಉಡುಪ
- ಬಿ.ಎಲ್ ವೇಣು

ಪ್ರಬಂಧ
ಸಾಯಿಬಾಬಾನ ಪ್ರಸಾದ
ಮಧುರಾ ಕರ್ಣಮ್ ಅವರ ಲವಲವಿಕೆಯ ಬರಹ

ನಂದಾದೀಪ
ಇತ್ತೀಚೆಗೆ ನಿಧನರಾದ ಕವಿ ಎನ್‌.ಎಸ್‌. ಲಕ್ಷ್ಮೀನಾರಾಯಣ ಭಟ್ ಅವರ ಸಾಹಿತ್ಯ–ವ್ಯಕ್ತಿತ್ವವನ್ನು ಕಟ್ಟಿಕೊಟ್ಟಿದ್ದಾರೆ ಚಿಂತಾಮಣಿ ಕೊಡ್ಲೆಕೆರೆ

ನನ್ನ ಓದು
ಎಚ್‌.ಎಸ್‌. ರಾಘವೇಂದ್ರ ರಾವ್ ಅನುವಾದಿಸಿರುವ ಆಲ್ಬರ್ಟ್ ಕಮೂನ ಕಾದಂಬರಿ 'ಪ್ಲೇಗ್' ಕುರಿತ ನರೇಂದ್ರ ಪೈ ವಿಮರ್ಶೆ

ಸಂದರ್ಶನ

ಕಾವ್ಯ ಮೂಲಭೂತವಾಗಿ ಮನೋಯಾತನೆ
ಕವಿ ಎಚ್‌.ಎಸ್‌. ಶಿವಪ್ರಕಾಶ್ ಅವರನ್ನು ಸಂದರ್ಶಿಸಿದ್ದಾರೆ ವಿಕ್ರಂ ವಿಸಾಜಿ

₹15 ನಿಮ್ಮ ಪ್ರತಿಗಳಿಗೆ ಏಜೆಂಟರನ್ನು ಸಂಪರ್ಕಿಸಿ
editormy@mayura.co.in /mayuramonthly
mayuraezine.com 080-45557333/264

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ, ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ:9880916988

ರಿಯಲ್ ಎಸ್ಟೇಟ್ ಸೆಲ್ಲಿಂಗ್

Farm House/ Land/ Resorts

Nelamangala

FARMLAND FOR Sale 5/10 Guntas Near Nelamangala. Suitable for Dairy Farming and Farm House Contact 9448119275/ 7829134000

Sites

Hesaraghatta

CNR DEVELOPERS and Builders BMRDA Sites Available.Contact 9448119275 / 7829134000

ಉದ್ಯೋಗಾವಕಾಶ

Hospital & Medical Jobs

REQUIRED NURSES Urgently:Male and Female For COVID DUTY in Bangalore, Hyderabad, Pune and Mumbai, Salary-30,000 to 50,000 Experience:0 to10 years (Gap accepted) for more details: careers@majhealthcare.in, Contact: 9606221218, 9606347575, 6364557575, 7022399993

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

Wanted

ಭಾರತದ ಪ್ರತಿಷ್ಠಿತ ಕಂಪನಿಗೆ ನಿವೃತ್ತರು, ಮಹಿಳೆಯರು, ಪದವೀಧರರು, 10ನೇ ತರಗತಿ ಪಾಸಾದ, 2ನೇಯ ಆದಾಯ ಬಯಸುವವರೂ ಅರ್ಹರು 9066001122/8310063366

ವ್ಯಾಪಾರ

Business to Business

Hotel & Restaurant

BUSINESS PARTNER Required, 4 Lakhs Investment, Daily Attractive Income (Nonveg Hotel). Contact: 8892501007/9606701007

Business Offers

Finance

★ಸಾಲ ಸೌಲಭ್ಯ★ ವ್ಯಾಪಾರಸಾಲ, ಆಸ್ತಿಸಾಲ, ಅಡಮಾನಸಾಲ, ಶಿಕ್ಷಣಸಾಲ, ಶೇ.6%ರ ಬಡ್ಡಿದರದಲ್ಲಿ, 40%ಸಬ್ಸಿಡಿ, ಎಲ್ಲಾರೀತಿಯ ಸಾಲ ದೊರೆಯುತ್ತದೆ.ಸಂಪರ್ಕಿಸಿ: 09499457849/ 09953286082.ಏಜೆಂಟರು ಸಂಪರ್ಕಿಸಬಹುದು.

ಭವಿಷ್ಯ

Astrology

★||ಶ್ರೀಆಂಜನೇಯಸ್ವಾಮಿ||★ ಆರಾಧನೆಯಿಂದ ಪ್ರೀತಿಪ್ರೇಮ, ವಶೀಕರಣ, ಸಾಲದಬಾದೆ, ಕೋರ್ಟ್‌ಕೇಸ್, ವ್ಯಾಪಾರ, ಸಂತಾನ ಇನ್ನೂಯಾವುದೇ ಗುಪ್ತ ಸಮಸ್ಯೆಗಳಿಗೆ ಫೋನಿನ ಮೂಲಕ ಪರಿಹಾರ. 9972550137

★||ಕೊಳ್ಳೇಗಾಲದ ಪ್ರಖ್ಯಾತ ಮೋಡಿಮಾಂತ್ರಿಕರು||★ ನಿಮ್ಮ ಸಮಸ್ಯೆ ಯಾವುದೇಯಿದ್ದರೂ ಶ್ರೀ ಭದ್ರಕಾಳಿದೇವಿಯ ಬಲಿಷ್ಠ ಪೂಜೆಯಿಂದ ಗ್ಯಾರಂಟಿ ಪರಿಹಾರ. ವಿಶೇಷ ಸೂಚನೆ: ನಮ್ಮ ಮೋಡಿ ಸಿದ್ಧಾಂತ ತಪ್ಪದು. ಸ್ತ್ರೀ ಮೋಡಿ, ಪುರುಷ ಮೋಡಿಗಾರರು. ಮೋಡಿ ಕೃಷ್ಣಪ್ಪ. 9880877747

★||ಸಿಗಂದೂರು ಚೌಡೇಶ್ವರಿ||★ ವಶೀಕರಣಆಗಬೇಕಾದವರಿಗೆ ಹಚ್ಚುವುದಾಗಲಿ,ತಿನ್ನಿಸುವುದಾಗಲಿ, ಬಟ್ಟೆ,ಫೋಟೋ, ಕೂದಲು ಇಲ್ಲದಿದ್ದರೂ ಸ್ತ್ರೀಪುರುಷ ಲೈಂಗಿಕ ವಶೀಕರಣ, ಸ್ತ್ರೀಯರಿಗೆ 7ಗಂಟೆಗಳಲ್ಲಿ ಉಚಿತ ಪರಿಹಾರ.9845153558

★ವಶೀಕರಣ ಸ್ಪೆಷಲಿಸ್ಟ್★ ಜನವಶೀಕರಣ, ಧನವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣ, ಇನ್ಯಾವುದೇ ಕಠಿಣ ಸಮಸ್ಯೆಗಳಿಗೆ ಫೋನಿನಲ್ಲೇ ಪರಿಹಾರ. ಮಂಜುನಾಥ ಗುರೂಜಿ 9886999747

★ಶ್ರೀಕ್ಷೇತ್ರ ಶೃಂಗೇರಿ★ ಶಾರದಾಂಬೆ ಜ್ಯೋತಿಷ್ಯರು ||ವೇದಬ್ರಾಹ್ಮಣ ಸಚ್ಚಿದಾನಂದ|| ನಿಮ್ಮ ಸಮಸ್ಯೆ ಏನೇಯಿರಲಿ, ಎಷ್ಟೇ ಕಠಿಣವಾಗಿರಲಿ ತಕ್ಷಣ ಪರಿಹಾರವಾಗದಿದ್ದರೆ ಹಣವಾಪಸ್ 9916778542

ವೈವಾಹಿಕ

Brides Wanted

Second Marriage

ಉತ್ತಮ ವರಮಾನ ಇರುವ ಬಿಸಿನೆಸ್ ಮಾಡುತ್ತಿರುವ ವರನಿಗೆ ಎರಡನೇ ವಿವಾಹಕ್ಕಾಗಿ ವಧು ಬೇಕಾಗಿದೆ. 8296595088

Matrimonial Bureaus

ಒಕ್ಕಲಿಗ ಜಾತಿಯ ವಧು ವರರ ಅನ್ವೇಷಣೆಗೆ, ಪೂರ್ಣ ಭಾವಚಿತ್ರದೊಂದಿಗೆ ಸಂಪರ್ಕಿಸಿ: 7019812036

DH ಪ್ರಜಾವಾಣಿ **Classifieds**

EFFECTIVE FROM JUNE 3rd, 2020

DECCAN HERALD & PRAJAVANI CLASSIFIEDS PACKAGE RATES

PUBLICATION	TEXT AD RATE PER INS FOR 15 WORDS	CLASSIFIEDS DISPLAY RATE PER SQCM
DH ALL KARNATAKA+ PV BENGALURU	1020/-	480/-
PV ALL KARNATAKA	900/-	430/-

*GST applicable

SPECIAL SCHEMES ALL CATEGORY

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details
Contact: 9880856233 | 9731810277
9901641752 | 9845114560 | 9886213331

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು,
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ಬೆಂಗಳೂರು

ಪ್ರಜಾವಾಣಿ ಭಾನುವಾರದ ಪುರವಣಿ

ಭಾನುವಾರ, 25 ಏಪ್ರಿಲ್ 2021

ಪ್ರಭಾತ ಕಲಾವಿದರ 'ಶ್ರೀರಾಮ ಪ್ರತೀಕ್ಷ' 11

ಕಾಡು ಹಣ್ಣು ಹೆಚ್ಚಿ... ಉಪ್ಪು-ಖಾರ ಹಚ್ಚಿ...

ಕಸ್ತೂರಿ ಕಂಟಿಯ ಹಣ್ಣು

ಅದರ ಮೇಲೆ ಇವರ ಕಣ್ಣು!

ಕಾಡುಹಣ್ಣುಗಳಿಗೆ
ಆ ಬೆಟ್ಟದಲ್ಲಿ, ಆ ಬಿರುಬಿಸಿಲಿನಲ್ಲಿ
ಸುಳಿದಾಡಬೇಕು ಗೆಳತಿ...
ಚಿತ್ರಗಳು: ಪ್ರಕಾಶ ಕಂದಕೂರ

ಕೆ.ಎಂ.ಸತೀಶ್ ಬೆಳ್ಳಕ್ಕಿ

'ಕವಳಿ ಹಣ್ಣು, ಕಾರಿ ಹಣ್ಣು, ಬಾರಿ ಹಣ್ಣು, ನೀರಲ ಹಣ್ಣವ್ರೋ...'

ಲಂಬಾಣಿ ಅಜ್ಜಿಯ ಈ ಕೂಗು, ಕಿವಿಯ ಮೇಲೆ ಬೀಳುವುದೇ ತಡ, ಮನೆ ಮಂದಿಯ ಬಾಯಲ್ಲಿ ನೀರೇ ನೀರು. ಆ ಹಣ್ಣುಗಳ ರಸಾಸ್ವಾದವೇ ಅಂತಹದ್ದು. ಆ ದನಿಗೆ ಮನೆಯೊಳಗಿದ್ದವರು ಎದ್ದು-ಬಿದ್ದು ಹೊರಬಂದು ಅಜ್ಜಿಯನ್ನು ಬರಮಾಡಿಕೊಳ್ಳಲು ಸ್ವಲ್ಪವೂ ತಡವಾಗದು. ಅಜ್ಜಿಯ ಬಿದಿರ ಬುಟ್ಟಿಯಲ್ಲಿ ಬೆಚ್ಚಗೆ ಕುಳಿತಿದ್ದ ಕವಳಿ ಹಣ್ಣುಗಳು ಮನೆಯ ಸಣ್ಣ ಬುಟ್ಟಿಗೆ 'ಜಂಪ್' ಮಾಡಿದ ಮೇಲಂತೂ ಬಾಯಲ್ಲಿ ನೀರೂರದಂತೆ ನಿಯಂತ್ರಿಸುವುದು ಇನ್ನೂ ಕಷ್ಟ.

ಗದಗ ಹತ್ತಿರದ ಕಪ್ಪತಗುಡ್ಡ, ಗಜೇಂದ್ರಗಡ ಬಳಿಯ ಕಾಲಕಾಲೇಶ್ವರ ಗುಡ್ಡ, ಕೊಪ್ಪಳದ ಗವಿಸಿದ್ಧೇಶ್ವರ ಗುಡ್ಡದ ಕುರುಚಲು ಕಾಡುಗಳಲ್ಲಿ ನೆತ್ತಿ ಸುಡುವ ಬಿಸಿಲಿನಲ್ಲೂ ಕವಳಿ, ಕಾರಿ, ಬಾರಿ ಕಂಟಿಗಳನ್ನು ಹುಡುಕಿಕೊಂಡು ಹಣ್ಣು ಆಯ್ದು ತರುವ ಈ ಅಮ್ಮಂದಿರ ಜೀವನಪ್ರೀತಿ, ಆ ಹಣ್ಣುಗಳಷ್ಟೇ ನೈಸರ್ಗಿಕ.

ಲಂಬಾಣಿ ಹೆಣ್ಣುಮಕ್ಕಳ ಬಾಲ್ಯ, ಯೌವನ ಹಾಗೂ ವೃದ್ಧಾಪ್ಯ ಜೀವನದ ನೆನಪುಗಳೆಲ್ಲವೂ ಕಾಡುಹಣ್ಣುಗಳ ಜತೆಗೆ ಬೆಸೆದುಕೊಂಡಿವೆ. ಬಾಲ್ಯದಲ್ಲಿ ಅವ್ವ ತಂದು ಕೊಡುತ್ತಿದ್ದ ಹಣ್ಣುಗಳನ್ನು ತಿಂದು ಬೆಳೆದ ಹುಡುಗಿಯೊಬ್ಬಳು ಯೌವನಕ್ಕೆ ಕಾಲಿಡುತ್ತಿದ್ದಂತೆ ತನ್ನ ಪುಟ್ಟದಾದ ಸೊಂಟದ ಮೇಲೊಂದು ಬಿದಿರಿನ ಪುಟ್ಟಿ ತಾಗಿಸಿಕೊಂಡು ಹಣ್ಣುಗಳನ್ನು ಹೆಕ್ಕಿ ತರಲು ಗುಡ್ಡಕ್ಕೆ ಹೊರಡುತ್ತಾಳೆ. ಕಾಡುಹಣ್ಣುಗಳ ಜತೆಗಿನ ಅವರ ಒಡನಾಟ ಉಸಿರು ನಿಲ್ಲುವವರೆಗೂ ಜೀವಂತವಾಗಿರುತ್ತದೆ.

ಲಂಬಾಣಿ ಜನಾಂಗದಲ್ಲಿ ಹೆಣ್ಣನ್ನು ಮರದ ಬೇರಿಗೆ ಹೋಲಿಸುತ್ತಾರೆ. ಆ ಕುಟುಂಬದ ಮೂಲಧಾತುವೇ ಅವಳು. ಋತುವಿಗೆ ಅನುಸಾರವಾಗಿ ಸಿಗುವ ಒಂದೊಂದು ಹಣ್ಣಿನ ರುಚಿಯಂತೆ ಅವರ ಜೀವನದಲ್ಲೂ ಸಿಹಿ, ಹುಳಿ, ಕಹಿ, ಒಗರು ಭಾವಗಳು ಬೆರೆತು ಹೋಗಿವೆ.

ಉತ್ತರ ಕರ್ನಾಟಕದ ಭಾಗದಲ್ಲಿ ಬೆಟ್ಟ, ಗುಡ್ಡ, ಕಾಡಿನ ನಡುವೆ ತಾಂಡಾಗಳಲ್ಲಿ ವಾಸಿಸುವ ಲಂಬಾಣಿ ಹೆಣ್ಣುಮಕ್ಕಳಿಗೆ ನಾಡಿನ ಜನರಿಗೆ ವಿಷರಹಿತ, ನೈಸರ್ಗಿಕ ರುಚಿಯ ಹಣ್ಣುಗಳನ್ನು ತಂದು ಕೊಡುವುದೇ ಕಾಯಕ. ಆರೋಗ್ಯಕ್ಕೆ ಅಗತ್ಯವಾದ ಔಷಧೀಯ ಗುಣಗಳೂ ಈ ಹಣ್ಣುಗಳಲ್ಲಿ ಇವೆಯಂತೆ.

ಇಂತಹ ಅಮೂಲ್ಯ ಹಣ್ಣುಗಳನ್ನು ಆಯ್ದು ತಂದು ಕೊಟ್ಟರೂ ಅವರು ಪಡೆಯುವುದು ತುಂಬಾ ಚಿಕ್ಕ ಪ್ರತಿಫಲವನ್ನು.

ಬಾರೆ ಹಣ್ಣು, ಹತ್ತಿ ಹಣ್ಣು, ಕವಳಿಹಣ್ಣು, ನೇರಳೆ, ಕಾಡು ಮಾವು, ಸೀತಾಫಲ ಹೀಗೆ ಆಯಾ ಋತುವಿನಲ್ಲಿ ಸಿಗುವ, ಕಾಡಲ್ಲೇ ಮಾಗಿದ ತಾಜಾ ಹಣ್ಣುಗಳು ಜನರ ಮನೆಬಾಗಿಲಿಗೇ ಬರುತ್ತವೆ. ಪೌಷ್ಟಿಕಾಂಶಗಳ ಆಗರವಾಗಿರುವ ಈ ಹಣ್ಣುಗಳನ್ನು ದೊರಕಿಸಿ ಕೊಡುವ ಲಂಬಾಣಿ ಹೆಣ್ಣುಮಕ್ಕಳು ಕಾಡಿನ ಹಣ್ಣುಗಳ ರುಚಿ ಹಂಚುವ ರಾಯಭಾರಿಗಳೂ ಹೌದು. ಹಾಗೆಯೇ ಎಳೆ ನಾಗರಕಾಯಿ, ಹುರಿದ ಹುಣಸೆಬೀಜದ ಅವರ ಚಿಕ್ಕ ಗಂಟು, ಮಕ್ಕಳನ್ನು ಅವರ ಸುತ್ತ ಜೊಲ್ಲು ಸುರಿಸುತ್ತ ನೆರೆಯುವಂತೆ ಮಾಡುತ್ತದೆ.

ಊರಿನ ಜನರಿಗೆ ಸ್ವಾದಭರಿತ ಕಾಡಿನ ಹಣ್ಣುಗಳನ್ನು ತಂದು ಕೊಡುವ ಲಂಬಾಣಿ ಹೆಣ್ಣುಮಕ್ಕಳ ಜೀವನ ನೂರಾರು ಏರಿಳಿತಗಳ ನಡುವೆ ಸಾಗುತ್ತಿರುತ್ತದೆ. ಕೆಲವು ಹೆಣ್ಣುಮಕ್ಕಳಿಗೆ ಹಣ್ಣು ಮಾರಾಟದಿಂದ ಸಿಗುವ ಹಣವೇ ತುತ್ತಿನ ಚೀಲ ತುಂಬಿಸಲು ಆಧಾರ. ಕಾಡುಹಣ್ಣಿನ ವ್ಯಾಪಾರದಿಂದ ಬಂದ ಹಣದಿಂದ ಎಷ್ಟೋ ಮಂದಿ ಮಕ್ಕಳ ವಿದ್ಯಾಭ್ಯಾಸ ಮಾಡಿಸಿದ್ದಾರೆ.

ಗಜೇಂದ್ರಗಡ ಗುಡ್ಡದ ತಾಂಡಾದ 90ರ ಹರೆಯದ ಅಜ್ಜಿ ಸೋನಾಬಾಯಿ ಲಿಂಬಣ್ಣ ಚವ್ಹಾಣ ನಾಲ್ಕೈದು ದಶಕಗಳ ಕಾಲ ಕಾಡುಹಣ್ಣುಗಳನ್ನು ಮಾರಾಟ ಮಾಡಿ ಜೀವನ ಸಾಗಿಸಿದವರು. ಈಗ ಅವರ ಹಣೆಯ ಮೇಲೆ ಕಾಣಿಸುವ ನೆರಿಗೆಗಳಿಗಿಂತಲೂ ಹೆಚ್ಚು ಅನುಭವಗಳು ಅವರ ಎದೆಯಲ್ಲಿ ಮಡುಗಟ್ಟಿವೆ.

'ಗುಡ್ಡಕ್ಕ ಹೋಗಿ ಹಣ್ಣು ತರಾಕ ನಿಂತು ಏಸ್ ವರ್ಸ ಆದ್ವು ಗೊತ್ತಿಲ್ಲೊ ಎಪ್ಪ. ಕಸುವು ಇದ್ದಾಗ ಕವಳಿ, ಹತ್ತಿ, ಬಾರಿ, ಕಾರಿ ಎಲ್ಲಾ ತರ್ತಿದ್ದೆ. ಸ್ವಾಮಾರ (ಸೋಮವಾರ) ಗುಡ್ಡಕ್ಕ ಹೋಗಿ ಹಣ್ ತಂದ್ರ, ಮಂಗ್ವಾರ (ಮಂಗಳವಾರ) ಊರಾಗ ಹೋಗಿ ಮಾರ್ಕೊಂಡ್ ಬರೋದು. ದಿನಾ ಬಿಟ್ಟ ದಿನಾ ಹಣ್ ತರೂದು, ದಿನಾ ಬಿಟ್ಟು ದಿನಾ ಮಾರೂದು ಹಿಂಗss ಸಾಗಿ ಬಂದೈತಿ ನೋಡ್ ಎಪ್ಪ ಜೀವನ' ಎಂದು ಮುಗ್ಧವಾಗಿ ಹೇಳುವ ಸೋನಮ್ಮಜ್ಜಿ, ಅಪ್ಪಟ ಬಂಗಾರ.

ಗಂಡುಮಕ್ಕಳು ದುಡಿಯುತ್ತಿದ್ದರು. ಆದರೆ, ಹೆಚ್ಚಿನವರು ದುಡಿದಿದ್ದನ್ನು ಕುಡಿದು ಕಳೆಯುತ್ತಿದ್ದರು. ಮನೆ ನಿಭಾಯಿಸುವ ಜತೆಗೆ ಕುಟುಂಬ ಉಳಿಸಿಕೊಳ್ಳುವ ಜವಾಬ್ದಾರಿ ಕೂಡ ಹೆಣ್ಣುಮಕ್ಕಳದು. ಹಿಂದೆ ವಾರಕ್ಕೆ ₹10ಕ್ಕಿಂತ ಕಡಿಮೆ ಹಣ ದುಡಿದು ತಂದರೆ ನಮ್ಮ ಅತ್ತೆ ಕೈಯಲ್ಲಿದ್ದ ರೊಟ್ಟಿ ಕಸಿದುಕೊಂಡು ಮುಂಗೈಗೆ ಬರೆ ಹಾಕುತ್ತಿದ್ದಳು. ಮಾವ ಬಂದು ಮುಖಕ್ಕೆ ಗುದ್ದುತ್ತಿದ್ದ. ಇಂತಹ ಸಂದರ್ಭಗಳಲ್ಲಿ ಹಲ್ಲುಗಳೂ ಉದುರಿ ಬಿದ್ದಿವೆ... ಅಜ್ಜಿಯ ನೆನಪಿನ ಬುತ್ತಿ ಬಿಚ್ಚಿದರೆ, ಅದು ರುಚಿಯಾದ ಹಣ್ಣುಗಳಿರುವ ಬುಟ್ಟಿಯನ್ನು ಕೆಳಗೆ ಇಳಿಸಿದಂತೇನಲ್ಲ.

ಲಂಬಾಣಿಗರ ವೇಷಭೂಷಣದ ಕುರಿತು ಬಹುತೇಕರಿಗೆ ಕುತೂಹಲ. ಲಂಬಾಣಿ ದಿರಿಸಿನ ಹಿಂದೆ ವೈಜ್ಞಾನಿಕ ಅಂಶಗಳ ಜತೆಗೆ ಕಾಡುಹಣ್ಣುಗಳನ್ನು ತರಲು ಅಡವಿ, ಗುಡ್ಡಗಾಡಿನಲ್ಲಿ ಅಡ್ಡಾಡುವಾಗ ಅವು ಸ್ವಯಂ ರಕ್ಷಣೆಗೂ ಉಪಯೋಗಕ್ಕೆ ಬರುತ್ತವೆ. ಇವುಗಳನ್ನು ಧರಿಸುವ ಕಾರಣ ಮೂರ್ಚೆ ರೋಗ, ಹಳದಿ ರೋಗ ಸುಳಿಯುವುದಿಲ್ಲವಂತೆ. ದಿರಿಸಿನಲ್ಲಿರುವ ಕನ್ನಡಿಯೊಳಗೆ ತಮ್ಮದೇ ಪ್ರತಿಬಿಂಬ ನೋಡಿದ ಕಾಡು ಪ್ರಾಣಿಗಳು ಹೆದರಿ ಓಡುತ್ತಿದ್ದವಂತೆ. ಸಣ್ಣಪುಟ್ಟ ಪ್ರಾಣಿಗಳು ಮೈಮೇಲೆ ಎಗರಿಬಂದರೆ ಕೈಯಲ್ಲಿದ್ದ ಕಬ್ಬಿಣದ ಬಳೆಗಳು ಉಪಯೋಗಕ್ಕೆ ಬರುತ್ತಿದ್ದವು ಎಂದೂ ಸೋನಮ್ಮಜ್ಜಿಯ ವಾರಿಗೆಯವರು ಹೇಳುತ್ತಾರೆ. ಅದಕ್ಕಾಗಿಯೇ ತಾಂಡಾದಲ್ಲಿ ಹೆಣ್ಣು ಮಗು ಜನಿಸಿದರೆ ಅವಳಿಗೆ ಚಿಕ್ಕಂದಿನಿಂದಲೇ ಕಸೂತಿ ಕಲೆ ಕಲಿಸುತ್ತಾರೆ. ಈ ದಿರಿಸು ಸಂಸ್ಕೃತಿಯ ಪ್ರತೀಕವೂ ಹೌದು, ರಕ್ಷಣೆಯ ಕವಚವೂ ಹೌದು.

ಋತುವಿಗೆ ಅನುಸಾರವಾಗಿ ಸಿಗುವ ಹಣ್ಣುಗಳನ್ನು ಕಾಡಿಂದ ತಂದು ಊರೂರು ಅಲೆದು ಮಾರುವವರಿಗೆ ಕೆಲವು ಗ್ರಾಹಕರು ಪ್ರೀತಿಯಿಂದ ರೊಟ್ಟಿ ಪಲ್ಯ ಕೊಡುತ್ತಿದ್ದರು. ಆದರೆ, ಈಗ ಅಂತಹ ಪ್ರೀತಿ ಕ್ವಚಿತ್ ಆಗಿ ಕಾಣಸಿಗುತ್ತದೆ. ಮಾರಾಟ ಆಗದೇ ಉಳಿದ ಹಣ್ಣುಗಳನ್ನು ಮನೆಗೆ ತಂದು ಅದರಲ್ಲೇ ಪದಾರ್ಥ ಮಾಡಿಕೊಳ್ಳುವುದು ಈ ಹಣ್ಣುಗಳ ಅಮ್ಮಂದಿರ ರೂಢಿ. ಮಾವಿನ ಕಾಲವಾದರೆ ಸೀಕರಣೆ, ದೋರೆಗಾಯಿಗಳನ್ನು ಬಳಸಿ ಪಲ್ಯ ಮಾಡುವುದು, ತುಂಡು ರೊಟ್ಟಿಗೆ ಮುಷ್ಟಿ ಹಿಡಿಯಷ್ಟು ಪಲ್ಯ ಹಾಕಿಕೊಂಡು ತಿಂದು ಹೊಟ್ಟೆ ತುಂಬಿಸಿಕೊಳ್ಳುವುದು ಅವರ ಬದುಕು. ದುಡಿಮೆಯಲ್ಲಿ ತುಸು ಏರುಪೇರಾದರೂ ಊಟವಾಗಿಯೂ ಕಾಡುಹಣ್ಣುಗಳು ಅವರಿಗೆ ಒದಗಿಬಂದಿದ್ದಿದೆ. ತಾಂಡಾಗಳು ಕಾಡಿನ ನಡುವೆಯೇ ಇರುವುದರಿಂದ ಪರಿಸರದಲ್ಲಿ ಯಾವ ಹಣ್ಣು ಎಲ್ಲಿ ಬೆಳೆಯುತ್ತದೆ ಎಂಬುದರ ಅರಿವು ಅವರಿಗೆ ಚೆನ್ನಾಗಿರುತ್ತದೆ. ಹಾಗಾಗಿ, ಅವರ ಹೆಜ್ಜೆಗಳು ಕೂಡ ಋತುವಿಗನುಸಾರವಾಗಿ ಕುಣಿಯುತ್ತವೆ. ಫಲಭರಿತ ಜಾಗಕ್ಕೆ ತಂತಾನೇ ಅವರನ್ನು ಕರೆದೊಯ್ಯುತ್ತವೆ.

'ಒಮ್ಮೆ ನನ್ನ ಮಗ ಗಜ್ಜುಗ ಗುಂಡ ಆಡಾಕ ಒಂದಾಣೆ ರೊಕ್ಕ ಕೇಳಿದ್ದ. ತಿನ್ನಾಕಾ ಇಲ್ಲ. ಇನ್ನು ಆಡಾಕ ರೊಕ್ಕ ಎಲ್ಲಿಂದ ಕೊಡ್ಲಿ ಅಂದಿದ್ದಕ್ಕೆ ಆತ ಕಸೂತಿ ಅರಿಬಿನ ಒತ್ತಿ ಇಡಾಕ ಹೋಗಿದ್ದ. ಹಣ್ಣು ಮಾರಿ, ಮಾರಿ ಅವನ್ನ ಓದ್ಸಿದೆ. ಈಗ ಅಂವ ಕಾಲೇಜಿನಾಗ ಮಾಸ್ತರ ಆಗ್ಯಾನ. ನನ್ನನ್ನ ಕಣ್ಣ ರೆಪ್ಪಿಯಂಗ ಕಾಯ್ತಾನ' ಎನ್ನುತ್ತಾರೆ ಸೋನಮ್ಮಜ್ಜಿ.

ಲಂಬಾಣಿ ಮಹಿಳೆಯರಿಗೆ ಈಗ ಮೊದಲಿನಷ್ಟು ಸಮೃದ್ಧವಾಗಿ ಕಾಡುಹಣ್ಣುಗಳು ಸಿಗುತ್ತಿಲ್ಲ. ಜತೆಗೆ ತಾಂಡಾಗಳ ಮೇಲೂ ಬದಲಾವಣೆಯ ಗಾಳಿ ಬೀಸಿದೆ. ಶಿಕ್ಷಣ ಅವರ ಬದುಕು ಮತ್ತು ಸಂಸ್ಕೃತಿಯ ಮೇಲೂ ಪ್ರಭಾವ ಬೀರಿದೆ. ಅಲ್ಲದೆ, ಹಿಂದಿನವರಂತೆ ಈಗಿನ ಹೆಣ್ಣುಮಕ್ಕಳು ಕಷ್ಟ ಸಹಿಸುವ ಧಾರಣಾಶಕ್ತಿ ಹೊಂದಿಲ್ಲ. ಆದರೆ, ಅವರೆಲ್ಲ ಶಿಕ್ಷಣ ಪಡೆಯುವತ್ತ ಒಲವು ತೋರಿರುವುದು ಸಕಾರಾತ್ಮಕ ಬೆಳವಣಿಗೆ. ಬೆರಳೆಣಿಕೆಯಷ್ಟು ಮಂದಿ ಮಾತ್ರ ಈಗಲೂ ಕಾಡುಹಣ್ಣುಗಳ ಮಾರಾಟ ಮುಂದುವರಿಸಿದ್ದಾರೆ. ಲಂಬಾಣಿ ಹೆಣ್ಣುಮಕ್ಕಳ ಜೀವನ ಹಲವು ಅಡೆತಡೆಗಳನ್ನು ದಾಟಿ ಮುನ್ನಡೆಯುತ್ತಿದೆ.

ಕಾಡಿನ ಹಣ್ಣುಗಳಿಗೂ ಲಂಬಾಣಿ ಹೆಣ್ಣುಮಕ್ಕಳಿಗೂ ಬಿಡಿಸಲಾಗದ ನಂಟು. ಗುಡ್ಡದ ಕಂಟಿಗಳಿಂದ ಬಿರುಬಿಸಿಲಿನಲ್ಲೇ ತುಂಬುವುದು ಅವರ ಹಣ್ಣಿನ ಗಂಟು. ಕಾಡಿನಿಂದ ನಾಡಿಗೆ ಬರುವ ಆ ಫಲದಲ್ಲಿ ಅಂತಹ ರಸಾಸ್ವಾದ ಏನೇನುಂಟು?

ಮಂಗಳನ ಅಂಗಳದಿಂದ

ಹೆಲಿಕಾಪ್ಟರ್ ಹಾರುತಿದೆ...

ಹೆಮ್ಮೆಯ ಕನ್ನಡಿಗ



ಬಾಬ್ ಬಲರಾಂ

ಮಂಗಳನ ಅಂಗಳದ ಮೇಲೆ ಹಾರಿದ ಈ ಯಾಂತ್ರಿಕ ಸಾಧನ ಹೊಸ ಬೆರಗಿನ ಲೋಕವೊಂದರ ಕದ ತೆರೆದಿದೆ. ಈ ಯಶಸ್ಸಿನಲ್ಲಿ ಕನ್ನಡಿಗನ ಸಾಧನೆಯೂ ಬೆರೆತಿದೆ

ಮಂಗಳನ ಅಂಗಳದ ಮೇಲೆ ಹೆಲಿಕಾಪ್ಟರ್ ಹಾರಾಟ

ಬಿ.ಆರ್. ಗುರುಪ್ರಸಾದ್

1903ರ ಡಿಸೆಂಬರ್ 17ರಂದು ಮಾನವನು ವಿಮಾನವೊಂದರ ಹಾರಾಟವನ್ನು ಮೊದಲ ಬಾರಿಗೆ ಯಶಸ್ವಿಯಾಗಿ ನಡೆಸಿದ. ಯಂತ್ರವೊಂದರ ನೆರವಿನೊಡನೆ ಚಲಿಸುವ ಆ ವಿಮಾನದ ಚಾರಿತ್ರಿಕ ಹಾರಾಟದ ನಂತರ 1940ರಲ್ಲಿ ಅಮೆರಿಕದ ಈಗೋರ್ ಸಿಕೋರ್ಸ್ಕಿ ನೆಲದಿಂದ, ನೇರವಾಗಿ ಮೇಲೇರಬಲ್ಲ ಹಾರುವ ಯಂತ್ರವಾದ ಹೆಲಿಕಾಪ್ಟರ್ ಒಂದರ ಹಾರಾಟವನ್ನು ಪ್ರಥಮ ಬಾರಿ ಯಶಸ್ವಿಯಾಗಿ ಸಾಧಿಸಿದ.

ಈ ಎರಡು ಹಾರುವ ಯಂತ್ರಗಳ ಯಾನ ನಡೆದದ್ದು ಮಾನವನ ವಾಸಸ್ಥಾನವಾದ ಭೂಮಿಯ ಮೇಲೆ.

ಮಾನವನನ್ನು ಹೊತ್ತ ವಿಮಾನವೊಂದರ ಯಶಸ್ವಿ ಹಾರಾಟದ 117 ವರ್ಷಗಳ ನಂತರ ಹಾಗೂ ವಿಮಾನವೊಂದರಂತೆ ಓಡುದಾರಿಯನ್ನು ಬೇಡದೇ ಧರೆಯಿಂದ ನೇರವಾಗಿ ಗಗನಕ್ಕೇರುವ ಹೆಲಿಕಾಪ್ಟರ್‌ನ ಮೊದಲ ಯಶಸ್ವಿ ಹಾರಾಟದ ನಂತರ ಅಂತಹ ಮತ್ತೊಂದು ಚರಿತ್ರಾರ್ಹ ಘಟನೆ ಈಚೆಗೆ ಜರುಗಿತು.

ಕಳೆದ ಸೋಮವಾರ, ಪುಟ್ಟ ಆಟದ ಹೆಲಿಕಾಪ್ಟರ್ ಒಂದರಂತೆ ಕಾಣುವ ಹಾರುವ ಯಂತ್ರದ ಮೊದಲ ಹಾರಾಟ ಜಗತ್ತಿನಾದ್ಯಂತ ಖ್ಯಾತಿಯನ್ನು ಪಡೆಯಿತು. ಆಟದ ಅಥವಾ ಮಾದರಿ ಹೆಲಿಕಾಪ್ಟರ್‌ನ ಹಾರಾಟಕ್ಕೇಕೆ ಇಷ್ಟು ಪ್ರಾಮುಖ್ಯ?

ಇದಕ್ಕೆ ಉತ್ತರ ತುಂಬಾ ಸುಲಭವಾದುದು.

ಇನ್‌ಜೆನ್ಯೂಯಿಟಿ (ಚಾತುರ್ಯ) ಎಂಬ ಹೆಸರಿನ ಆ ಮಾದರಿ ಹೆಲಿಕಾಪ್ಟರ್ ಹಾರಿದ್ದು ಭೂಮಿಯ ಮೇಲಲ್ಲ. ಭೂಮಿಯಿಂದ ಸುಮಾರು 29 ಕೋಟಿ ಕಿಲೊ ಮೀಟರ್ ದೂರದಲ್ಲಿರುವ ಕುತೂಹಲಕಾರಿ ಲೋಕವಾದ ಮಂಗಳ ಗ್ರಹದ ಮೇಲೆ. ಇನ್‌ಜೆನ್ಯೂಯಿಟಿಯ ಹಾರಾಟ ಬೇರೊಂದು ಲೋಕದ ಮೇಲೆ ಯಾಂತ್ರಿಕ ಸಾಧನವೊಂದನ್ನು ಹಾರಿಸುವ ಮಾನವನ ಮೊದಲ ಯಶಸ್ವಿ ಪ್ರಯತ್ನವಾಗಿದೆ.

ಇನ್‌ಜೆನ್ಯೂಯಿಟಿ, ಈಗ ಮದುವೆ ಸಮಾರಂಭವೊಂದರ ವಿಡಿಯೊ ತೆಗೆಯಲು ಬಳಸುವ 'ಡ್ರೋನ್'ಗಳಿಗಿಂತ ಸುಮಾರು ಮೂರ್ನಾಲ್ಕು ಪಟ್ಟು ದೊಡ್ಡದಾಗಿದೆ ಅಷ್ಟೆ. ಭೂಮಿಯ ಮೇಲಿನ ಇದರ ತೂಕ ಸುಮಾರು 1.8 ಕಿಲೊಗ್ರಾಂಗಳು. ಇದರ ನಿರ್ಮಾಣ ಹಾಗೂ ಹಾರಾಟದ ಸಂಬಂಧದಲ್ಲಿ ಅಗತ್ಯವಾಗುವ ಹಣ 80 ಮಿಲಿಯನ್ ಅಮೆರಿಕದ ಡಾಲರ್‌ಗಳು(ಸುಮಾರು ₹ 600 ಕೋಟಿ).

ಕುತೂಹಲವೆಂದರೆ ಮಂಗಳ ಗ್ರಹದ ಮೇಲೆ ಇದರ ತೂಕ ಸುಮಾರು 700 ಗ್ರಾಂಗಳು, ಅಷ್ಟೆ. ಏಕೆಂದರೆ ಭೂಮಿಗಿಂತ ಚಿಕ್ಕದಾದ ಮಂಗಳಗ್ರಹದ ಗುರುತ್ವಾಕರ್ಷಣಾ ಶಕ್ತಿ ಭೂಮಿಯದರ ಶೇಕಡ 38ರಷ್ಟಿದೆ. ಹಾಗಾದರೆ ಮಂಗಳಗ್ರಹದ ಮೇಲೆ ರೋಬಾಟ್ ಹೆಲಿಕಾಪ್ಟರ್ ಒಂದನ್ನು ಹಾರಿಸುವುದೇನು ಮಹಾ ಎಂದೆನಿಸುತ್ತದೆಯೇ?

ಸ್ವಾರಸ್ಯವಿರುವುದು ಅಲ್ಲೇ!

ಮಂಗಳಗ್ರಹದ ಗುರುತ್ವಾಕರ್ಷಣಾ ಶಕ್ತಿ ಕಡಿಮೆ ಇರುವಂತೆಯೇ ಅದನ್ನು ಆವರಿಸಿರುವ ವಾತಾವರಣವೂ ಭೂಮಿಯದಕ್ಕೆ ಹೋಲಿಸಿದಲ್ಲಿ ಅತ್ಯಂತ, ಅಂದರೆ 99 ಪಟ್ಟು ತೆಳುವಾದುದಾಗಿದೆ. ಇಷ್ಟು ತೆಳುವಾದ ವಾತಾವರಣವು ವೇಗವಾಗಿ ತಿರುಗುತ್ತಿರುವ ತನ್ನ 'ಬ್ಲೇಡ್'ಗಳ (ರೆಕ್ಕೆ) ನೆರವಿನೊಡನೆ ಮೇಲೇರುವುದು, ಕೆಳಗಿಳಿಯುವುದು, ವಿವಿಧ ದಿಕ್ಕುಗಳಲ್ಲಿ ಚಲಿಸುವುದು ಈ ರೀತಿ ಮಾಡುವ ಹೆಲಿಕಾಪ್ಟರ್‌ನಂತಹ ವಾಹನಗಳನ್ನು ಸುಲಭವಾಗಿ ಬೆಂಬಲಿಸಲಾರದು.

ಇದರಿಂದಾಗಿ ಅಮೆರಿಕದ ಅಂತರಿಕ್ಷ ಸಂಸ್ಥೆ ನಾಸಾದ ವಿಜ್ಞಾನಿಗಳು ಇನ್‌ಜೆನ್ಯೂಯಿಟಿಯ ಬ್ಲೇಡ್‌ಗಳು ನಿಮಿಷಕ್ಕೆ 2500ಕ್ಕೂ ಹೆಚ್ಚು ಬಾರಿ ಸುತ್ತುವಂತೆ ಅದನ್ನು ನಿರ್ಮಿಸಲು ತೀರ್ಮಾನಿಸಿದರು. ಇದು ಭೂಮಿಯ ಮೇಲಿನ ಹೆಲಿಕಾಪ್ಟರ್‌ಗಳ ಬ್ಲೇಡ್‌ಗಳು ತಿರುಗುವುದಕ್ಕಿಂತ ಐದು ಪಟ್ಟು ಹೆಚ್ಚು!

ಇದರೊಂದಿಗೇ ಹಗುರವಾಗಿದ್ದರೂ ದೃಢವಾಗಿರುವ ಕಂಪಾಸಿಟ್ಸ್ ಎಂಬ ವಿಶೇಷವಾದ ವಸ್ತುಗಳ ಬಳಕೆಯೊಂದಿಗೆ ಇನ್‌ಜೆನ್ಯೂಯಿಟಿಯ ನಾಲ್ಕು ಬ್ಲೇಡ್‌ಗಳನ್ನು ನಿರ್ಮಿಸಲಾಯಿತು. ಇನ್‌ಜೆನ್ಯೂಯಿಟಿಯನ್ನು ಭೂಮಿಯ ಮೇಲಿಂದ ಆ ಕ್ಷಣದಲ್ಲೇ ನಿಯಂತ್ರಿಸುವುದು ಅಸಾಧ್ಯ. ಏಕೆಂದರೆ ಅದರ ಪೈಲಟ್ ಭೂಮಿಯ ಮೇಲಿನಿಂದ ರವಾನಿಸುವ ರೇಡಿಯೊ ಆಜ್ಞೆಗಳು ಮಂಗಳ ಗ್ರಹದ ಮೇಲಿರುವ ಆ ರೋಬಾಟ್ ಹೆಲಿಕಾಪ್ಟರ್‌ಅನ್ನು ತಲುಪಲು ಅನೇಕ ನಿಮಿಷಗಳ ಕಾಲ ತೆಗೆದುಕೊಳ್ಳುತ್ತವೆ.

ಮುಂದಿನ ಪುಟಕ್ಕೆ...

ಪರ್ಸಿವೆರೆನ್ಸ್‌ನೊಂದಿಗೆ ಪಯಣ

ಇನ್‌ಜೆನ್ಯೂಯಿಟಿ ದೂರದ ಮಂಗಳ ಗ್ರಹಕ್ಕೆ ಪಯಣಿಸಿದ್ದು ಪರ್ಸಿವೆರೆನ್ಸ್ (ದೃಢನಿಷ್ಠೆ) ಎಂಬ ಆರು ಚಕ್ರಗಳ ರೋಬಾಟ್ ವಾಹನದ ಉದರದಲ್ಲಿ. ಆ ವಾಹನ ನಮ್ಮಲ್ಲಿನ ಇನೋವಾ/ಎರ್ಟಿಗಾ ವಾಹನಗಳಷ್ಟಿದೆ. ಕಳೆದ ವರ್ಷದ ಜುಲೈ 30 ರಂದು ಉಡಾಯಿಸಲ್ಪಟ್ಟ ನಂತರ ಸುಮಾರು ಏಳು ತಿಂಗಳುಗಳ ಕಾಲ ಪಯಣಿಸಿದ ಪರ್ಸಿವೆರೆನ್ಸ್ ಈ ವರ್ಷದ ಫೆಬ್ರುವರಿ 19ರ ಬೆಳಗಿನ ಜಾವ ಮಂಗಳಗ್ರಹದ ವಾತಾವರಣವನ್ನು ಗಂಟೆಗೆ ಇಪ್ಪತ್ತು ಸಾವಿರ ಕಿಲೊಮೀಟರ್ ವೇಗದಲ್ಲಿ ಪ್ರವೇಶಿಸಿತು. ಅದಾದ ಏಳು ನಿಮಿಷಗಳ ಬಳಿಕ ಪರ್ಸಿವೆರೆನ್ಸ್ ಆ ಗ್ರಹದ ಮೇಲೆ ಸುರಕ್ಷಿತವಾಗಿ ಇಳಿದಿದ್ದಿಂದು ಚರಿತ್ರೆ.

ವನ್ಯಜೀವಿ ತಜ್ಞ ಸಂಜಯ್ ಗುಬ್ಬಿ ಅವರಿಗೆ ಚಿರತೆ ಎಂದರೆ ಎಲ್ಲಿಲ್ಲದ ಆಸಕ್ತಿ. ಕೆಲವು ವರ್ಷಗಳ ಹಿಂದೆ ಶಾಲೆಯೊಂದರಲ್ಲಿ ಕಾಣಿಸಿಕೊಂಡಿದ್ದ ಚಿರತೆ ಜತೆಗಿನ ಗುಬ್ಬಿ ಅವರ ಮುಖಾಮುಖಿ ಎಲ್ಲರಿಗೂ ಗೊತ್ತೇ ಇದೆ. ಈಗ 'ಲೆಪರ್ಡ್ ಡೈರೀಸ್... ದಿ ರೋಸೆಟ್ ಇನ್ ಇಂಡಿಯಾ' ಕೃತಿ ಹಿಡಿದು ಬಂದಿರುವ ಅವರು ಹೇಳುವುದೇನು ಗೊತ್ತೆ?

ಚಿರತೆಯೊಂದಿಗೆ ಗುಬ್ಬಿ ಮುಖಾಮುಖಿ

ಚಿರತೆಯೊಂದು ಮರ ಏರುತ್ತಿರುವ ರೋಚಕ ನೋಟ
ಚಿತ್ರ: ವಿವೇಕ ಸುಂದರ್

ಯತೀಶ್ ಕುಮಾರ್ ಜಿ.ಡಿ.

ಇತ್ತೀಚಿನ ದಿನಗಳಲ್ಲಿ ಹೆಚ್ಚು ಚರ್ಚೆಯಲ್ಲಿರುವ ವಿಷಯವೆಂದರೆ ಮಾನವ-ಪ್ರಾಣಿ ಸಂಘರ್ಷ. ಅತಿ ಹೆಚ್ಚು ಸಂಘರ್ಷ ಎದುರಿಸುತ್ತಿರುವ ಪ್ರಾಣಿಗಳ ಪಟ್ಟಿಯಲ್ಲಿ ಆನೆ, ಕರಡಿ, ಚಿರತೆಯ ಜೊತೆಯಲ್ಲಿ ತೋಳ ಮತ್ತು ಹುಲಿ ಸಹ ಸೇರಿವೆ. ಗುಣಮಟ್ಟ ಕಳೆದುಕೊಳ್ಳುತ್ತಿರುವ ಕಾಡು, ಕಾಡುಗಳ ನಡುವೆ ಸಂಪರ್ಕವಿಲ್ಲದೆ ಕಾಡು ಪ್ರಾಣಿಗಳ ವಲಸೆಗೆ ತೊಡಕು. ನಗರೀಕರಣ, ಕಾಡುನಾಶ, ಅಣೆಕಟ್ಟೆ, ರಸ್ತೆ ಹಾಗೂ ರೈಲು ಮಾರ್ಗ ನಿರ್ಮಾಣದಂತಹ ಅಭಿವೃದ್ಧಿ ಯೋಜನೆಗಳಿಗೆ ಅರಣ್ಯ ನಾಶವಾಗುತ್ತಿದೆ. ಇದೇ ಸಂಘರ್ಷಕ್ಕೆ ಮೂಲಕಾರಣ.

ಬಳ್ಳಾರಿ, ತುಮಕೂರು, ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಗಣಿಗಾರಿಕೆಗೆ ಸಾವಿರಾರು ಎಕರೆ ಕಾಡು ನಾಶವಾಗಿದೆ. ಇದಕ್ಕೆ ಪರ್ಯಾಯವಾಗಿ ನೆಡುತೋಪು ಹಾಕಿದರೂ ಅದು ನೈಸರ್ಗಿಕ ಕಾಡಾಗಲಾರದು. ಕಾಡು, ಕಾಡಿನಂಚಿನ ಗುಡ್ಡಗಾಡು, ಕಬ್ಬಿನಗದ್ದೆ, ಜೋಳದ ಹೊಲದಲ್ಲೂ ಕಾಣುವ ಚಿರತೆಯ ಬಗ್ಗೆ ಸತತವಾಗಿ ಅಧ್ಯಯನ ಮಾಡುತ್ತಿರುವ ತುಮಕೂರಿನ ಸಂಜಯ ಗುಬ್ಬಿ 'ಲೆಪರ್ಡ್ ಡೈರೀಸ್, ದಿ ರೋಸೆಟ್ ಇನ್ ಇಂಡಿಯಾ' ಎನ್ನುವ ಪುಸ್ತಕವನ್ನು ಇಂಗ್ಲಿಷ್‌ನಲ್ಲಿ ಹೊರತಂದಿದ್ದಾರೆ.

ಮುಂದಿನ ಪುಟಕ್ಕೆ...

ಸಂಸ್ಕೃತದ 'ಕಾಂತಶಕ್ತಿ'


ಉಮಾಕಾಂತ ಭಟ್ಟ

ಗ.ನಾ.ಭಟ್ಟ

ಎಪ್ಪತ್ತರ ದಶಕದ ಮಧ್ಯದಲ್ಲಿ ಮೈಸೂರಿನ ಮಹಾರಾಜ ಸಂಸ್ಕೃತ ಕಾಲೇಜಿಗೆ ಹೆಚ್ಚಿನ ವ್ಯಾಸಂಗಕ್ಕೆಂದು ಬಂದ ಅನೇಕ ಹವ್ಯಕ ಹುಡುಗರಂತೆ ಉತ್ತರ ಕನ್ನಡ ಜಿಲ್ಲೆ, ಶಿರಸಿಯಿಂದ ಒಬ್ಬ ಹವ್ಯಕತರುಣ ಬಂದು ಸೇರಿಕೊಂಡಿದ್ದ. ಬಂದ ಆರಂಭದಲ್ಲಿಯೇ ಪ್ರತಿಭೆಯಲ್ಲಿ, ಸಂಗೀತ-ನಾಟಕ-ಯಕ್ಷಗಾನ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳ ಆಸಕ್ತಿಯಲ್ಲಿ, ಹಿಡಿದಿದ್ದನ್ನು ಸಾಧಿಸುವ ಛಲದಲ್ಲಿ ತಾನು ಇತರರಿಗಿಂತ ತುಂಬಾ ಭಿನ್ನ ಅನ್ನುವುದನ್ನು ಆಗಲೇ ತೋರಿಸಿಕೊಟ್ಟಿದ್ದ.

ಇ.ಎಸ್.ವರದಾಚಾರ್ಯ, ಸೋ.ರಾಮಸ್ವಾಮಿ ಅಯ್ಯಂಗಾರ್, ರಾಮಭದ್ರಾಚಾರ್ಯರು, ಶ್ರೀನಾಥಾಚಾರ್ಯರು, ತುರುವೆಕರೆ ವಿಶ್ವೇಶ್ವರ ದೀಕ್ಷಿತ್, ವೆಂಕಣ್ಣಾಚಾರ್, ರಾಜಶೇಖರ್, ನಾರಾಯಣ ಭಟ್ಟ ಮೊದಲಾದ ಮಹಾಮಹಾ ವಿದ್ವಾಂಸರು ಅಧ್ಯಾಪಕ-ಪ್ರಾಧ್ಯಾಪಕರಾಗಿ ಪಾಠ ಮಾಡುತ್ತಾ ವಿದ್ವತ್ಪರಂಪರೆಗೆ ಕಳೆ ತಂದ ಸುವರ್ಣಕಾಲ ಅದು. ಒಬ್ಬೊಬ್ಬ ವಿದ್ವಾಂಸರೂ ಒಂದೊಂದು ಮೇರು. ಅವರಿಂದ ಪಾಠ ಕೇಳುತ್ತಾ ಶಿಷ್ಯತ್ವ ಪಡೆಯುವುದೇ ಒಂದು ಸೌಭಾಗ್ಯ ಎಂದು ಭಾವಿಸುವ ಕಾಲ. ಅಂಥವರೆಲ್ಲರ ಮೆಚ್ಚುಗೆ, ಪ್ರೀತಿಗೆ ಪಾತ್ರನಾಗಿ, ವಿದ್ವತ್ ಪ್ರಪಂಚದ ಒಂದು ತಾರೆಯಾಗಿ, ಕಳೆದ ವಾರ ನಡೆದ ಶೃಂಗೇರಿ ಜಗದ್ಗುರು ಭಾರತೀತೀರ್ಥರ 71ನೇ ವರ್ಧಂತ್ಯುತ್ಸವದ ಸಂದರ್ಭದಲ್ಲೂ 'ವಿದ್ವತ್ ಸಮ್ಮಾನ' ಪ್ರಶಸ್ತಿಗೆ ಭಾಜನರಾದ ಆ ವಿದ್ಯಾರ್ಥಿಯೇ ವಿದ್ವಾನ್ ಉಮಾಕಾಂತ ಭಟ್ಟರು.

ಮೇಲುಕೋಟೆ ಸರ್ಕಾರಿ ಸಂಸ್ಕೃತ ಕಾಲೇಜಿನಲ್ಲಿ 30 ವರ್ಷಗಳ ಕಾಲ ಸಂಸ್ಕೃತ ಉಪನ್ಯಾಸಕರಾಗಿ, ಪ್ರಾಧ್ಯಾಪಕರಾಗಿ, ಪ್ರಿನ್ಸಿಪಾಲರಾಗಿ ನಿವೃತ್ತರಾದ ಅವರು ಈಗಲೂ ದಣಿವರಿಯದ ಕ್ರಿಯಾಶೀಲರು. ಓದು, ಬರಹ, ಅಧ್ಯಯನ, ತಾಳಮದ್ದಳೆ, ಅರ್ಥಗಾರಿಕೆ, ವೇಷಧರಿಸುವಿಕೆ, ಉಪನ್ಯಾಸ, ಪ್ರವಚನ ಮೊದಲಾದ ಸಾರಸ್ವತ ಸೇವೆಗಳು ಅವರ ಜೀವನದ ಅವಿಭಾಜ್ಯ ಅಂಗಗಳೇ ಆಗಿವೆ. ಅಧ್ಯಯನ ಅಧ್ಯಾಪನದಲ್ಲಿ ಅವರು ಎಂದೂ ವಿಶ್ರಾಂತರಾದವರಲ್ಲ. ದೇಹಜೀವನಕ್ಕೆ ಅನ್ನವಸ್ತ್ರಗಳು ಹೇಗೋ ಆತ್ಮಜೀವನಕ್ಕೆ ಸಂಸ್ಕೃತ, ರಾಮಾಯಣ, ಮಹಾಭಾರತ, ಕಲೋಪಾಸನೆ ಹಾಗೆ ಎಂದು ಭಾವಿಸಿದವರು ಅವರು. ಅಂತೆಯೇ ನಡೆದುಕೊಂಡವರು.

> 'ವಿದ್ವತ್ ಸಮ್ಮಾನ' ಪ್ರಶಸ್ತಿಗೆ ಭಾಜನರಾದ ಉಮಾಕಾಂತ ಭಟ್ಟರು, ಸಂಸ್ಕೃತ ಓದಿದವರಲ್ಲಿ ಕನ್ನಡವನ್ನು ಬಹುಸೊಗಸಾಗಿ ಬಳಸುವ ಕೆಲವೇ ಕೆಲವು ಸಂಸ್ಕೃತ ವಿದ್ವಾಂಸರಲ್ಲಿ ಒಬ್ಬರು. ಯಕ್ಷಗಾನ ತಾಳಮದ್ದಳೆಯಲ್ಲೂ ಅವರದು ಎತ್ತಿದಕೈ...

ಅವರ ವೈದುಷ್ಯದ ಕಹಳೆ ಕರ್ನಾಟಕದಾದ್ಯಂತ ಮೊಳಗುವುದಕ್ಕೆ ಅವರು ಮಾಡಿದ ಶಾಸ್ತ್ರಾಧ್ಯಯನದ ಪರಿ ಮತ್ತು ಅವರಿಗೆ ಸಿಕ್ಕ ಗುರುಗಳು ಮುಖ್ಯ ಕಾರಣ. ಶ್ರದ್ಧಾಳು, ಮೇಧಾವಿ ಶಿಷ್ಯ ಉಮಾಕಾಂತ ಭಟ್ಟರಿಗೆ ರಾಮಭದ್ರಾಚಾರ್ಯರು ವಿಶ್ವಾಮಿತ್ರನೋಪಾದಿಯಲ್ಲಿ ಸಿಕ್ಕರು. ರಾಮಭದ್ರಾಚಾರ್ಯರು ಎಂದರೆ ಸಜ್ಜನಿಕೆಯ ಮೂರ್ತರೂಪ, ವಿದ್ವತ್ತಿನ ಪ್ರಖರ ಬೆಳಕು. ಅಂತಹವರ ಶಿಷ್ಯತ್ವದಲ್ಲಿ ಉಮಾಕಾಂತ ಭಟ್ಟರು ಬೆಳೆದರು. ಅವರ ಸಾನ್ನಿಧ್ಯದಲ್ಲಿ ಬುದ್ಧಿಜಾಗರ್ಯ, ಮನೋವಿಕಾಸ ಎಲ್ಲವೂ ಉಂಟಾದವು.

'ಸ್ಕೂಲು-ಕಾಲೇಜುಗಳಲ್ಲಿ ಮೆಟ್ಟಿಲು ಮೆಟ್ಟಿಲಾಗಿ ಓದಿದವನಿಗೆ ವಿದ್ಯೆಯಲ್ಲಿ ಒಂದು ನಿಷ್ಕರ್ಷೆಯಾದ ಆಕಾರ ಲಾಭವಾಗುತ್ತದೆ. ಹಾಗಲ್ಲದೆ ಅಲ್ಲೊಂದು ಇಲ್ಲೊಂದು ಹೆಜ್ಜೆಯಿಟ್ಟು ಹಾರೋಣ, ಇಲ್ಲೊಂದು ಹೆಜ್ಜೆಯಿಟ್ಟು ನೆಗೆಯೋಣ ಎಂದರೆ ಅವನ ವಿದ್ಯೆಯಲ್ಲಿ ಸಮಗ್ರತೆಯಿರುವುದಿಲ್ಲ. ಅಲ್ಲಲ್ಲಿ ಬಿರುಕು ಬಿಟ್ಟುಕೊಂಡಿರುತ್ತದೆ' ಎಂದು ಶಾಸ್ತ್ರೀಯ ಅಧ್ಯಯನದ ಮಹತ್ವವನ್ನು ಸಾರಿದ್ದರು ಡಿ.ವಿ. ಗುಂಡಪ್ಪನವರು. ಅವರ ಈ ಮಾತಿನ ಯಥಾರ್ಥವನ್ನು ಉಮಾಕಾಂತ ಭಟ್ಟರಿಗೂ ಅನ್ವಯಿಸಿ ನೋಡಿದರೆ ಅವೆಲ್ಲವೂ ಅವರಲ್ಲಿ ರೂಪುವಡೆದಿದ್ದು ನಮ್ಮ ಗಮನಕ್ಕೆ ಬರುತ್ತದೆ. ಅವರಿಗೆ ರಾಮಭದ್ರಾಚಾರ್ಯರಿಂದ ಕ್ರಮಬದ್ಧವಾದ ಪಾಠ ದೊರೆಯಿತು. ಪಾಂಙ್ತವಾದ ಶಾಸ್ತ್ರದರ್ಶನ ಆಯಿತು. ಶಾಸ್ತ್ರಗಳ ಬಗ್ಗೆ ಒಂದು ನಿಶ್ಚಿತವಾದ, ಕ್ರಮಬದ್ಧವಾದ ಆಕಾರ ಮೈದಳೆಯಿತು. ಅವರೊಬ್ಬ ಸಂಸ್ಕೃತದ ಘನ ವಿದ್ವಾಂಸ ಎಂಬ ಮನ್ನಣೆಗೆ ಪಾತ್ರರಾಗುವಂತೆ ಮಾಡಿತು.

ಉಮಾಕಾಂತ ಭಟ್ಟರು ಸಂಸ್ಕೃತವನ್ನು, ಆ ಭಾಷೆಯನ್ನು, ವ್ಯಾಕರಣ, ತರ್ಕ, ಅಲಂಕಾರ ಮೊದಲಾದ ಶಾಸ್ತ್ರಗಳನ್ನು ಅದೆಷ್ಟು ಪ್ರೀತಿಸಿದರು ಎಂದರೆ ಅವು ತನ್ನ ಮೈಯ ಚರ್ಮ, ಮೂಳೆ ಮಾಂಸಗಳೋ ಅನ್ನುವಂತೆ ಪ್ರೀತಿಸಿದರು. ಶಾಸ್ತ್ರ-ಕಾವ್ಯಗಳಲ್ಲಿ ಬರುವ ಶಬ್ದಗಳೇ ಇರಲಿ, ವಾಕ್ಯಗಳೇ ಇರಲಿ ಅವುಗಳ ಹಿನ್ನೆಲೆ ಏನು? ಅಂತರಾರ್ಥ ಏನು? ಇತಿಹಾಸ ಏನು? ಪೌರಾಣಿಕ ಹಿನ್ನೆಲೆ ಏನು? ಅವು ಕೊಡುವ ಸಂದೇಶ ಏನು? ಅವು ಮನುಷ್ಯನನ್ನು ಹೇಗೆ ಎತ್ತರಿಸಬಲ್ಲವು ಅನ್ನುವುದನ್ನು ಚಿಕಿತ್ಸಕ ದೃಷ್ಟಿಯಿಂದ ನೋಡತೊಡಗಿದರು. ಅದರ ಫಲವೇ ಅವರಿಂದ 'ಸದಾತನ' ಕೃತಿ ಉದ್ಭವಗೊಂಡಿತು. ಇದೊಂದು ಪ್ರಬಂಧ ಸಂಕಲನ. ಬೇರೆ ಬೇರೆ ಪತ್ರಿಕೆಗಳಿಗೆ ಬರೆದ ಲೇಖನಗಳ ಗುಚ್ಛ. ಆದರೆ ಅವು ಯಾವುವೂ ಲಘು ಲೇಖನಗಳಲ್ಲ, ಗಂಭೀರ ಬರಹಗಳು.

'ಸದಾತನ'ದಲ್ಲಿ ಬಂದಿರುವ 'ಸಂಸ್ಕಾರ' ಎಂಬ ಪದವನ್ನೇ ತೆಗೆದುಕೊಂಡರೂ ಸಾಕು. ನಮ್ಮ ಪ್ರಾಚೀನ ಸಂಸ್ಕೃತಿಯ ಪರಿಚಯದೊಂದಿಗೆ, ಆ ಪದದ ಹಾಸು-ಬೀಸು, ಭಟ್ಟರ ವಿದ್ವತ್ತಿನ ಹೊಳಪು, ಅವರ ಪರಿಶೀಲನಗುಣ, ಶಬ್ದಗರ್ಭದಲ್ಲಿ ಅಡಗಿರುವ ರೋಚಕ ಇತಿಹಾಸ ಎಲ್ಲವೂ ಅನಾವರಣಗೊಳ್ಳುತ್ತವೆ. 'ಸಂಸ್ಕಾರ' ಪದದ ಬಗ್ಗೆ ಅವರು, 'ಪರಿಷ್ಕಾರ ಮತ್ತು ಸಂಸ್ಕಾರಗಳು ಈ ಲೋಕದ ಬದುಕನ್ನು ವಿಕಾಸದ ಹಾದಿಯಲ್ಲಿ ಕೊಂಡೊಯ್ಯುವ ಪರಿಕರಗಳು. ವಿಶ್ವಸಾಹಿತ್ಯದಲ್ಲಿ 'ಸಂಸ್ಕಾರ' ಎಂಬ ಪದಕ್ಕೆ ಸರಿದೊರೆಯಾಗಬಲ್ಲ ಇನ್ನೊಂದು ಪದ ಹುಟ್ಟಿಲ್ಲ' ಅನ್ನುತ್ತಲೇ ಓದುಗನ ಕುತೂಹಲವನ್ನು ಕೆರಳಿಸುವ ಅವರ ವಿಷಯಮಂಡನೆಯೇ ಅತ್ಯಂತ ಚೇತೋಹಾರಿಯಾದುದು; ಮುದಕೊಡುವಂಥಾದ್ದು. 'ಸಂಪರಿಭ್ಯಾಂ ಕರೋತೌ ಭೂಷಣೇ' ಎಂಬ ಪಾಣಿನಿಯ ವ್ಯಾಕರಣದ ಹಿನ್ನೆಲೆಯಲ್ಲಿ 'ಸಂಸ್ಕಾರ' ಶಬ್ದದ ವ್ಯುತ್ಪತ್ತಿಯನ್ನು ಹೊರಗೆಡಹಿದ್ದಾರೆ. ಆ ಕೃತಿಯ ಪುಟ ಐದರಲ್ಲಿ ಅದು ವಿಸ್ತಾರವಾಗಿ ಬಂದಿದೆ. 'ಸಂಸ್ಕಾರಪದವು ಶುದ್ಧೀಕರಣ, ಗುಣಾಧಾನ ಮತ್ತು ಗುಣವರ್ಧನ ಎಂಬ ಮೂರು ಅಂಶಗಳನ್ನು ಒಳಗೊಂಡಿದೆ' ಎಂದು ಅದರ ಇನ್ನೊಂದು ಮಜಲನ್ನು, ವ್ಯಾಪ್ತಿಯನ್ನು ಮನಗಾಣಿಸುವ ಅವರ ಪರಿ ನಿಜಕ್ಕೂ ರೋಚಕವಾದುದು.

ಮೇಲಿನದು ಶಬ್ದವ್ಯುತ್ಪತ್ತಿಯ ಮಾತಾದರೆ ನಮ್ಮ ಕುಟುಂಬ ಸಂಸ್ಕೃತಿಯನ್ನು ಹೇಗೆ ಕಾಪಾಡಿಕೊಳ್ಳಬೇಕು ಅನ್ನುವುದನ್ನು 'ಪಂಚತಂತ್ರ' ಮತ್ತು 'ಮನು'ವಿನ ಮಾತಿನ ಮೂಲಕ ಕಟ್ಟಿಕೊಡುವ ಉಮಾಕಾಂತ ಭಟ್ಟರು ತಮ್ಮ ವ್ಯಾಸಂಗದ ಹರಹನ್ನೂ ಪರಿಚಯಿಸುತ್ತಾರೆ. 'ಅಭ್ಯುತ್ಥಾನ' ಮತ್ತು 'ಅಭಿವಾದನ' ಎಂಬ ಎರಡು ಶಬ್ದಗಳನ್ನು ಇಟ್ಟುಕೊಂಡು ಐದೂವರೆ ಪುಟಗಳಷ್ಟು ವಿಸ್ತರಿಸುವ ಅವರ ವಿದ್ವತ್ ಬಲ ಮತ್ತು ಕಾವ್ಯಪರಿಣತಿ ನಿಜಕ್ಕೂ ಪ್ರಶಂಸಾರ್ಹವಾದುದು. ಅದರ ವಿವರಣೆಗೆ ಇದು ಜಾಗವಲ್ಲ. ಅದನ್ನು ಓದಿಯೇ ಸವಿಯಬೇಕು. ('ಸದಾತನ' ಪುಟ ಸಂ-10-15.) ಇಂತಹ ಸೊಗಸಾದ ಶಬ್ದವ್ಯುತ್ಪತ್ತಿಗಳು 'ಸದಾತನ'ದ ಪುಟಪುಟಗಳಲ್ಲಿ ಅಡಿಕಿರಿದಿವೆ.

ಸಂಸ್ಕೃತ ಓದಿದವರಲ್ಲಿ ಕನ್ನಡವನ್ನು ಬಹುಸೊಗಸಾಗಿ ಬಳಸುವ ಕೆಲವೇ ಕೆಲವು ಸಂಸ್ಕೃತ ವಿದ್ವಾಂಸರಲ್ಲಿ ಉಮಾಕಾಂತ ಭಟ್ಟರು ಒಬ್ಬರು. ತಪ್ಪಿಲ್ಲದೆ ಶುದ್ಧವಾಗಿ, ಆಕರ್ಷಕವಾಗಿ ಬಳಸುವ ಮತ್ತು ಕನ್ನಡದ ಬನಿಯನ್ನು ಯಥಾವತ್ತು ಕಟ್ಟಿಕೊಡುವ ಅವರ ಕನ್ನಡದ ಭಾಷಾಪಾಕ ಅನಿತರ ಸಾಧಾರಣವಾದುದು.

ಉಮಾಕಾಂತ ಭಟ್ಟರ ವಿದ್ವತ್ತಿಗೆ ಸಂದ ಗೌರವಕ್ಕಾಗಿ ಅವರ 60ನೇ ವರ್ಷ ವಯಸ್ಸಿಗೆ ಎರಡು ಅಭಿನಂದನ ಪುಸ್ತಕಗಳು ಬಂದಿವೆ. ಒಂದು 'ಅನ್ವೀಕ್ಷಾ' ಇನ್ನೊಂದು 'ಕಾಂತಶಕ್ತಿ'. ಮೊದಲನೆಯ ಪುಸ್ತಕ 'ಅನ್ವೀಕ್ಷಾ'ದ ಎಲ್ಲಾ ಲೇಖನಗಳೂ ಸಂಸ್ಕೃತದಲ್ಲಿ ಇವೆ. 'ವ್ಯಕ್ತಿ' ಮತ್ತು 'ರುಚಿ' ಎಂಬ ಎರಡು ಭಾಗಗಳು ಇದ್ದು ಮೊದಲನೆಯ ಭಾಗದಲ್ಲಿ ಮೂರ್ನಾಲ್ಕು ಲೇಖನಗಳಲ್ಲೇ ಉಮಾಕಾಂತ ಭಟ್ಟರ ವ್ಯಕ್ತಿ ಪರಿಚಯ ಮುಗಿದುಹೋಗುತ್ತದೆ. ಇನ್ನೊಂದು ಭಾಗ 'ರುಚಿ'ಯಲ್ಲಿ ನಾಡಿನ ಅನೇಕ ಸಂಸ್ಕೃತ ವಿದ್ವಾಂಸರು ಬೇರೆ ಬೇರೆ ಶಾಸ್ತ್ರಗಳ ಕುರಿತು ಲೇಖನ ಬರೆದಿದ್ದಾರೆ. ಪದ್ಯಗಳೂ ಇವೆ. ಎರಡನೆಯ ಪುಸ್ತಕ 'ಕಾಂತಶಕ್ತಿ'ಯಲ್ಲೂ 'ವ್ಯಕ್ತಿ' ಮತ್ತು 'ಅಭಿವ್ಯಕ್ತಿ' ಎಂಬ ಎರಡು ಭಾಗಗಳಿದ್ದು ಲೇಖನಗಳು ಕನ್ನಡದಲ್ಲಿ ಇವೆ. ಸಂಸ್ಕೃತ ಮತ್ತು ಕನ್ನಡದ ಕೆಲವು ಕಾವ್ಯಗಳನ್ನು ಸಂಕ್ಷಿಪ್ತವಾಗಿ ಪರಿಚಯಿಸುವ ಈ ಪುಸ್ತಕ ಸಾಹಿತ್ಯದ ಎಲ್ಲಾ ಪ್ರಕಾರಗಳಿಗೂ ಬಾಗಿಲನ್ನು ತೆರೆದಿದೆ.

ಉಮಾಕಾಂತ ಭಟ್ಟರಿಗೆ ಬಹು ಪ್ರಖ್ಯಾತಿಯನ್ನು ತಂದುಕೊಟ್ಟ ಮತ್ತೊಂದು ಕ್ಷೇತ್ರ ಯಕ್ಷಗಾನ ತಾಳಮದ್ದಳೆ. ತಾಳಮದ್ದಳೆ ಅರ್ಥಧಾರಿಯಾಗಿ ಅವರು ನೀಡಿದ ಕೊಡುಗೆ ಒಂದು ಮೈಲುಗಲ್ಲನ್ನೇ ಸ್ಥಾಪಿಸಿದೆ. ಸಂಸ್ಕೃತ ಶಬ್ದವ್ಯುತ್ಪತ್ತಿಯ ಜಾಡೇ ತಾಳಮದ್ದಳೆಯಲ್ಲೂ ಕಂಡುಬರುತ್ತದೆ. ಯಕ್ಷಗಾನ ಆವರಣ ನಿರ್ಮಾಣಕ್ಕೆ ಬೇಕಾದ ಅತ್ಯಾಕರ್ಷಕ ಶ್ರುತಿಬದ್ಧತೆ, ಪರಿಣಾಮಕ್ಕೆ ಬೇಕಾದ ಆಯ್ದ ಪ್ರಭಾವಶೀಲ ಶಬ್ದಗಳು, ಪದೇ ಪದೇ ಮಿಂಚುವ ರೂಪಕಭಾಷೆ, ಎದುರು ಅರ್ಥಧಾರಿಗಳನ್ನು ತಬ್ಬಿಬ್ಬುಗೊಳಿಸುವ ಮಾಯಕ ಶಬ್ದಜಾಲ, ಪ್ರೇಕ್ಷಕರ ಹತ್ತಿರಕ್ಕೆ ಹೋಗುವುದಕ್ಕಿಂತ ಅವರೇ ತನ್ನ ದಾರಿಗೆ ಬರಲಿ, ತನ್ನ ಅರ್ಥದ ಗಮ್ಯವನ್ನು ಮುಟ್ಟಿಕೊಳ್ಳಲಿ ಎಂಬ ಧಾರ್ಷ್ಟ್ಯ ಮನೋಭಾವ ಅವರ ಅರ್ಥದಲ್ಲಿ ಎದ್ದುಕಾಣುವ ಪ್ರಮುಖ ಅಂಶಗಳು.

ಮಡದಿ ಸುನಂದಾ, ಇಬ್ಬರು ಗಂಡುಮಕ್ಕಳ ಅವರ ಸಂಸಾರ ತೃಪ್ತಸಂಸಾರ. ಅನೇಕ ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾದ ಉಮಾಕಾಂತ ಭಟ್ಟರು 25ಕ್ಕೂ ಹೆಚ್ಚು ಕೃತಿಗಳನ್ನು ಬರೆದಿದ್ದಾರೆ.

ಹೆಲಿಕಾಪ್ಟರ್ ಹಾರುತಿದೆ...

ಹಿಂದಿನ ಪುಟದಿಂದ...

ಈ ಕಾರಣದಿಂದಾಗಿ ಇನ್‌ಜೆನ್ಯೂಯಿಟಿಯ ಅತ್ಯಾಧುನಿಕ ಎಲೆಕ್ಟ್ರಾನಿಕ್ ಮೆದುಳು ತಾನು ಗ್ರಹಿಸಿದ ಮಾಹಿತಿಯನ್ನು ಆಧರಿಸಿ ಸ್ವತಃ ಉತ್ತಮವಾದ ನಿರ್ಧಾರಗಳನ್ನು ತೆಗೆದುಕೊಳ್ಳುವ ಮೂಲಕ ಸ್ವತಂತ್ರವಾಗಿ ಹಾರಾಟ ನಡೆಸಲು ಸಮರ್ಥವಾಗಿದೆ.

ಕನ್ನಡಿಗರ ಕೊಡುಗೆ: ಆ ವೇಳೆಯಲ್ಲಿ ಯಾನದ 'ಕಾಮೆಂಟರಿ' ನೀಡುತ್ತಿದ್ದ ಪರ್ಸಿವೆರೆನ್ಸ್ ತಂಡದ ಹಿರಿಯ ಎಂಜಿನಿಯರ್ ಹಾಗೂ ಮೂಲತಃ ಕನ್ನಡಿಗರಾದ ಸ್ವಾತಿ ಮೋಹನ್ ಜಗತ್ತಿನಾದ್ಯಂತ ಖ್ಯಾತಿಯನ್ನು ಪಡೆದಿದ್ದರು. ಇಂದು ಇನ್‌ಜೆನ್ಯೂಯಿಟಿಯ ಯಶಸ್ವಿ ಹಾರಾಟದ ಹಿನ್ನೆಲೆಯಲ್ಲಿ ಆ ವಾಹನದ ಮುಖ್ಯ ಎಂಜಿನಿಯರ್ ಆಗಿರುವ ಬಾಬ್ ಬಲರಾಂ ಸಹ ಅಚ್ಚ ಕನ್ನಡಿಗರು ಎಂಬುದು ನಮ್ಮ ಹರ್ಷ ಇಮ್ಮಡಿಯಾಗುವಂತೆ ಮಾಡಿದೆ.

ಬಲರಾಂ ಅವರು ಮೈಸೂರು ಸಂಸ್ಥಾನದ ಮಂತ್ರಿಮಂಡಲದ ಸದಸ್ಯರಾಗಿದ್ದ ಹಾಗೂ ಕೆಲಕಾಲ ದಿವಾನರಾಗಿಯೂ ಕಾರ್ಯನಿರ್ವಹಿಸಿದ ಸರ್ ಎಂ.ಎನ್. ಕೃಷ್ಣರಾವ್ (ಇವರ ಹೆಸರಿನ ಪಾರ್ಕ್ ಬೆಂಗಳೂರಿಗರಿಗೆ, ಅದರಲ್ಲೂ ದಕ್ಷಿಣ ಬೆಂಗಳೂರಿಗರಿಗೆ ಚಿರಪರಿಚಿತ) ಅವರ ವಂಶಜರು.

ಮಂಗಳಗ್ರಹದ ಮೇಲ್ಮೈಯನ್ನು ತಲುಪಿದ ಸುಮಾರು ಒಂದೂವರೆ ತಿಂಗಳ ನಂತರ ನಾಸಾ ವಿಜ್ಞಾನಿಗಳು ಇನ್‌ಜೆನ್ಯೂಯಿಟಿಯನ್ನು ಅದರ 'ಏರ್ ಫೀಲ್ಡ್'ನಲ್ಲಿ (ಏರಿಳಿಯುವ ಪ್ರದೇಶ) ಪರ್ಸಿವೆರೆನ್ಸ್‌ನಿಂದ ಸುರಕ್ಷಿತವಾಗಿ ಕೆಳಗಿಳಿಸಿ ಬಳಿಕ ಪರ್ಸಿವೆರೆನ್ಸ್ ಅದರಿಂದ ಸಾಕಷ್ಟು ದೂರ ಸರಿಯುವಂತೆ ಮಾಡಿದರು.

ಇದಾದ ನಂತರ ಇನ್‌ಜೆನ್ಯೂಯಿಟಿಯನ್ನು ಹಾರಿಸುವ ಪ್ರಥಮ ಪ್ರಯತ್ನವು ತಾಂತ್ರಿಕ ತೊಂದರೆಯೊಂದರಿಂದಾಗಿ ಮುಂದೆ ಹಾಕಲ್ಪಟ್ಟಿತು. ಈ ಅನುಭವದಿಂದಾಗಿ ಆ ಪುಟ್ಟ ಹೆಲಿಕಾಪ್ಟರ್‌ನ ಎಲೆಕ್ಟ್ರಾನಿಕ್ ಮೆದುಳಿಗೆ ಹೊಸ ಸೂಚನೆಗಳನ್ನು ರೇಡಿಯೊ ತರಂಗಗಳ ಮೂಲಕ ರವಾನಿಸಲಾಯಿತು.

ಇದೀಗ ಇನ್‌ಜೆನ್ಯೂಯಿಟಿ ತನ್ನ ಮೊದಲ ಯಶಸ್ವಿ ಹಾರಾಟವನ್ನು ಸುರಕ್ಷಿತವಾಗಿ, ಸಮರ್ಥವಾಗಿ ಹಾಗೂ ಯಶಸ್ವಿಯಾಗಿ ಪೂರೈಸಿದೆ. ಇದರ ಹಾರಾಟದ ಅವಧಿ ಹೆಚ್ಚೇನಿರಲಿಲ್ಲ. ಕೇವಲ 30 ಸೆಕೆಂಡುಗಳು ಅಷ್ಟೆ. ಅಷ್ಟು ಕಾಲದಲ್ಲಿ ಅದು ಮಂಗಳ ಗ್ರಹದ ಮೇಲ್ಮೈಯಿಂದ ಸುಮಾರು ಹತ್ತು ಅಡಿಗಳಷ್ಟು ಮೇಲೇರಿ ಅಲ್ಲೇ ಒಮ್ಮೆ ತಿರುಗಿ, ತೇಲಾಡಿ ಕೆಳಗಿಳಿಯಿತಷ್ಟೆ. ಆದರೆ ವಿಲ್ಬರ್ ಮತ್ತು ಆರ್ವಿಲ್ ರೈಟ್ ಸಹೋದರರು ಡಿಸೆಂಬರ್ 17, 1903ರಂದು ನಡೆಸಿದ ಮೊದಲ ವಿಮಾನ ಹಾರಾಟವೂ ಕೇವಲ 12 ಸೆಕೆಂಡುಗಳಷ್ಟು ಅವಧಿಯದಾಗಿತ್ತಷ್ಟೆ. ಅವರ ಆ ಆವಿಷ್ಕಾರದ ಫಲವಾದ ವಿಮಾನಗಳು ಇಂದು ಜಗತ್ತಿನ ಆರ್ಥಿಕತೆಯಲ್ಲಿ ಎಂತಹ ಮಹತ್ತರವಾದ ಪಾತ್ರವನ್ನು ವಹಿಸುತ್ತಿವೆ ಅಲ್ಲವೇ? ಹೀಗೆ ಒಂದು ಸಣ್ಣ ಪ್ರಮಾಣದಲ್ಲಿ ಜರುಗುವ ತಾಂತ್ರಿಕ ಮುನ್ನಡೆಯೊಂದು ಮುಂದೆ ಹೊಸ ಕ್ಷೇತ್ರವೊಂದರ ಆರಂಭಕ್ಕೆ ನಾಂದಿಯಾಗಬಹುದು.

ಇನ್‌ಜೆನ್ಯೂಯಿಟಿ ಹಾರಾಟ ನಡೆಸಿದ ಪ್ರದೇಶಕ್ಕೆ 'ರೈಟ್ ಸಹೋದರರ ಪ್ರದೇಶ' ಎಂದು ಕರೆಯಲಾಗಿದೆ. ಅವರು ಹಾರಿಸಿದ ಚಾರಿತ್ರಿಕ ವಿಮಾನವಾದ ಫ್ಲಯರ್‌ನ ರೆಕ್ಕೆಯ ಚೂರೊಂದನ್ನು ಇನ್‌ಜೆನ್ಯೂಯಿಟಿಗೆ ಅಂಟಿಸಲಾಗಿತ್ತು.

ಮುಂದಿನ ಒಂದು ತಿಂಗಳಲ್ಲಿ ಇನ್‌ಜೆನ್ಯೂಯಿಟಿ ಇನ್ನೂ ನಾಲ್ಕು ಹಾರಾಟಗಳನ್ನು ನಡೆಸಲಿದೆ. ಈಗಾಗಲೇ ವಿಜ್ಞಾನಿಗಳು ವೈಜ್ಞಾನಿಕವಾಗಿ ಕುತೂಹಲಕಾರಿ ಹೊಸ ಪ್ರದೇಶಗಳನ್ನು ಮಂಗಳಗ್ರಹದ ಹಾಗೂ ಇತರ ಕೆಲವು ಲೋಕಗಳಲ್ಲಿ ಗುರುತಿಸಲು ಇನ್‌ಜೆನ್ಯೂಯಿಟಿಯಂತಹ ರೋಬಾಟ್‌ಗಳನ್ನು ಬಳಸಿಕೊಳ್ಳುವ ಬಗ್ಗೆ ಮಾತನಾಡುತ್ತಿದ್ದಾರೆ.

ಇನ್‌ಜೆನ್ಯೂಯಿಟಿಯ ಹಾರಾಟ ಮಂಗಳಗ್ರಹದ ಅನ್ವೇಷಣೆಯಲ್ಲಿ ಮಾನವ ಕ್ರಮಬದ್ಧವಾಗಿ ಮುಂದೆ ಸಾಗುತ್ತಿರುವುದರ ಇತ್ತೀಚಿನ ಬೆಳವಣಿಗೆಯಾಗಿದೆ. ಇದಾದ ನಂತರ ಮಾನವ ಸ್ವತಃ ತಾನೇ ಮಂಗಳಗ್ರಹ ಯಾನವನ್ನು ಕೈಗೊಳ್ಳುವುದಕ್ಕೆ ಪೂರ್ವಭಾವಿಯಾಗಿ ಈ ನಿಟ್ಟಿನಲ್ಲಿ ಮತ್ತೇನು ಚಟುವಟಿಕೆಗಳು ನಡೆಯುತ್ತವೆಯೋ? ಕಾದು ನೋಡೋಣ.

ಮುನ್ನೋಟ 25-04-2021 ರಿಂದ 01-05-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಉದ್ಯಮಿಗಳು ನೂತನ ಯಂತ್ರೋಪಕರಣಗಳನ್ನು ಖರೀದಿ ಮಾಡುವ ಎಲ್ಲಾ ಲಕ್ಷಣಗಳಿವೆ, ಇದಕ್ಕೆ ಬೇಕಾದ ಪೂರಕ ಮಾಹಿತಿಗಳು ಈಗ ಒದಗಿಬರುತ್ತವೆ. ಭೂಮಿ ಖರೀದಿ ವಿಚಾರದಲ್ಲಿ ಅತಿಯಾದ ಆತುರ ಬೇಡ, ನಿಧಾನ ವಹಿಸಿದಲ್ಲಿ ನಿಮ್ಮ ಬೆಲೆಗೆ ಭೂಮಿ ಸಿಗುತ್ತದೆ. ಉದ್ಯೋಗದಲ್ಲಿ ಎಚ್ಚರಿಕೆಯ ಹೆಜ್ಜೆ ಇಟ್ಟಲ್ಲಿ ಪ್ರಗತಿಯನ್ನು ಕಾಣಬಹುದು. ನಿವೇಶನಗಳ ವ್ಯವಹಾರವನ್ನು ಮಾಡುವವರಿಗೆ ಆದಾಯ ವೃದ್ಧಿಸುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಹಣ್ಣು ತರಕಾರಿ ವ್ಯಾಪಾರ ಮಾಡುವವರಿಗೆ ವ್ಯಾಪಾರದಲ್ಲಿ ವೃದ್ಧಿ ಇರುತ್ತದೆ ಹಾಗೂ ಆದಾಯ ಹೆಚ್ಚುತ್ತದೆ. ಸಂಗಾತಿಯ ಕಡೆಯ ಶುಭಕಾರ್ಯಗಳಿಗೆ ಹೋಗಿ ಬರುವ ಸಾಧ್ಯತೆಗಳಿವೆ. ಕೃಷಿಯುತ್ಪನ್ನಗಳಿಗೆ ಹೆಚ್ಚಿನ ಬೆಲೆ ದೊರಕುತ್ತದೆ. ಕೃಷಿಕರಿಗೆ ಉತ್ತಮ ಸಾಲ ಸೌಲಭ್ಯಗಳು ಒದಗಿಬರುತ್ತವೆ. ಬಹಳ ದಿನಗಳಿಂದ ಬಯಸುತ್ತಿದ್ದ ಹೆಚ್ಚಿನ ಮೊತ್ತದ ಸರ್ಕಾರಿ ಸಾಲ ಈಗ ದೊರೆಯುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ನಿತ್ಯ ಕೆಲಸಗಳಲ್ಲಿ ಹೊಸ ಉತ್ಸಾಹ ಮೂಡಿ ಕೆಲಸ ಕಾರ್ಯಗಳಲ್ಲಿ ಚುರುಕುತನ ತೋರುವಿರಿ. ವಿಶ್ವಾಸಿಗಳ ಸಹಕಾರದಿಂದ ವ್ಯಾಪಾರದಲ್ಲಿ ಮುನ್ನಡೆ. ಹೈನುಗಾರಿಕೆಯನ್ನು ನಡೆಸುವವರು ಉತ್ತಮ ಆದಾಯವನ್ನು ನಿರೀಕ್ಷಿಸಬಹುದು. ಮನೆಯಲ್ಲಿ ಒಂದು ದೈವ ಸಂಬಂಧದ ಕಾರ್ಯಕ್ರಮಕ್ಕಾಗಿ ಸಿದ್ಧತೆಗಳನ್ನು ಮಾಡುವಿರಿ. ಅನಾರೋಗ್ಯ ಪೀಡಿತರ ಆರೋಗ್ಯದಲ್ಲಿ ಚೇತರಿಕೆಯನ್ನು ಕಾಣಬಹುದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಸಹೋದರರಿಗೆ ಸಹಾಯ ಮಾಡುವಿರಿ. ಅವರ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳನ್ನು ಸರಿ ಮಾಡಿಕೊಳ್ಳಲು ಸೂಕ್ತ ಮಾರ್ಗದರ್ಶನ ಮಾಡುವಿರಿ. ಕಾನೂನಾತ್ಮಕ ವ್ಯವಹಾರಗಳಲ್ಲಿ ಸೂಕ್ತ ಮಾರ್ಗದರ್ಶನ ಪಡೆದು ವ್ಯವಹರಿಸುವುದು ಒಳ್ಳೆಯದು. ಕಚೇರಿ ಕೆಲಸದ ನಿಮಿತ್ತ ದೂರಪ್ರಯಾಣ ಮಾಡಬೇಕಾಗಬಹುದು. ವಾಹನ ರಿಪೇರಿ ಮಾಡುವವರಿಗೆ ಕೈ ತುಂಬಾ ಕೆಲಸ ದೊರೆತು ಸಾಕಷ್ಟು ಸಂಪಾದನೆ ಇರುತ್ತದೆ.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ನೌಕರ ವರ್ಗದವರ ಕಠಿಣ ಪರಿಶ್ರಮಕ್ಕೆ ಸೂಕ್ತ ಪ್ರತಿಫಲ ದೊರೆತು ಉದ್ಯೋಗದಲ್ಲಿ ಸೂಕ್ತ ಬದಲಾವಣೆಯ ಸಾಧ್ಯತೆ ಇದೆ. ವಾಹನ ಚಾಲನೆಯಲ್ಲಿ ಹೆಚ್ಚಿನ ಜಾಗರೂಕತೆ ಅಗತ್ಯ. ಉನ್ನತ ಅಧಿಕಾರಿಗಳ ಸಹಾಯದಿಂದ ನೌಕರಿಯಲ್ಲಿ ಅನುಕೂಲಗಳು ಕಂಡುಬರುತ್ತವೆ. ಸಮಾಜ ಸೇವೆ ಮಾಡುವವರು ತಮ್ಮ ಕಾಯಕದಲ್ಲಿ ಸಂತೋಷವನ್ನು ಕಾಣುವರು. ಹಣದ ಒಳಹರಿವು ಅಗತ್ಯಕ್ಕೆ ತಕ್ಕಷ್ಟು ಇರುತ್ತದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ನಿಮ್ಮ ವೈಯಕ್ತಿಕ ವಿಚಾರಗಳತ್ತ ಹೆಚ್ಚಿನ ಗಮನ ಕೊಡಿರಿ. ಮನೆ ಬದಲಾವಣೆಯ ವಿಚಾರಗಳು ಮುನ್ನೆಲೆಗೆ ಬರುತ್ತವೆ. ಕ್ರೀಡಾಪಟುಗಳಿಗೆ ಉತ್ತೇಜನ ದೊರೆತು ಸಾಧನೆ ಮಾಡುವ ಸಂದರ್ಭವಿದೆ. ವಾಹನ ಮಾರಾಟಗಾರರಿಗೆ ವ್ಯಾಪಾರ ವೃದ್ಧಿಸುತ್ತದೆ. ನಿಮ್ಮ ಸಂಪತ್ತನ್ನು ಸರಿಯಾಗಿ ರಕ್ಷಣೆ ಮಾಡಿಕೊಳ್ಳಿರಿ, ಕಳ್ಳಕಾಕರ ಭಯವಿದೆ. ಆಹಾರ ವ್ಯತ್ಯಾಸದಿಂದ ಅನಾರೋಗ್ಯವಾಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3
ನಿಮ್ಮ ಕೆಲವು ಯೋಜನೆಗಳನ್ನು ಪೂರೈಸಲುಬೇಕಾದ ಅನುಕೂಲಗಳು ಸಿಗುತ್ತವೆ. ಉನ್ನತ ಶಿಕ್ಷಣ ಅಥವಾ ಉನ್ನತ ಅಧ್ಯಯನಕ್ಕಾಗಿ ದೂರ ಪ್ರಯಾಣ ಮಾಡಬೇಕಾದೀತು. ಆರ್ಥಿಕ ಅನುಕೂಲಗಳು ಅಗತ್ಯಕ್ಕೆ ತಕ್ಕಷ್ಟೇ ಇರುತ್ತವೆ. ಆಸ್ತಿ ಲಾಭದ ಲಕ್ಷಣಗಳು ಗೋಚರಿಸುತ್ತಿವೆ. ಕೈಸಾಲ ತೀರಿಸಿ ನಿರಾಳರಾಗುವಿರಿ. ಮನೆಯ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಆಸಕ್ತಿ ತೋರಿ ಸಂಗಾತಿಗೆ ಸಹಾಯ ಮಾಡುವಿರಿ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ
ನಿರೀಕ್ಷಿತ ಮೂಲಗಳಿಂದ ಧನಾಗಮನ ಆಗದಿದ್ದರೂ ಅನಿರೀಕ್ಷಿತ ಮೂಲ ದಿಂದ ಹಣ ಒದಗಿ ಸಂತಸವಾಗುವುದು. ಹೊಸ ಗೃಹಾಲಂಕಾರ ವಸ್ತುಗಳನ್ನು ಕೊಳ್ಳುವ ಯೋಗವಿದೆ. ಸಹೋದ್ಯೋಗಿಗಳೊಡನೆ ಉತ್ತಮ ಸಂಬಂಧ ಏರ್ಪಡುತ್ತದೆ. ನಿಮ್ಮ ಒಳ್ಳೆಯತನವನ್ನು ಕೆಲವರು ದುರುಪಯೋಗಪಡಿಸಿಕೊಳ್ಳಬಹುದು, ಎಚ್ಚರವಿರಲಿ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1
ಹಿರಿಯರು ತಮ್ಮ ಮಾತಿನಿಂದ ನಿಷ್ಠೂರಕ್ಕೆ ಒಳಗಾಗುವರು. ಇತರರ ಬಗ್ಗೆ ಅಸಹನೆಯನ್ನು ವ್ಯಕ್ತಪಡಿಸಿ ಎಲ್ಲರ ಮುಂದೆ ಸಣ್ಣವರಾಗುವ ಸಾಧ್ಯತೆಗಳಿವೆ, ಸರಿಯಾಗಿ ಗಮನಹರಿಸಿರಿ. ಸಂಸಾರದಲ್ಲಿನ ಸಂಕಷ್ಟಗಳು ಪರಿಹಾರಗೊಂಡು ಹೊಸ ಬೆಳಕು ಮೂಡುತ್ತದೆ. ಸಂಗೀತ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡಬೇಕೆನ್ನುವವರಿಗೆ ಸೂಕ್ತ ಅವಕಾಶಗಳು ಬರುತ್ತವೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ವ್ಯವಹಾರಗಳಲ್ಲಿ ಮುನ್ನಡೆ ಇರುತ್ತದೆ. ಸಂಗ್ರಹಿಸಲ್ಪಟ್ಟ ವಸ್ತುಗಳ ಮಾರಾಟ ದಿಂದ ಹೆಚ್ಚಿನ ಲಾಭ ಇರುತ್ತದೆ. ಮಕ್ಕಳಿಗಾಗಿ ದುಬಾರಿ ವಸ್ತುಗಳನ್ನು ಖರೀದಿ ಮಾಡುವ ಯೋಗವಿದೆ. ಶ್ರೀಮಂತ ಜೀವನದ ಶೈಲಿಗಾಗಿ ಹೆಚ್ಚು ಹಣ ಮಾಡುವಿರಿ. ವ್ಯಾಪಾರದಲ್ಲಿನ ಸಮಸ್ಯೆಗಳಿಗೆ ಹಂತ ಹಂತವಾಗಿ ಪರಿಹಾರವನ್ನು ಕಂಡುಕೊಳ್ಳುವಿರಿ. ವ್ಯಾಪಾರಕ್ಕೆ ಸಂಬಂಧಪಟ್ಟ ವ್ಯಕ್ತಿಗಳನ್ನು ಭೇಟಿಮಾಡಿ ಸಮಾಲೋಚನೆ ನಡೆಸುವಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಕೆಲಸ ಕಾರ್ಯಗಳಲ್ಲಿ ಅಡ್ಡಿ ಉಂಟಾದರೂ ಎದೆಗುಂದದೆ ಮುಂದುವರೆದು ಯಶಸ್ಸನ್ನು ಸಾಧಿಸಿ ತೋರಿಸುವಿರಿ. ಅಧ್ಯಯನದಲ್ಲಿನ ಆಸಕ್ತಿಯಿಂದಾಗಿ ಉತ್ತಮ ಭವಿಷ್ಯ ನಿರ್ಮಾಣವಾಗುವುದು. ಲೇವಾದೇವಿ ಮಾಡುವವರು ಸದ್ಯದ ಮಟ್ಟಿಗೆ ಅದನ್ನು ಮಾಡದಿರುವುದು ಒಳ್ಳೆಯದು. ಆದಾಯ ಹಾಗೂ ಖರ್ಚು ಸಮನಾಗಿರುವುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಆದಾಯ ಸ್ವಲ್ಪ ಕಡಿಮೆಯಾಗಿ ಖರ್ಚುಗಳಿಗೆ ಕಡಿವಾಣ ಹಾಕಬೇಕಾದ ಸಂದರ್ಭವಿದೆ. ಹೊಸ ಆದಾಯದ ಮೂಲಗಳತ್ತ ಗಮನ ಹರಿಸುವಿರಿ. ನೀರಾವರಿ ಭೂಮಿಯನ್ನು ಹೊಂದುವ ಯೋಗವಿದೆ. ಹೊಸದಾಗಿ ಚಿನ್ನಾಭರಣ ವ್ಯಾಪಾರವನ್ನು ಆರಂಭಿಸಲು ಬಯಸುವವರು ಈಗ ಆರಂಭಿಸಬಹುದು. ಸರ್ಕಾರದ ಕಡೆಯಿಂದ ಬರಬೇಕಾದ ಧನಸಹಾಯ ಅನಾಯಾಸವಾಗಿ ಬರುತ್ತದೆ.

ಪದಬಂಧ 2684



ಮೇಲಿನಿಂದ ಕೆಳಕ್ಕೆ
1. ನಗರ ನಡವಳಿಕೆಗೆ ಒಗ್ಗಿರುವ ಪೌರ 4
2. ಒಗ್ಗರಣೆಗೆ ಬೀಳುವ ಕಹಿ ಎಲೆ ಊಟದ ತಟ್ಟೆಯಲ್ಲಿ ಮೂಲೆ ಸೇರುತ್ತದೆ 4
3. ಒಂಭತ್ತು ಭಾವಗಳು ದ್ರವವಾಗಿ ಹರಿದಿದೆ 4
4. ಲೆಕ್ಕಾಚಾರದ ಶಾಸ್ತ್ರ 6
6. ಮುದ್ರಣಕ್ಕೆ ಮುನ್ನ ಸಿದ್ಧವಾದ ನಕಲು 5
9. ಸುಲಭವಾಗಿ ಹೋಗುವಂತದ್ದು 3
11. ರಾಮನ ಹೆಸರು ಸೇರಿದ್ದರೂ ಇದು ತಿಂದ ಮನೆಗೆ ಎರಡು ಬಗೆಯುವ ಕೆಲಸ 3
12. ಅರಸನಾದವ ಸಂಸಾರ ಭೋಗವನ್ನು ತ್ಯಜಿಸುವ ಆಶ್ರಮ 5
13. ಕಣ್ಣಿಗೆ ಮನೋಹರವಾಗಿ ಕಾಣುವ ಸೀತಾಪತಿ 6
14. ಕಣ್ಣು ರೆಪ್ಪೆಯ ಬಡಿತ 3
16. ಪ್ರೀತಿಯಿಂದ ಮುದ್ದುಮಾಡಿ ಓಲೈಸು 3
18. ಸಮುದ್ರದ ನಡುವೆ ನೂರು ಸಾವಿರ ನಡುಗಡ್ಡೆ 4
19. ದೊರೆಯೆಂಬ ಅಂಕಿತ ಪಡೆದು ತಂದೆಯ ಜೊತೆ ಅಂತರ ಬೆಳಸಿಕೊಂಡ ಪುತ್ರ 4
20. ಮಹಾಭಾರತದ ಮಹಾ ಕುಲ 4

ಎಡದಿಂದ ಬಲಕ್ಕೆ
1. ನಾಕದಲ್ಲಿ ಸಿಗುವ ಅಗ್ರಗಣಿ 3
3. ಹೊಸತನದ ಕಾಲ, ಹೊಸ ಮನ್ವಂತರ 4
5. ಮನೆ ಕಟ್ಟುವ ಕೆಲಸದವ ಕೈ ಸಲಕರಣೆಯನ್ನು ಹಿಂದುಮುಂದಾಗಿ ಹಿಡಿದಿದ್ದಾನೆ 3
7. ಖಗ ಮೃಗಗಳಿಗೆ ಬಲೆ ಹಾಕಿ ಬಾಣ ಬಿಡುವವ 4
8. ಬಲದಿಂದ ಕೂಡಿದ್ದು; ಕೆಚ್ಚು ಹೆಚ್ಚಿಸುವಂತದ್ದು 3
10. ಜೊತೆಯಾಗಿ ಬಾಳ್ವೆನಡೆಸುವ ವ್ಯಕ್ತಿ 4
12. ಚೈತ್ರ ಶುದ್ಧ ಒಂಭತ್ತನೇ ದಿನ ದಶರಾತ್ಮಜನ ಜನ್ಮದಿನ 5
15. ಕಾಮದೇವನ ಜೊತೆ ಅವನ ಪ್ರೀತಿಯ ಸತಿ ಸೇರಿದ್ದಾಳೆ 5
17. ಸಬಲವಾಗುತ್ತಿರುವ ಸ್ತ್ರೀವಂಶ 4
19. ಕಣ್ಣು ಮಂಜಾದಾಗ ಹೀಗೆ ಕಾಣುವುದು 3
21. ಕ್ರಮೇಣ ಕ್ಷೀಣಿಸುವಂತೆ ಮಾಡುವ ವ್ಯಾಧಿ 4
22. ಆಸರೆಯಾಗಿ ನಿಲ್ಲುವ ಆಫ್ರಿಕಾದ ಮರಳುಗಾಡು 3
23. ಮನಸ್ಸುಗಳಲ್ಲಿ ಕೋಪದ ಬಿಸಿ 4
24. ಯಶ ಪಡೆದ ಯೋಗಿ 3

ಪದಬಂಧ ಉತ್ತರ -2683

ಮೇಲಿಂದ ಕೆಳಕ್ಕೆ
1. ಸಹಸ್ರಮಾನ 2.ಜನಾಭಿಮತ 3.ರಾಜಹಂಸ 4.ಶ್ರೀರಾಮಮಂದಿರ 5.ರಾಮತಾರಕ 6.ಸಮುದ್ರದಡ 11.ಮಿಠಾಯಿ 13.ರಂಗೋಲಿ 14.ಸಂಚಾರಿಜನಾಂಗ 15.ದಾರಿತೋರಿಸು 16.ನಿರಾಶ್ರಿತರು 17.ಪಾರಿತೋಷಕ 18.ಕೆಮ್ಮಣ್ಣುಗುಂಡಿ 20.ಸೋಮರಸ

ಎಡದಿಂದ ಬಲಕ್ಕೆ
1.ಸಮಾಜ 3.ರಾಜಶ್ರೀ 5.ರಾಜಸ 7.ಹಂಗಾಮ 8ಮರಸ 9.ಮಂದಾರ 10.ನಮಿತ 12.ಕರಂಡ 14.ಸಂಸ್ಕಾರ 15.ದಾಯಿನಿ 17.ಪಾಲಿಕೆ 19.ರಾಬರಿ 20.ಸೋಮಾರಿ 21.ಜನುಮ 22.ಸುಗುರು 23.ಗರಾಸ 24.ಕಬಾಡಿ

ನೆಲದ ಸಂಸ್ಕೃತಿ, ವಿಶಿಷ್ಟ ಆಚರಣೆ, ಕಲೆ, ಸಂಗೀತ, ಪ್ರವಾಸಕ್ಕೆ ಸಂಬಂಧಿಸಿದ, ಲವಲವಿಕೆಯಿಂದ ಕೂಡಿದ ಬರಹಗಳಿಗೆ ಸ್ವಾಗತ. ಗರಿಷ್ಠ ಮಿತಿ 600 ಪದಗಳು.
ಲೇಖನಕ್ಕೆ ಪೂರಕವಾದ ಚಿತ್ರಗಳೂ ಅಪೇಕ್ಷಣೀಯ. ಇಮೇಲ್ ವಿಳಾಸ: bhanuvara@prajavani.co.in

ಚಿರತೆಯೊಂದಿಗೆ ಗುಬ್ಬಿ...

...ಹಿಂದಿನ ಪುಟದಿಂದ

ಕಾಡು, ಕಾಡುಪ್ರಾಣಿಗಳ ಬಗ್ಗೆ ಇದು ಇವರ ಆರನೇ ಪುಸ್ತಕ. ಇನ್ನೂ 'ಲೆಪರ್ಡ್ ಡೈರೀಸ್'ನ ಗುಂಗಿನಲ್ಲಿರುವ ಗುಬ್ಬಿ ಅವರು 'ಭಾನುವಾರದ ಪುರವಣಿ'ಯೊಂದಿಗೆ ನಡೆಸಿದ ಮಾತುಕತೆಯ ಆಯ್ದಭಾಗ ಇಲ್ಲಿದೆ.

• ಭಾರತದ ಚಿರತೆ ಬಗ್ಗೆ ಏನಿಷ್ಟು ಕುತೂಹಲ?

ನಾನು ಬೆಳೆದಿದ್ದು ತುಮಕೂರು. ಅದು ಚಿರತೆ, ಕರಡಿ ಮತ್ತು ತೋಳಗಳ ಪ್ರದೇಶ. ನಾನು ಅವುಗಳ ಸಂಘರ್ಷವನ್ನು ನೋಡುತ್ತಲೇ ಬೆಳೆದೆ. ಮಾನವನ ಜತೆ ಸಂಘರ್ಷ ಎದುರಿಸುತ್ತಿರುವ ಪ್ರಮುಖ ಕಾಡುಪ್ರಾಣಿಯ ಪೈಕಿ ಚಿರತೆ ಸಹ ಒಂದು. ಬಂಗಾಳದ ಹುಲಿಗಳ ಬಗ್ಗೆ

ಗಾಯಗೊಂಡ ಚಿರತೆಗೆ ಚಿಕಿತ್ಸೆ ನೀಡುತ್ತಿರುವ ಸಂಜಯ್ ಗುಬ್ಬಿ

ಸಾಕಷ್ಟು ಅಧ್ಯಯನವಾಗಿದೆ. ಹುಲಿ ಹೊರತುಪಡಿಸಿದರೆ ಚಿರತೆಯೇ ದೊಡ್ಡ ಮಾರ್ಜಾಲ. ಇದರ ಬಗ್ಗೆ ಅಧ್ಯಯನವೇ ಆಗಿರಲಿಲ್ಲ. ನಾವು ಕರ್ನಾಟಕದಲ್ಲಿ ಚಿರತೆಯ ಆವಾಸಸ್ಥಾನ ಎಲ್ಲೆಲ್ಲಿ ಹರಡಿದೆ ಎನ್ನುವ ಅಧ್ಯಯನ ಮಾಡಿದ್ದೇವೆ. ಇಂತಹ ಅಧ್ಯಯನ ಭಾರತದಲ್ಲಿ ಮೊದಲ ಸಲ ನಡೆದಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಕಲಬುರ್ಗಿ ಹಾಗೂ ರಾಯಚೂರು ಜಿಲ್ಲೆಗಳನ್ನು ಹೊರತುಪಡಿಸಿ ಉಳಿದ ಜಿಲ್ಲೆಗಳಲ್ಲಿ ಚಿರತೆಗಳಿವೆ. ನಮ್ಮ ಅಧ್ಯಯನ ಚಿರತೆಯ ಸಂತತಿಯ ಬೆಳವಣಿಗೆ, ಮಾನವನ ಜತೆಗಿನ ಸಂಘರ್ಷ, ಅವುಗಳ ಚಲನವಲನ ಮತ್ತು ವಾಸಸ್ಥಾನಗಳ ಕುರಿತಾಗಿದೆ.

• 'ಲೆಪರ್ಡ್ ಡೈರೀಸ್' ಚಿರತೆಯ ಯಾವ ಮಜಲನ್ನು ಪರಿಚಯಿಸುತ್ತದೆ?

ಚಿರತೆಗಳ ನಡವಳಿಕೆ, ಅವುಗಳ ಪರಿಸರ, ಪರಿಸರದಲ್ಲಿ ಅವುಗಳಿಗೆ ಇರುವ ಪ್ರಾಮುಖ್ಯ, ಸಂರಕ್ಷಣೆ, ಕಾಡಿನ ಮತ್ತು ನಾಡಿನ ಚಿರತೆ, ಚಿರತೆಯ ಭವಿಷ್ಯ, ಇವುಗಳ ಪರಸ್ಪರ ಸಂಪರ್ಕದ ಬಗ್ಗೆ ಸಾಮಾನ್ಯ ಜನರಿಗೆ ಅರ್ಥವಾಗುವ ರೀತಿಯಲ್ಲಿ ಕೃತಿ ಚರ್ಚೆ ಮಾಡುತ್ತದೆ. ಇದು ಜನ ಸಾಮಾನ್ಯರ ಪುಸ್ತಕ. ಪ್ರಪಂಚದ ಎಲ್ಲೆಲ್ಲಿ ಚಿರತೆಗಳಿವೆ ಎಂಬ ವಿವರವನ್ನೂ ಇದು ಹೊಂದಿದೆ.

• ರಾಜ್ಯದಲ್ಲೇ ಇರುವ ಮಾರ್ಜಾಲ ಕುಟುಂಬದ ಸದಸ್ಯರಾದ ಹುಲಿ ಮತ್ತು ಚಿರತೆಯ ಬಲಿ ಪ್ರಾಣಿಗಳಲ್ಲಿ ಏನು ವ್ಯತ್ಯಾಸ?

ಪ್ರಾಯಕ್ಕೆ ಬಂದ ಹುಲಿ 130 ಕೆ.ಜಿ ತೂಗಿದರೆ ಅದೇ ವಯಸ್ಸಿನ ಚಿರತೆಯ ತೂಕ 70 ಕೆ.ಜಿ. ಚಿರತೆಯ ಬಲಿ ಪ್ರಾಣಿಗಳು 20 ಕೆ.ಜಿ ಆಸುಪಾಸಿನಲ್ಲಿದ್ದರೆ, ಹುಲಿಯ ಬಲಿ ಪ್ರಾಣಿಗಳು 50 ಕೆ.ಜಿಗೂ ಮೀರಿದ್ದು. ನೈಸರ್ಗಿಕ ಬಲಿಪ್ರಾಣಿಗಳು ಕಡಿಮೆಯಾದಾಗ, ಸಂಘರ್ಷ ಹೆಚ್ಚಾದಾಗ ಇವೆರಡೂ ಮನುಷ್ಯನನ್ನು ಗುರಿಮಾಡಬಹುದು. ನಗರದ ಸುತ್ತ ಇರುವ ಚಿರತೆಗಳು ಮೇಕೆ, ಕುರಿ, ನಾಯಿ ಹಾಗೂ ಕರುಗಳನ್ನು ಕೊಲ್ಲುತ್ತವೆ. ಆದರೆ ಕೊಂಚ ಘಾಟಿಯಾದ ಎಮ್ಮೆಯನ್ನು ಹಿಡಿಯುವುದಿಲ್ಲ.

• ಇವು ಉದ್ದೇಶಪೂರ್ವಕವಾಗಿ ನರಭಕ್ಷಕವೇ?

ರಾಜ್ಯದ ಬಳ್ಳಾರಿಯ ಸಂಡೂರು, ತುಮಕೂರಿನ ಹೆಬ್ಬೂರು ಮತ್ತು ಚಾಮರಾಜನಗರದಲ್ಲಿ ಮನುಷ್ಯನನ್ನು ಹಿಡಿದಿರುವ ದಾಖಲೆಗಳಿವೆ. ಕೆಲ ಕಡೆ ಆಕಸ್ಮಿಕವಾದರೆ, ಕೆಲ ಪ್ರಕರಣಗಳಲ್ಲಿ ಮನುಷ್ಯನನ್ನೇ ಬೇಟೆಯಾಡಿದ್ದು ಎದ್ದು ಕಾಣುತ್ತದೆ. ಅನೇಕ ನರಭಕ್ಷಕ ಹುಲಿ, ಚಿರತೆಗಳನ್ನು ಬೇಟೆಯಾಡಿರುವ ಜಿಮ್ ಕಾರ್ಬೆಟ್ ಹಾಗೂ ಕೆನೆತ್ ಆ್ಯಂಡರ್ಸನ್ ಅವರ ಪ್ರತಿಪಾದನೆಯಲ್ಲಿ ಹೇಳುವುದಾದರೆ ಈ ಪ್ರಾಣಿಗಳು ನರಭಕ್ಷಕ ಆಗಲು ಹಲವು ಕಾರಣಗಳಿವೆ. ಸಂಡೂರಿನ ನರಭಕ್ಷಕಕ್ಕೆ ಒಂದು ಕಣ್ಣು ಇರಲಿಲ್ಲ. ಇದಕ್ಕೆ ಮನುಷ್ಯ ಸುಲಭದ ಬಲಿಪ್ರಾಣಿಯಾಗಿದ್ದ. ಕೊಪ್ಪಳದ ಜೋಳದ ಹೊಲದಲ್ಲಿ ಸಕ್ರಿಯವಾಗಿದ್ದ ಚಿರತೆಯು ಅದಿರು ಗಣಿಗಾರಿಕೆಯಿಂದ ಆವಾಸಸ್ಥಾನ ನಾಶವಾಗಿ ಇತ್ತ ಬಂದಿತ್ತು. ಇದು ಹೊಲದಲ್ಲಿ ಬಗ್ಗಿ ಕುಳಿತಿರುತ್ತಿದ್ದ ಮನುಷ್ಯನನ್ನು ಗುರಿ ಮಾಡುತ್ತಿತ್ತು. ಬಗ್ಗಿದಾಗ ತನ್ನಷ್ಟೇ ಎತ್ತರವಾಗುತ್ತಿದ್ದ ವ್ಯಕ್ತಿ ಇದರ ಗುರಿಯಾಗುತ್ತಿದ್ದ.

• ನಿಮ್ಮ ರೇಡಿಯೊ ಕಾಲರ್ ಮತ್ತು ಕ್ಯಾಮೆರಾ ಟ್ರ್ಯಾಪ್ ಅಧ್ಯಯನದಿಂದ ಏನು ಪತ್ತೆಯಾಗಿದೆ?

ಚಿರತೆಯ ಆವಾಸಸ್ಥಾನ ಸುಮಾರು 140 ಚದರ ಕಿಲೊಮೀಟರ್‌ನಷ್ಟು ಇರುತ್ತದೆ. ಕಾವೇರಿ ವನ್ಯಜೀವಿಧಾಮದಲ್ಲಿ ಇಷ್ಟುದೊಡ್ಡ ಪ್ರದೇಶದಲ್ಲಿ ಓಡಾಡಿದೆ. ಜನವಸತಿ ಪ್ರದೇಶಕ್ಕೆ ಹೊಂದಿಕೊಂಡ ಆವಾಸಸ್ಥಾನವಾದರೆ ಅದರ ವಿಸ್ತೀರ್ಣ 20 ಚದರ ಕಿ.ಮೀ ಎನ್ನುವುದು ಗೊತ್ತಾಯಿತು. ಕಾಡಿನ ನಡುವಿನ ನೈಸರ್ಗಿಕ ಆವಾಸಸ್ಥಾನದಲ್ಲಿ ಬಲಿಪಶುಗಳನ್ನು ಹುಡುಕಿಕೊಂಡು ಓಡಾಡುತ್ತವೆ. ಆದರೆ ಜನವಸತಿ ಪ್ರದೇಶಕ್ಕೆ ಹೊಂದಿಕೊಂಡ ಆವಾಸಸ್ಥಾನಗಳಲ್ಲಿ ಅವು ಸೀಮಿತ ಪ್ರದೇಶದಲ್ಲಿ ಓಡಾಡುತ್ತವೆ. ಬೆಂಗಳೂರು, ಮೈಸೂರು ನಗರದ ಸುತ್ತಮುತ್ತ ಚಿರತೆಗಳಿವೆ. ಪ್ರತೀ ಚಿರತೆಗೂ ವಿಶಿಷ್ಟವಾದ ಚುಕ್ಕೆ ಗುರುತಿದೆ. ಇದರ ಮೂಲಕವೇ ಪತ್ತೆ ಮಾಡಲು ಸಾಧ್ಯ.



ಚಿತ್ರ: ಅರವಿಂದ್ ಕಾರ್ತಿಕ್

• ಸಂಘರ್ಷಕ್ಕೆ ಪರಿಹಾರ ಸಾಧ್ಯವಿಲ್ಲವೇ?

ಚಿರತೆ ಎದುರಿಸುತ್ತಿರುವ ಸಮಸ್ಯೆ ಬಗ್ಗೆ ಪುಸ್ತಕದಲ್ಲಿ ಬರೆದಿದ್ದೇನೆ. ನಾರ್ವೆಯ ಒಂದು ಪ್ರದೇಶದಲ್ಲಿ ಎಷ್ಟು ಪ್ರಾಣಿ ಇರಬಹುದು ಎನ್ನುವುದನ್ನು ಅಧ್ಯಯನ ಮಾಡಿ ಹೆಚ್ಚಿದ್ದರೆ ಕೊಲ್ಲುತ್ತಾರೆ. ನಮ್ಮ ಸಂಸ್ಕೃತಿಗೆ ಇದು ಹೊಂದಲ್ಲ. ವಿಕಾಸವಾದದಲ್ಲಿ ಕೃಷಿ ಆರಂಭವಾದಾಗಿನಿಂದ ಮಾನವ- ವನ್ಯಜೀವಿ ಸಂಘರ್ಷ ನಡೆಯುತ್ತಲೇ ಇದೆ. ಸಂಘರ್ಷ ತಾಳಿಕೊಳ್ಳುವ ಮಟ್ಟಿಗಿದ್ದರೆ ಮಾತ್ರ ನೆಮ್ಮದಿ. ಪ್ರಾಣಿಗಳು ಮಾತ್ರ ಊರಿಗೆ ನುಗ್ಗುತ್ತಿವೆ ಎನ್ನುತ್ತಾರೆ. ಸಂಘರ್ಷಕ್ಕೆ ನಮ್ಮ ಕಡೆಯಿಂದ ಆಗಿರುವ ತಪ್ಪನ್ನು ಸಹ ನೋಡಬೇಕು. ಆದರೆ ಇದು ಆಗುತ್ತಿಲ್ಲ. ವನ್ಯಜೀವಿಗಳು ಬದುಕಬೇಕು ಎಂದರೆ ಕಾಡಿನ ಮೇಲಿನ ಮನುಷ್ಯನ ಒತ್ತಡ ಕಡಿಮೆ ಆಗಲೇಬೇಕು.



ಕಿಶೋರಿ ಅಮೋಣಕರ್

ಅದೇ ರಾಗ ಹಲವು ಭಾವ

ಶ್ರೀಮತಿ ದೇವಿ

ಸಂಗೀತದ ಪ್ರಸ್ತುತಿಯು ಸೃಜನಶೀಲ ಪ್ರಕ್ರಿಯೆ. ಕಿವಿಗೆ ಇಂಪಾಗಿ ಕೇಳಿ-ಮನಸ್ಸನ್ನು ಮುದಗೊಳಿಸುವ ಸಂಗೀತ ಪ್ರತಿಬಾರಿಯೂ ಕಲಾವಿದನಿಂದಾಗುವ ರಾಗದ 'ಮರುಸೃಷ್ಟಿ' ಆಗಿರುತ್ತದೆ. ಇದು ಕೇವಲ ಶ್ರವಣೀಯವಾದ ಸ್ವರಗಳ ಮೊತ್ತ ಮಾತ್ರವಲ್ಲ, 'ಶ್ರಾವ್ಯ'ವು 'ದೃಶ್ಯ'ವಾಗಿ ಕಣ್ಣಮುಂದೆ ನಿಲ್ಲುವ ಅದ್ಭುತ ಮಾಯಾಲೋಕ. ಇಲ್ಲಿ ಗಾಯಕನು ರಾಗದ ಸ್ವರೂಪದ ಬಗ್ಗೆ ತನಗಿರುವ ಚಿತ್ರಣವನ್ನು ನೋಡುತ್ತಾ ರಾಗದ ಅಭಿವ್ಯಕ್ತಿಗೆ ತೊಡಗಿದರೆ, ಕೇಳುಗನು ಆ ಪ್ರಸ್ತುತಿ ತನ್ನ ಮುಂದೆ ಕಟ್ಟಿರುವ ಚಿತ್ರಣವನ್ನು ನೋಡಿ, ಅದರೊಳಗೆ ಹೋಗಿ ಆನಂದಿಸತೊಡಗುತ್ತಾನೆ.

ಹಿಂದೂಸ್ತಾನಿ ಖ್ಯಾಲ್ ಸಂಗೀತವನ್ನು 'ರಾಗ ಸಂಗೀತ'ವೆಂದೇ ಕರೆಯಲಾಗಿದೆ. ಇಲ್ಲಿ ರಾಗದಲ್ಲಿನ ರಚನೆಗಳಿಗಿಂತ ಜಾಸ್ತಿ ರಾಗದ ವಿಸ್ತಾರಕ್ಕೆ, ಗಾಯಕನ ಮನೋಧರ್ಮಕ್ಕೆ ಹೆಚ್ಚಿನ ಸ್ಥಾನವಿದೆ. ನುರಿತ ಗಾಯಕನೊಬ್ಬನು ತನ್ನ ಪ್ರಸ್ತುತಿಯಲ್ಲಿ ರಾಗವನ್ನು ಕಟ್ಟುವ ಕೆಲಸ ಮಾಡುತ್ತಾನೆ. ಅತ್ಯಂತ ತಳದಿಂದ ರಾಗದ ಕಟ್ಟೋಣವನ್ನು ಹಂತ ಹಂತವಾಗಿ ಕಟ್ಟುತ್ತಾ, ಕೇಳುಗರನ್ನು ಅದರಲ್ಲಿ ಒಳಗು ಮಾಡಿಕೊಳ್ಳುತ್ತಾ ಸ್ವರ-ರಾಗ-ಲಯ-ಶಬ್ದಗಳ ಭಾವಸೌಧವನ್ನು ಕಣ್ಣಮುಂದೆ ನಿರ್ಮಿಸುತ್ತಾನೆ. ಈ ಕ್ರಿಯೆಯಲ್ಲಿ ಗಾಯಕನಿಗೆ ದಾರಿ ತೋರಿಸುವ ಕೆಲಸವನ್ನು ಬಂದಿಶ್ (ಹಿಂದೂಸ್ತಾನಿ ಖ್ಯಾಲ್ ಸಂಗೀತದಲ್ಲಿ ಬರುವ ರಚನೆಗಳಿಗೆ ಬಂದಿಶ್‌ಗಳೆನ್ನಲಾಗುತ್ತದೆ. ಬಂದಿಶ್‌ಗಳು ಒಂದು ರಾಗದಲ್ಲಿ ಕಟ್ಟಲಾದ ಸ್ವರ-ತಾಳ-ಸಾಹಿತ್ಯ ಬದ್ಧವಾದ ರಚನೆಗಳು) ಮಾಡುತ್ತದೆ.

ರಾಗದ ಸ್ವರೂಪವನ್ನು ಒಂದು ಸಣ್ಣ ಝಲಕ್‌ನಲ್ಲಿ ತೋರಿಸಿದ ಬಳಿಕ ಗಾಯಕನು, ಆ ರಾಗದಲ್ಲಿ ವಿಲಂಬಿತ್ ಲಯದ ಬಂದಿಶ್ ಅನ್ನು ಹಾಡುತ್ತಾನೆ ಹಾಗೂ ಇಲ್ಲಿ ರಾಗದ ವಿಸ್ತಾರವನ್ನು ಮಾಡುತ್ತಾ ಭಾವಸೃಷ್ಟಿ ಮಾಡುತ್ತಾನೆ. ಮುಂದೆ ಲಯವನ್ನು ಹೆಚ್ಚಿಸಿ ಬೋಲ್‌ತಾನ್, ಸರಗಮ್, ತಾನ್‌ಗಳನ್ನು ಹಾಡುತ್ತಾನೆ. ಆ ನಂತರ ಧೃತ್ ಬಂದಿಶ್‌ನಲ್ಲಿ ಪ್ರಸ್ತುತಿಯು ವೇಗವನ್ನು ಪಡೆದುಕೊಂಡು, ಭಾವದ ತೀವ್ರತೆಯೆಡೆಗೆ ಕರೆದೊಯ್ಯುವಂಥದ್ದು. ಮೇಲೆ ಹೇಳಿದ ಹಂತಗಳೆಲ್ಲವೂ ತಾಂತ್ರಿಕ ಆಗಿದ್ದರೂ ಅದರಲ್ಲಿರುವ ಭಾವದಿಂದಾಗಿ ಅದರ ಪ್ರಭಾವ ಮಾತ್ರ ಪ್ರತಿಯೊಬ್ಬ ಕೇಳುಗನ ಮೇಲೆ ಬೇರೆ ಬೇರೆ ರೀತಿಯಲ್ಲಿ ಆಗುತ್ತದೆ. ಅದು ಅವರವರ 'ಭಾವ'ಕ್ಕೆ ನಿಲುಕುವಂಥದ್ದು.

ಜೊತೆಗೆ ಈ ಇಡೀ ಪ್ರಕ್ರಿಯೆ ಕೇಳುಗರ ಎದುರಲ್ಲಿ ಹೃದಯಂಗಮವಾದ ಕಥೆಯೊಂದನ್ನು ಕಟ್ಟಿಬಿಟ್ಟಿರುತ್ತದೆ. ಇದರಿಂದಾಗಿಯೇ ಒಂದೇ ಸಂಗೀತ ಕಛೇರಿ ಬೇರೆ ಬೇರೆ ವ್ಯಕ್ತಿಯ ಮೇಲೆ ಬೇರೆ ಬೇರೆ ಬಗೆಯ ಪರಿಣಾಮ ಬೀರಿರುತ್ತದೆ. ಮಾತ್ರವಲ್ಲ ಅದೇ ಕಲಾವಿದನನ್ನು, ಅದೇ ರಾಗವನ್ನು ಅಥವಾ ಅದೇ ಕಛೇರಿಯ ಮುದ್ರಣವನ್ನು ಮತ್ತೆ ಕೇಳಿದಾಗಲೂ ಒಬ್ಬನೇ ವ್ಯಕ್ತಿಗೆ ಪ್ರತೀ ಬಾರಿಯೂ ಬೇರೆ ಬೇರೆ ಬಗೆಯ ಅನುಭವಗಳಾಗುತ್ತವೆ. ಇದಕ್ಕೆ ಆ ಪ್ರಸ್ತುತಿಯನ್ನು ನಿರ್ಧರಿಸುವ ಅಂಶಗಳಾದ ಗಾಯಕನ ಮನಃಸ್ಥಿತಿ, ಧ್ವನಿ ವ್ಯವಸ್ಥೆ, ಸಭಾಂಗಣ, ಸಾಥಿದಾರರು, ಶ್ರೋತೃಗಳ ದರ್ಜೆ ಮುಂತಾದವುಗಳೊಂದಿಗೆ ಆ ಹೊತ್ತಲ್ಲಿ ಇದ್ದ ಕೇಳುಗನ ಮನಃಸ್ಥಿತಿಯೂ ಕಾರಣವಾಗುತ್ತದೆ.

ಗಾನ ಸರಸ್ವತಿ ಕಿಶೋರಿ ಅಮೋಣಕರ್ ಅವರ ಅಲ್ಹಯ್ಯಾ ಬಿಲಾವಲ್ ಅಥವಾ ಬಿಲಾಸ್‌ಖಾನಿ ತೋಡಿ ರಾಗಗಳು ಒಮ್ಮೆ ಕೇಳಿದಾಗ ನೌಕೆಯಲ್ಲಿ ಕೂತು ಆನಂದದಿಂದ ಗೊತ್ತಿರದ ಊರಿನೆಡೆಗೆ ಸಾಗುತ್ತಿರುವ ಅನುಭವ ಕೊಟ್ಟರೆ, ಇನ್ನೊಮ್ಮೆ ಅವೇ ರಾಗಗಳನ್ನು ಕೇಳಿ ಬಿಕ್ಕಿ ಬಿಕ್ಕಿ ಅಳುವಂತಾಗುತ್ತದೆ. ಆಳದಲ್ಲಿರುವ ಬೇಸರವನ್ನೆಲ್ಲಾ ಯಾಕಿವರು ಹೊರಗೆಳೆಯುತ್ತಾರೆ ಎಂದೆನಿಸಿಬಿಡುತ್ತದೆ. ಇನ್ನೊಮ್ಮೆ ಈ ರಾಗಗಳು ಭಾವಸಮಾಧಿಗೆ ಏರಿಸಿಬಿಡುತ್ತವೆ.

ಹೆಚ್ಚಾಗಿ ತೋಡಿ, ಭೈರವ್, ಸಾರಂಗ, ಮುಲ್ತಾನಿ, ಭೀಂಪಲಾಸ್, ಯಮನ್, ಮಾರವಾ, ಬಾಗೇಶ್ರೀ, ಮಾಲ್‌ಕೌಂಸ್, ಬಿಹಾಗ್ ಮುಂತಾದ ವಿಸ್ತಾರಪೂರ್ಣ ರಾಗಗಳನ್ನೇ ನಾನು ಹಾಡುತ್ತಾ ಬಂದಿದ್ದೆ. ಸ್ವಲ್ಪ ವೇಗವನ್ನು ಬಯಸುವ ರಾಗಗಳು ಹಾಗೂ ವಕ್ರ ಸಂಚಾರದ ರಾಗಗಳು ಜೊತೆಗೆ ಮತ್ತೆ ಮತ್ತೆ ಪುನರಾವರ್ತನೆಯ ಸ್ವರ ಸಂಚಾರಗಳುಳ್ಳ ರಾಗಗಳನ್ನು (ನಂದ, ಗೌಡ್ ಸಾರಂಗ ಇತ್ಯಾದಿ) ಹಾಡಲು ತುಂಬಾ ಹಿಂದೇಟು ಹಾಕುತ್ತಿದ್ದುದನ್ನು ಒಮ್ಮೆ ನನ್ನ ಗುರು ರವಿಕಿರಣ್ ಅವರು ಗುರುತಿಸಿದರು ಹಾಗೂ ಅದರ ಕಾರಣವನ್ನು ನನಗೆ ತಿಳಿಸಿದರು.

> ರಾಗಕ್ಕೆ ಬೇಕಾದ ವ್ಯಾಕರಣ ಒಮ್ಮೆ ಸೃಷ್ಟಿಯಾದ ಮೇಲೆ ಅದು ಮತ್ತೆಂದೂ ಬದಲಾಗುವುದಿಲ್ಲ. ಆದರೆ ಅದನ್ನು ಹಾಡುವ ಸನ್ನಿವೇಶ ಬದಲಾದಂತೆ ಗಾಯನವೂ ಹೊಸದೆನಿಸುತ್ತದೆ. ಯಾಕೋ?

ನಾನು ಹಾಡುತ್ತಾ ಬಂದಿರುವ ರಾಗಗಳಲ್ಲಿ ವಿಸ್ತಾರಕ್ಕೆ ಅವಕಾಶಗಳು ಬೇಕಾದಷ್ಟಿರುತ್ತವೆ. ಇಂತಹ ರಾಗಗಳಲ್ಲಿ ಸುಲಭವಾಗಿ ಹಲವು ಭಾವ-ಬಣ್ಣಗಳಿಂದ ತುಂಬಿದ ಕಥಾನಕವೊಂದನ್ನು ಸೃಷ್ಟಿಸುವುದು ಸಾಧ್ಯವಿದೆ. ಆದರೆ ನಂದ, ಗಾವತಿ ಮುಂತಾದ ರಾಗಗಳು ನಿಗದಿತವಾದ ಕೆಲವು ಸಂಚಾರಗಳಿಂದ ಆಗಿದ್ದು, ಅಲ್ಲಿ ಎಲ್ಲಿ ಬೇಕಲ್ಲಿ ಘಟನೆಗಳನ್ನು ಕಟ್ಟುತ್ತಾ ಕಥೆಯನ್ನು ಹೇಳಲು ಸಾಧ್ಯವಾಗುವುದಿಲ್ಲ.

ನನ್ನ ಗುರುಗಳು ಹೇಳುವಂತೆ, ಈ ರಾಗಗಳಲ್ಲಿ ಮತ್ತೆ ಮತ್ತೆ ಬರುವ ಸ್ವರ ಸಂಚಾರವನ್ನು ಪುನರಾವರ್ತನೆ ಎಂದಷ್ಟೇ ಭಾವಿಸಿದಲ್ಲಿ ಪ್ರಸ್ತುತಿಯು ಜನರ ಮನಸ್ಸನ್ನು ತಲುಪುವಲ್ಲಿ ಸೋಲುತ್ತದೆ. ಬದಲಿಗೆ ನಮ್ಮ ಜೀವನದಲ್ಲೂ ಮತ್ತೆ ಮತ್ತೆ ಮರುಕಳಿಸುವ ಕೆಲವು ಸುಖದ ಅಥವಾ ನೋವಿನ ಕ್ಷಣಗಳಂತೆ ಇದನ್ನು ಭಾವಿಸಿ ಪ್ರತಿಬಾರಿಯೂ ಭಾವಪೂರ್ಣವಾಗಿ ಪುನರಾವೃತಿ ಮಾಡಿದಾಗ, ಶ್ರೋತೃಗಳು ಮತ್ತೆ ಮತ್ತೆ ಅದೇ ಸ್ವರವಾಕ್ಯಕ್ಕಾಗಿ ಕಾಯುವಂತಾಗುತ್ತದೆ.

ಸಂಗೀತ

ಇದು ಚಿಂತನಶೀಲರಾದ ನನ್ನ ಗುರುಗಳ ತಾತ್ವಿಕ ವಿವರಣೆ. ಆದರೆ, ತಾಂತ್ರಿಕವಾಗಿ ನೋಡಿದರೆ ಮರುಕಳಿಸುವ ಸ್ವರವಾಕ್ಯವನ್ನು ಪ್ರತಿಬಾರಿ ಬೇರೆ ಬೇರೆ ಸ್ವರಭಾರಗಳೊಂದಿಗೆ, ವಿವಿಧ ಸಮಯಾವಧಿಯಲ್ಲಿ, ತಾಳದ ವಿವಿಧ ಜಾಗಗಳಲ್ಲಿ, ಆವರ್ತನದೊಳಗೆ ಆಕಾರದಿಂದ ಅಥವಾ ಶಬ್ದದೊಂದಿಗೆ ಶ್ರುತಿಬದ್ಧವಾದ ಶಾರೀರದಲ್ಲಿ ಉಚ್ಚರಿಸಿದಾಗ ಅದು ಬೇರೆ ಬೇರೆ ಅನುಭವವನ್ನು ನೀಡುತ್ತದೆ ಎನ್ನುವುದು ಹೌದಾದರೂ ರಾಗವು ವಿಶೇಷವಾಗಿ ಮಿನುಗಲು ಬೇರೆಯದೇ ಆದ ಅಂಶವೊಂದು ಇಲ್ಲಿ ಕೆಲಸ ಮಾಡುತ್ತದೆ. ಪ್ರತಿದಿನ ನಡೆಯುವ ಅದೇ ಸೂರ್ಯಾಸ್ತ-ಸೂರ್ಯೋದಯಗಳು ದಿನವೂ ಹೊಸದಾಗಿ-ಸೊಗಸಾಗಿ ಕಾಣುವಂತೆ.

ರಾಗಕ್ಕೆ ಬೇಕಾದ ವ್ಯಾಕರಣ ಒಮ್ಮೆ ಸೃಷ್ಟಿಯಾದ ಮೇಲೆ ಅದು ಮತ್ತೆಂದೂ ಬದಲಾಗುವುದಿಲ್ಲ. ಆದರೆ ಅದನ್ನು ಹಾಡುವ ಸನ್ನಿವೇಶ ಬದಲಾದಂತೆ ಗಾಯನವೂ ಹೊಸದೆನಿಸುತ್ತದೆ. ಇದು ಹೇಗೆಂದರೆ, ಮರಳಿನಲ್ಲಿ ಮನೆ ಕಟ್ಟುವ ಮಕ್ಕಳು ಮತ್ತೆ ಮತ್ತೆ ಅದನ್ನು ಒಡೆದು ಹೊಸ ಮನೆ ಕಟ್ಟುವಂತೆ. ಪ್ರತಿಬಾರಿಯೂ ಅದನ್ನು ಮೂಲದಿಂದ ಕಟ್ಟುವುದಿದ್ದರೂ ಅದೆಷ್ಟು ಸಂಭ್ರಮ, ಉತ್ಸಾಹ ಅಲ್ಲಿರುತ್ತದೆ. ಕಲಾವಿದನೊಬ್ಬ ಮತ್ತೆ ರಾಗ ಶಿಲ್ಪವನ್ನು ಸೃಷ್ಟಿಸಲು ಕೂತಾಗ ಕೆತ್ತಲು ಹೊರಟದ್ದು ಅಂಥದ್ದೇ ಶಿಲ್ಪವನ್ನೇ ಆದರೂ ಈ ಬಾರಿ ನಿನ್ನೆಯ ಕೆತ್ತನೆಗಿಂತ ಮೂಗು ಚೂಪಾಗಲಿ, ಆಚೆಯ ಗೆರೆ ದಪ್ಪ ಬರಲಿ ಎಂಬೆಲ್ಲಾ ಪರಿಪೂರ್ಣತೆಯೆಡೆಗಿನ ಗುರುತುಗಳನ್ನು ಹಾಕಿಕೊಂಡಿರುತ್ತಾನೆ. ಎಲ್ಲಿಯವರೆಗೆ ಕಲಾವಿದನೊಳಗೆ ಭಾವವಿರುತ್ತದೋ ಅಲ್ಲಿಯವರೆಗೆ ಪ್ರಸ್ತುತಿಯು 'ಪುನರಾವರ್ತನೆ'ಯಾಗಲು ಸಾಧ್ಯವಿಲ್ಲ, ಬರಡಾಗಲು ಸಾಧ್ಯವಿಲ್ಲ.

ಕೇವಲ ಸ್ವರ ಹಾಗೂ ತಾಳವನ್ನು ಅನುಸರಿಸುತ್ತಾ ಹಾಡಿದಾಗ ಅದು ಬರೀ ಶುಷ್ಕವೆನಿಸುತ್ತದೆ, ವ್ಯಾಕರಣವೆನಿಸುತ್ತದೆ. ರಾಗದ ಪ್ರಕೃತಿಯು ಗಾಯಕನಿಗೆ ತಿಳಿದಾಗ ಮಾತ್ರ ಪ್ರಸ್ತುತಿಯು ಸಂವೇದನಾಶೀಲವಾಗಲು ಸಾಧ್ಯ. ಆದರೆ, ರಾಗದ ಸ್ವರೂಪವನ್ನು ಅರ್ಥ ಮಾಡಿಕೊಳ್ಳುವುದು ಕಷ್ಟದ ಕೆಲಸ. ಹಾಗೊಮ್ಮೆ ಅರ್ಥವಾದರೂ ಅದನ್ನು ಪ್ರಸ್ತುತಿಯಲ್ಲಿ ತಂದು, ಕೇಳುಗರ ಮನಸ್ಸಿಗಿಳಿಸಲು ತುಂಬಾ ಶ್ರಮ ಬೇಕಾಗುತ್ತದೆ. ಈ ಹಂತದಲ್ಲಿ ನಮ್ಮಲ್ಲಿ ಹಲವು ಕಾಲದಿಂದ ವಿದ್ವಾಂಸರು ಚರ್ಚೆ-ಜಿಜ್ಞಾಸೆಗಳನ್ನು ನಡೆಸಿಕೊಂಡು ಬಂದ ರಸಸಿದ್ಧಾಂತದೊಳಗೆ ಬರುವ 'ಸೃಜನಶೀಲತೆ, ಪ್ರತಿಭೆ' ಕಲಾವಿದನಿಗೆ ಸಾಥ್ ಕೊಡಬೇಕಾಗುತ್ತದೆ.

ರಾಗದ ಪ್ರಕೃತಿಯನ್ನು ಅರಿಯುವ ವಿಧಾನಗಳು ಹಲವು ಇರಬಹುದಾದರೂ ನನ್ನ ಗುರುಗಳು ನನಗೆ ಸೂಚಿಸಿದ ವಿಧಾನ ಅಪರೂಪದ್ದು. ಅದು ಸಾಹಿತ್ಯದ ಅಧ್ಯಯನದಲ್ಲಿ ಬರುವ ಸಿನಸ್ತೆಸಿಯಾ (synaesthesia) ಎನ್ನುವ ವಿಚಾರವನ್ನು ಹೋಲುವಂಥದ್ದು. ಸಿನಸ್ತೆಸಿಯಾ ಎಂದರೆ ಯಾವುದಾದರೊಂದು ವಸ್ತುವನ್ನು ವರ್ಣಿಸುವಾಗ ಪಂಚೇಂದ್ರಿಯಗಳ ನಡುವೆ ಸಮನ್ವಯವನ್ನು ತರುವುದು. ಉದಾಹರಣೆಗೆ 'ಉರಿ ನೋಟ', 'ಸುಮ್ಮನಾದ ಸೂರ್ಯ', 'ಜೇನಿನಂಥ ಮಾತು' ಇವೆಲ್ಲವೂ ಕೇಳುವಂತಹ ವಿಷಯವನ್ನು ದೃಶ್ಯವಾಗಿಸಿ, ಕಣ್ಣ ಮುಂದೆ ಕಟ್ಟಿಸುತ್ತವೆ. ಕುವೆಂಪು ಅವರು ತಮ್ಮ 'ನಾಡಿನ ಪುಣ್ಯದ ಪೂರ್ವ ದಿಗಂತದಿ ನವ ಅರುಣೋದಯ ಹೊಮ್ಮುತಿದೆ' ಎಂಬ ಕವನದಲ್ಲಿ 'ಕಿವಿ ಕಣ್ಣಾಗುತಿದೆ, ಕಣ್ ಕಿವಿಯಾಗುತಿದೆ' ಎಂದಿರುವುದು ಇದನ್ನೇ. ಇಲ್ಲಿ ಕಂಡ ಅದ್ಭುತವನ್ನು ಆನಂದಿಸಲು ಕಣ್ಣು-ಕಿವಿ ಇವೆರಡೂ ಒಂದರೊಳಗೊಂದು ಸೇರುತ್ತವೆ. ಇವೆಲ್ಲಾ ಮನೋರಂಗದಲ್ಲಿ ನಡೆಯುವಂಥವು.

ಮಳೆಗಾಲದ ಮಲ್ಹಾರ್ ರಾಗಗಳ ಕಲಿಕೆ ನಡೆಯುತ್ತಿದ್ದಾಗ ಪೂರಾ ಮಲ್ಹಾರ್ ರಾಗಗಳ ಪ್ರಕೃತಿ-ಸ್ವಭಾವವನ್ನು ಗುರುಗಳು ಕಣ್ಣ ಮುಂದಿರಿಸಿದ ರೀತಿ ವಿಹಂಗಮವಾದದ್ದು. ಯಾವುದೋ ಕಾರ್ಯಕ್ರಮಕ್ಕಾಗಿ 'ಮಿಯಾ ಮಲ್ಹಾರ್' ರಾಗದ ಅಭ್ಯಾಸದಲ್ಲಿ ನಾನಿದ್ದೆ. ಹೆಚ್ಚಾಗಿ ಭೀಮಸೇನ ಜೋಶಿ, ಜಸರಾಜ್ ಮುಂತಾದವರ ಧ್ವನಿಯಲ್ಲಿ ಈ ರಾಗವನ್ನು ಕೇಳಿದ ನಮಗೆ ಹೆಣ್ಣುಧ್ವನಿಯಲ್ಲಿ ಈ ರಾಗವನ್ನು ಕೇಳುವುದು ಕಷ್ಟವಾಗುತ್ತದೆ. ಈ ರಾಗಕ್ಕೆ ಬೇಕಾದ ಗತ್ತು, ರಭಸ ತರುವ ಪ್ರಯತ್ನದಲ್ಲಿದ್ದಾಗ, ಸರ್ ನನಗೆ ಹೇಳಿದ್ದು 'ಮಿಯಾ ಮಲ್ಹಾರ್ ಎಂದರೆ ಮಲಗಿರುವ ಸಿಂಹ ಅಂತ ಅಂದುಕೋ. ಕಾಡಿನ ರಾಜ ಸಿಂಹಕ್ಕೆ ಹಸಿವಾಗಿದ್ದರೆ ಅಥವಾ ಕಣ್ಣ ಮುಂದೆ ಬೇಟೆ ಇದ್ದಾಗ ಅದು ಹೇಗೆ ಆಕ್ರಮಿಸುತ್ತದೆ ಎಂಬುದು ನಮಗೆ ಗೊತ್ತಿದೆ. ಆದರೆ ಈಗ ಅದು ಮಲಗಿದೆ. ಮಲಗಿದ್ದರೂ ಅದರ ಚುರುಕುತನ, ಗಾಂಭೀರ್ಯ, ಜಾಗ್ರತೆ ಇವುಗಳೆಲ್ಲಾ ಇದ್ದೇ ಇರುತ್ತವೆ. ಇದನ್ನು ಲಕ್ಷ್ಯದಲ್ಲಿರಿಸಿಕೊಂಡು ಹಾಡು. ಅದರಲ್ಲಿ ಆಕ್ರಮಣ ಬೇಡ, ಆದರೆ ಗಾಂಭೀರ್ಯ ಬೇಕು, ಚೆಲ್ಲಾಟವಿಲ್ಲ'. ಇದೊಂದು ಅಪರೂಪದ ಕಾಣ್ಕೆ (ಅಬ್ಸರ್ವೇಷನ್).

ಯಾವುದೇ ಒಂದು ರಾಗವನ್ನು ಈ ರೀತಿಯಾಗಿ ನಾವು ಅರಿಯಲು ಹೊರಟಾಗ, 'ಶ್ರಾವ್ಯ'ವು ರೂಪಾಂತರಗೊಂಡು 'ದೃಶ್ಯ'ವಾಗಿ ಬಿಡುತ್ತದೆ. ಹೀಗಾದಾಗ ಕಲಾವಿದನೊಬ್ಬನಿಗೆ ಮುಂದೆ ಕಾಣುತ್ತಿರುವ ಚಿತ್ರಣದ ಪರಿಚಯ, ಅನಾವರಣವನ್ನು ಮಾಡುವುದು ಸುಲಭವಾಗುತ್ತದೆ ಹಾಗೂ ಮತ್ತೆ ಇದೇ ರೀತಿಯ ದೃಶ್ಯವನ್ನು ಕೇಳುಗರ ಮುಂದೆ ನಿಲ್ಲಿಸಲು ಸಾಧ್ಯವಾಗುತ್ತದೆ. ಆದರೆ ಪ್ರತಿಯೊಂದು ರಾಗದ ಬಗ್ಗೆ ಹೀಗೊಂದು ಚಿತ್ರಣ ಹೊಂದಲು ಆ ರಾಗದ ಅಭ್ಯಾಸ, ಮನನ, ಚಿಂತನೆಗಳು ಸತತವಾಗಿ ನಡೆಯುತ್ತಿರಬೇಕಾಗುತ್ತದೆ.

ಶ್ರೀಮತಿ ದೇವಿ

ಕೀಲಿಮಣೆ ರಾಯರ ವಿದ್ವತ್ ಪ್ರಪಂಚ

ಎಸ್. ದಿವಾಕರ್

ಕೆಲವರಿರುತ್ತಾರೆ: ಒಂದು ಕ್ಷೇತ್ರದಲ್ಲಿ ಸಾಧಿಸಬಹುದಾದ್ದನ್ನು ಸಾಧಿಸಿ, ಇತರ ಕೆಲವು ಕ್ಷೇತ್ರಗಳಿಗೂ ಲಗ್ಗೆಯಿಟ್ಟು ಅಲ್ಲಿಯೂ ತಕ್ಕಮಟ್ಟಿಗೆ ಯಶಸ್ಸು ಗಳಿಸುವವರು. ಪ್ರಚಾರದಿಂದ ದೂರವೇ ಉಳಿದುಬಿಡುವ ಅಂಥ ಜನರಲ್ಲಿ ಕೆ.ಪಿ.ರಾವ್ (ಕಿನ್ನಿಕಂಬಳ ಪದ್ಮನಾಭ ರಾವ್) ಗಮನಾರ್ಹರು. ಇವತ್ತು ಕಂಪ್ಯೂಟರಿನಲ್ಲಿ ಕನ್ನಡವನ್ನು ಬರೆಯುವವರೆಲ್ಲರಿಗೂ ಉಚ್ಚಾರಣಾತ್ಮಕ ತರ್ಕ ಬಳಸಿ ರೂಪಿಸಲಾದ ಕೀಬೋರ್ಡ್ ಅಥವಾ ಕೀಲಿಮಣೆಯ ಪರಿಚಯ ಇದ್ದೇ ಇರುತ್ತದೆ. ಅದನ್ನು ಮೊತ್ತಮೊದಲು ರೂಪಿಸಿದವರು ಕೆ.ಪಿ.ರಾವ್.

ರಾವ್ ಅವರು ಅಭಿವೃದ್ಧಿಪಡಿಸಿದ ಇನ್ನೊಂದು ತಂತ್ರಾಂಶವೆಂದರೆ 'ಅಪಾರ'. ಅದು ಭಾರತದ ಎಲ್ಲ ಭಾಷೆಗಳಿಗೆ ಏಕಕಾಲದಲ್ಲಿ ಅನ್ವಯವಾಗಬಹುದಾದ ಕೀಲಿಮಣೆ. ಮೂಲದಲ್ಲಿ ಭಾಷೆಯ ಸ್ವರಸಂಜ್ಞೆಗಳನ್ನು ರೋಮನ್ ಲಿಪಿಯಲ್ಲಿ ಮೂಡಿಸಿ ನಮಗೆ ಬೇಕಾದ ಭಾಷೆಯ ಲಿಪಿಯಲ್ಲಿ ಓದಬಹುದಾದ ಸೌಲಭ್ಯವುಳ್ಳ ತಂತ್ರಾಂಶ ಇದು. 'ಸೇಡಿಯಾಪು' ಎಂಬುದು ಅವರು ರಚಿಸಿದ ಕನ್ನಡ ಪದಸಂಸ್ಕರಣ ತಂತ್ರಾಂಶ. ಹಾಗೆಯೇ ಕಂಪ್ಯೂಟರ್ ಮೂಲಕ ಸಿಂಧೂ ಲಿಪಿಯನ್ನು ಮುದ್ರಿಸುವ ಪ್ರಯತ್ನದಲ್ಲಿ ಅವರು ನಿರ್ವಹಿಸಿದ ಬಹುಮುಖ್ಯ ಪಾತ್ರವನ್ನೂ ಇಲ್ಲಿ ಉಲ್ಲೇಖಿಸಬೇಕು.

ದಕ್ಷಿಣ ಕನ್ನಡ ಜಿಲ್ಲೆಯ ಕಿನ್ನಿಕಂಬಳದಲ್ಲಿ ಜನಿಸಿ, ಅಮೆರಿಕದ ಪರ್ಡೂ ಯೂನಿವರ್ಸಿಟಿಯಲ್ಲಿ ಎಲೆಕ್ಟ್ರಿಕಲ್ ಮತ್ತು ಕಂಪ್ಯೂಟರ್ ಎಂಜಿನಿಯರಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆದ ಈ ವಿಜ್ಞಾನಿ ಸೇವೆ ಸಲ್ಲಿಸಿದ ಸಂಸ್ಥೆಗಳು ಒಂದೆರಡಲ್ಲ. ಮುಂಬಯಿಯ ಫ್ರೀ ಪ್ರೆಸ್ ಜರ್ನಲ್; ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್, ಅದೇ ಸಂಸ್ಥೆಗೆ ಸೇರಿದ ಹೈದರಾಬಾದಿನ ಎಲೆಕ್ಟ್ರಾನಿಕ್ ಕಾರ್ಪೊರೇಷನ್ ಆಫ್ ಇಂಡಿಯಾ; ಮುಂಬಯಿಯ ಟಾಟಾ ಪ್ರೆಸ್; ಬೆಂಗಳೂರಿನ ಮಾನೊಟೈಪ್ ಸಂಸ್ಥೆ ಇತ್ಯಾದಿ. ಧಾರವಾಡದಲ್ಲಿ ಸ್ವತಂತ್ರವಾಗಿ ಒಂದು ಸೆಮಿ ಕಂಡಕ್ಟರ್ ಉತ್ಪಾದನಾ ಘಟಕವನ್ನೂ ಸ್ಥಾಪಿಸಿದ ಅವರು ಮಣಿಪಾಲದ ಎಂಐಟಿ ಶಿಕ್ಷಣ ಸಂಸ್ಥೆಯ ಪ್ರಿಂಟಿಂಗ್ ಟೆಕ್ನಾಲಜಿ ವಿಭಾಗದಲ್ಲಿ ಪ್ರಾಧ್ಯಾಪಕರೂ ಆಗಿದ್ದರು.



ನಾಡೋಜ ಕೆ.ಪಿ.ರಾಯರ ನಾಡಿ, ನಡೆ, ನುಡಿ
ಲೇ: ಎನ್. ತಿರುಮಲೇಶ್ವರ ಭಟ್ಟ
ಪ್ರ: ಜಾಗೃತಿ ಪ್ರಿಂಟರ್ಸ್, ಕೊಟ್ಟಿಗೆಪಾಳ್ಯ, ಬೆಂಗಳೂರು
ಸಂ: 9740066842
ಪು: 196 ₹200

ಶಾಲೆಯಲ್ಲಿರುವಾಗಲೇ ಪಂಜೆ ಮಂಗೇಶರಾಯರಿಂದ ಪರೋಕ್ಷವಾಗಿ ಪ್ರಭಾವಿತರಾದ ರಾಯರಿಗೆ ಕನ್ನಡ ಭಾಷೆ, ಸಾಹಿತ್ಯಗಳಲ್ಲಿ ಆಸಕ್ತಿಯುಂಟಾದದ್ದು ಸಹಜವೇ. ಪ್ರಸಿದ್ಧ ಕತೆಗಾರ ಬಾಗಲೋಡಿ ದೇವರಾಯರು ಅವರ ಸಮೀಪದ ಬಂಧು. ವಿಜ್ಞಾನಿ ಹೋಮಿ ಭಾಭಾ ಅವರ ಜೊತೆ ಕೆಲಸ ಮಾಡಿದ ಹೆಗ್ಗಳಿಕೆ ಅವರದು. 'ನಾನು ಹೋಮಿ ಭಾಭಾ ಅವರನ್ನು ಹತ್ತಿರದಿಂದ ಬಲ್ಲೆ ಎಂಬುದು ನನಗೊಂದು ಹೆಮ್ಮೆ. ಯಾವುದೋ ಕಾರಣಕ್ಕೆ ನಾವು ಹತ್ತಿರವಾದೆವು. ನಾನು ರಕ್ಷಣಾ ಯೋಜನೆಗೆ ಸಂಬಂಧಿಸಿದ ಕರ್ತವ್ಯವೊಂದರಲ್ಲಿ ಭಾಗಿಯಾಗಿದ್ದೆ. ಬಹುಶಃ ಅವರ ಸೂಚನೆಗಳನ್ನು ಪಾಲಿಸಲು ನಿರಾಕರಿಸಿ ಬಚಾವಾದ ಉದ್ಯೋಗಿಗಳಲ್ಲಿ ನಾನೊಬ್ಬನೇ ಆಗಿದ್ದೆ ಎಂದು ಹೇಳಬಹುದೇನೊ. ನನ್ನನ್ನು ಅವರು ಹೊರದೂಡಲಿಲ್ಲ. ಆದರೆ, ಅವರ ಸೂಚನೆಯೇ ಸರಿ ಎಂದು ನನಗೆ ಮನದಟ್ಟು ಮಾಡಿದರು' ಎಂದವರು ಬರೆದಿದ್ದಾರೆ. ಅವರು ಒಡನಾಡಿದ ಡಿ.ಡಿ. ಕೋಸಾಂಬಿ ಹೆಸರಾಂತ ಗಣಿತಜ್ಞರು ಮತ್ತು ಇತಿಹಾಸಕಾರರು.

ಸಂಶೋಧನೆ, ಅನ್ವೇಷಣೆಗಳಂತೂ ಸರಿಯೆ. ಆದರೆ ಕೆ.ಪಿ.ರಾಯರ ಆಸಕ್ತಿಗಳು ಹಲವು ಹತ್ತು. ಅವರು ಹದಿನಾಲ್ಕು ಬಾರಿ ಹಿಮಾಲಯದಲ್ಲಿ ಒಬ್ಬಂಟಿಯಾಗಿ ತಿರುಗಾಡಿದವರು, ತಕ್ಷಶಿಲೆ ವಿಶ್ವವಿದ್ಯಾಲಯದ ಬಗ್ಗೆ ತಮ್ಮದೇ ರೀತಿಯಲ್ಲಿ ಸಂಶೋಧಿಸಿ ಅದು ಕಟ್ಟಡಗಳ ಸಂಕೀರ್ಣವಲ್ಲ, ಅದೊಂದು ಭಾಷಾರೂಪಕ ಎಂದು ತೋರಿಸಿಕೊಟ್ಟವರು, ಸನ್ಯಾಸತ್ವವನ್ನು ಬಿಟ್ಟು ಶಿರೂರು ಮಠದಿಂದ ಧಾರವಾಡಕ್ಕೆ ಹೋಗಿ ಅಲ್ಲಿ ಸಿಂಡಿಕೇಟ್ ಬ್ಯಾಂಕಿನ ಕಾರಕೂನರಾದ ಆರ್ಯರ ಜೊತೆ ಸೇರಿ ಋಗ್ವೇದದ ಇಪ್ಪತ್ತು ಸಾವಿರ ಪುಟಗಳನ್ನು ಓದಿದವರು.

ಒಳನೋಟ

ತಾವು ಮುಂಬಯಿಯಲ್ಲಿ ಮೊದಲು ಕೆಲಸ ಮಾಡಿದ ಒಂದು ಹೋಟೆಲಿನಲ್ಲಿ ಶ್ರೀಧರ್ ಪಾರ್ಸೇಕರ್ ಎಂಬ ವ್ಯಕ್ತಿಗೆ ಒಂದು ಕಪ್ ಚಹಾ ಕಡ ಕೊಡುವುದರ ಮೂಲಕ ಸಂಗೀತದ ಅದ್ಭುತ ಲೋಕವನ್ನು ಪ್ರವೇಶಿಸಿದವರು. ಅವರು ಸಂಗೀತ ಕಲಿಯತೊಡಗಿದ್ದು ಉಸ್ತಾದ್ ಅಲ್ಲಾವುದ್ದೀನ್ ಖಾನರ ಪುತ್ರಿ, ರವಿಶಂಕರರ ಮೊದಲ ಪತ್ನಿ ಅನ್ನಪೂರ್ಣಾ ಅವರ ಬಳಿ. ಆ ಬಗ್ಗೆ ಅವರೇ ಹೇಳುವುದನ್ನು ಕೇಳಿ: 'ಕೆಲವು ಸಲ ನನಗೆ ನಾಚಿಕೆಯಾಗುವುದನ್ನು ನಾನು ಹೇಳಬೇಕು. ದೀದಿಯಂಥವರಲ್ಲಿ (ಅನ್ನಪೂರ್ಣಾಜಿಯಂಥವರಲ್ಲಿ) ಸಂಗೀತ ಕಲಿಯಲು ಹೋಗಿ ಸುಮ್ಮನೆ ಬಿಟ್ಟೆವಲ್ಲ; ಹೇಗಾದರೂ ಮಾಡಿ ಮುಂದುವರಿಸಬೇಕಾಗಿತ್ತು ಎಂದು ಈಗಲೂ ಅನಿಸುತ್ತದೆ. ಅಷ್ಟು ದೊಡ್ಡ ಪರ್ವತದ ಹತ್ತಿರ ಹೋಗಿ ನಾವು ಏನೂ ತೆಗೆದುಕೊಂಡು ಬರಲಿಲ್ಲ. ಏನೋ ತಪ್ಪಾಗಿದೆ ಎಂಬ ಭಾವನೆ ಒಮ್ಮೊಮ್ಮೆ ಬರುವುದುಂಟು. ಎಷ್ಟು ಶೂನ್ಯತೆ ಎಂದರೆ, ನಾವು ಅವರ ಶಿಷ್ಯರಾಗಿದ್ದೆವು ಅಂತ ಹೇಳಲಿಕ್ಕೆ ನಾಚಿಕೆಯಾಗುತ್ತದೆ'.

ವರದೇಶ ಹಿರೇಗಂಗೆಯವರು ಬರೆದಿರುವಂತೆ ಕೆ.ಪಿ.ರಾಯರದು, 'ಬರೇ ತಾಂತ್ರಿಕತೆ ಅಲ್ಲ. ಅದರ ಹಿಂದೆ ಒಂದು ಸಾಂಸ್ಕೃತಿಕ ಮನಸ್ಸಿದೆ. ಹೀಗಾಗಿ ಅವರು ಕನ್ನಡ ಭಾಷೆಯ ಜತೆಗೆ ಒಡನಾಡುತ್ತಾರೆ. ಅವರಿಗೆ ಆಸಕ್ತಿ ಇರುವುದು ಸಾಹಿತ್ಯ, ತತ್ತ್ವಜ್ಞಾನ, ಇತ್ಯಾದಿಗಳಲ್ಲಿ. ತಂತ್ರಜ್ಞಾನವು ಅವರಿಗೊಂದು ಮಾಧ್ಯಮ. ಭಾಷೆ, ಸಾಹಿತ್ಯಗಳು ಈ ಮಾಧ್ಯಮವನ್ನು ಬಳಸಿಕೊಳ್ಳಬೇಕೆಂಬ ಆಶಯ ಅವರದು. ಅವರ ತಾಂತ್ರಿಕ ಕಾಳಜಿಯ ಮೂಲದಲ್ಲಿರುವುದು ಸಾಂಸ್ಕೃತಿಕ ಕಾಳಜಿ'.

ಈ ಪುಸ್ತಕವನ್ನು ರಚಿಸಿರುವ ಎನ್.ತಿರುಮಲೇಶ್ವರ ಭಟ್ಟರು ದಶಕಗಳ ಕಾಲ ಇಂಗ್ಲಿಷ್ ಮತ್ತು ಜರ್ಮನ್ ಭಾಷೆ, ಸಾಹಿತ್ಯಗಳನ್ನು ಬೋಧಿಸಿದವರು. ಅವರಲ್ಲಿ ವಿಚಾರಸ್ಪಷ್ಟತೆಯಿದೆ, ವಿಷಯವನ್ನು ಆಳವಾಗಿ ಪರಿಶೀಲಿಸುವ ಮನೋಧರ್ಮವಿದೆ. ಕೆ.ಪಿ.ರಾಯರ ನಿಕಟವರ್ತಿಗಳಲ್ಲಿ ಒಬ್ಬರಾದ ಕಾರಣ ಅವರ ಈ ಪುಸ್ತಕಕ್ಕೊಂದು ಅಧಿಕೃತತೆಯ ಗುಣವಿದೆ. ಈ ಕೃತಿಯಲ್ಲಿ ಕೆ.ಪಿ.ರಾಯರ ಜೀವನ ವೃತ್ತಾಂತ, ಅವರ ಸಾಧನಾ ಪ್ರಪಂಚ, ಅವರ 'ಪದುಮನಾಭನ ಧ್ಯಾನ' ಎಂಬ ಆತ್ಮಕಥನದ ಹಾಗೂ 'ವರ್ಣ' ಎಂಬ ಕಾದಂಬರಿಯ ಅವಲೋಕನ ಮುಂತಾದ ಅಧ್ಯಾಯಗಳಲ್ಲದೆ ಸಂಗೀತಕ್ಕೆ ಸಂಬಂಧಿಸಿದಂತೆ ರಾಯರೇ ಬರೆದಿರುವ ಲೇಖನವೂ ಇದೆ. ವೈದೇಹಿ, ವರದೇಶ ಹಿರೇಗಂಗೆ, ಪಾದೇಕಲ್ಲು ವಿಷ್ಣುಭಟ್ಟ ಮುಂತಾದವರು ತಾವು ಕಂಡ ರಾಯರನ್ನು ಚಿತ್ರಿಸಿದ್ದಾರೆ. ಮಹಾಲಿಂಗ ಭಟ್ ಅವರ ನಿರೂಪಣೆಯಲ್ಲಿರುವ 'ಕೆ.ಪಿ.ರಾವ್ ಅವರ ವೈಚಾರಿಕತೆಯ ಮಾದರಿ: ತಕ್ಷಶಿಲೆ ಎಂಬ ಭಾಷಾ ರೂಪಕ' ಎಂಬ ವಿಶಿಷ್ಟ ಬರಹವೂ ಇದೆ.

ರಾಯರು ತಾವು ಅಭಿವೃದ್ಧಿಪಡಿಸಿದ ತಂತ್ರಾಂಶಗಳೆಲ್ಲವನ್ನೂ ಮುಕ್ತ ಬಳಕೆಗೆ ನೀಡಿದವರು. 'ನಿಜವಾಗಿ ಹೇಳುವುದಿದ್ದರೆ ಯಾಕೆ ನಾನು ನನ್ನ ಹಕ್ಕನ್ನು ನೋಂದಾವಣೆ ಮಾಡಿಸಲಿಲ್ಲವೆಂದು ಇತರರು ಪ್ರಶ್ನಿಸಿದಾಗಲೇ ನನಗೆ ಇಂತಹ ವಿಷಯವೊಂದುಂಟಲ್ಲ ಎಂಬ ಅರಿವಾದದ್ದು' ಎನ್ನುವ ಮುಗ್ಧತೆ ಅವರದು.

ಈ ಪುಸ್ತಕ ಓದುತ್ತಿರುವಾಗ ನನಗೆ ಮತ್ತೆ ಮತ್ತೆ ಡಾ. ಬಿ.ಜಿ.ಎಲ್. ಸ್ವಾಮಿಯವರ, ಡಾ. ಕೃಷ್ಣಾನಂದ ಕಾಮತರ ನೆನಪಾಗುತ್ತಿದ್ದದ್ದು ಆಕಸ್ಮಿಕವೇನೂ ಅಲ್ಲ.

ಕಥೆ
ಮಂಜಯ್ಯ ದೇವರಮನಿ
ಅವರು ಬರೆದ ಕಥೆ
ಕಪಲಿ ಬಾವಿ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವಿತೆ
ವೈ.ಕೆ.ಸಂಧ್ಯಾ ಶರ್ಮ
ಅವರು ಬರೆದ ಕವಿತೆ
ಪವಾಡ ಪುರುಷ
ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry



ಅಣ್ಣಾವ್ರ ನೆನಪು
ಡಾ. ರಾಜ್‌ಕುಮಾರ್ ಅವರ ಜನ್ಮದಿನದ ನೆಪದಲ್ಲಿ ಅವರ ನೆನಪಿನ ಬರಹಗಳು
ಜ್ಯೋತಿ ಅವರು ಬರೆದ
ಕನ್ನಡ ಸಂಸ್ಕೃತಿಯ 'ರಾಜ'
ಎಚ್.ಎಸ್. ಗೋವಿಂದಗೌಡ ಅವರು ಬರೆದ
ಡಾ.ರಾಜ್ ಮತ್ತು ರಂಗಗೀತೆಗಳು
ನೋಡಿ: www.prajavani.net

ಮರಾಠಿ ಮಣ್ಣಿನ ಕನ್ನಡ ಗಮ್ಮತ್ತು

ಮಹಾರಾಷ್ಟ್ರದಲ್ಲಿ ಬಹುಜನಪ್ರಿಯ ಜನಪದ ನಾಟಕ ಪ್ರಕಾರವಾಗಿದೆ ಲೋಕನಾಟ್ಯ ತಮಾಶಾ. ಈ ರಂಗ ಪ್ರಕಾರಕ್ಕೆ ಸುಮಾರು ಮೂರು ಶತಮಾನಗಳಷ್ಟು ದೀರ್ಘ ಚರಿತ್ರೆಯಿದೆ. ಪೇಶ್ವೆಗಳ ಕಾಲದಲ್ಲಿ ಉಚ್ಛ್ರಾಯ ಸ್ಥಿತಿಗೆ ಏರಿದ ತಮಾಶಾ ಇಂದಿಗೂ ಅದೇ ಮಹತ್ವವನ್ನು ಉಳಿಸಿಕೊಂಡುಬಂದಿದೆ. ಸಂಸ್ಕೃತ ಭೂಯಿಷ್ಠವಾಗಿದ್ದ ಮರಾಠಿ ನಾಟ್ಯ ಸಂಗೀತದ ನಾಟಕಗಳಿಗೆ ಜನಸಾಮಾನ್ಯರಿಂದ ಪರ್ಯಾಯವಾಗಿ ಹುಟ್ಟಿಕೊಂಡ ಪ್ರಕಾರವನ್ನಾಗಿಯೂ ಇದನ್ನು ನೋಡಲಾಗುತ್ತದೆ. ಅಂತಹ ತಮಾಶಾ, ಡಿ.ಎಸ್. ಚೌಗಲೆ ಅವರ ಮೂಲಕ ಈಗ ಕನ್ನಡಕ್ಕೆ ಬಂದಿದೆ.

ಮೂಲತಃ ಅಧ್ಯಾತ್ಮವನ್ನೇ ತಮಾಶಾ ಕೇಂದ್ರೀಕರಿಸಿದ್ದುಂಟು. ಆದರೆ, ಈಗಿನ ಪ್ರಯೋಗಗಳಿಗೆ ಲೌಕಿಕವೇ ಪ್ರಧಾನವಸ್ತು. ರಂಗ ಪ್ರಯೋಗದ ದೃಷ್ಟಿಯಿಂದಲೂ ಹಲವು ಸಾಧ್ಯತೆಗಳನ್ನು ಹುಡುಕಿದ ಪ್ರಕಾರ ಇದಾಗಿದೆ. ಮೊದಲು ಬಯಲಿನಲ್ಲೇ ಆಟಗಳು ನಡೆಯುತ್ತಿದ್ದವು. ಹಿಲಾಲುಗಳೇ ಈ ಪ್ರಯೋಗಗಳಿಗೆ ಬೆಳಕಿನ ವ್ಯವಸ್ಥೆ ಮಾಡುತ್ತಿದ್ದವು. ಬರುಬರುತ್ತಾ ರಂಗ ಮಂದಿರಗಳಲ್ಲೂ ತಮಾಶಾ ಜಯಭೇರಿ ಬಾರಿಸಿತು. 'ತಮಾಶಾ' ಹೆಸರಿನ ಪ್ರಸ್ತುತ ನಾಟಕವಾದರೂ ರಂಗಾಯಣದ ಪ್ರಯೋಗಕ್ಕಾಗಿ ತಯಾರಾದದ್ದು. ರಂಗಾಯಣದಲ್ಲಿ ಮಾತ್ರವಲ್ಲದೆ ರಾಷ್ಟ್ರೀಯ ನಾಟಕೋತ್ಸವಗಳಲ್ಲೂ ಯಶಸ್ವಿಯಾಗಿ ಪ್ರದರ್ಶನ ಕಂಡಿರುವಂಥದ್ದು.

ಮೊದಲ ಓದು

ಕನ್ನಡ-ಮರಾಠಿ ಭಾಷೆಗಳ ನಡುವಿನ ಕೊಡು-ಕೊಳ್ಳುವಿಕೆಯ ಕೊಂಡಿಯಂತಿರುವ ಚೌಗಲೆ, ಏಳು ಮರಾಠಿ ನಾಟಕಗಳನ್ನು ಕನ್ನಡಕ್ಕೆ ತಂದಿದ್ದಾರೆ. ಅವರ ಆ ಅನುಭವ 'ತಮಾಶಾ'ದ ಆಟ ಕಟ್ಟುವಲ್ಲೂ ನೆರವಿಗೆ ಬಂದಿದೆ. ಗ್ರಾಮೀಣ ಭಾಗದ ಜನಸಾಮಾನ್ಯರ ನಿತ್ಯದ ಬದುಕನ್ನೇ ಕಥಾವಸ್ತುವನ್ನಾಗಿ ಹೊಂದಿದ ಈ ನಾಟಕ, ತನ್ನ ಜವಾರಿ ಭಾಷೆಯಿಂದ ಗಮನ ಸೆಳೆಯುತ್ತದೆ. ಹಾಗೆ ಜವಾರಿತನದಿಂದ ಕಥೆ ಸಾಗುವಾಗ ಕೆಲವು ಸಂಭಾಷಣೆಗಳು ಪ್ರೇಕ್ಷಕರಿಗೆ ಅಶ್ಲೀಲವಾಗಿ ಕಂಡರೆ ಅದು 'ತಮಾಶಾ'ದ ತಪ್ಪಲ್ಲ!

ತಮಾಶಾ
ಲೇ: ಡಿ.ಎಸ್. ಚೌಗಲೆ
ಪ್ರ: ಪರಾಗ ಪುಸ್ತಕ
ಸಂ: 8660059424
ಪು: 64 ₹60

'ಲಾಡಿ ಎಳಿ ಚಡ್ಡಿ ಕಳಿ, ಲಾಡಿ ಎಳಿ ಚಡ್ಡಿ ಕಳಿ'
'ಹಾಂ, ನಾನ್ ಅವನಿಗೆ ತಿಳಿಸಿ ಹೇಳ್ವೆ. ಮಗನ ಹಾಗೆಲ್ಲ ಲಾಡಿ ಎಳೆಯೋದು, ಚಡ್ಡಿ ಕಳೆಯೋದು ಮಾಡಬೇಡಪ್ಪಾ, ಬೊಂಬಾಯಿ ಕಾಣತೈತಿ ಅಂತ'

– ಆ ತರಹದ ಸಂಭಾಷಣೆಗಳ ಕೆಲವು ಝಲಕ್‌ಗಳು ಇವು. ಆದರೆ, ಇಡೀ ತಮಾಶಾ, ಚುಟುಕಾದ, ಚುರುಕಾದ ಸಂಭಾಷಣೆಗಳ ಮೂಲಕ ಸರಾಗವಾಗಿ ಸಾಗುತ್ತದೆ. ಕುರಿ ಕಾಯೋರು, ಗೌಳಣರ ಮಾತುಗಳು ಕಚಗುಳಿ ಇಡುತ್ತವೆ. ಹಾಗೆಯೇ ಚಿಂತನೆಗೂ ಹಚ್ಚುತ್ತವೆ. ಸಹಜವಾಗಿಯೇ ಮರಾಠಿ ಪ್ರಭಾವ ದಟ್ಟವಾಗಿದ್ದರೂ ಕನ್ನಡದ ಜಾಯಮಾನಕ್ಕೆ ಹೊಂದುವ ಗಮ್ಮತ್ತು ಇದಾಗಿದೆ.

ಬಯಲಾಗುವ ಮನುಷ್ಯತ್ವದ ಬಂಡವಾಳ



ಒಡನಾಡಿಯ ಒಡಲಾಳ
ಲೇ: ಸ್ಟ್ಯಾನ್ಲಿ-ಪರಶು
ಪ್ರ: ಅಭಿರುಚಿ ಪ್ರಕಾಶನ ಮೈಸೂರು
ಸಂ: 9980560013
ಪು: 376 ₹350

ರವೀಂದ್ರ ಭಟ್ಟ

ವಿಮರ್ಶೆ

'ಒಡನಾಡಿಯ ಒಡಲಾಳ' ಎಂಬುದು ಮನುಷ್ಯತ್ವದ ಬಂಡವಾಳ ಬಯಲು ಮಾಡುವ ಕೃತಿ. ಮೈಸೂರಿನ ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ-ಪರಶು ಅವರ ಹೋರಾಟದ ಕತೆಗಳು ಇದರಲ್ಲಿ ಇವೆ. ಹಣ ಗಳಿಸುವುದಕ್ಕಾಗಿ ಮನುಷ್ಯ ಯಾವ ಮಟ್ಟಕ್ಕೂ ಇಳಿಯುತ್ತಾನೆ ಎನ್ನುವುದನ್ನು ಪುರಾವೆ ಸಹಿತ ಈ ಕೃತಿ ಬಹಿರಂಗಪಡಿಸುತ್ತದೆ.

ಒಂದೊಂದು ಕತೆಯನ್ನು ಓದಿ ಮುಗಿಸಿದ ನಂತರವೂ ಸಾಮಾಜಿಕ ವ್ಯವಸ್ಥೆಯ ಬಗ್ಗೆ, ಪುರುಷನ ಕ್ರೌರ್ಯದ ಬಗ್ಗೆ ಸಿಟ್ಟು ಉಕ್ಕುತ್ತದೆ. ಮೇಲ್ನೋಟಕ್ಕೆ ಎಲ್ಲವೂ ಸರಿಯಾಗಿ ಇರುವಂತೆ ಕಾಣುವ ಸಮಾಜ ತೆರೆಯ ಹಿಂದೆ ಎಷ್ಟೊಂದು ಹುಳುಕುಗಳನ್ನು ಹೊತ್ತುಕೊಂಡಿದೆ, ಭೀಕರವಾಗಿದೆ, ಅಮಾನವೀಯವಾಗಿದೆ ಎನ್ನುವುದನ್ನು ಕೃತಿ ಹಂತಹಂತವಾಗಿ ಬಿಚ್ಚಿಡುತ್ತದೆ, ಬೆಚ್ಚಿ ಬೀಳಿಸುತ್ತದೆ. ಮೇರೆಮೀರಿದ ಪುರುಷನ ಕ್ರೌರ್ಯ, ಹೆಣ್ಣಿನ ಅಸಹಾಯಕತೆ, ಗಂಡಸಿನ ಕಾಮದ ಹಸಿವು, ಹೆಣ್ಣಿನ ಹೊಟ್ಟೆಯ ಹಸಿವು ಎಲ್ಲವೂ ಇಲ್ಲಿ ಬಯಲಾಗುತ್ತವೆ. ಪುಸ್ತಕ ಓದಿ ಮುಗಿಸಿದಾಗ ಎಲ್ಲ ಪುರುಷರೂ ಬೆತ್ತಲಾದ ಅನುಭವ. ಪುರುಷ ಜನಾಂಗದ ಮೇಲೆ ಹೇಸಿಗೆಯ ಭಾವ ಹುಟ್ಟಿದರೆ ಅಚ್ಚರಿಯಲ್ಲ.

ಲೈಂಗಿಕ ಕಾರ್ಯಕರ್ತೆಯರ ಆತ್ಮಕತೆಗಳೂ ಕನ್ನಡದಲ್ಲಿ ಬಂದಿವೆ. ಆದರೆ ಇದು ಇಂತಹ ಹಲವಾರು ಹತಭಾಗ್ಯೆಯರ ಕತೆ. ಕತ್ತಲ ಕೂಪಕ್ಕೆ ಅವರನ್ನು ತಳ್ಳಿದ ಕತೆ. ಅಲ್ಲಿಂದ ಅವರನ್ನು ಬಿಡಿಸಲು ಸ್ಟ್ಯಾನ್ಲಿ-ಪರಶು ನಡೆಸಿದ ಹೋರಾಟದ ಕತೆ. ಈ ಹೋರಾಟದಲ್ಲಿ ಸೋಲು ಗೆಲುವು ಎರಡೂ ಇವೆ. ಎಲ್ಲವನ್ನೂ ಅವರು ಮುಕ್ತವಾಗಿಯೇ ಹೇಳಿಕೊಂಡಿದ್ದಾರೆ. ವೇಶ್ಯಾವಾಟಿಕೆ ಎನ್ನುವುದು ಪುರಾತನ ಉದ್ಯೋಗ, ಎಲ್ಲ ಸಮಾಜಗಳಲ್ಲಿಯೂ ಎಲ್ಲ ದೇಶಗಳಲ್ಲಿಯೂ ಅದು ಮಾಮೂಲು ಎಂದು ಹೇಳುತ್ತಾ ಅದನ್ನು ಸಮರ್ಥಿಸಿಕೊಳ್ಳುತ್ತಾ ಬಂದಿರುವ ಸಮಾಜ ಕಾನೂನು ಬಾಹಿರ, ಅನೈತಿಕ ಮತ್ತು ಹಿಂಸಾತ್ಮಕ ಉದ್ಯಮವನ್ನು ಹೇಗೆ ಬೆಳೆಸುತ್ತಿದೆ ಎನ್ನುವುದರ ಮೇಲೆಯೂ ಈ ಪುಸ್ತಕ ಬೆಳಕು ಚೆಲ್ಲುತ್ತದೆ.

ನಿರಂತರವಾಗಿ ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯ ಮಾನಸಿಕ ಸ್ಥಿತಿ, ಮಹಿಳೆಯರನ್ನು ಇಂತಹ ಕೂಪಕ್ಕೆ ಕೆಡವಲು ಪ್ರಯತ್ನಿಸುವ ವ್ಯಕ್ತಿಗಳ ಮಾನಸಿಕ ಸ್ಥಿತಿ, ದಂಧೆಯ ವಿವಿಧ ಮುಖಗಳು, ತಂದೆ ತಾಯಿಯ ಸಂಕಟ ಎಲ್ಲವೂ ಇಲ್ಲಿ ದಾಖಲಾಗಿವೆ. ಸಾಂಸ್ಕೃತಿಕ ರಾಜಧಾನಿ ಎಂದೇ ಕರೆಸಿಕೊಳ್ಳುವ ಮೈಸೂರಿನ ಇನ್ನೊಂದು ಮುಖ ಇಲ್ಲಿ ಕಾಣ ಸಿಗುತ್ತದೆ. ಅದೇ ರೀತಿ ರಾಜ್ಯ, ದೇಶ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ವೇಶ್ಯಾವಾಟಿಕೆ ಉದ್ಯಮವಾಗಿ ಬೆಳೆದ ಬಗೆ ಹಾಗೂ ಅದರ ಪರಿಣಾಮಗಳ ಬಗ್ಗೆಯೂ ತಿಳಿವಳಿಕೆ ನೀಡುತ್ತದೆ. ಈ ಎಲ್ಲ ಅಂಶಗಳ ಬಗ್ಗೆ ಇನ್ನಷ್ಟು ಗಂಭೀರವಾಗಿ ಚಿಂತಿಸುವಂತೆಯೂ ಮಾಡುತ್ತದೆ.

ಯಾವ ಮರ್ಯಾದಾ ಪುರುಷರೂ ಮಾಡಲು ಬಯಸದೇ ಇರುವ ಈ ಸೇವಾ ಕಾರ್ಯದಲ್ಲಿ ಸ್ಟ್ಯಾನ್ಲಿ-ಪರಶು ಕಳೆದ ಮೂರು ದಶಕಗಳಿಂದ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಎಲ್ಲ ರೀತಿಯ ಅವಮಾನ, ಅವಹೇಳನ, ಸನ್ಮಾನಗಳನ್ನೂ ಪಡೆದಿದ್ದಾರೆ. ಒಡನಾಡಿಯ ಸೋಲು ಗೆಲುವಿನ ಜೊತೆಗೆ ಸಮಾಜದ ಸೋಲು ಗೆಲುವುಗಳೂ ಇಲ್ಲಿವೆ. ಹಲವು ಬಾರಿ ಒಡನಾಡಿ ಗೆದ್ದಿದೆ. ಆದರೆ ಸಮಾಜ ಎಲ್ಲ ಬಾರಿಯೂ ಸೋತಿದೆ. ಒಮ್ಮೆ ಓದಿ ಕೆಳಗಿಡುವ ಪುಸ್ತಕ ಇದಲ್ಲ. ಓದಿದ ಮೇಲೆ ನಮ್ಮೊಳಗೂ ತಳಮಳ ಉಂಟಾದರೆ ಅದೇ ಇದರ ಯಶಸ್ಸು.

ಪ್ರಭಾತ ಕಲಾವಿದರ ಶ್ರೀರಾಮ ಪ್ರತೀಕ್ಷ

ರಂಗಭೂಮಿ

ಟಿ.ಜಿ. ವೆಂಕಟೇಶಾಚಾರ್

ರಾಮ-ಸೀತೆಯ ನಲಿವಿನ ಕ್ಷಣಗಳು... ರಾಮನಾಗಿ ಹರೀಶ್ ಹಾಗೂ ಸೀತೆಯಾಗಿ ದೀಪಶ್ರೀ ಪ್ರಭಾತ್

ಕೋವಿಡ್ ಕಾರಣದಿಂದಾಗಿ ಕಲಾ ಕ್ಷೇತ್ರವೂ ಹಲವು ಸಂಕಷ್ಟಗಳನ್ನು ಎದುರಿಸುತ್ತಿದೆ. ಹಲವೆಡೆ ಪ್ರೇಕ್ಷಕರ ಸಂಖ್ಯೆಗೆ ನಿರ್ಬಂಧ ಹೇರಲಾಗಿದೆ. ಇನ್ನೂ ಕೆಲವೆಡೆ ಸಾಂಸ್ಕೃತಿಕ ಭವನ, ಕಲಾ ಕ್ಷೇತ್ರಗಳನ್ನೇ ಮುಚ್ಚಲಾಗಿದೆ. ಈ ರೀತಿಯ ಸಂದಿಗ್ಧ ಪರಿಸ್ಥಿತಿಯಲ್ಲಿ ಪ್ರೇಕ್ಷಕರನ್ನು ಮುಟ್ಟಲು, ಜೊತೆಗೆ ಕಲೆಯನ್ನೂ ಉಳಿಸಲು ಪರ್ಯಾಯ ವ್ಯವಸ್ಥೆಯತ್ತ ಕಲಾ ತಂಡಗಳು ಹೆಜ್ಜೆ ಇಟ್ಟಿವೆ. ಇದೇ ರೀತಿಯ ಹೊಸ ಪರಿಕಲ್ಪನೆಯನ್ನು ಹೊತ್ತು ಪ್ರೇಕ್ಷಕರ ಮನೆಗೇ ತಲುಪಿದೆ 'ಪ್ರಭಾತ ಕಲಾವಿದರು' ತಂಡ. ಆನ್‌ಲೈನ್ ವೇದಿಕೆಯ ಸದ್ಬಳಕೆ ಮಾಡಿಕೊಂಡ ಈ ತಂಡವು, 'ಶ್ರೀರಾಮ ಪ್ರತೀಕ್ಷ' ನೃತ್ಯ ನಾಟಕವನ್ನು ವರ್ಚುವಲ್ ಪ್ಲ್ಯಾಟ್‌ಫಾರ್ಮ್‌ನಲ್ಲಿ ಬಿಡುಗಡೆ ಮಾಡಿದೆ.

ಸುಮಾರು 75 ಕಲಾವಿದರು-ತಂತ್ರಜ್ಞರ ತಂಡ ಕೂಡಿ, ಈ ನೃತ್ಯ ನಾಟಕವನ್ನು ಕ್ರಿಯಾತ್ಮಕವಾಗಿ ಚಿತ್ರೀಕರಿಸಿದೆ. ಈ ನೃತ್ಯ ನಾಟಕ ಕನ್ನಡ ಭಾಷೆಯಲ್ಲಲ್ಲದೆ, ಹಿಂದಿ, ತಮಿಳು ಹಾಗೂ ತೆಲುಗು ಭಾಷೆಗಳಲ್ಲೂ ನಿರ್ಮಾಣವಾಗಿದೆ.

'ಶ್ರೀರಾಮ ಪ್ರತೀಕ್ಷ', ಶ್ರೀರಾಮನ ನ್ಯಾಯ, ನಿಷ್ಠೆ, ಧರ್ಮ, ಕರ್ತವ್ಯ ಪರಿಪಾಲನೆ, ಒಟ್ಟಾರೆ ಶ್ರೀರಾಮನ ಪರಿಪೂರ್ಣ ವ್ಯಕ್ತಿತ್ವವನ್ನು ಬಿಂಬಿಸುವ ಸುಮಧುರ ಸಂಗೀತ, ನೃತ್ಯಗಳ ರಸದೌತಣವಾಗಿದೆ. ಶ್ರೀ ರಾಮಚಂದ್ರನಿಗಾಗಿ ಕಾಯುತ್ತ ತಮ್ಮ ಜೀವನವನ್ನೇ ಮುಡಿಪಾಗಿಟ್ಟ ಅಹಲ್ಯೆ, ಸೀತೆ, ಹನುಮ, ಸುಗ್ರೀವ, ಭರತ, ಅಯೋಧ್ಯೆಯ ಪ್ರಜೆಗಳು ಹಾಗೂ ಎಲ್ಲಾ ಭಕ್ತರ ನಿರ್ಮಲ ಪ್ರೀತಿಯ ಸಂಕೇತವೇ ಶ್ರೀರಾಮ ಪ್ರತೀಕ್ಷ. ಶ್ರೀ ರಾಮನು, ಮಾರೀಚ ಸುಬಾಹುರನ್ನು ವಧಿಸುವ ಸನ್ನಿವೇಶದಿಂದ ಹಿಡಿದು ರಾವಣನನ್ನು ಸಂಹರಿಸುವ ದೃಶ್ಯದ ತನಕ, ಅತ್ಯಾಕರ್ಷಕವಾಗಿ ಜನರ ಮನಮುಟ್ಟುವಂತೆ ಇದನ್ನು ಚಿತ್ರೀಕರಿಸಲಾಗಿದೆ.

'ಪ್ರಭಾತ ಕಲಾವಿದರು' ಜೀವಂತ ವಾಹಿನಿಯಾಗಿ 86 ವರ್ಷಗಳಿಂದ ಭೋರ್ಗರೆಯುತ್ತಾ ಹರಿದುಬರುತ್ತಿದೆ. ನಮ್ಮ ನಾಡು-ದೇಶದ ಕಲೆ, ಇತಿಹಾಸ, ಸಂಸ್ಕೃತಿಯನ್ನು ನೃತ್ಯ ನಾಟಕಗಳ ಮೂಲಕ ಪ್ರಪಂಚದಾದ್ಯಂತ ಪಸರಿಸುತ್ತಾ ಬಂದಿದೆ. ಹಲವಾರು ಪೀಳಿಗೆಗಳನ್ನು ದಾಟಿ ನಡೆದಿದೆ. ಹರಿಕಥಾ ರತ್ನಾಕರ ಟಿ.ವಿ.ಗೋಪೀನಾಥ ದಾಸರು ತಮ್ಮ ಸಹೋದರರ ಸಹಕಾರದಿಂದ 1935ರಲ್ಲಿ ಪೌರಾಣಿಕ ನಾಟಕಗಳನ್ನು ಪ್ರದರ್ಶಿಸಲು ಪ್ರಾರಂಭಿಸಿದರು. ನಂತರದ ದಿನಗಳಲ್ಲಿ 'ಪ್ರಭಾತ ಕಲಾವಿದರು' ಸಂಸ್ಥೆಯನ್ನು ಸ್ಥಾಪಿಸಿದರು. 1963ರಲ್ಲಿ ಮಹಾಭಾರತದ ಕೀಚಕವಧೆ ಪ್ರಸಂಗವನ್ನು ಪ್ರಧಾನಾಂಶವಾಗಿಟ್ಟುಕೊಂಡು ಗೋಪೀನಾಥ ದಾಸರು 'ವಿಜಯೋತ್ಸವ' ನಾಟಕವನ್ನು ಪ್ರದರ್ಶಿಸಿದರು.

ಸಾಮಾನ್ಯವಾಗಿ ಪೌರಾಣಿಕ ಹಾಗೂ ಐತಿಹಾಸಿಕ ನಾಟಕಗಳಲ್ಲಿ ಬಳಸುತ್ತಿದ್ದ ಅರಮನೆ, ಕಾಡು ಮುಂತಾದ ರಂಗುರಂಗಿನ ಪರದೆಗಳನ್ನು (painted screen) ಬಳಸುವುದನ್ನು ನಿಲ್ಲಿಸಿ, ಈ ನಾಟಕದ ಪ್ರಯೋಗಗಳಲ್ಲಿ ಕಪ್ಪು ಹಾಗೂ ನೀಲಿ ಬಣ್ಣದ ಪರದೆಗಳನ್ನು ಬಳಸಲಾಯಿತು. ದೃಶ್ಯಗಳಿಗೆ ಅನುಗುಣವಾಗಿ ಬಣ್ಣದ ಬೆಳಕಿನ ವ್ಯವಸ್ಥೆಯನ್ನು ಅಂದರೆ ಕಾಡಿನ ದೃಶ್ಯಕ್ಕೆ ಹಸಿರು, ನದಿಯನ್ನು ಸೂಚಿಸುವುದಕ್ಕೆ ನೀಲಿ, ಹೀಗೆ ಸಾಂಕೇತಿಕವಾಗಿ ಬಳಸಿ, ನಾಟಕ ರಂಗದಲ್ಲಿ ಒಂದು ನೂತನ ಆವಿಷ್ಕಾರ ಸೃಷ್ಟಿಸಿದರು.

1969ರಲ್ಲಿ ಪ್ರಭಾತ ಕಲಾವಿದರು, ಗೋಪೀನಾಥ ದಾಸರ ನಿರ್ದೇಶನದಲ್ಲಿ ಬ್ಯಾಲೆ-ನೃತ್ಯ ನಾಟಕಗಳನ್ನು ಪ್ರದರ್ಶಿಸಲು ತೊಡಗಿತು. ದಕ್ಷಿಣ ಭಾರತದಲ್ಲಿ ಇಂತಹ ಧ್ವನಿ ಮುದ್ರಿತ (pre recorded music) ನೃತ್ಯ ನಾಟಕಗಳ ಪ್ರಯೋಗ ಮಾಡಿದ ಹೆಗ್ಗಳಿಕೆ ಪ್ರಭಾತ ಕಲಾವಿದರದ್ದು. ಇದು ರಂಗಭವನ ನಾದತರಂಗಗಳಿಂದ ರಾರಾಜಿಸುವಂತೆ ಮಾಡಿತ್ತು.

'ಗೋವಿನ ಕಥೆ', 'ಕಿಂದರ ಜೋಗಿ' ಇವು ಜಾನಪದದ ಕಥೆಗಳಾದರೆ, 'ಧರ್ಮಭೂಮಿ', 'ಕರ್ನಾಟಕ ವೈಭವ' ಮುಂತಾದವುಗಳು ಇತಿಹಾಸದ ಹಿನ್ನೆಲೆಯ ವಸ್ತುಗಳಾಗಿದ್ದವು. ಆದರೂ ಪೌರಾಣಿಕ ಕಥೆಗಳನ್ನು ಸಂಸ್ಥೆಯು ಕೈ ಬಿಟ್ಟಿರಲಿಲ್ಲ. 'ಮೋಹಿನಿ ಭಸ್ಮಾಸುರ', 'ಭಗವದ್ಗೀತೆ' 'ಪಾಶುಪತಾಸ್ತ್ರ' ಮುಂತಾದ ಪುರಾಣ ವಸ್ತುಗಳ ಆಯ್ಕೆಯೂ ಇತ್ತು.

ಇವುಗಳೊಂದಿಗೆ ಪಾಶ್ಚಿಮಾತ್ಯ ಕಥಾಹಂದರವನ್ನು ಹೊಂದಿದ 'ಸಿಂಡ್ರೆಲಾ' ನೃತ್ಯ ನಾಟಕವನ್ನೂ ಗೋಪೀನಾಥ ದಾಸರು ಜನಸಾಮಾನ್ಯರಿಗೆ ಅರ್ಪಿಸಿದ್ದರು. ಅತ್ಯಾಧುನಿಕ ಬೆಳಕು ಹಾಗೂ ಧ್ವನಿ ತಂತ್ರಜ್ಞಾನದಿಂದ ಕೂಡಿದ್ದ ಈ ನೃತ್ಯ ನಾಟಕ ಜನರನ್ನು ವಿಸ್ಮಿತರನ್ನಾಗಿಸಿತ್ತು. ದೇಶದಾದ್ಯಂತ ಜನರಿಗೆ ಅದ್ಭುತ ಮನರಂಜನೆ ನೀಡಿದ ಸಿಂಡ್ರೆಲಾ, ಸಾವಿರಾರು ಪ್ರದರ್ಶನಗಳನ್ನು ಪೂರೈಸಿತು.

1982ರ ನಂತರ, ಸಂಸ್ಥೆಯ ರೂವಾರಿ ಗೋಪಿನಾಥ ದಾಸರು ದಿವಂಗತರಾದ ಮೇಲೆ, ಅವರ ಮಕ್ಕಳು ಮತ್ತು ಮೊಮ್ಮಕ್ಕಳು, ಓಡುತ್ತಿದ್ದ 'ಪ್ರಭಾತ ಕಲಾವಿದರು' ರಥದ ಚುಕ್ಕಾಣಿ ಹಿಡಿದು 'ಶ್ರೀನಿವಾಸ ಕಲ್ಯಾಣ', 'ಶ್ರೀ ಕೃಷ್ಣ ವೈಜಯಂತಿ', 'ಶ್ರೀರಾಮ ಪ್ರತೀಕ್ಷ', 'ಮಹಿಷಾಸುರ ಮರ್ದಿನಿ', 'ಹರಿಭಕ್ತ', 'ಕರುನಾಡ ವೈಭವ', 'ಶ್ರೀ ಕೃಷ್ಣದೇವರಾಯ' ಮುಂತಾದ ನೃತ್ಯ ನಾಟಕಗಳ ಯಶಸ್ವಿ ಪ್ರಯೋಗಗಳನ್ನು ಮಾಡುತ್ತಿದ್ದಾರೆ.

ರೇಷ್ಮೆ ವಸ್ತ್ರದ ಉಗಮದ ಕಥಾವಸ್ತುವನ್ನೊಳಗೊಂಡ 'ಕ್ರೌನ್ ಆಫ್ ಕ್ರಿಯೇಷನ್' (ದಿವ್ಯ ಸೃಷ್ಟಿ), ಪರಿಸರದ ಪ್ರಾಮುಖ್ಯತೆಯನ್ನು ಹೇಳುವ 'ಅಭಿಜ್ಞಾನ' ಯಶಸ್ವಿಯಾಗಿ ಹೊರಬಂದ ಇತರೆ ಕಾರ್ಯಕ್ರಮಗಳು. ಈ ನೃತ್ಯ ನಾಟಕಗಳ ಪ್ರದರ್ಶನ ಭಾರತದಲ್ಲಲ್ಲದೆ, ಅಮೆರಿಕ, ಸಿಂಗಪುರ, ಕುವೈತ್, ಮಸ್ಕತ್, ಕತಾರ್ ದೇಶಗಳಲ್ಲೂ ನಡೆದಿದೆ. ಇದರಲ್ಲಿ ಹಲವಾರು ನೃತ್ಯ ನಾಟಕಗಳು ಕನ್ನಡ ಭಾಷೆಯ ಜೊತೆಗೆ, ಹಿಂದಿ, ಇಂಗ್ಲಿಷ್, ತೆಲುಗು, ತಮಿಳು, ಸಂಸ್ಕೃತ ಭಾಷೆಗಳಿಗೂ ಭಾಷಾಂತರಗೊಂಡು ಪ್ರಪಂಚದಾದ್ಯಂತ ಸಾವಿರಾರು ಪ್ರದರ್ಶನಗಳನ್ನು ಕಂಡಿವೆ.

ಶ್ರೀರಾಮ ಪ್ರತೀಕ್ಷ ನಾಟಕವು ವಾಲ್ಮೀಕಿ ರಾಮಾಯಣ, ದಾಸ ಸಾಹಿತ್ಯದ ಆಧಾರದಲ್ಲಿ ವಿಜಯನಾರಸಿಂಹ ಅವರಿಂದ ರಚಿತವಾಗಿದೆ. ಪಂಡಿತ್ ವಿಜಯರಾಘವ ರಾವ್ ಅವರ ಇಂಪಾದ ಸಂಗೀತ ಇದಕ್ಕಿದೆ. ಉಡುಪಿ ಲಕ್ಷ್ಮೀನಾರಾಯಣಾಚಾರ್ಯ ಹಾಗೂ ಹೇಮಾ ಪ್ರಭಾತ್ ಅವರು ನೃತ್ಯ ನಿರ್ದೇಶನ ಮಾಡಿದ್ದಾರೆ. ಹರೀಶ್ ಪ್ರಭಾತ್ ಅವರ ತಾಂತ್ರಿಕ ನಿರ್ದೇಶನದ ಪ್ರಭಾವ ವರ್ಚುವಲ್‌ನಲ್ಲಿ ನಾಟಕದ ಸೊಬಗು ಹೆಚ್ಚಿಸಿದೆ. ನಾಟಕವನ್ನು ಬುಕ್ ಮೈ ಶೋ ಆನ್‌ಲೈನ್ ತಾಣದಲ್ಲಿ ವೀಕ್ಷಿಸಬಹುದು.



ಎತ್ತಲಾಗಲಿಲ್ಲ ಶಿವಧನಸ್ಸು... ರಾವಣನ ಪಾತ್ರದಲ್ಲಿ ವಿಶ್ವನಾಥ ಕಟ್ಟಿಮನಿ

ನಾಟಕಗಳ ಸಂತ

ಹೆಸರಾಂತ ನಾಟಕಕಾರ, ತತ್ವಪದಕಾರ ಲಾಲ್‌ಅಹ್ಮದ್ ಬಂದೇನವಾಜ್ ಖಲೀಫ ಆಲ್ದಾಳ (ಎಲ್‌ಬಿಕೆ ಆಲ್ದಾಳ- ಆಲ್ದಾಳ ಮಾಸ್ತರ) ನಾಟಕದ ಸಂತನೆಂದೇ ಪ್ರಸಿದ್ಧರಾದವರು. ಈಚೆಗಷ್ಟೇ ನಿಧನರಾದ ಅವರ ಕುರಿತು ಒಂದು ನೆನಪು...



ಗುಡಿಹಳ್ಳಿ ನಾಗರಾಜ

ಇಪ್ಪತ್ತು ಇಪ್ಪತ್ತೈದು ವರ್ಷಗಳ ಹಿಂದಿನ ನೆನಪು. ಕೊಟ್ಟೂರಿನ ಒಂದು ಪುಸ್ತಕದ ಅಂಗಡಿ ಮುಂದೆ ನಿಂತಿದ್ದೆ. ಆಗೆಲ್ಲಾ ಪುಸ್ತಕದ ಅಂಗಡಿಗಳಲ್ಲಿ ನಾಟಕ ಕೃತಿಗಳನ್ನು ಪ್ರದರ್ಶನಕ್ಕೆ ಇಡುತ್ತಿದ್ದರು. ಆಲ್ದಾಳ ಮಾಸ್ತರರ ಒಂದು ಸಾಮಾಜಿಕ ನಾಟಕವನ್ನು ಓದಲೆಂದು ಕೈಗಿತ್ತಿಕೊಂಡೆ. 'ನಾರದ ವಿಜಯ' ಎಂಬ ಸಿನಿಮಾ ಕತೆ ಹೀಗೇ ಇದೆಯಲ್ಲ ಎನಿಸಿತು. ಹೌದು ವೃತ್ತಿ ನಾಟಕಕಾರರ ಅನೇಕ ಕೃತಿಗಳಿಂದ ಕತೆ ಪಡೆದುಕೊಂಡರೂ ಮೂಲ ಅವರದೆಂದು ಎಲ್ಲಿಯೂ ಸ್ಮರಿಸಿಯೇ ಇಲ್ಲ! ಆಲ್ದಾಳ ಅವರು ಸಾಮಾಜಿಕ ಅದಕ್ಕಿಂತ ಹೆಚ್ಚಾಗಿ ಅಸಂಖ್ಯಾತ ಪೌರಾಣಿಕ ನಾಟಕಗಳನ್ನು ರಚಿಸಿ, ನಿರ್ದೇಶಿಸಿ ನಾಟಕಗಳ ಪವಾಡ ಪುರುಷ ಎಂದೇ ಪ್ರಸಿದ್ಧರಾದವರು.

ಗ್ರಾಮೀಣ ಭಾಗದಲ್ಲಿ ಸಚ್ಚಾರಿತ್ರ್ಯ ಬೆಳೆಸುವಲ್ಲಿ ಪವಾಡ ಪುರುಷರ ಕೀರ್ತನೆಗಳು ಹಾಗೂ ನಾಟಕಗಳು ದೊಡ್ಡ ಪಾತ್ರವನ್ನು ನಿರ್ವಹಿಸುತ್ತವೆ. ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಕವಿ ಲಾಲ್‌ಅಹ್ಮದ್ ಬಂದೇನವಾಜ್ ಖಲೀಫ ಆಲ್ದಾಳ (ಎಲ್‌ಬಿಕೆ ಆಲ್ದಾಳ) ಅವರು ತಮ್ಮ ನಾಟಕಗಳ ಮೂಲಕ ಆ ಕೆಲಸ ಮಾಡುತ್ತ ಬಂದರು. ಪುರಾಣಗಳಿಗೆ, ಐತಿಹ್ಯಗಳಿಗೆ ನಾಟಕದ ರೂಪ ಕೊಟ್ಟು ರಂಗದ ಮೇಲೆ ಅವನ್ನು ಯಶಸ್ವಿಯಾಗಿ ತಂದರು.

ಮಠ, ಸಂಸ್ಥೆಗಳಲ್ಲಿ ದೊರೆಯುವ ಪುರಾಣ, ಐತಿಹ್ಯ, ಚರಿತ್ರೆಗಳನ್ನಾಧರಿಸಿ ನಾಟಕ ರಚಿಸಿ; ಯಶಸ್ವಿಯಾಗಿ ನಿರ್ದೇಶಿಸುವುದರಲ್ಲಿ ಅವರು ಎತ್ತಿದಕೈ. ಆಲ್ದಾಳ ಅವರ ಮೂವತ್ತಕ್ಕೂ ಅಧಿಕ ಇಂತಹ ನಾಟಕಗಳು ನೂರಾರು ಪ್ರಯೋಗಗಳನ್ನೂ ಕಂಡಿವೆ. ಒಂದು ಮಠ ಅಲ್ಲ, ಒಂದು ಜಾತಿ ಅಲ್ಲ- ಕುರುಬರ ಯಲ್ಲಪ್ಪಸ್ವಾಮಿ ಕುರಿತು 'ಮುಗಳಖೋಡ ಮುತ್ತು', ಈಡಿಗರ ಬಾಲಯೋಗೀಂದ್ರ ಮಹಾರಾಜೇಂದ್ರರ ಕುರಿತು 'ಗರತಿ ವಿಶ್ವಜ್ಯೋತಿ', ವಿಶ್ವಕರ್ಮರ 'ಅಳ್ಳಳ್ಳಿ ಅಯ್ಯಪ್ಪಯ್ಯ ಮಹಾತ್ಮೆ', 'ಮೋಟನಹಳ್ಳಿ ಹಸನಸಾಬ್', 'ಮುದನೂರು ದೇವರ ದಾಸಿಮಯ್ಯ' ಇನ್ನೂ ಹತ್ತು ಹಲವಾರು ಐತಿಹ್ಯಗಳ ಜೊತೆಗೆ ಶರಣರು, ಸಂತರು, ಸೂಫಿಗಳ ಕುರಿತು ನಾಟಕ ರಚಿಸಿ ನಿರ್ದೇಶಿಸಿದವರು ಅವರು. ಸರಳ ಜೀವನ, ಕಾಯಕದ ಮಹತ್ವ, ಭಾವೈಕ್ಯ ಇವರ ನಾಟಕಗಳ ತಿರುಳು.

ಹತ್ತಕ್ಕೂ ಅಧಿಕ ಸಾಮಾಜಿಕ ನಾಟಕಗಳನ್ನು ರಚಿಸಿರುವ ಆಲ್ದಾಳ ಮಾಸ್ತರ ಅವರು 11 ನಾಟಕ ಕಂಪನಿಗಳಲ್ಲಿ ನಾಟಕಕಾರರಾಗಿ, ನಿರ್ದೇಶಕರಾಗಿ ಕೆಲಸ ಮಾಡಿದವರು. ಅದಕ್ಕೂ ಹೆಚ್ಚಾಗಿ ಬೀದರ್, ಕಲಬುರ್ಗಿ, ಯಾದಗಿರಿ, ರಾಯಚೂರು ಜಿಲ್ಲೆಗಳ ಹಳ್ಳಿಗಳಲ್ಲಿ ಆರು ದಶಕಗಳ ಕಾಲ ನಾಟಕಗಳನ್ನು ಕಲಿಸಿ ರಂಗಕ್ಕೆ ತಂದವರು.

ವಿಜಯಪುರ ಜಿಲ್ಲೆಯ ಸಿಂದಗಿ ತಾಲ್ಲೂಕು ಬನ್ನಿಹಟ್ಟಿಯಲ್ಲಿ ಬಂದೇನವಾಜ- ಹುಸೇನಬಿ ದಂಪತಿಗೆ 1938ರಲ್ಲಿ ಜನಿಸಿದ ಲಾಲ್‌ಮಹ್ಮದ್, ಬೆಳೆದದ್ದು ಯಾದಗಿರಿ ಜಿಲ್ಲೆ, ಸುರಪುರ ತಾಲ್ಲೂಕು ಆಲ್ದಾಳದಲ್ಲಿ, ನಂತರ ಇವರು ನೆಲೆಸಿದ್ದು ಕಲಬುರ್ಗಿ ಜಿಲ್ಲೆ, ಯಡ್ರಾಮಿ ತಾಲ್ಲೂಕು ಮಳ್ಳಿ ಎಂಬ ಗ್ರಾಮದಲ್ಲಿ. ಪತ್ನಿ ಅಮೀನಬಿ. ರಫಿ, ಶಫಿ ಪುತ್ರರು ಹಾಗೂ ಓರ್ವ ಪುತ್ರಿ ಇದ್ದಾರೆ.

ಬಹುಮುಖ ಪ್ರತಿಭಾವಂತ ಆಲ್ದಾಳ ಅವರು ಭಾಮಿನಿ ಷಟ್ಪದಿಯಲ್ಲಿ ನಾಲ್ಕು ಪುರಾಣಗಳನ್ನು ರಚಿಸಿದ್ದಾರೆ. ತತ್ವಗೀತೆಗಳ ಸಂಕಲನ ಹೊರತಂದಿದ್ದಾರೆ. ನಾಮಾವಳಿಗಳನ್ನು ಬರೆದಿದ್ದಾರೆ. ನಾಟಕ ಅಕಾಡೆಮಿ, ರಾಜ್ಯೋತ್ಸವ, ಗುಬ್ಬಿವೀರಣ್ಣ ಸೇರಿದಂತೆ ಹಲವು ಪ್ರಶಸ್ತಿಗಳಿಗೆ ಅವರು ಭಾಜನರಾಗಿದ್ದಾರೆ.

ಸಚ್ಚಾರಿತ್ರ್ಯದ ಅವರ ನಾಟಕಗಳಂತೆ ಅವರ ಬದುಕೂ ಸರಳ. ಇದ್ದುದರಲ್ಲೇ ಸಂತೃಪ್ತಿಯಾಗಿರುತ್ತಿದ್ದರು. ಯಾವುದಾದರೂ ಸಭೆ, ಕಾರ್ಯಕ್ರಮಗಳಿಗಾಗಿ ಬೆಂಗಳೂರಿಗೆ ಬಂದರೆ ಮೆಜೆಸ್ಟಿಕ್‌ನ ತೀರಾ ಕಡಿಮೆ ದರದ ಹೋಟೆಲ್‌ನಲ್ಲಿ ತಂಗುತ್ತಿದ್ದರು. ಅಲ್ಲಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಚೇರಿಗೆ ನಡೆದೇ ಹೋಗುತ್ತಿದ್ದರು. ಬಸ್, ಆಟೊ ನೆಚ್ಚಿದವರಲ್ಲ. ಅವರ ಜೀವನ ಕ್ರಮವೇ ಅವರ ಆಯುರಾರೋಗ್ಯದ ಗುಟ್ಟಾಗಿತ್ತು. ಮೂರು ತಿಂಗಳ ಹಿಂದೆ ಸಗಟು ಖರೀದಿಯ ಗ್ರಂಥಾಲಯಕ್ಕೆ ಪುಸ್ತಕ ಕೊಡಲು ಬೆಂಗಳೂರಿಗೆ ಬಂದಿದ್ದರು. ಅದೊಂದೇ ಬಾರಿ ಸಹಾಯಕರನ್ನು ಕರೆತಂದಿದ್ದರು. ಸದಾ ಹಸನ್ಮುಖಿ ಆಗಿರುತ್ತಿದ್ದ ಅವರ ಬದುಕಿನ ಶೈಲಿ ಅವರ ನಾಟಕ ರಚನೆ, ನಿರ್ದೇಶನಕ್ಕಿಂತ ದೊಡ್ಡದಾಗಿತ್ತು.

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಮಜ ಮಜ ಮಜಕೂರದ ಏಪ್ರಿಲ್ 18ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಶಬ್ದಗಳಲ್ಲಿ ಸರಸ...

ಇಲ್ಲಿ ಕೊಟ್ಟಿರುವ ಎರಡಕ್ಷರದ ಮೂಲ ಶಬ್ದಕ್ಕೆ ಸ್ವರಾಕ್ಷರದ ಸಂಕೇತ ಬಳಸಿ 10 ಪದಗಳನ್ನು ರಚಿಸಿ

ಉದಾ:

ಕಳ	ನರ	ಕಡ
ಕೀಳು		
ಕಾಳು		
ಕೂಳು		
ಕೇಳು		
ಕೋಳಿ		
ಕಾಳಿ		
ಕೊಳೆ		
ಕಳೆ		
ಕೋಳ		
ಕಳಿ		

ಗಣಿತದಲ್ಲಿ ಗರ್ದಿ ಗಮ್ಮತ್ತು

ಸೀರಿಯಲ್ ಸ್ವಾರಸ್ಯ

ಇಲ್ಲಿ ಕೊಟ್ಟಿರುವ 1ರಿಂದ 25ರವರೆಗಿನ ಕ್ರಮ ಸಂಖ್ಯೆ ಹಾಗೂ ಬೆಸ ಸಂಖ್ಯೆಗಳ ಸರಣಿಯಲ್ಲಿ ಯಾವ ಸಂಖ್ಯೆಯಿಂದ ಯಾವ ಸಂಖ್ಯೆವರೆಗೆ ಕೂಡಿಸಿದರೆ ಮೊತ್ತ 100 ಬರಬಹುದು? ಲೆಕ್ಕ ಹಾಕಿ

ಉದಾ: 1, 2, 3, 4, 5, 6, 7, 8, 9, 10, + 11, 12, 13, 14 (= 50), 15, 16, 17, 18, 19, 20, 21, 22, 23, 24, 25 — 50

1, 2, 3, 4, 5, 6, 7, 8, 9, 10, + 11, 12, 13, 14, 15, 16, 17, 18, 19, 20, 21, 22, 23, 24, 25 — 100

1, 3, 5, 7, 9, 11, 13, + 15, 17, 19, 21, 23, 25 — 100

ಟ್ವೆಂಟಿ – 20 ಮ್ಯಾಚ್

ಇಲ್ಲಿ ಕೊಟ್ಟಿರುವ ಮೂಲ ವಸ್ತುಗಳ ಹೆಸರನ್ನು ಹಾಗೂ ಅವುಗಳ ಸಂಕೇತಾಕ್ಷರಗಳನ್ನು ಹೊಂದಿಸಿರಿ

1.	H	A.	ಸಲ್ಫರ್
2.	Li	B.	ಆಮ್ಲಜನಕ
3.	c	C.	ಕಾರ್ಬನ್
4.	N	D.	ನೈಟ್ರೋಜನ್
5.	O	E.	ಲೀಥಿಯಂ
6.	Na	F.	ಫಾಸ್ಫರಸ್
7.	P	G.	ಜಲಜನಕ
8.	S	H.	ಸೋಡಿಯಂ
9.	K	I.	ಕ್ರೋಮಿಯಂ
10.	Cr	J.	ಪೊಟ್ಯಾಷಿಯಂ
11.	Ca	K.	ಕೋಬಾಲ್ಟ್
12.	Mn	L.	ಕಾಪರ್
13.	Fe	M.	ಐರನ್
14.	Co	N.	ಕ್ಯಾಲ್ಸಿಯಂ
15.	Cu	O.	ಕ್ಲೋರಿನ್
16.	Zn	P.	ಜಿಂಕ್
17.	Ag	Q.	ಅಲ್ಯೂಮಿನಿಯಂ
18.	Cl	R.	ಕ್ಯಾಡ್ಮಿಯಮ್
19.	AI	S.	ಸಿಲ್ವರ್
20.	Cd	T.	ಮ್ಯಾಂಗನೀಸ್

ಡಗ್ಗ ಚಕ್ಕ ಕೇಶ್ರುಷ್ಟು ಕಥೆಯ — ಹಾಕಿ ಮಾಂತ್ರಿಕ

• ಕಲೆ–ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಭಾರತದ ಅಗ್ರಮಾನ್ಯ ಹಾಕಿ ಆಟಗಾರರಾಗಿದ್ದ ಮೇಜರ್ ಧ್ಯಾನ್‌ಚಂದ್ (29.8.1905 – 3.12.1979) ಕ್ರೀಡಾ ಜಗತ್ತಿನ ಮಹಾನ್ ತಾರೆಗಳಲ್ಲಿ ಒಬ್ಬರೆನಿಸಿದ್ದಾರೆ. ಅಲಹಾಬಾದ್ ಅವರ ಹುಟ್ಟೂರು

ಧ್ಯಾನ್‌ಚಂದ್ ಸೇನೆಗೆ ಸೇರಿದ್ದರು. ಆದರೆ ಅವರಿಗೆ ಹಾಕಿ ಮೇಲೆ ಎಲ್ಲಿಲ್ಲದ ಪ್ರೀತಿ. ಅವರ ಅಸಾಧಾರಣ ಸಾಧನೆಯ ನೆನಪಿಗಾಗಿ ಅವರ ಜನ್ಮದಿನವನ್ನು ಕ್ರೀಡಾದಿನ ಎಂದು ಆಚರಿಸಲಾಗುತ್ತದೆ

ಸೇನೆಯಲ್ಲಿ ಕರ್ತವ್ಯದ ಮೇಲೆ ಇದ್ದುದರಿಂದ ಅವರಿಗೆ ಹಗಲಿನಲ್ಲಿ ಹಾಕಿ ಅಭ್ಯಾಸಕ್ಕೆ ಅವಕಾಶ ಸಿಗುತ್ತಿರಲಿಲ್ಲ. ರಾತ್ರಿಯ ವೇಳೆ ಚಂದ್ರನ ಆಗಮನದವರೆಗೆ ಕಾದು ಕಠಿಣ ಅಭ್ಯಾಸವನ್ನು ನಡೆಸುತ್ತಿದ್ದರು

1926ರಿಂದ 1949ರವರೆಗೆ ಅಂತರರಾಷ್ಟ್ರೀಯ ಹಾಕಿ ಟೂರ್ನಿಗಳಲ್ಲಿ ಆಡಿದ ಅವರು 185 ಪಂದ್ಯಗಳಿಂದ 570 ಗೋಲು ಬಾರಿಸಿದರು. ಅವರ ಸಾಧನೆ ಭಾರತದ ಹಾಕಿಯನ್ನು ಉತ್ತುಂಗಕ್ಕೆ ಒಯ್ದಿತು

ಮೂರು ಒಲಿಂಪಿಕ್ ಕೂಟಗಳಲ್ಲಿ ಪಾಲ್ಗೊಂಡ ಅವರು ಮೂರೂ ಕೂಟಗಳಲ್ಲಿ ಭಾರತಕ್ಕೆ ಚಿನ್ನದ ಪದಕಗಳನ್ನು ಹೊತ್ತು ತಂದರು. ಧ್ಯಾನ್‌ಚಂದ್ ಅವರಿಗೆ ಪದ್ಮ ಭೂಷಣ ಪುರಸ್ಕಾರ ಒಲಿದು ಬಂತು



ಧ್ಯಾನ್‌ಚಂದ್ ಅವರ ಕರ್ಮಭೂಮಿಯಾದ ಝಾನ್ಸಿ ಸೇರಿದಂತೆ ಹಲವೆಡೆ ಅವರ ಪ್ರತಿಮೆಗಳು ಸ್ಥಾಪನೆಯಾದವು. ವಿದೇಶಿ ನೆಲದ ವಿಯೆನ್ನಾದಲ್ಲೂ ಅವರ ಪ್ರತಿಮೆ ಇತ್ತು ಎಂಬ ಪ್ರತೀತಿ ಇದೆ

ಪುಟಾಣಿ ಪದಬಂಧ

ಇಲ್ಲಿ ಕೊಟ್ಟಿರುವ ಅನುಸ್ವಾರದ ಆಚೀಚೆ ಸುಳಿವು ಆಧರಿಸಿ, ಅಕ್ಷರ ಪಟ್ಟಿಯಿಂದ ಎರಡಕ್ಷರ ತುಂಬಿ ಪದ ರಚಿಸಿ.

ಪದ ಪಟ್ಟಿ

ತ ಇ ಡಿ ಗು ಪ

ರ ಬ ತು ಡಿ ಫ

	ಂ		ಒಂದು ತಾಲ್ಲೂಕಿನ ಹೆಸರು
	ಂ		ಚಳಿ
	ಂ		ಬಹಳ
	ಂ		ರಗಳೆ
	ಂ		ವಸತಿ ಮಾಡು

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ

1. ರಂಟೆ, 2. ಶುಂಠಿ, 3. ಹಂಗು, 4. ಸೊಂಟ, 5. ಗಂಧ

ಪದಶೋಧ:

ಮೂಕಜ್ಜಿಯ ಕನಸುಗಳು

ಟ್ವೆಂಟಿ–20 ಮ್ಯಾಚ್

1- C, 2- E, 3- D, 4-I, 5-H, 6-G, 7-A, 8-F, 9-T, 10-B, 11-J, 12-K, 13-N, 14-L, 15- M, 16-O, 17-R, 18-S, 19-Q, 20-P

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಮೂರು ಪುಟಾಣಿಗಳು

ರಚನಾ ಕೆ.ಎಸ್., ಅರೆಯೂರು, (ಕೊಡಗು)

ಎಂ.ಪಿ. ರೋಹನ್ ಕುಮಾರ್, ಚನ್ನಗಿರಿ

ಉದಯ ಡೊಳ್ಳಿನ, ಕೊಪ್ಪಳ

ರಾಯಲ್ ಚಾಲೆಂಜರ್ಸ್ ಬೆಂಗಳೂರು–ಚೆನ್ನೈ ಸೂಪರ್ ಕಿಂಗ್ಸ್ ಮುಖಾಮುಖಿ ಇಂದು

ವಿರಾಟ್ ಓಟಕ್ಕೆ ಧೋನಿ ಸವಾಲು

ಮುಂಬೈ (ಪಿಟಿಐ): ಹಿಂದಿನ ಯಾವುದೇ ಐಪಿಎಲ್ ಟೂರ್ನಿಯಲ್ಲಿಯೂ ಮಾಡದಂತಹ ದಾಖಲೆಯನ್ನು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ಈ ಬಾರಿ ಮಾಡಿದೆ.

ಆರಂಭದ ನಾಲ್ಕು ಪಂದ್ಯಗಳನ್ನು ಜಯಿಸಿರುವ ತಂಡದ ಸಾಧನೆಯಿಂದಾಗಿ ಆರ್‌ಸಿಬಿಯ ಅಭಿಮಾನಿಗಳಲ್ಲಿ ‘ಕಪ್ ಜಯ‘ದ ಕನಸು ಗರಿಗೆದರಿದೆ. ಆದರೆ ಇದೀಗ ವಿರಾಟ್ ಕೊಹ್ಲಿ ಬಳಗದ ಮುಂದೆ ‘ಕ್ಯಾಪ್ಟನ್ ಕೂಲ್‘ ಮಹೇಂದ್ರಸಿಂಗ್ ಧೋನಿಯ ಚೆನ್ನೈ ಸೂಪರ್ ಕಿಂಗ್ಸ್ ಸವಾಲು ಎದುರಾಗಿದೆ. ಭಾನುವಾರ ವಾಂಖೆಡೆ ಕ್ರೀಡಾಂಗಣದಲ್ಲಿ ದಕ್ಷಿಣ ಭಾರತದ ಈ ಎರಡೂ ಮದ ಗಜಗಳು ಮುಖಾಮುಖಿಯಾಗಲಿವೆ.

ತನ್ನ ಮೊದಲ ಪಂದ್ಯದಲ್ಲಿ ಸೋತಿದ್ದ ಚೆನ್ನೈ ತಂಡವು ನಂತರ ಜಯದ ‘ಹ್ಯಾಟ್ರಿಕ್‘ ಸಾಧಿಸಿದೆ. ಭರ್ಜರಿಯಾಗಿ ಪುಟಿದೆದ್ದು ನಿಂತಿದೆ. ಹೋದ ವರ್ಷ ಪ್ಲೇ ಆಫ್ ತಲುಪುವಲ್ಲಿಯೂ ವಿಫಲವಾಗಿದ್ದ ತಂಡವು ಈ ಸಲ ಪ್ರಶಸ್ತಿ ಛಲದ ಆಟವಾಡುತ್ತಿದೆ. ಚೆನ್ನೈನ ಗೆಲುವುಗಳಲ್ಲಿ ಮಧ್ಯಮವೇಗಿ ದೀಪಕ್ ಚಾಹರ್ ಅವರ ಪಾತ್ರವೇ ದೊಡ್ಡದು. ಆರಂಭಿಕ ಜೋಡಿ ಋತುರಾಜ್ ಗಾಯಕವಾಡ್ ಮತ್ತು

ಮಹೇಂದ್ರಸಿಂಗ್ ಧೋನಿ ಮತ್ತು ವಿರಾಟ್ ಕೊಹ್ಲಿ

ಫಫ್ ಡುಪ್ಲೆಸಿ ಲಯಕ್ಕೆ ಮರಳಿರುವುದು ತಂಡದ ಬಲ ಹೆಚ್ಚಿಸಿದೆ.

ಆರ್‌ಸಿಬಿ ಕೂಡ ಕಮ್ಮಿಯೇನಿಲ್ಲ. ರಾಜಸ್ಥಾನ್ ರಾಯಲ್ಸ್ ಎದುರಿನ ಪಂದ್ಯದಲ್ಲಿ ಮುರಿಯದ ಮೊದಲ ವಿಕೆಟ್ ಜೊತೆಯಾಟದಲ್ಲಿ ವಿರಾಟ್ ಕೊಹ್ಲಿ ಮತ್ತು ದೇವದತ್ತ ಪಡಿಕ್ಕಲ್ 181 ರನ್ ಗಳಿಸಿದ್ದರು. ತಂಡವು 10 ವಿಕೆಟ್‌ಗಳಿಂದ ಗೆದ್ದಿತ್ತು. ದೇವದತ್ತ ಐಪಿಎಲ್‌ನಲ್ಲಿ ತಮ್ಮ ಚೊಚ್ಚಲ ಶತಕ ದಾಖಲಿಸಿದ್ದರು. ಅದಕ್ಕಿಂತ ಮುಂಚಿನ ಮೂರು ಪಂದ್ಯಗಳಲ್ಲಿ ಎಬಿ ಡಿವಿಲಿಯರ್ಸ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅವರ ಬ್ಯಾಟಿಂಗ್ ರಂಗೇರಿತ್ತು. ಈ ನಾಲ್ವರನ್ನು ಕಟ್ಟಿಹಾಕುವುದೇ ಚೆನ್ನೈನ ದೀಪಕ್, ಲುಂಗಿ ಗಿಡಿ, ರವೀಂದ್ರ ಜಡೇಜ ಮತ್ತು ಸ್ಯಾಮ್ ಕರನ್ ಮುಂದಿರುವ ಪ್ರಮುಖ ಸವಾಲು.

ಆರ್‌ಸಿಬಿ ಬೌಲಿಂಗ್ ಕೂಡ ಬಲಿಷ್ಠವಾಗಿದೆ. ಪರ್ಪಲ್ ಕ್ಯಾಪ್ ಪಡೆದಿರುವ ಹರ್ಷಲ್ ಪಟೇಲ್, ಮೊಹಮ್ಮದ್ ಸಿರಾಜ್, ‘ಲಂಬೂಜಿ‘ ಕೈಲ್ ಜೆಮಿಸನ್ ಮತ್ತು ಸ್ಪಿನ್ನರ್ ಯಜುವೇಂದ್ರ ಚಾಹಲ್ ಅವರನ್ನು ಎದುರಿಸುವಲ್ಲಿ ಚೆನ್ನೈ ಬ್ಯಾಟಿಂಗ್ ಪಡೆ ಸಫಲವಾದರೆ ಪಂದ್ಯ ರೋಚಕವಾಗಬಹುದು. ಟಾಸ್ ಗೆದ್ದ ನಾಯಕ ತೆಗೆದುಕೊಳ್ಳುವ ನಿರ್ಧಾರವೂ ಪಂದ್ಯದ ಫಲಿತಾಂಶಕ್ಕೆ ದಿಕ್ಸೂಚಿಯೂ ಆಗಬಲ್ಲದು. ಬ್ಯಾಟ್ಸ್‌ಮನ್‌ಗಳಿಗೆ ನೆರವಾಗುವ ಪಿಚ್‌ನಲ್ಲಿ ರನ್‌ಗಳ ಹೊಳೆ ಹರಿದರೂ ಅಚ್ಚರಿಯೇನಿಲ್ಲ.

ಉಭಯ ತಂಡಗಳ ನಾಯಕರ ಸಾಧನೆ

ವಿರಾಟ್ ಕೊಹ್ಲಿ– ಬೆಂಗಳೂರು

ಪಂದ್ಯ	ರನ್	ಗರಿಷ್ಠ	ಶತಕ	ಅರ್ಧಶತಕ	ಸ್ಟ್ರೈಕ್ ರೇಟ್
196	6021	113	5	40	130.69

ಮಹೇಂದ್ರ ಸಿಂಗ್ ಧೋನಿ–ಚೆನ್ನೈ

ಪಂದ್ಯ	ರನ್	ಗರಿಷ್ಠ	ಶತಕ	ಅರ್ಧಶತಕ	ಸ್ಟ್ರೈಕ್ ರೇಟ್
208	4667	84*	-	23	136.70

ಆರ್‌ಸಿಬಿ–ಸಿಎಸ್‌ಕೆ ಅಂಕಿ ಅಂಶ

ಮುಖಾಮುಖಿ ಪಂದ್ಯಗಳು: 26

ಚೆನ್ನೈ ಜಯ	16	ರದ್ದು
ಬೆಂಗಳೂರು ಜಯ	9	1

ಪಂದ್ಯ ಆರಂಭ: ಮಧ್ಯಾಹ್ನ 3.30

ಸ್ಥಳ: ವಾಂಖೆಡೆ ಕ್ರೀಡಾಂಗಣ, ಮುಂಬೈ

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಆರೆಂಜ್ ಕ್ಯಾಪ್
(ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	231
ಕೆ.ಎಲ್.ರಾಹುಲ್	ಪಂಜಾಬ್	221
ರೋಹಿತ್	ಮುಂಬೈ	201

ಪರ್ಪಲ್ ಕ್ಯಾಪ್
(ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಬೆಂಗಳೂರು	12
ರಾಹುಲ್ ಚಾಹರ್	ಮುಂಬೈ	9
ಕ್ರಿಸ್ ಮೊರಿಸ್	ರಾಜಸ್ಥಾನ್	9

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ರಾಯಲ್ ಚಾಲೆಂಜರ್ಸ್	4	4	-	-	-	8
ಚೆನ್ನೈ ಸೂಪರ್‌ಕಿಂಗ್ಸ್	4	3	1	-	-	6
ಡೆಲ್ಲಿ ಕ್ಯಾಪಿಟಲ್ಸ್	4	3	1	-	-	6
ಮುಂಬೈ ಇಂಡಿಯನ್ಸ್	5	2	3	-	-	4
ಪಂಜಾಬ್ ಕಿಂಗ್ಸ್	5	2	3	-	-	4
ರಾಜಸ್ತಾನ್ ರಾಯಲ್ಸ್	5	2	3	-	-	4
ಸನ್‌ರೈಸರ್ಸ್	4	1	3	-	-	2
ನೈಟ್ ರೈಡರ್ಸ್	5	1	4	-	-	2

* ಶನಿವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ https://www.prajavani.net/cricket

ಪಂತ್–ರಶೀದ್ ಹಣಾಹಣಿ ನಿರೀಕ್ಷೆ

ಚೆನ್ನೈ (ಪಿಟಿಐ): ಎಡಗೈ ಬ್ಯಾಟ್ಸ್‌ಮನ್ ರಿಷಭ್ ಪಂತ್ ಮತ್ತು ಲೆಗ್ ಸ್ಪಿನ್ನರ್ ರಶೀದ್ ಖಾನ್ ನಡುವಿನ ಹೋರಾಟ ಭಾನುವಾರ ನಡೆಯಲಿರುವ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ಸನ್‌ರೈಸರ್ಸ್ ಹೈದರಾಬಾದ್ ಮುಖಾಮುಖಿಯ ಪ್ರಮುಖ ಆಕರ್ಷಣೆಯಾಗಲಿದೆ.

ಎಂ.ಎ.ಚಿದಂಬರಂ ಕ್ರೀಡಾಂಗಣದ ಪಿಚ್ ಬಗ್ಗೆ ಈಗಾಗಲೇ ಟೀಕೆಗಳು ಕೇಳಿಬಂದಿದ್ದು ಈ ಪಂದ್ಯದಲ್ಲಿ ಬ್ಯಾಟ್ಸ್‌ಮನ್‌ಗಳು ಯಾವ ತಂತ್ರಗಳನ್ನು ಅನುಸರಿಸುತ್ತಾರೆ ಎಂಬುದು ಕುತೂಹಲದ ವಿಷಯ. ಇದು ಇಲ್ಲಿ ನಡೆಯಲಿರುವ 10ನೇ ಮತ್ತು ಕೊನೆಯ ಪಂದ್ಯವಾಗಲಿದೆ. ಮುಂಬೈಯಲ್ಲೂ ಭಾನುವಾರ ಕೊನೆಯ ಪಂದ್ಯ. ಸೋಮವಾರದಿಂದ ಅಹಮದಾಬಾದ್ ಮತ್ತು ದೆಹಲಿಯಲ್ಲಿ ಹಣಾಹಣಿ ನಡೆಯಲಿದೆ.

ರಿಷಭ್ ಪಂತ್ –ಪಿಟಿಐ ಚಿತ್ರ

ಮುಖಾಮುಖಿ ಪಂದ್ಯಗಳು: 18

ಹೈದರಾಬಾದ್ ಜಯ	11
ಡೆಲ್ಲಿ ಗೆಲುವು	7

ಆರಂಭ: ರಾತ್ರಿ 7.30

ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಚೆನ್ನೈಯಲ್ಲಿ ಈ ವರೆಗೆ ನಡೆದ ಒಂಬತ್ತು ಪಂದ್ಯಗಳ ಪೈಕಿ ಕೆಲವೇ ಕೆಲವು ಪಂದ್ಯಗಳಲ್ಲಿ ಮಾತ್ರ 170ಕ್ಕೂ ಅಧಿಕ ರನ್ ದಾಖಲಾಗಿದೆ. ಹೀಗಾಗಿ ಬ್ಯಾಟ್ಸ್‌ಮನ್‌ಗಳಿಗೆ ಇಲ್ಲಿನ ಪಿಚ್ ಸವಾಲಾಗಿದೆ.

ಡೆಲ್ಲಿ ಆರಂಭಿಕ ಜೋಡಿ ಪೈಕಿ ಶಿಖರ್ ಧವನ್ ಉತ್ತಮ ಫಾರ್ಮ್‌ನಲ್ಲಿದ್ದು ಪೃಥ್ವಿ ಶಾ ಕೆಲವು ಪಂದ್ಯಗಳಲ್ಲಿ ವೈಫಲ್ಯ ಕಂಡಿದ್ದಾರೆ. ‘ಹ್ಯಾಟ್ರಿಕ್‘ ಸೋಲಿನ ನಂತರ ಗೆಲುವಿನ ಲಯಕ್ಕೆ ಮರಳಿರುವ ಹೈದರಾಬಾದ್ ತಂಡಕ್ಕೆ ಕೇನ್ ವಿಲಿಯಮ್ಸನ್ ಮರಳಿ ರುವುದು ಬಲ ತುಂಬಿದೆ. ಮನೀಷ್ ಪಾಂಡೆ, ಡೇವಿಡ್ ವಾರ್ನರ್ ಮತ್ತು ಜಾನಿ ಬೆಸ್ಟೊ ಅವರ ಬಲವೂ ತಂಡಕ್ಕೆ ಇದೆ.

ರವಿಚಂದ್ರನ್ ಅಶ್ವಿನ್ ನಿರೀಕ್ಷೆಗೆ ತಕ್ಕ ಸಾಮರ್ಥ್ಯ ತೋರದೇ ಇರುವುದು ಡೆಲ್ಲಿ ಕ್ಯಾಪಿಟಲ್ಸ್‌ನ ಚಿಂತೆಗೆ ಕಾರಣವಾಗಿದೆ. ಕ್ರಿಸ್ ವೋಕ್ಸ್, ಕಗಿಸೊ ರಬಾಡ, ಆವೇಶ್ ಖಾನ್ ಮತ್ತು ಲಲಿತ್ ಯಾದವ್ ಮೇಲೆ ಭರವಸೆ ಇರಿಸಿಕೊಂಡಿದೆ.

ಕೆಕೆಆರ್ ಮಣಿಸಿದ ಸಂಜು ಬಳಗ

ಮುಂಬೈ (ಪಿಟಿಐ): ಬೌಲಿಂಗ್‌ನಲ್ಲಿ ಕ್ರಿಸ್ ಮೊರಿಸ್ ಮತ್ತು ಬ್ಯಾಟಿಂಗ್‌ನಲ್ಲಿ ನಾಯಕ ಸಂಜು ಸ್ಯಾಮ್ಸನ್ ಮಿಂಚಿದರು. ಇವರಿಬ್ಬರ ಉತ್ತಮ ಆಟದ ನೆರವಿನಿಂದ ರಾಜಸ್ಥಾನ್ ರಾಯಲ್ಸ್ ತಂಡ ಸುಲಭ ಜಯ ಗಳಿಸಿತು.

ವಾಂಖೆಡೆ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡ ರಾಜಸ್ಥಾನ್ ರಾಯಲ್ಸ್‌ಗೆ ಆರು ವಿಕೆಟ್‌ಗಳಿಂದ ಮಣಿಯಿತು. ಈ ಮೂಲಕ ಐದು ಪಂದ್ಯಗಳಲ್ಲಿ ನಾಲ್ಕನ್ನು ಸೋತು ಪಾಯಿಂಟ್ ಪಟ್ಟಿಯಲ್ಲಿ ಕೊನೆಯ ಸ್ಥಾನಕ್ಕೆ ಕುಸಿಯಿತು.

ಕೋಲ್ಕತ್ತ ಇನಿಂಗ್ಸ್‌ನ ಕೊನೆಯ ಹಂತದ ಓವರ್‌ಗಳಲ್ಲಿ ಮಿಂಚಿದ ವೇಗಿ ಕ್ರಿಸ್ ಮೊರಿಸ್ ತಂಡಕ್ಕೆ ಪೆಟ್ಟು ನೀಡಿದರು. ತಂಡಕ್ಕೆ 133 ರನ್ ಗಳಿಸಲಷ್ಟೆ ಸಾಧ್ಯವಾಯಿತು. ಗುರಿ ಬೆನ್ನತ್ತಿದ ರಾಜಸ್ಥಾನ ಇನ್ನೂ ಏಳು ಎಸೆತ ಉಳಿದಿರುವಾಗಲೇ ಜಯದ ಗುರಿ ಮುಟ್ಟಿತು.

ಟಾಸ್ ಗೆದ್ದ ರಾಜಸ್ಥಾನ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಕೋಲ್ಕತ್ತದ ಆರಂಭಿಕ ಜೋಡಿ ನಿತೀಶ್ ರಾಣಾ ಮತ್ತು ಶುಭಮನ್ ಗಿಲ್ ಮೊದಲ ವಿಕೆಟ್‌ಗೆ 24 ರನ್ ಸೇರಿಸಿದರು.

ಆದರೆ ಆರನೇ ಓವರ್‌ನಲ್ಲಿ ಗಿಲ್ ರನೌಟ್ ಆಗುವುದರೊಂದಿಗೆ ಜೊತೆಯಾಟ ಮುರಿಯಿತು. ರಾಹುಲ್ ತ್ರಿಪಾಠಿ (36 ರನ್) ಮುಸ್ತಫಿಜುರ್ ರೆಹಮಾನ್ ಹಾಗೂ ನಿತೀಶ್ ರಾಣಾ (22 ರನ್) ಚೇತನ್ ಸಕಾರಿಯಾ ಅವರಿಗೆ ವಿಕೆಟ್ ಒಪ್ಪಿಸಿದರು.

ಸುನಿಲ್ ನಾರಾಯಣ್ ಕೇವಲ ಆರು ರನ್ ಗಳಿಸಿ ಜಯದೇವ್ ಉನದ್ಕತ್ ಬೌಲಿಂಗ್‌ನಲ್ಲಿ ಔಟಾದರು. ಮಧ್ಯಮ ಕ್ರಮಾಂಕದ ಬ್ಯಾಟ್ಸ್‌ಮನ್‌ಗಳನ್ನು ಮೊರಿಸ್ ನಿಯಂತ್ರಿಸಿದರು. ಇದರಿಂದಾಗಿ ದೊಡ್ಡ ಮೊತ್ತ ಪೇರಿಸುವ ಗುರಿ ಈಡೇರಲಿಲ್ಲ. ಕೆಕೆಆರ್ ನಾಯಕ ಏಯಾನ್ ಮಾರ್ಗನ್ ಅವರು 11ನೇ ಓವರ್‌ನಲ್ಲಿ ರನ್‌ಔಟ್ ಆಗಲೂ ಮೊರಿಸ್ ಕಾರಣರಾಗಿದ್ದರು.

ಸ್ಕೋರ್ ಕಾರ್ಡ್

ಕೋಲ್ಕತ್ತ ನೈಟ್ ರೈಡರ್ಸ್ 9ಕ್ಕೆ 133 (20 ಓವರ್‌ಗಳಲ್ಲಿ)

ರಾಣಾ ಸಿ ಸ್ಯಾಮ್ಸನ್ ಬಿ ಸಕಾರಿಯಾ 22 (25ಎ, 4X1, 6X1)
ಗಿಲ್ ರನೌಟ್ (ಬಟ್ಲರ್) 11 (19ಎ, 4X1)
ತ್ರಿಪಾಠಿ ಸಿ ಪರಾಗ್ ಬಿ ಮುಸ್ತಫಿಜುರ್ 36 (26ಎ, 4X1, 6X2)
ಸುನಿಲ್ ಸಿ ಜೈಸ್ವಾಲ್ ಬಿ ಉನದ್ಕತ್ 6 (7ಎ, 4X1)
ಮಾರ್ಗನ್ ರನೌಟ್ (ಮೊರಿಸ್) 0
ಕಾರ್ತಿಕ್ ಸಿ ಸಕಾರಿಯಾ ಬಿ ಮೊರಿಸ್ 25 (24ಎ, 4X4)
ರಸೆಲ್ ಸಿ ಮಿಲ್ಲರ್ ಬಿ ಮೊರಿಸ್ 9 (7ಎ, 6X1)
ಕಮಿನ್ಸ್ ಸಿ ಪರಾಗ್ ಬಿ ಮೊರಿಸ್ 10 (6ಎ, 6X1)
ಮಾವಿ ಬಿ ಮೊರಿಸ್ 5 (7ಎ, 4X1)
ಪ್ರಸಿದ್ಧ ಔಟಾಗದೆ 0
ಇತರೆ (ಬೈ 2, ಲೆಗ್‌ಬೈ 1, ನೋಬಾಲ್ 1, ವೈಡ್ 5) 9
ವಿಕೆಟ್ ಪತನ: 1–24 (ಶುಭಮನ್ ಗಿಲ್, 5.4), 2–45 (ನಿತೀಶ್ ರಾಣಾ, 8.1), 3–54 (ಸುನಿಲ್ ನಾರಾಯಣ್, 9.5), 4–61 (ಏಯಾನ್ ಮಾರ್ಗನ್, 10.2), 5–94 (ರಾಹುಲ್ ತ್ರಿಪಾಠಿ, 15.2), 6–117 (ಆ್ಯಂಡ್ರೆ ರಸೆಲ್, 17.4), 7–118 (ದಿನೇಶ್ ಕಾರ್ತಿಕ್, 17.6) 8–133 (ಪ್ಯಾಟ್ ಕಮಿನ್ಸ್, 19.2), 9–133 (ಶಿವಂ ಮಾವಿ, 19.6)
ಬೌಲಿಂಗ್: ಜಯದೇವ್ ಉನದ್ಕತ್ 4–0–25–1, ಚೇತನ್ ಸಕಾರಿಯಾ 4–0–31–1, ಮುಸ್ತಫಿಜುರ್ ರಹಮಾನ್ 4–0–22–1, ಕ್ರಿಸ್ ಮೊರಿಸ್ 4–0–23–4, ರಾಹುಲ್ ತೆವಾಟಿಯಾ 3–0–24–0, ಶಿವಂ ದುಬೆ 1–0–5–0

ರಾಜಸ್ಥಾನ್ ರಾಯಲ್ಸ್ 4ಕ್ಕೆ 134 (18.5 ಓವರ್‌ಗಳಲ್ಲಿ)

ಬಟ್ಲರ್ ಎಲ್‌ಬಿಡಬ್ಲ್ಯು ಬಿ ವರುಣ್ 5 (7ಎ, 4X1)
ಯಶಸ್ವಿ ಸಿ ನಾಗರಕೋಟಿ (ಬದಲಿ) ಬಿ ಮಾವಿ 22 (17ಎ, 4X5)
ಸ್ಯಾಮ್ಸನ್ ಔಟಾಗದೆ 42 (41ಎ, 4X2, 6X1)
ದುಬೆ ಸಿ ಪ್ರಸಿದ್ಧ ಬಿ ವರುಣ್ 22 (18ಎ, 4X2, 6X1)
ತೆವಾಟಿಯಾ ಸಿ ನಾಗರಕೋಟಿ (ಬದಲಿ) ಬಿ ಪ್ರಸಿದ್ಧ 5 (8ಎ)
ಮಿಲ್ಲರ್ ಔಟಾಗದೆ 24 (23ಎ, 4X3)
ಇತರೆ (ಲೆಗ್‌ಬೈ 7, ನೋಬಾಲ್ 1, ವೈಡ್ 6) 14
ವಿಕೆಟ್ ಪತನ: 1–21 (ಜೋಸ್ ಬಟ್ಲರ್, 3.2), 2–40 (ಯಶಸ್ವಿ ಜೈಸ್ವಾಲ್, 4.5), 3–85 (ಶಿವಂ ದುಬೆ, 10.5), 4–100 (ರಾಹುಲ್ ತೆವಾಟಿಯಾ, 13.4)
ಬೌಲಿಂಗ್: ಶಿವಂ ಮಾವಿ 4–0–19–1, ಪ್ಯಾಟ್ ಕಮಿನ್ಸ್ 3.5–0–36–0, ವರುಣ್ ಚಕ್ರವರ್ತಿ 4–0–32–2, ಸುನಿಲ್ ನಾರಾಯಣ್ 4–0–20–0, ಪ್ರಸಿದ್ಧ ಕೃಷ್ಣ 3–0–20–1

ಫಲಿತಾಂಶ: ರಾಜಸ್ಥಾನ್ ರಾಯಲ್ಸ್‌ಗೆ 6 ವಿಕೆಟ್‌ಗಳ ಜಯ

ವೇದಾ ತಾಯಿ ಚೆಲುವಾಂಬ ನಿಧನ

ಕಡೂರು: ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ವೇದಾ ಕೃಷ್ಣಮೂರ್ತಿ ಅವರ ತಾಯಿ ಚೆಲುವಾಂಬ ದೇವಿ (67) ಶನಿವಾರ ನಿಧನರಾದರು. ಇದೇ 20ರಂದು ಅವರಿಗೆ ಕೋವಿಡ್ ಧೃಡಪಟ್ಟಿತ್ತು. ಮನೆಯಲ್ಲಿಯೇ ಕ್ವಾರೆಂಟೈನ್ ಆಗಿದ್ದರು. ಅವರಿಗೆ ಪತಿ ಎಸ್.ಜಿ.ಕೆ.ಮೂರ್ತಿ, ಇಬ್ಬರು ಪುತ್ರಿಯರು, ಒಬ್ಬ ಪುತ್ರ ಇದ್ದಾರೆ.

ಚೆಲುವಾಂಬ

ಶುಕ್ರವಾರ ರಾತ್ರಿ ಆರೋಗ್ಯದಲ್ಲಿ ಏರುಪೇರಾಗಿದ್ದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೆ ಮೃತಪಟ್ಟರು. ಕೋವಿಡ್ ಮುಂಜಾಗ್ರತೆಯೊಂದಿಗೆ ತಾಲ್ಲೂಕು ಆಡಳಿತದ ವತಿಯಿಂದ ಅವರ ಜಮೀನಿನಲ್ಲಿ ಅಂತ್ಯಕ್ರಿಯೆ ನಡೆಯಿತು.

ವಿಶ್ವಕಪ್ ನಂತರ ಕ್ರಿಕೆಟ್‌ಗೆ ಮಿಥಾಲಿ ರಾಜ್ ವಿದಾಯ?

ನವದೆಹಲಿ: ಎರಡು ದಶಕಗಳಿಂದ ಮಹಿಳೆಯರ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಅಪ್ರತಿಮ ಸಾಧನೆ ಮಾಡುತ್ತಿರುವ ಮಿಥಾಲಿ ರಾಜ್ ಅವರಿಗೆ ಮುಂದಿನ ವರ್ಷದ ಏಕದಿನ ವಿಶ್ವಕಪ್ ಕೊನೆಯ ಟೂರ್ನಿಯಾಗಲಿದೆಯೇ..? ಹೌದು ಎಂಬುದನ್ನು ಶನಿವಾರ ಅವರೇ ಹೇಳಿಕೊಂಡಿದ್ದಾರೆ.

ನ್ಯೂಜಿಲೆಂಡ್‌ನಲ್ಲಿ ನಡೆಯಲಿರುವ ವಿಶ್ವಕಪ್ ತಮ್ಮ ‘ಹಂಸಗೀತೆ’(ವಿದಾಯ ಘೋಷಿಸುವ ಕಾರ್ಯಕ್ರಮ) ಆಗಲಿದೆ ಎಂದು ಅವರು ತಿಳಿಸಿದ್ದಾರೆ. ಮಿಥಾಲಿ ಅವರಿಗೆ ಈಗ 38 ವರ್ಷ. 23 ವರ್ಷಗಳಿಂದ ಭಾರತ ಕ್ರಿಕೆಟ್ ತಂಡದಲ್ಲಿದ್ದಾರೆ.

ಬೊರಿಯಾ ಮಜುಂದಾರ್ ಮತ್ತು ಗೌತಮ್ ಭಟ್ಟಾಚಾರ್ಯ ಬರೆದಿರುವ, ಹಾರ್ಪರ್ ಕೊಲಿನ್ಸ್ ಸಂಸ್ಥೆ ಪ್ರಕಟಿಸಿರುವ ‘1971: ದಿ ಬಿಗಿನಿಂಗ್ ಆಫ್ ಇಂಡಿಯಾಸ್ ಕ್ರಿಕೆಟಿಂಗ್ ಗ್ರೇಟ್‌ನೆಸ್’ ಕೃತಿಯ ವರ್ಚುವಲ್ ಬಿಡುಗಡೆ ಸಮಾರಂಭ ಶನಿವಾರ ನಡೆಯಿತು. ನಂತರ ಸಂವಾದದಲ್ಲಿ ಪಾಲ್ಗೊಂಡ ಮಿಥಾಲಿ ನ್ಯೂಜಿಲೆಂಡ್ ಪಿಚ್‌ನಲ್ಲಿ ಯಶಸ್ಸು ಕಾಣಬೇಕಾದರೆ ಭಾರತ ತಂಡಕ್ಕೆ ಉತ್ತಮ ವೇಗದ ಬೌಲರ್‌ಗಳ ಅಗತ್ಯವಿದೆ ಎಂದರು.

ಮಹಿಳಾ ಏಕದಿನ ಕ್ರಿಕೆಟ್‌ನಲ್ಲಿ ಏಳು ಸಾವಿರ ರನ್ ಗಳಿಸಿದ ಏಕೈಕ ಆಟಗಾರ್ತಿಯಾಗಿರುವ ಅವರು ಕೋವಿಡ್–19ರ ಸಂದರ್ಭದಲ್ಲಿ ಮುಂದಿನ ವಿಶ್ವಕಪ್ ಹಿನ್ನೆಲೆಯಲ್ಲಿ ತಮ್ಮನ್ನು ತಾವು ಮಾನಸಿಕವಾಗಿ ಬಲಗೊಳಿಸಿದ್ದರ ಬಗ್ಗೆ ವಿವರಿಸಿದರು.

ಜಮಖಂಡಿಯಲ್ಲಿ ಮೈಲ್ ಕೂಲಿಯಿಂದ ಅಂತರರಾಷ್ಟ್ರೀಯ ಸೈಕ್ಲಿಸ್ಟ್, ಕೋಚ್ ಆದ ಕಥೆ

ಸೈಕ್ಲಿಂಗ್ ಕ್ರೀಡೆಯ ‘ಮೈಲುಗಲ್ಲು’ ಚಂದ್ರು ಕುರಣಿ

• ಗಿರೀಶ ದೊಡ್ಡಮನಿ

ಬೆಂಗಳೂರು: ಮೈಲ್ ಕೂಲಿಯಾಗಿ ಕೆಲಸ ಮಾಡುತ್ತ ತಾವೇ ಡಾಂಬರು ಹಾಕಿದ್ದ ರಸ್ತೆಗಳಿಗೇ ಚಿನ್ನದ ಹೊಳಪು ತುಂಬಿದವರು ಚಂದ್ರಪ್ಪ ಮಲ್ಲಪ್ಪ ಕುರಣಿ.

ತಮ್ಮ 18-20ನೇ ವಯಸ್ಸಿನಲ್ಲಿ ವಿಜಯಪುರ, ಜಮಖಂಡಿ ರಸ್ತೆಗಳಿಗೆ ಡಾಂಬರು ಹಾಕುವ ಕಾಮಗಾರಿಗಳಲ್ಲಿ ಮೈಲ್ ಕೂಲಿಯಾಗಿ ದುಡಿದ ಚಂದ್ರಪ್ಪ, ಅಂತರರಾಷ್ಟ್ರೀಯ ಸೈಕ್ಲಿಸ್ಟ್ ಆಗಿ ಬೆಳೆದರು. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಸೈಕ್ಲಿಂಗ್ ಕೋಚ್ ಆಗಿ ನೂರಾರು ಸೈಕ್ಲಿಸ್ಟ್‌ಗಳನ್ನು ಸಿದ್ಧಗೊಳಿಸಿದರು. ಅವರ ತರಬೇತಿಯಲ್ಲಿ ಸಿದ್ಧರಾದವರು ಪದಕಗಳನ್ನು ಗೆದ್ದು ಕರ್ನಾಟಕದ ಹೊಳಪು ಹೆಚ್ಚಿಸಿದರು. ಎಲ್ಲಕ್ಕಿಂತ ಹೆಚ್ಚಾಗಿ; ವಿಜಯಪುರವೆಂದರೆ ಸೈಕ್ಲಿಂಗ್ ಕಣಜವೆಂಬ ಖ್ಯಾತಿ ಬರಲು ಚಂದ್ರು ಕುರಣಿ ಶ್ರಮವೇ ಪ್ರಮುಖವಾಗಿತ್ತು. ಯಾವ ಸೌಲಭ್ಯಗಳೂ ಇಲ್ಲದ ಕಾಲದಲ್ಲಿ ಅಂತರರಾಷ್ಟ್ರೀಯ ಮಟ್ಟಕ್ಕೆ ಬೆಳೆದ ಚಂದ್ರು ಅವರದ್ದು ಸ್ಫೂರ್ತಿಯ ಕಥೆ.

‘ಜಮಖಂಡಿ ತಾಲ್ಲೂಕಿನ ಕುಂಬಾರಹಳ್ಳ ನಮ್ಮ ಊರು. ತಂದೆ ಮಲ್ಲಪ್ಪನವರು ಕೃಷಿ ಕೂಲಿಯಾಗಿದ್ದರು. ನಾವು ಆರು ಜನ ಗಂಡುಮಕ್ಕಳು. ದೊಡ್ಡ ಸಂಸಾರ. ಚಂದ್ರಣ್ಣ ಮೂರನೇಯವರು. ದೈಹಿಕವಾಗಿ ಬಲಭೀಮನಂತಿದ್ದರು. ನೀರಾವರಿ ಇಲ್ಲದ ಜಮೀನಿನಲ್ಲಿ ಕೃಷಿಯಿಂದ ಸಿಗುತ್ತಿದ್ದ ಆದಾಯ ಕುಟುಂಬಕ್ಕೆ ಸಾಲುತ್ತಿರಲಿಲ್ಲ. ಅದಕ್ಕಾಗಿ ಅಪ್ಪ, ಲೋಕೋಪಯೋಗಿ ಇಲಾಖೆಯ ರಸ್ತೆ ಕಾಮಗಾರಿಗಳಲ್ಲಿ ದುಡಿಯಲು ಹೋಗುತ್ತಿದ್ದರು. ಅಪ್ಪ, ಚಂದ್ರಣ್ಣ ಮತ್ತು ನನ್ನ ಇನ್ನೊಬ್ಬ ಸಹೋದರ ರಸ್ತೆಗೆ ಡಾಂಬರು ಹಾಕುವ ಮೈಲ್ ಕೂಲಿಯಾಗಿ ಕೆಲಸ ಮಾಡುತ್ತಿದ್ದರು. ಕುಂಬಾರಹಳ್ಳದಿಂದ ರಸ್ತೆ ಕಾಮಗಾರಿಗೆ ಸೈಕಲ್‌ನಲ್ಲಿ ಹೋಗುತ್ತಿದ್ದರು. ಚಂದ್ರಣ್ಣ ಸೈಕಲ್ ತುಳಿಯುವ ವೇಗವನ್ನು ಕಾಮಗಾರಿ ಉಸ್ತುವಾರಿ ವಹಿಸಿದ್ದ ಮೇಸ್ತ್ರಿಯೊಬ್ಬರು ಗಮನಿಸಿದ್ದರು. ಆದ್ದರಿಂದ ಚಂದ್ರಣ್ಣನಿಗೆ ಡಾಂಬರ್ ಹಾಕುವ ಕೆಲಸ ಬಿಡಿಸಿ, ರಸ್ತೆ ಪರಿವೀಕ್ಷಣೆಗೆ ತೆರಳಲು ತಮ್ಮ ಸೈಕಲ್ ಸಾರಥಿಯನ್ನಾಗಿ ನೇಮಿಸಿಕೊಂಡರು. 20 ಕಿ.ಮೀ ವ್ಯಾಪ್ತಿಯಲ್ಲಿ ಪ್ರತಿದಿನ ಬೆಳಿಗ್ಗೆಯಿಂದ ಸಂಜೆಯವರೆಗೂ ಮೇಸ್ತ್ರಿಯನ್ನು ತಮ್ಮ ಹಿಂದೆ ಕೂರಿಸಿಕೊಂಡು ಸೈಕಲ್ ತುಳಿಯುತ್ತಿದ್ದರು. ಮಿತಭಾಷಿ ಚಂದ್ರಣ್ಣ, ಇಡೀ ದಿನ ಬಿರುಬಿಸಿಲಿನಲ್ಲಿ ಸೈಕಲ್ ಹೊಡೆದು ಸುಸ್ತಾಗುತ್ತಿರಲಿಲ್ಲ. ಸಂಜೆ ಊರಿಗೆ ಮರಳಿ ಹೊಲದಲ್ಲಿ ಕೆಲಸ ಮಾಡುತ್ತಿದ್ದರು‘ ಎಂದು ಶ್ರೀಶೈಲ ಗದ್ಗದಿತರಾಗುತ್ತಾರೆ.



ಚಂದ್ರಪ್ಪ ಕುರಣಿ

ದಣಿವರಿಯದ ಚಂದ್ರು ಸೈಕ್ಲಿಂಗ್ ಕ್ರೀಡೆಗೆ ಬಂದಿದ್ದು ಕುಂಬಾರಹಳ್ಳದಲ್ಲಿ ಸೈಕಲ್ ರಿಪೇರಿ ಅಂಗಡಿ ಇಟ್ಟಿದ್ದ ನಬೀಸಾಬ್ ನದಾಫ್ ಅವರಿಂದಾಗಿ. ಊರಿನಲ್ಲಿ ಪ್ರತಿವರ್ಷ ಯುಗಾದಿಗೆ ನಡೆಯುವ ಜಾತ್ರೆಯಲ್ಲಿ ಸೈಕ್ಲಿಂಗ್ ಸ್ಪರ್ಧೆಯಲ್ಲಿ ಭಾಗವಹಿಸಲು ಮೊಟ್ಟ ಮೊದಲಿಗೆ ಸೈಕಲ್ ಮರುವಿನ್ಯಾಸ ಮಾಡಿಕೊಟ್ಟಿದ್ದ ನದಾಫ್, ಚಂದ್ರಣ್ಣನನ್ನು ಹುರಿದುಂಬಿಸಿದ್ದರು. ಬೇರೆ ಬೇರೆ ಊರು, ರಾಜ್ಯಗಳಿಂದಲೂ ಯುಗಾದಿ ಜಾತ್ರೆ ಸೈಕ್ಲಿಂಗ್‌ನಲ್ಲಿ ಸ್ಪರ್ಧಿಸಲು ಸೈಕ್ಲಿಸ್ಟ್‌ಗಳು ಬರುತ್ತಿದ್ದರು. 1977ರಲ್ಲಿ ನಡೆದಿದ್ದ ಈ ರೇಸ್‌ನಲ್ಲಿ ಅಗ್ರಸ್ಥಾನ ಗಳಿಸಿದ ಚಂದ್ರು ಜೀವನದ ದಿಕ್ಕು ಬದಲಾಯಿತು. ಕೆಲವರು ನೀಡಿದ ಸಲಹೆಯಿಂದ ರಾಜ್ಯ, ರಾಷ್ಟ್ರಮಟ್ಟದ ಸ್ಪರ್ಧೆಗಳಲ್ಲಿ ಗೆಲುವಿನ ಸಿಹಿಯುಂಡರು. ಪಂಜಾಬ್, ಹರಿಯಾಣದವರ ಪ್ರಾಬಲ್ಯವಿದ್ದ ಕಾಲದಲ್ಲಿ ಕನ್ನಡನಾಡಿನ ಹೆಜ್ಜೆಗುರುತು ಮೂಡಿಸಿದರು.

ಟ್ರ್ಯಾಕ್ ಸೈಕ್ಲಿಂಗ್ ಸೌಲಭ್ಯ ರಾಜ್ಯದಲ್ಲಿ ಇಲ್ಲದ ಕಾರಣ (ಈಗಲೂ ಇಲ್ಲ) ರಸ್ತೆ ಸೈಕ್ಲಿಂಗ್‌ನಲ್ಲಿಯೇ ಅವರು ಹೆಚ್ಚು ಭಾಗವಹಿಸಿದರು. ಭಾರತ ತಂಡಕ್ಕೂ ಆಯ್ಕೆಯಾದರು. 1982ರಲ್ಲಿದೆಹಲಿಯಲ್ಲಿ ನಡೆದ ಏಷ್ಯನ್ ಗೇಮ್ಸ್‌ಗೆ 5ನೇ ಸ್ಥಾನ ಗಳಿಸಿ ಮರಳಿದರು. 1983ರಲ್ಲಿ ಇಟಲಿಯಲ್ಲಿ ನಡೆದ ಅಂತರರಾಷ್ಟ್ರೀಯ ಸೈಕ್ಲಿಂಗ್‌ನಲ್ಲಿ ಭಾಗವಹಿಸಿದರು. ವಿಜಯಪುರ ಭಾಗದಲ್ಲಿ ಯುವಕ–ಯುವತಿಯರಲ್ಲಿ ಸೈಕ್ಲಿಂಗ್ ಆಕರ್ಷಣೆ ಹೆಚ್ಚಿಸಿತು. ಅದು ವಿಜಯಪುರ ದಲ್ಲಿ ಸೈಕ್ಲಿಂಗ್ ಕ್ರೀಡಾ ವಸತಿ ನಿಲಯ ಆರಂಭವಾಗಲು ಕಾರಣವಾಯಿತು ಎನ್ನುತ್ತಾರೆ ಅವರ ಶಿಷ್ಯಬಳಗದ ಹಲವರು. ಇದೇ ವಸತಿ ನಿಲಯದಲ್ಲಿ ಸುಮಾರು ಎರಡು ದಶಕಗಳಿಗೂ ಹೆಚ್ಚು ಕಾಲ ಚಂದ್ರು ಕಾರ್ಯನಿರ್ವಹಿಸಿದರು.

ಇವರ ಮಾರ್ಗದರ್ಶನದಲ್ಲಿ ಬೆಳೆದ ಸೈಕ್ಲಿಸ್ಟ್‌ಗಳಲ್ಲಿ ಹಲವರು ಏಷ್ಯನ್ ಚಾಂಪಿಯನ್‌ಷಿಪ್, ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿಯೂ ಕೀರ್ತಿ ಪತಾಕೆ ಹಾರಿಸಿದರು. ಇನ್ನೂ ಕೆಲವು ಸೈಕ್ಲಿಸ್ಟ್‌ಗಳು ತರಬೇತುದಾರರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

‘ನಮ್ಮ ಗೇಮ್ (ಸೈಕ್ಲಿಂಗ್) ಬಡವರದ್ದು. ನಿಮ್ಮ ಕ್ರಿಕೆಟ್‌ನಂತೆ ಅಲ್ಲ. ಇಲ್ಲಿ ರೊಕ್ಕಾ ಇಲ್ಲ. ಆದರ ಸಾಧಿಸಬೇಕು ಎನ್ನೋ ಛಲ, ವಿಶ್ವಾಶ ಹೆಚ್ಚು. ಗೌಂಡಿ (ಗಾರೆ) ಕೆಲಸ ಮಾಡುವವರು, ಹೂ ಮಾರುವವರು, ಕೂಲಿಕಾರರ ಮಕ್ಕಳು ನಮ್ಮ ಕಡೆ ಸಾದಾ ಸೈಕಲ್‌ನ್ಯಾಗ್ ಬರ್ತಾರ. ಹಗಲು, ರಾತ್ರಿ ದುಡಿತಾರ. ನ್ಯಾಷನಲ್ ಪದಕ ಗೆದ್ದು, ಒಂದು ಸರ್ಕಾರಿ ನೌಕರಿ ಹಿಡದು ತಮ್ಮ ಕುಟುಂಬಕ್ಕ ಆಸರಾ ಆಗ್ತಾರ. ಇನ್ನೂಕೆಲವರು ಒಂದ್ ಹೆಜ್ಜಿ ಮುಂದೋಗಿ ಇಂಟರ್‌ನ್ಯಾಷನಲ್ ಸಾಧನೆನೂ ಮಾಡ್ತಾರ. ನನಗ ಅದ್ರಿಂದ್ ಸಿಗೋ ಖುಷಿಗೆ ಬೆಲೆ ಕಟ್ಟಾಕ್ ಆಗಲ್ಲ ಬಿಡ್ರಿ‘ ಎಂದು ಪ್ರತಿಬಾರಿ ಭೇಟಿಯಾದಾಗಲೂ ಚಂದ್ರು ಹೇಳುತ್ತಿದ್ದ ಮಾತುಗಳಿವು.

ಜೀವನದುದ್ದಕ್ಕೂ ಆರ್ಥಿಕ ದುರ್ಬಲ ವರ್ಗದ ಮಕ್ಕಳ ಕಾಲುಗಳಿಗೆ ಸೈಕಲ್ ಹೊಡೆಯುವ ಶಕ್ತಿ ತುಂಬಿ, ಎದೆಯುಬ್ಬಿಸಿ ಜೀವನ ಮಾಡುವಂತೆ ಮಾಡಿದ ‘ದ್ರೋಣಾ ಚಾರ್ಯ‘ ಚಂದ್ರು. ಆದರೂ ಅವರ ಕಾರ್ಯಕ್ಕೆ ಸಿಗಬೇಕಿದ್ದ ದೊಡ್ಡಮಟ್ಟದ ಗೌರವಾದರಗಳು ಸಿಗದ ಬೇಸರ ಕುಂಬಾರಹಳ್ಳದ ಜನರಲ್ಲಿದೆ.

ಚಂದ್ರಪ್ಪ ನಿಧನ

ಬಾಗಲಕೋಟೆ: ಅಂತರ ರಾಷ್ಟ್ರೀಯ ಸೈಕ್ಲಿಸ್ಟ್ ಮತ್ತು ಕೋಚ್ ಚಂದ್ರಪ್ಪ ಕುರಣಿ (67) ಶುಕ್ರವಾರ ತಡರಾತ್ರಿ ನಿಧನರಾದರು. ಅಂತ್ಯಕ್ರಿಯೆ ಶನಿವಾರ ಬೆಳಿಗ್ಗೆ ಸ್ವಗ್ರಾಮದಲ್ಲಿ ನೆರವೇರಿತು. ಅವರಿಗೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಮತ್ತು ಸಹೋದರ, ಕರ್ನಾಟಕ ರಾಜ್ಯ ಸೈಕ್ಲಿಂಗ್ ಸಂಸ್ಥೆ ಕಾರ್ಯದರ್ಶಿ ಶ್ರೀಶೈಲ ಕುರಣಿ ಇದ್ದಾರೆ.

ಪ್ರಣವ್ ಇನ್ನಿಲ್ಲ

ಕೋಲ್ಕತ್ತ(ಪಿಟಿಐ): ಭಾರತ ರಾಷ್ಟ್ರೀಯ ಹಾಗೂ ಮೋಹನ್ ಬಾಗನ್ ಫುಟ್‌ಬಾಲ್ ಕ್ಲಬ್ ತಂಡಗಳಲ್ಲಿ ಆಡಿದ್ದ ಪ್ರಣವ್ ಗಂಗೂಲಿ (75) ಶುಕ್ರವಾರ ಹೃದಯಾಘಾತದಿಂದ ನಿಧನರಾದರು.

1969ರ ಮರ್ಡೆಕಾ ಕಪ್ ಟೂರ್ನಿಯಲ್ಲಿ ಆಡಿದ ಭಾರತ ತಂಡದಲ್ಲಿ ಅವರು ಇದ್ದರು. ಬಂಗಾಳ ರಾಜ್ಯ ತಂಡವನ್ನೂ ಪ್ರತಿನಿಧಿಸಿದ್ದರು. ನಿವೃತ್ತಿ ಬಳಿಕ ಕೋಚ್ ಆಗಿದ್ದರು. 2020ರಲ್ಲಿ ‘ಜೀವಮಾನ ಸಾಧನೆ ಪ್ರಶಸ್ತಿ‘ ಪಡೆದುಕೊಂಡಿದ್ದರು.

ಸ್ಥಳ ಬೇಕಾಗಿದೆ

ಬೆಂಗಳೂರಿನ ಪ್ರಸಿದ್ಧ ಕಂಪನಿಯೊಂದಕ್ಕೆ 50 ಸಾವಿರ ಚ.ಅ. ಪಾರ್ಕಿಂಗ್ ಜಾಗದೊಂದಿಗೆ 1.5 ಲಕ್ಷ ಚ.ಅಡಿ ಕೈಗಾರಿಕಾ ಫ್ಯಾಕ್ಟರಿ ತುರ್ತಾಗಿ ಬೇಕಾಗಿದೆ. ಕಟ್ಟಡದ ನಿರ್ಮಾಣ ಅವಧಿ 10 ವರ್ಷ ಮೀರಿರಬಾರದು ಮತ್ತು ವಾಟರ್‌ಪ್ರೂಫ್ ಆಗಿರಬೇಕು. ತುಮಕೂರು ರಸ್ತೆ, ಮೈಸೂರು ರಸ್ತೆ, ಮತ್ತು ಹೊಸೂರು ರಸ್ತೆಗಳಿಗೆ ಆದ್ಯತೆ ಇದೆ. 15ಟಿ ಇಒಟಿ ಕ್ರೇನ್ ಮತ್ತು 3ಟಿ / ಚ.ಅಡಿ ಲೋಡ್ ಸಾಮರ್ಥ್ಯವಿರಬೇಕು. ಪ್ರವೇಶದ್ವಾರವು ಬೃಹತ್ 40 ಅಡಿ ಕಂಟೈನರ್‌ಗಳು ಸುಗಮವಾಗಿ ಸಂಚರಿಸುವಂತಿರಬೇಕು. ಮೇಲ್ಚಾವಣಿ ಎತ್ತರ ಗರಿಷ್ಠ 30 ಅಡಿ ಇರಬೇಕು. 1700 ಕೆವಿಎ ವಿದ್ಯುತ್ ಸಂಪರ್ಕವಿರಬೇಕು. ಕಟ್ಟಡ ಯೋಜನೆಯೊಂದಿಗೆ ಮೇಲ್ ಮಾಡಿ: vr5projectinfo@gmail.com